ಶುಕ್ರವಾರ, ಅಕ್ಟೋಬರ್ 7, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ದುರ್ಗಾ ಪೂಜೆ

ಮುಂಬೈನಲ್ಲಿ ಹಮ್ಮಿಕೊಂಡಿದ್ದ ದುರ್ಗಾ ಪೂಜೆಯಲ್ಲಿ ಬಾಲಿವುಡ್ ನಟಿಯರಾದ ಶರ್ಬಾನಿ ಮುಖರ್ಜಿ, ರಾಣಿ ಮುಖರ್ಜಿ ಮತ್ತು ತನಿಷಾ ಮುಖರ್ಜಿ ಪಾಲ್ಗೊಂಡಿದ್ದರು



ಕೃಷಿಕರ ಆತ್ಮಹತ್ಯೆಗೆ ಕಾರಣ ಯಾರು; ಸಂವಾದದಲ್ಲಿ ರೈತ ಮಹಿಳೆ ಪುಷ್ಪಾ ಪ್ರಶ್ನೆ

ರೈತ ಮಹಿಳೆಯರ ಕಣ್ಣೀರು: ರಾಹುಲ್ ಸಾಂತ್ವನ

ಪ್ರಜಾವಾಣಿ ವಾರ್ತೆ

ಮಂಡ್ಯ: ನಾಗಮಂಗಲ ತಾಲ್ಲೂಕು ಖರಡ್ಯ ಗ್ರಾಮದ ಬಳಿ ರಾಹುಲ್ ಗಾಂಧಿ ನಡೆಸಿದ 'ರೈತರೊಂದಿಗೆ ಸಂವಾದ'ದಲ್ಲಿ ರೈತರ ಆತ್ಮಹತ್ಯೆ, ಮುಕ್ತ ಮಾರುಕಟ್ಟೆ ಸಮಸ್ಯೆ, ಕಾನೂನು ಬೆಂಬಲ ಇಲ್ಲದ ಬೆಂಬಲ ಬೆಲೆ ಯೋಜನೆ, ಏರುತ್ತಿರುವ ಮೇವಿನ ಬೆಲೆ, ಇಳಿಯುತ್ತಿರುವ ಹಾಲಿನ ಖರೀದಿ ದರ ಇವೇ ಮೊದಲಾದ ವಿಚಾರಗಳು ಚರ್ಚೆಗೆ ಬಂದವು.

'ಜಮೀನಿಗೆ ಮಾಡಿದ್ದ ₹ 3 ಲಕ್ಷ ತೀರಿಸಲಾಗದೇ ಪತಿ ಆತ್ಮಹತ್ಯೆಗೆ ಶರಣಾದರು. ಅಂಗಡಿಯಲ್ಲಿ ಕೆಲಸ ಮಾಡಿ ಇಬ್ಬರು ಮಕ್ಕಳನ್ನು ದಡಸೇರಿಸಬೇಕಾಗಿದೆ, ರೈತರ ಆತ್ಮಹತ್ಯೆಗೆ ಕಾರಣ ಯಾರು ಎಂದು ಮದ್ದೂರು ತಾಲ್ಲೂಕಿನ ಪುಷ್ಪಾ ಪ್ರಶ್ನಿಸಿದ್ದು ವಿಷಾದ ಮೂಡಿಸಿತು' ಎಂದು ಸಂವಾದದಲ್ಲಿ ಭಾಗಿಯಾಗಿದ್ದ ಮುಖಂಡರೊಬ್ಬರು ತಿಳಿಸಿದರು.

'ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ಸಿಗದೆ, ಜಿಲ್ಲೆಯಲ್ಲಿ ಎರಡು ವರ್ಷದಿಂದ 150ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸಾಲಭಾದೆ ಸಹಿಸಲಾಗದೆ ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿಯರಾದ ಪುಷ್ಪಾ, ಗಾಯತ್ರಿ, ಪದ್ಮಾ ಅವರು ಸಮಸ್ಯೆಗಳನ್ನು ಹೇಳಿಕೊಂಡು ಕಣ್ಣೀರಿಟ್ಟಾಗ ರಾಹುಲ್ ಗಾಂಧಿ ಸಂತೈಸಿದರು' ಎಂದರು.

'ಸ್ವಾತಂತ್ರ ಬಂದ ನಂತರ ಉತ್ಪಾದನೆಗಷ್ಟೇ ಆದ್ಯತೆ ನೀಡಿರುವ ಸರ್ಕಾರ ಮಾರುಕಟ್ಟೆ ಒದಗಿಸಿಲ್ಲ. ಸಹಕಾರ ಮಾರುಕಟ್ಟೆ, ಸಾಮುದಾಯಿಕ ಮಾರುಕಟ್ಟೆಯನ್ನು ಸೃಷ್ಟಿಸುವಲ್ಲಿ ವಿಫಲವಾಗಿದೆ. ಮಾರುಕಟ್ಟೆ ಭದ್ರತೆ ಸಿಗದೆ, ಸಾಲಬಾಧೆಗೆ ಸಿಲುಕಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂದು ರಾಹುಲ್ ಅವರ ಗಮನ ಸೆಳೆದೆವು' ಎಂದರು.

ಸಂವಾದ ಕುರಿತು ಮಾಹಿತಿ ನೀಡಿದ ಶಾಸಕ ಪ್ರಿಯಾಂಕ್ ಖರ್ಗೆ, 'ರೈತರ ಸಮಸ್ಯೆಗಳ ಕುರಿತು ಮುಖಂಡರು ಗಮನ ಸೆಳೆದರು. ಸಮಸ್ಯೆ ಇತ್ಯರ್ಥಕ್ಕೆ ಬೇಕಾದ ದೂರದೃಷ್ಟಿ ಸದ್ಯದ ಡಬಲ್ ಎಂಜಿನ್ ಸರ್ಕಾರಕ್ಕಿಲ್ಲ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಅದಕ್ಕೇ ಆದ್ಯತೆ ನೀಡಲಾಗುವುದು ಎಂದು ರಾಹುಲ್ ಗಾಂಧಿ ಭರವಸೆ ನೀಡಿದರು' ಎಂದರು.

ಶಾಲೆಯಲ್ಲಿ ವಾಸ್ತವ್ಯ: ಈ ಮಧ್ಯೆ, ಭಾರತ್ ಜೋಡೊ ಯಾತ್ರೆಯ ಬಳಿಕ ಸಂಜೆ ನಾಗಮಂಗಲ ತಾಲ್ಲೂಕು ಮಡಿಕೆಹೊಸೂರು ಬಳಿಯ ವಿಸ್ಡಂ ಶಾಲೆಯಲ್ಲಿ ರಾಹುಲ್ ವಾಸ್ತವ್ಯ ಹೂಡಿದರು. ಶುಕ್ರವಾರ ನಾಗಮಂಗಲ, ಬೆಳ್ಳೂರು ಕ್ರಾಸ್ ಮೂಲಕ ಪಾದಯಾತ್ರೆಯು ಆದಿಚುಂಚನಗಿರಿ ತಲುಪಲಿದ್ದು ಅಲ್ಲಿಯೇ ವಾಸ್ತವ್ಯ ಹೂಡಲಿದ್ದಾರೆ.

ಎಐಸಿಸಿ ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಮುಖಂಡರಾದ ಕೆ.ಸಿ.ವೇಣುಗೋಪಾಲ್, ಜೈರಾಮ್ ರಮೇಶ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಸ್ವರಾಜ್ ಇಂಡಿಯಾ ಪಕ್ಷದ ಮುಖಂಡ ಯೋಗೇಂದ್ರ ಯಾದವ್ ಇದ್ದರು.



ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕು ಜಕ್ಕನಹಳ್ಳಿ ಕ್ರಾಸ್ ಬಳಿ ಗುರುವಾರ 'ಭಾರತ್ ಜೋಡೊ' ಪಾದಯಾತ್ರೆಯಲ್ಲಿ ರಾಹುಲ್ ಗಾಂಧಿ ಅವರ ಜೊತೆ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಹೆಜ್ಜೆ ಹಾಕಿದರು. ಮಾಜಿ ಶಾಸಕ ಎನ್. ಚಲುವರಾಯಸ್ವಾಮಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಮುಖಂಡ ಕೆ.ಸಿ.ವೇಣುಗೋಪಾಲ್, ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರು ಇದ್ದರು

'ರಾಹುಲ್ ಗಾಂಧಿಗೆ ಮುತ್ಸದ್ದಿ ಗುಣ'

'ಕೆಲ ಮಾಧ್ಯಮಗಳು, ಪಕ್ಷಗಳ ಮುಖಂಡರು ರಾಹುಲ್ ಗಾಂಧಿ ಅವರನ್ನು ನಕಾರಾತ್ಮಕವಾಗಿ ಬಿಂಬಿಸಿದ್ದಾರೆ, ಪಪ್ಪು ಎಂದೆಲ್ಲಾ ಟೀಕಿಸುತ್ತಾರೆ. ಆದರೆ ಅದೆಲ್ಲ ಶುದ್ಧ ಸುಳ್ಳು ಎಂಬುದು ಸಂವಾದದಲ್ಲಿ ತಿಳಿಯಿತು. ಅವರಿಗೆ ಮುನ್ನೋಟವಿದೆ, ವಿಚಾರಗಳಲ್ಲಿ ಆಳವಾದ ಜ್ಞಾನವಿದೆ' ಎಂದು ಸಂವಾದದಲ್ಲಿ ಭಾಗಿಯಾಗಿದ್ದ ರೈತ ನಾಯಕಿ ನಂದಿನಿ ಜಯರಾಂ ತಿಳಿಸಿದರು.

'ಸಹಕಾರಿ ಮಾರುಕಟ್ಟೆ ವ್ಯವಸ್ಥೆ ಬೇಡಿಕೆ ಇಟ್ಟಾಗ ಹೈನುಗಾರಿಕೆಯಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ರಾಹುಲ್ ಪ್ರಸ್ತಾಪ ಮಾಡಿದರು. ಹಾಲಿನ ಒಕ್ಕೂಟಗಳಲ್ಲಿರುವ ಸಮಸ್ಯೆಗಳ ಬಗ್ಗೆ ತಿಳಿಸಿದರು, ನಮ್ಮನ್ನೇ ಪ್ರಶ್ನೆ ಮಾಡಿದರು. ಆಗ ಸಿದ್ದರಾಮಯ್ಯ ಮಧ್ಯ ಪ್ರವೇಶ ಮಾಡಿ ಉತ್ತರಿಸಿದರು. ರಾಹುಲ್ ಗಾಂಧಿಯಲ್ಲಿ ಮುತ್ಸದ್ಧಿ ಗುಣಗಳಿವೆ' ಎಂದರು.

'ಸಾಲದಲ್ಲೇ ಸಾಯುತ್ತಿರುವ ರೈತರು'

ಮಂಡ್ಯ: 'ಕೇಂದ್ರ ಸರ್ಕಾರದ ರೈತ ವಿರೋಧಿ ಕಾನೂನುಗಳಿಂದಾಗಿ ರೈತರು ಶೇ 24ರವರೆಗೆ ಬಡ್ಡಿಗಾಗಿ ಸಾಲ ಪಡೆಯುತ್ತಿದ್ದಾರೆ. ಅದನ್ನು ತೀರಿಸಲಾಗದೇ ಸಾಲದಲ್ಲೇ ಸಾಯುತ್ತಿದ್ದಾರೆ' ಎಂದು ರಾಹುಲ್ ಗಾಂಧಿ ಗುರುವಾರ ವಿಷಾದಿಸಿದರು.


ನಾಗಮಂಗಲ ತಾಲ್ಲೂಕು ಬ್ರಹ್ಮದೇವರಹಳ್ಳಿಯಲ್ಲಿ ಮಾತನಾಡಿದ ಅವರು 'ರಾಜ್ಯದಲ್ಲೂ ರೈತರು ಸಾಲಬಾಧೆಯಿಂದ ಜೀವ ಕಳೆದುಕೊಳ್ಳುತ್ತಿದ್ದಾರೆ. ರಾಜ್ಯ ಸರ್ಕಾರ ರೈತರ ಭೂಮಿಯನ್ನು ಬಂಡವಾಳಶಾಹಿಗಳಿಗೆ ನೀಡುತ್ತಿದೆ. ಕೇಂದ್ರ–ರಾಜ್ಯ ಸರ್ಕಾರಗಳು ನೋವು ಆಲಿಸುತ್ತಿಲ್ಲ' ಎಂದರು.

'ದೇಶದಲ್ಲಿ ಅಸಮಾನತೆ ಹೆಚ್ಚಿದೆ. ಕೇಂದ್ರ ಸರ್ಕಾರ ದಲಿತ ವಿರೋಧಿ ನೀತಿ ಅನುಸರಿಸಿ, ಸಮಾಜ ಒಡೆಯುತ್ತಿದೆ. ಯುವಜನರಿಗೆ ಉದ್ಯೋಗ ಇಲ್ಲವಾಗಿದೆ. ಸಾಮಾಜಿಕ ನ್ಯಾಯಕ್ಕಾಗಿ ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ಆಯೋಗದ ವರದಿ ಜಾರಿಯಾಗಬೇಕು' ಎಂದರು.

ಸುದ್ದಿ 2 ನಿಮಿಷ

2ಎ ಮೀಸಲಾತಿಗೆ ಆಗ್ರಹ ಕಲ್ಲೋಳಿಯಲ್ಲಿ ಇಂದು ಸಮಾವೇಶ

ಮೂಡಲಗಿ (ಬೆಳಗಾವಿ ಜಿಲ್ಲೆ): 'ಪಂಚಮಸಾಲಿ ಸಮುದಾಯಕ್ಕೆ '2ಎ' ಮೀಸಲಾತಿ ನೀಡಬೇಕೆಂಬ ಬೇಡಿಕೆ ಕುರಿತು ಹೋರಾಟದ ರೂಪುರೇಷೆ ಸಿದ್ಧಪಡಿಸಲು ತಾಲ್ಲೂಕಿನ ಕಲ್ಲೋಳಿಯಲ್ಲಿ ಅ.7ರಂದು ಸಮಾವೇಶ ಹಮ್ಮಿಕೊಳ್ಳಲಾಗಿದೆ' ಎಂದು ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.



'ರಾಜ್ಯ ಸರ್ಕಾರ ನಮ್ಮ ಬೇಡಿಕೆ ಕುರಿತು ಹೀಗೆಯೇ ನಿರ್ಲಕ್ಷಿಸಿದರೆ ನವೆಂಬರ್ ಎರಡನೇ ವಾರ ಲಕ್ಷಾಂತರ ಜನರೊಂದಿಗೆ ವಿಧಾನಸೌಧಕ್ಕೆ ಮುತ್ತಿಗೆ ಹಾಕಲಾಗುವುದು' ಎಂದು ಅವರು ಪಟ್ಟಣದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಹೋರಾಟ ತೀವ್ರಗೊಳಿಸಲು ಸಮಾವೇಶ ಹಮ್ಮಿಕೊಂಡಿದ್ದೇವೆ. ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ಹಾಗೂ ಶಾಸಕ ಬಸನಗೌಡ ಪಾಟೀಲ ಯತ್ನಾಳ ಇದರ ನೇತೃತ್ವ ವಹಿಸಲಿದ್ದಾರೆ. 25 ಸಾವಿರಕ್ಕೂ ಹೆಚ್ಚು ಜನ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ' ಎಂದರು.

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅ.7ರಂದು ಸರ್ವಪಕ್ಷಗಳ ಸಭೆ ಕರೆದಿದ್ದಾರೆ. ಆಗ, ಮೀಸಲಾತಿ ಸಂಬಂಧ ಚರ್ಚಿಸಿ, ಸಿಹಿ ಸುದ್ದಿ ನೀಡಲಿದ್ದಾರೆ ಎಂಬ ಭರವಸೆಯಿದೆ' ಎಂದರು.


'ಸರ್ವರೂ ಎಚ್ಚರದಿಂದಿರಬೇಕು ಪರಾಕ್'

ಬೀರೂರು (ಚಿಕ್ಕಮಗಳೂರು): 'ಇಟ್ಟ ರಾಮನ ಬಾಣಕ್ಕೆ ಹುಸಿ ಇಲ್ಲ, ಭೂಮಿಗೆ ವರುಣನ ಸಿಂಚನವಾಯಿತು, ಕುರು-ಪಾಂಡವರು ಕಾದಾಡಿದರು, ಧರ್ಮದ ಜ್ಯೋತಿ ಬೆಳಗಿದರು, ಸರ್ವರೂ ಎಚ್ಚರದಿಂದಿರಬೇಕು ಪರಾಕ್".

–ಪಟ್ಟಣದ ಸರಸ್ವತೀಪುರಂ ಬಡಾವಣೆಯಲ್ಲಿನ ಮೈಲಾರಲಿಂಗ ಸ್ವಾಮಿ ದೇಗುಲದ ಅರ್ಚಕ ದಶರಥ ಪೂಜಾರ ಗುರುವಾರದ ನಸುಕಿನ ಜಾವ ನುಡಿದ ಕಾರಣಿಕ ಇದು.

ಇದಕ್ಕೂ ಮೊದಲು ವೀರಭದ್ರಸ್ವಾಮಿಯವರ ಗುರಿಕಾರ ಗುರುಮೂರ್ತಿ ಅಂಬು ಹೊಡೆಯಲು ಸಿದ್ಧರಾಗಿದ್ದರು. ಮಹಾನವಮಿ ಬಯಲಿನಲ್ಲಿ ಪ್ರತಿಷ್ಠಾಪನೆಗೊಂಡಿದ್ದ ದೈವಗಳ ಪ್ರದಕ್ಷಿಣೆ ನಡೆಸಿದ ದೊಡ್ಡಬಿಲ್ಲಪ್ಪ ಆಗಸಕ್ಕೆ ಮುಖಮಾಡಿ ನಿಲ್ಲಿಸಲಾಯಿತು.

ಅದನ್ನು ಏರಿದ ಅರ್ಚಕ ದಶರಥ ಪೂಜಾರ, ಕೈಯಲ್ಲಿ ಬಾಣ ಹಿಡಿದು ತೂಗಿಬಿಟ್ಟು ಗಂಟೆ ಬಾರಿಸಿದ ತಕ್ಷಣ ಇಡೀ ಮಹಾನವಮಿ ಬಯಲಿನಲ್ಲಿ ಮೌನ ಆವರಿಸಿತು. ಕಾರಣಿಕ ನುಡಿದ ತಕ್ಷಣ ಗೊರವರ ಗಂಟೆ, ಡಮರುಗಳ ಸದ್ದು, ಏಳುಕೋಟಿ ಏಳುಕೋಟಿಗೋ... ಎಂಬ ಸದ್ದು ಸುತ್ತಮುತ್ತಲೂ ಅನುರಣಿಸಿತು.



ಕಾಂಗ್ರೆಸ್ ಫ್ಲೆಕ್ಸ್‌ನಲ್ಲಿ ಸಾವರ್ಕರ್ ಚಿತ್ರ

ಪ್ರಜಾವಾಣಿ ವಾರ್ತೆ

ಮಂಡ್ಯ: ಭಾರತ್ ಜೋಡೊ ಪಾದಯಾತ್ರೆ ವೇಳೆ ರಸ್ತೆ ಬದಿಯಲ್ಲಿ ಹಾಕಲಾಗಿದ್ದ ಫ್ಲೆಕ್ಸ್‌ನಲ್ಲಿ ಕಾಂಗ್ರೆಸ್ ಮುಖಂಡರ ಜೊತೆ ವೀರ ಸಾವರ್ಕರ್ ಭಾವಚಿತ್ರ ಗುರುವಾರ ಕಾಣಿಸಿಕೊಂಡಿತು. ತಪ್ಪಿನ ಅರಿವಾದ ನಂತರ ಕಾಂಗ್ರೆಸ್ ಕಾರ್ಯಕರ್ತರು ಅದನ್ನು ತೆರವುಗೊಳಿಸಿದರು.

ನಾಗಮಂಗಲ ತಾಲ್ಲೂಕು ಚೀಣ್ಯ ಗ್ರಾಮದ ಬಳಿ ಹಾಕಲಾಗಿದ್ದ ಫ್ಲೆಕ್ಸ್‌ನಲ್ಲಿ ಬೆಂಗಳೂರು ಶಾಂತಿನಗರ ಶಾಸಕ ಹ್ಯಾರಿಸ್ ಕಡೆಯವರು ಹಾಕಿಸಿದ್ದ ಫ್ಲೆಕ್ಸ್‌ನಲ್ಲಿ ಸಾವರ್ಕರ್ ಭಾವಚಿತ್ರ ಇತ್ತು. ಒಂದು ಕಡೆ ಸಿದ್ದರಾಮಯ್ಯ, ಇನ್ನೊಂದು ಕಡೆ ಡಿ.ಕೆ.ಶಿವಕುಮಾರ್ ಅವರ ಭಾವಚಿತ್ರಗಳಿದ್ದವು. ನಡುವೆ ದೊಡ್ಡದಾಗಿ ವಿ.ಡಿ.ಸಾರ್ವರ್ಕರ್ ಆಳೆತ್ತರದ ಚಿತ್ರವಿತ್ತು.

ಜೊತೆಗೆ ರಾಹುಲ್ ಗಾಂಧಿ ನಿಂತಿರುವ ಚಿತ್ರವೂ ಇತ್ತು. ಕಾಂಗ್ರೆಸ್ ಕಾರ್ಯಕರ್ತರಿಗೆ ತಪ್ಪಿನ ಅರಿವಾಗಿ ಫ್ಲೆಕ್ಸ್ ತೆರವುಗೊಳಿಸುವ ವೇಳೆಗಾಗಲೇ ಆ ಚಿತ್ರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು.

'ಕೆಲ ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರಗಳ ಫ್ಲೆಕ್ಸ್ ಮಾಡಿಸಲಾಗಿದೆ. ಗೂಗಲ್ ಹುಡುಕಾಟದಲ್ಲಿ ಸಿಕ್ಕವರ ಚಿತ್ರಗಳನ್ನು ಬಳಸಲಾಗಿದೆ. ಫ್ಲೆಕ್ಸ್ ಮಾಡಿಸಿದವರಿಗೆ ತಿಳಿಯದೇ ಸಾವರ್ಕರ್ ಚಿತ್ರವನ್ನೂ ಫ್ಲೆಕ್ಸ್ ಮಾಡಿಸಿದ್ದಾರೆ. ಈಗ ಅದನ್ನು ತೆಗೆಯಲಾಗಿದೆ' ಎಂದು ಕಾಂಗ್ರೆಸ್ ನಾಯಕರೊಬ್ಬರು ತಿಳಿಸಿದರು.



ಫೆಕ್ಸ್‌ನಲ್ಲಿ ವೀರ ಸಾವರ್ಕರ್ ಚಿತ್ರ

ಗುರೂಜಿ ಹತ್ಯೆ: ದೋಷಾರೋಪಪಟ್ಟಿ

ಹುಬ್ಬಳ್ಳಿ: ಸರಳ ವಾಸ್ತುತಜ್ಞ ಚಂದ್ರಶೇಖರ ಗುರೂಜಿ ಅವರ ಕೊಲೆಗೆ ಸಂಬಂಧಿಸಿ ಪೊಲೀಸರು ಇಲ್ಲಿನ ಒಂದನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯಕ್ಕೆ 800ಕ್ಕೂ ಹೆಚ್ಚು ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ತನಿಖಾಧಿಕಾರಿ ಎಸಿಪಿ ವಿನೋದ ಮುಕ್ತೇದಾರ ಆರೋಪಪಟ್ಟಿ ಸಲ್ಲಿಸಿದರು. ಗುರೂಜಿ ಮತ್ತು ಆರೋಪಿಗಳಿಬ್ಬರ ನಡುವಿನ ಆಸ್ತಿ–ಹಣಕಾಸಿನ ವ್ಯವಹಾರ, ಇತರ ವಿವರಗಳಿವೆ ಎಂದು ಪೊಲೀಸರು ತಿಳಿಸಿದ್ದಾರೆ. ನಗರದ ಪ್ರೆಸಿಡೆಂಟ್ ಹೋಟೆಲ್‌ನಲ್ಲಿ ಜುಲೈ 5ರಂದು ಗುರೂಜಿ ಕೊಲೆಯಾಗಿತ್ತು. ಹಿಂದೊಮ್ಮೆ ಗುರೂಜಿ ಆಪ್ತರಾಗಿದ್ದ ಮಹಾಂತೇಶ ಶಿರೂರ, ಮಂಜುನಾಥ ಮರೇವಾಡ ಇರಿದು ಕೊಲೆ ಮಾಡಿದ್ದರು. ನಾಲ್ಕು ತಾಸಿನಲ್ಲಿ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದರು.

ಆನೆಮರಿಗೆ ಚಿಕಿತ್ಸೆ: ರಾಹುಲ್‌ಗೆ ಸಿಎಂ ಪತ್ರ

ಬೆಂಗಳೂರು: ನಾಗರಹೊಳೆ ರಕ್ಷಿತಾರಣ್ಯದಲ್ಲಿ ಗಾಯಗೊಂಡ ಆನೆಮರಿಗೆ ಸೂಕ್ತ ಚಿಕಿತ್ಸೆಯ ವ್ಯವಸ್ಥೆ ಮಾಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಪತ್ರ ಬರೆದಿದ್ದಾರೆ.

ಭಾರತ ಜೋಡೊ ಯಾತ್ರೆಯ ಬಿಡುವಿನ ವೇಳೆಯಲ್ಲಿ ತಮ್ಮ ಕುಟುಂಬದ ಜತೆ ರಕ್ಷಿತಾರಣ್ಯಕ್ಕೆ ತೆರಳಿದ್ದ ರಾಹುಲ್, ಗಾಯಗೊಂಡ ಆನೆಮರಿಯನ್ನು ಸಫಾರಿ ವೇಳೆ ಕಂಡಿದ್ದರು. ಆನೆ ಮರಿಗೆ ಚಿಕಿತ್ಸೆ ಕೊಡಿಸುವಂತೆ ಮುಖ್ಯಮಂತ್ರಿಗೆ ಬರೆದ ಪತ್ರದಲ್ಲಿ ಮನವಿ ಮಾಡಿದ್ದರು.

ಇದಕ್ಕೆ ಪ್ರತಿ ಪತ್ರ ಬರೆದಿರುವ ಬೊಮ್ಮಾಯಿ, 'ಆನೆ ಮರಿ ಕುರಿತ ನಿಮ್ಮ ಕಾಳಜಿ ಪ್ರಶಂಸನೀಯ. ಆನೆ ರಿಯು ಅರಣ್ಯದ ಇತರೆ ಮೃಗಗಳಿಂದ ಗಾಯಗೊಂಡಿದೆ. ಅಲ್ಲಿನ ಅಧಿಕಾರಿಗಳು ಮರಿ ಮತ್ತು ತಾಯಿಯ ಕುರಿತು ಕಾಳಜಿ ವಹಿಸಿದ್ದಾರೆ. ಅಗತ್ಯ ಚಿಕಿತ್ಸೆ ನೀಡುತ್ತಿದ್ದಾರೆ' ಎಂದು ವಿವರಿಸಿದ್ದಾರೆ.

'ತಾಯಿಯಿಂದ ಮರಿಯನ್ನು ಬೇರ್ಪಡಿಸುವಂತಿಲ್ಲ ಎಂದು ವನ್ಯಜೀವಿ ವೈದ್ಯರು ಹೇಳಿದ್ದಾರೆ. ಅಗತ್ಯವಿರುವ ಎಲ್ಲ ಆರೈಕೆ, ಔಷಧೋಪಚಾರ ಮಾಡುವಂತೆ ಸೂಚಿಸಿರುವೆ' ಎಂದಿದ್ದಾರೆ.



ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಲ್ಲಿ ಗಾಯಗೊಂಡ ಆನೆ ಮರಿಗೆ ಅರಣ್ಯ ಇಲಾಖೆಯ ವೈದ್ಯರು ಚಿಕಿತ್ಸೆ ನೀಡಿದರು

ಜೆಡಿಎಸ್ ಶಾಸಕ ರಾಜಕೀಯ ನಿವೃತ್ತಿ

ತುಮಕೂರು: ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸದಿರಲು ಮಧುಗಿರಿ ಕ್ಷೇತ್ರದ ಜೆಡಿಎಸ್ ಶಾಸಕ ಎಂ.ವಿ.ವೀರಭದ್ರಯ್ಯ ನಿರ್ಧರಿಸಿದ್ದಾರೆ. ಅನಾರೋಗ್ಯ ಕಾರಣದಿಂದಾಗಿ ಸ್ಪರ್ಧಿಸುತ್ತಿಲ್ಲ ಎಂದು ಹೇಳುವ ಮೂಲಕ ರಾಜಕೀಯ ನಿವೃತ್ತಿ ಘೋಷಿಸಿದರು.



ವೀರಭದ್ರಯ್ಯ

ಸವರ್ಣೀಯರು–ಪರಿಶಿಷ್ಟರ ನಡುವೆ ಘರ್ಷಣೆ

ಕೋಲಾರ: ತಾಲ್ಲೂಕಿನ ಬೆಳಮಾರನಹಳ್ಳಿ ಪಂಚಾಯಿತಿ ವ್ಯಾಪ್ತಿಯ ದಾನವಹಳ್ಳಿ ಗ್ರಾಮದಲ್ಲಿ ಬುಧವಾರ ಪರಿಶಿಷ್ಟರ ಮನೆ ಮುಂದೆ ದೇವರ ಉತ್ಸವ ಮೂರ್ತಿ ಮೆರವಣಿಗೆ ವಿಷಯಕ್ಕೆ ಸಂಬಂಧಿಸಿದಂತೆ ಗ್ರಾಮದ ಎರಡು ಗುಂಪುಗಳ ನಡುವೆ ಘರ್ಷಣೆ ನಡೆದಿದೆ.

ಸವರ್ಣೀಯರ ಮನೆಗಳ ಮುಂದೆ ನಿಲ್ಲುವಂತೆ ತಮ್ಮ ಮನೆಗಳ ಮುಂದೆ ಬಹಳ ಹೊತ್ತು ಉತ್ಸವಮೂರ್ತಿ ಪಲ್ಲಕ್ಕಿ ನಿಲ್ಲಲ್ಲ ಎಂದು ಪರಿಶಿಷ್ಟರು ಆಕ್ಷೇಪಿಸಿದ್ದು, ವಾಗ್ವಾದಕ್ಕೆ ಕಾರಣ ವಾಗಿದೆ. ಪೊಲೀಸರ ಎದುರೇ ಜನರು ಕಲ್ಲು, ದೊಣ್ಣೆ, ಇಟ್ಟಿಗೆಯಿಂದ ಹೊಡೆದಾಡಿಕೊಂಡಿದ್ದಾರೆ. ಎರಡೂ ಗುಂಪಿನವರಿಗೆ ಗಾಯ ವಾಗಿದ್ದು, ಆಸ್ಪತ್ರೆಗೆ ಸೇರಿಸಲಾಗಿದೆ.

ವೇಮಗಲ್ ಪೊಲೀಸ್ ಠಾಣೆಯಲ್ಲಿ ಒಂಬತ್ತು ಸವರ್ಣೀಯರ ಮೇಲೆ ದೌರ್ಜನ್ಯ ಪ್ರಕರಣ ಹಾಗೂ 11 ಪರಿಶಿಷ್ಟರ ಮೇಲೆ ಕೊಲೆ ಯತ್ನ ಪ್ರಕರಣ ದಾಖಲಾಗಿದೆ.

ಘಟನೆ ಹಿನ್ನೆಲೆ: ದಸರಾ ಪ್ರಯುಕ್ತ ಗ್ರಾಮದಲ್ಲಿ ಬುಧವಾರ ಗಂಗಮ್ಮ ದೇವಿ ಹಾಗೂ ಕಾಟೇರಮ್ಮ ದೇವಿ ಮೆರವಣಿಗೆ ಆಯೋಜಿಸಲು ಸಿದ್ಧತೆ ನಡೆದಿತ್ತು. ಉತ್ಸವ ಮೂರ್ತಿ ಸಾಗುವ ಮಾರ್ಗದ ಸಂಬಂಧ ಊರಿನ ಅಶ್ವತ್ಥಕಟ್ಟೆಯಲ್ಲಿ ಗ್ರಾಮಸ್ಥರು ಸಭೆ ನಡೆಸಿದ್ದರು.

'ಉತ್ಸವ ಮೂರ್ತಿಯನ್ನು ಪರಿಶಿಷ್ಟರ ಮನೆಗಳ ಬಳಿ ಕೊನೆಯದಾಗಿ ತಂದು ತರಾತುರಿಯಲ್ಲಿ ತೆಗೆದುಕೊಂಡು ಹೋಗುತ್ತೀರಿ' ಎಂದು ಪರಿಶಿಷ್ಟ ಯುವಕರು ಪ್ರಶ್ನಿಸಿದ್ದಾರೆ. 'ಹಿಂದಿನ ಪದ್ಧತಿಯಂತೆಯೇ ಉತ್ಸವ ನಡೆಯಲಿ' ಎಂದು ಸವರ್ಣೀಯರು ಹೇಳಿದ್ದಾರೆ.

'ನಮ್ಮ ಮನೆಯಿಂದಲೂ ಉತ್ಸವಕ್ಕೆ ಹಣ ಪಡೆಯುತ್ತಾರೆ. ಮೆರವಣಿಗೆ ಮಾತ್ರ ಒಕ್ಕಲಿಗರ ಮನೆ ಹತ್ತಿರ ಮೊದಲು ಹೋಗುತ್ತದೆ. ರಾತ್ರಿ 12 ಗಂಟೆಗೆ ನಮ್ಮ ಮನೆ ಬಳಿ ಬರುತ್ತದೆ. ದೇವರನ್ನು ಸರಿಯಾಗಿ ನೋಡಲೂ ಆಗುವುದಿಲ್ಲ' ಎಂದು ಪರಿಶಿಷ್ಟ ಯುವಕರು ದೂರಿದ್ದಾರೆ.

'ಜಮೀನು ವಿಚಾರವಾಗಿ ಪರಿಶಿಷ್ಟ ಸಮುದಾಯದ ಕೆಲವರು ದ್ವೇಷ ಸಾಧಿಸುತ್ತಿದ್ದರು. ಈಗ ತಕರಾರು ತೆಗೆದು ಹಲ್ಲೆ ನಡೆಸಿದರು' ಎಂದು ಸವರ್ಣೀಯರು ದೂರಿದ್ದಾರೆ.

ಪೊಲೀಸರಿಂದ ಶಾಂತಿಸಭೆ

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಿ.ದೇವರಾಜ್, ತಹಶೀಲ್ದಾರ್ ವಿ.ನಾಗರಾಜ್ ನೇತೃತ್ವದಲ್ಲಿ ಗುರುವಾರ ಗ್ರಾಮದಲ್ಲಿ ಶಾಂತಿಸಭೆ ನಡೆದು, ಮೆರವಣಿಗೆ ಸಾಗುವ ಮಾರ್ಗ (ರೂಟ್ ಮ್ಯಾಪ್) ಗುರುತಿಸಲಾಗಿದೆ. ದೇವರ ಉತ್ಸವಕ್ಕೆ ಗ್ರಾಮಸ್ಥರು ಸದ್ಯದಲ್ಲೇ ದಿನಾಂಕ ನಿಗದಿಪಡಿಸಲಿದ್ದಾರೆ.

'ಗ್ರಾಮದಲ್ಲಿ ಶಾಂತಿ ನೆಲೆಸಬೇಕು. ಈ ನಿಟ್ಟಿನಲ್ಲಿ ಎರಡೂ ಸಮುದಾಯದ ಮುಖಂಡರ ಕೈಕುಲುಕಿಸಿದ್ದು, ಶಾಂತಿ ಕಾಯ್ದುಕೊಂಡು ಹೋಗುವ ಭರವಸೆ ನೀಡಿದ್ದಾರೆ. ಘಟನೆ ಮರುಕಳಿಸಿದರೆ ಕಠಿಣ ಕ್ರಮ ಜರುಗಿಸುವ ಎಚ್ಚರಿಕೆ ನೀಡಿದೆ' ಎಂದು ಡಿ.ದೇವರಾಜ್ 'ಪ್ರಜಾವಾಣಿ'ಗೆ ತಿಳಿಸಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)				
ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	123.70	5,484	2,349
ಹಾರಂಗಿ	2,859	2,854.32	312	1,650
ಕಬಿನಿ	2,284	2,282.28	1,006	1,550
ಹೇಮಾವತಿ	2,922	2,921.47	3,128	3,067
ಲಿಂಗನಮಕ್ಕಿ	1,819	1,815	3,523	7,066
ಸೂಪಾ (ಮೀ)	564	553.71	1,528	3,215
ಮಾಣಿ	594	589	179	743
ತುಂಗಭದ್ರಾ	1,633	1,632.90	20,187	23,359
ಮಲಪ್ರಭಾ	2,079.50	2,079.50	1,794	1,794
ಘಟಪ್ರಭಾ	2,175	2,174.65	1,798	2,601
ಭದ್ರಾ	186	185	4,020	386
ಆಲಮಟ್ಟಿ (ಮೀ)	519.60	519.60	13,951	13,951
ನಾರಾಯಣಪುರ (ಮೀ)	492.25	492.12	15,000	18,000

*ನೆಲಮಟ್ಟದಿಂದ

ಸರ್ವಪಕ್ಷಗಳ ಸಭೆ ಇಂದು

ಮಂಡ್ಯ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅಧ್ಯಕ್ಷತೆಯಲ್ಲಿ ಶುಕ್ರವಾರ ಸರ್ವಪಕ್ಷಗಳ ಸಭೆ ನಡೆಯಲಿದೆ. ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟ ಸಮುದಾಯಗಳ ಮೀಸಲಾತಿ ಹೆಚ್ಚಿಸಬೇಕೆಂಬ ಹೋರಾಟದ ಹಿನ್ನೆಲೆಯಲ್ಲಿ ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ಆಯೋಗದ ವರದಿ ಕುರಿತು ಚರ್ಚೆ ನಡೆಯಲಿದೆ.

ಇಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರು, 'ನ್ಯಾಯಮೂರ್ತಿ ನಾಗಮೋಹನದಾಸ್ ಆಯೋಗದ ವರದಿ ಶಿಫಾರಸುಗಳ ಜಾರಿಗೆ ಸರ್ವಪಕ್ಷ ಸಭೆಯಲ್ಲಿ ಒತ್ತಾಯಿಸಲಾಗುವುದು' ಎಂದು ತಿಳಿಸಿದರು.

ಭಾರತ್ ಜೋಡೊ ಪಾದಯಾತ್ರೆ ನಡುವೆ ಮಾತನಾಡಿದ ಅವರು, 'ರಾಜ್ಯದಲ್ಲಿ ಪರಿಶಿಷ್ಟ ಜಾತಿಗೆ ಶೇ 15, ಪರಿಶಿಷ್ಟ ಪಂಗಡದವರಿಗೆ ಶೇ 3 ಸೇರಿ ಶೇ 18ರಷ್ಟು ಮೀಸಲಾತಿ ಇದೆ. ಕೇಂದ್ರ, ರಾಜ್ಯ ಸರ್ಕಾರದ ಮೀಸಲಾತಿ ನಡುವೆ ಶೇ 4.5ರಷ್ಟು ವ್ಯತ್ಯಾಸವಿದೆ. ಇದು ಜನಸಂಖ್ಯೆಗೆ ಅನುಗುಣವಾಗಿಲ್ಲವೆಂದು ಹೋರಾಟ ನಡೆದಿದೆ' ಎಂದರು.

'ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ನೇಮಕವಾಗಿದ್ದ ಆಯೋಗದ ಶಿಫಾರಸಿನಂತೆ ಪರಿಶಿಷ್ಟ ಜಾತಿಗಳಿಗೆ ಶೇ 17, ಪಂಗಡದವರಿಗೆ ಶೇ 7ರಷ್ಟು ಮೀಸಲಾತಿ ನೀಡಬೇಕು. ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಆಯೋಗ ವರದಿ ನೀಡಿದೆ. ಸರ್ಕಾರದ ನಡೆ ವಿರುದ್ಧ ವಾಲ್ಮೀಕಿ ಮಠದ ಸ್ವಾಮೀಜಿ ಧರಣಿ ಆರಂಭಿಸಿದ್ದಾರೆ' ಎಂದರು.

'ಮೀಸಲಾತಿ ಹೆಚ್ಚಳ ಕುರಿತು ಸದನದಲ್ಲಿ ನಿರ್ಧಾರ ಕೈಗೊಂಡು, ಕೇಂದ್ರಕ್ಕೆ ಕಳುಹಿಸಿ 15 ದಿನದೊಳಗೆ ಸಂವಿಧಾನದ ತಿದ್ದುಪಡಿ ಮಾಡುವ ಬಗ್ಗೆ ಪರಿಶೀಲಿಸುವಂತೆ ಶುಕ್ರವಾರದ ಸಭೆಯಲ್ಲಿ ಒತ್ತಾಯಿಸಲಾಗುವುದು' ಎಂದರು.



ಶೃಂಗೇರಿಯಲ್ಲಿ ಗುರುವಾರ ರಥೋತ್ಸವ, ಅಡ್ಡಪಲ್ಲಕ್ಕಿ ಉತ್ಸವ ಕಣ್ತುಂಬಿಕೊಳ್ಳಲು ಸೇರಿದ್ದ ಜನಸ್ತೋಮ –ಪ್ರಜಾವಾಣಿ ಚಿತ್ರ

ಇ.ಡಿ ವಿಚಾರಣೆಗೆ ಹೋಗುವೆ: ಡಿಕೆಶಿ

ಮಂಡ್ಯ: 'ನ್ಯಾಷನಲ್ ಹೆರಾಲ್ಡ್ ಪ್ರಕರಣದ ವಿಚಾರಣೆಗಾಗಿ ಜಾರಿ ನಿರ್ದೇಶನಾಲಯ (ಇಡಿ) ನೋಟಿಸ್ ನೀಡಿದ್ದು, ಶುಕ್ರವಾರ ದೆಹಲಿಯಲ್ಲಿ ವಿಚಾರಣೆ ಎದುರಿಸುತ್ತೇನೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಗುರುವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು 'ಭಾರತ್ ಜೋಡೊ ಯಾತ್ರೆಯ ಕಾರಣ ವಿಚಾರಣೆಗೆ ಹಾಜರಾಗಲು ಸಮಯ ನೀಡಬೇಕು ಎಂದು ಇಡಿಗೆ ಮನವಿ ಮಾಡಿದ್ದೆ. ಗುರುವಾರ ಮತ್ತೊಂದು ನೋಟಿಸ್ ಬಂದಿದೆ' ಎಂದರು.

'ಸಹೋದರ ಡಿ.ಕೆ.ಸುರೇಶ್ ಜೊತೆಗೆ ತೆರಳುವೆ. ಯಾತ್ರೆಯನ್ನು ಜನರೇ ನಡೆಸುತ್ತಾರೆ' ಎಂದು ತಿಳಿಸಿದರು.

ಕಲ್ಯಾಣ ಕರ್ನಾಟಕ, ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಉತ್ತಮ ಮಳೆ

ವಿವಿಧೆಡೆ ಮಳೆ, 25 ಮನೆಗಳಿಗೆ ಹಾನಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ/ಕಲಬುರಗಿ: ಕಲ್ಯಾಣ ಕರ್ನಾಟಕ ಮತ್ತು ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳು ಹಾಗೂ ಮಲೆನಾಡಿನ ಕೊಡಗು ಜಿಲ್ಲೆಯಲ್ಲಿ ಬುಧವಾರ ರಾತ್ರಿ ಹಾಗೂ ಗುರುವಾರ ಉತ್ತಮ ಮಳೆಯಾಗಿದೆ. ವಿಜಯನಗರ ಜಿಲ್ಲೆಯಲ್ಲಿ 25 ಮನೆಗಳ ಗೋಡೆ ಕುಸಿದಿದೆ. ಕಲಬುರಗಿಯಲ್ಲಿ 7 ಸೆಂ.ಮೀ ಮಳೆ ಸುರಿದಿರುವುದು ದಾಖಲಾಗಿದೆ.

ವಿಜಯನಗರ, ಹುಬ್ಬಳ್ಳಿ, ಕಾರವಾರ, ಗದಗ, ಬೆಳಗಾವಿ ಸೇರಿ ಹಲವೆಡೆ ಮಳೆಯಾಗಿದೆ. ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ ತಲುವಾಗಲುನಲ್ಲಿ ಮಲಿಯಮ್ಮ ದೇವಸ್ಥಾನ, ಒಂಬತ್ತು ಮನೆಗಳಿಗೆ ನೀರು ನುಗ್ಗಿದೆ. ಹೂವಿನಹಡಗಲಿ ತಾಲ್ಲೂಕಿನ ಸೋವೇನಹಳ್ಳಿಯಲ್ಲಿ ಶಿವನಕಟ್ಟೇಶ್ವರ ದೇಗುಲದ ಗೋಡೆ ಬಿರುಕುಬಿಟ್ಟಿದೆ.

ಕಟಾವು ಹಂತಕ್ಕೆ ಬಂದಿದ್ದ ನೂರಾರು ಎಕರೆ ಈರುಳ್ಳಿ, ಮೆಣಸಿನ ಕಾಯಿ ಬೆಳೆ ಹಾನಿಯಾಗಿದೆ. ಕೂಡ್ಲಿಗಿ ತಾಲ್ಲೂಕಿನ ಹಾರಕಭಾವಿ ಸರ್ಕಾರಿ ಶಾಲೆ ಜಲಾವೃತವಾಗಿದೆ. ಬಳ್ಳಾರಿ ಜಿಲ್ಲೆಯ ಸಂಡೂರು, ಸಿರುಗುಪ್ಪ, ಕುರುಗೋಡು, ಕಂಪ್ಲಿಯಲ್ಲೂ ಮಳೆಯಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಗೋಕರ್ಣ, ಕಾರವಾರದಲ್ಲಿ ಮುಂಜಾನೆ ದಟ್ಟವಾಗಿ ಕಾರ್ಮೋಡ ಕವಿದು, ಒಂದೆರಡು ಸಲ ಜೋರಾಗಿ ಸುರಿಯಿತು. ಗೋಕರ್ಣದ ಸುತ್ತಮುತ್ತ ಕೆಲವೆಡೆ ಭತ್ತ ಕಟಾವು ಆರಂಭವಾಗಿದ್ದು, ಮಳೆಯಿಂದಾಗಿ ಸ್ವಲ್ಪ ತೊಂದರೆಯಾಯಿತು.

ಉಳಿದಂತೆ ಕರಾವಳಿಯ ಎಲ್ಲೆಡೆ, ಶಿರಸಿ, ಸಿದ್ದಾಪುರ ಭಾಗದಲ್ಲಿ ಸಾಧಾರಣ, ಮುಂಡಗೋಡ, ಹಳಿಯಾಳ, ದಾಂಡೇಲಿ ಭಾಗದಲ್ಲಿ ತುಂತುರು ಮಳೆ ಸುರಿಯಿತು. ಹನಿಯಿತು. ಗದಗ ಜಿಲ್ಲೆಯಲ್ಲಿ ಗದಗ ಬೆಟಗೇರಿ ಅವಳಿ ನಗರ, ಮುಳಗುಂದ, ಲಕ್ಷ್ಮೇಶ್ವರ ಮತ್ತು ಮುಂಡರಗಿ ಭಾಗದಲ್ಲೂ ಜೋರು ಮಳೆ ಆಗಿದೆ. ಬೆಳಗಾವಿ ಜಿಲ್ಲೆ ಯಲ್ಲಿ ರಾಮದುರ್ಗ, ರಾಯಬಾಗ, ಸವದತ್ತಿ ಸೇರಿ ವಿವಿಧೆಡೆ ಸಾಧಾರಣ ಮಳೆಯಾಗಿದೆ.

ಕಲ್ಯಾಣ ಕರ್ನಾಟಕದಲ್ಲಿ ದಿನಪೂರ್ತಿ ಮಳೆ ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಬುಧವಾರ ರಾತ್ರಿಯಿಂದ ಮಳೆ ಸುರಿಯುತ್ತಿದ್ದು, ಕೃಷಿ ಜಮೀನುಗಳು ಜಲಾವೃತವಾಗಿದೆ. ಕೊಪ್ಪಳ ಜಿಲ್ಲೆಯ ಕುಕನೂರಿನ ಎಪಿಎಂಸಿಯಲ್ಲಿ ಒಣಗಲು ಹಾಕಿದ್ದ 140 ಕ್ವಿಂಟಲ್ ಮೆಕ್ಕೆಜೋಳ ನೀರಿನಲ್ಲಿ ಕೊಚ್ಚಿ ಹೋಗಿದೆ.

ರಾಯಚೂರು ಹಾಗೂ ಯಾದಗಿರಿ ಜಿಲ್ಲೆಯ ವಿವಿಧೆಡೆ ಉತ್ತಮ ಮಳೆಯಾಗಿದೆ. ಕಲಬುರಗಿ ಜಿಲ್ಲೆಯಲ್ಲಿ ಅಕ್ಟೋಬರ್ 12ರವರೆಗೆ ಮಳೆ ಮುಂದುವರೆಯಲಿದೆ ಎಂದು ಹವಾಮಾನ ಇಲಾಖೆಯ ಅಧಿಕಾರಿಗಳು ಮುನ್ಸೂಚನೆ ನೀಡಿದ್ದಾರೆ.

ಮಡಿಕೇರಿಯಲ್ಲಿ ಮತ್ತೆ ಮಳೆ ಮಡಿಕೇರಿ ನಗರ ಸೇರಿದಂತೆ ಕೊಡಗು ಜಿಲ್ಲೆಯ ಕೆಲವೆಡೆ ಮಳೆ ಆರಂಭವಾಗಿದೆ. 15 ದಿನಗಳಿಂದ ಮಳೆ ಬಿಡುವು ನೀಡಿತ್ತು. ಕೊಳೆರೋಗದಿಂದ ಬಾಧಿತವಾಗಿರುವ ಕಾಫಿ, ಮೆಣಸಿಗೆ ಕ್ರಿಮಿನಾಶಕಗಳನ್ನು ಸಿಂಪಡಿಸಲು ಬೆಳೆಗಾರರು ಸಿದ್ಧತೆ ನಡೆಸಿದ್ದರು. ಈಗ ನಿರಂತರವಾಗಿ ಸುರಿಯುತ್ತಿರುವ ಮಳೆ ತೊಡಕಾಗಿ ಪರಿಣಮಿಸಿದೆ.



ವಿಜಯನಗರ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಗುರುವಾರ ಮಳೆಯಿಂದಾಗಿ ಜಲಾವೃತವಾಗಿತ್ತು

ಮಹಾರಾಷ್ಟ್ರದ ಗ್ರಾಮದಲ್ಲಿ ನಿರ್ಣಯ • ಕಲಿಕಾಸಕ್ತಿ ಹೆಚ್ಚಿಸಲು 'ಡಿಜಿಟಲ್ ಲಾಕ್‌ಡೌನ್'

ನಿತ್ಯ ಒಂದೂವರೆ ತಾಸು ಮೊಬೈಲ್, ಟಿ.ವಿ ಬಂದ್


• ಇಮಾಮಹುಸೇನ್ ಗೂಡುನವರ

ಬೆಳಗಾವಿ: ಮಕ್ಕಳನ್ನು ಮೊಬೈಲ್ ಗೀಳಿನಿಂದ ಹೊರತಂದು, ಕಲಿಕೆ ಯತ್ತ ಆಕರ್ಷಿಸಲು ಇಲ್ಲೊಂದು ಗ್ರಾಮದಲ್ಲಿ 'ಡಿಜಿಟಲ್ ಲಾಕ್‌ಡೌನ್' ಘೋಷಿಸಲಾಗಿದೆ. ನಿತ್ಯ ಸಂಜೆ 7ರಿಂದ 8.30ರವರೆಗೆ ಮೊಬೈಲ್, ಟಿ.ವಿ ಬಳಕೆ ನಿಷೇಧಿಸಲಾಗಿದೆ.

ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ಕಾಡೇಗಾಂವ್ ತಾಲ್ಲೂಕಿನ ಮೋಹಿತೆ ವಡಗಾಂವ ಗ್ರಾಮಸ್ಥರು ಇಂತಹ ನಿರ್ಣಯ ಕೈಗೊಂಡಿದ್ದಾರೆ. ಆ.14ರಿಂದ ಹೊಸ ಪದ್ಧತಿ ಜಾರಿಯಾಗಿದ್ದು, ಸಂಜೆ ಹೊತ್ತಿನಲ್ಲಿ ಮಕ್ಕಳು ಮೊಬೈಲ್ ಬದಿಗಿರಿಸಿ ಅಭ್ಯಸಿಸುತ್ತಿದ್ದಾರೆ.

ಗ್ರಾಮದ ಜನಸಂಖ್ಯೆ ಸುಮಾರು 3 ಸಾವಿರ. 450 ಮಕ್ಕಳು ತಮ್ಮೂರಿನಲ್ಲೇ 1ರಿಂದ 10ನೇ ತರಗತಿಯಲ್ಲಿ ಓದುತ್ತಿದ್ದಾರೆ.

ಖುಷಿಯಿಂದ ಓದು: 'ಮಕ್ಕಳು ಕಲಿಕೆಯಲ್ಲಿ ಹಿಂದುಳಿದಿದ್ದರು. ಅನಗತ್ಯ ವಾಗಿ ಮೊಬೈಲ್ ಬಳಸುತ್ತಿದ್ದರು. ಸರಿಯಾಗಿ ಅಭ್ಯಸಿಸುತ್ತಿಲ್ಲ ಎಂಬ ದೂರು ಇತ್ತು. ಹೀಗಾಗಿ, ಗ್ರಾಮದ ಹಿರಿಯರೆಲ್ಲ ಸೇರಿ ಚರ್ಚಿಸಿ, ನಿತ್ಯ ಒಂದೂವರೆ ತಾಸು ಮೊಬೈಲ್, ಟಿ.ವಿ ಬಳಕೆಗೆ ನಿರ್ಬಂಧ ಹೇರುವ ನಿರ್ಣಯವನ್ನು ಗ್ರಾಮ ಪಂಚಾಯಿತಿ ಸಭೆಯಲ್ಲಿ ಕೈಗೊಂಡೆವು. ಜೊತೆಗೆ ವಾರ್ಡ್‌ವಾರು ಸಮಿತಿ ರಚಿಸಿ, ಜನರಲ್ಲಿ ಜಾಗೃತಿ ಮೂಡಿಸಿದೆವು' ಎಂದು ಗ್ರಾಮ ಪಂಚಾಯಿತಿ ಅಧ್ಯಕ್ಷ ವಿಜಯ ಮೋಹಿತೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.



ಮೋಹಿತೆ ವಡಗಾಂವದಲ್ಲಿ ವಿದ್ಯಾರ್ಥಿಗಳು ಸಂಜೆ ಅಭ್ಯಸಿಸುತ್ತಿರುವುದು

> **ಗ್ರಾಮದಲ್ಲಿ ಕೈಗೊಂಡಿರುವ ನಿರ್ಣಯ ಪಕ್ಕದ ಗ್ರಾಮಗಳ ಜನರ ಗಮನವನ್ನು ಸೆಳೆದಿದೆ. ಕರೆ ಮಾಡಿ, ಡಿಜಿಟಲ್ ಲಾಕ್‌ಡೌನ್ ಬಗ್ಗೆ ವಿಚಾರಿಸುತ್ತಾರೆ**
> **ವಿಜಯ ಮೋಹಿತೆ,** ಅಧ್ಯಕ್ಷ, ಮೋಹಿತೆ ವಡಗಾಂವ ಗ್ರಾಮ ಪಂಚಾಯಿತಿ

'ಗ್ರಾಮದೇವರಾದ ಭೈರವನಾಥ ಮಂದಿರದ ಮೇಲೆ ಸೈರನ್ ಅಳವಡಿಸಲಾಗಿದೆ. ಸಂಜೆ 7ಕ್ಕೆ ಅದನ್ನು ಬಾರಿಸಿದ ಕೂಡಲೇ ಜನರು ಮೊಬೈಲ್ ಬದಿಗಿರಿಸಿ ಮನೆಯಲ್ಲಿ ಟಿ.ವಿ ಬಳಕೆ ನಿಲ್ಲಿಸುತ್ತಾರೆ. ಮಕ್ಕಳೆಲ್ಲ ಮನೆಯಲ್ಲಿ ಅಭ್ಯಾಸ ಮಾಡುತ್ತಾರೆ' ಎಂದರು.

'ಈ ಅವಧಿಯಲ್ಲಿ ಜನರೂ ಟಿ.ವಿ ನೋಡದೆ, ಕುಟುಂಬಸ್ಥರು ಹಾಗೂ ಸ್ನೇಹಿತರೊಂದಿಗೆ ಚರ್ಚೆಯಲ್ಲಿ ತೊಡಗುತ್ತಾರೆ. ಎರಡು ತಿಂಗಳಿಂದ ಇದನ್ನು ಅನುಸರಿಸುತ್ತಿರುವುದರಿಂದ ಮಕ್ಕಳ ಕಲಿಕೆಯಲ್ಲಿ ಸುಧಾರಣೆ ಕಂಡುಬಂದಿದೆ' ಎಂದು ಅಭಿಪ್ರಾಯಪಟ್ಟರು.

'ಮೊಬೈಲ್ ಬಳಕೆ ನಿಷೇಧಿಸಿದ್ದರಿಂದ ಮಕ್ಕಳೂ ಉತ್ಸಾಹದಿಂದ ಓದುತ್ತಿದ್ದಾರೆ' ಎನ್ನುತ್ತಾರೆ ಪಾಲಕರಾದ ಅನಿಲ ನಿಕ್ಕಂ, ವಂದನಾ ಮೋಹಿತೆ.

ಶುಕ್ರವಾರ, ಅಕ್ಟೋಬರ್ 7, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಚಿತ್ರೋತ್ಸವ
ಲಂಡನ್‌ನಲ್ಲಿ ನಡೆದ ಚಿತ್ರೋತ್ಸವದಲ್ಲಿ ನಟಿ ಗಾಯಾ ವೈಸ್ ಕಾಣಿಸಿಕೊಂಡಿದ್ದು ಹೀಗೆ



ಶುಕ್ರವಾರ • ಅಕ್ಟೋಬರ್ 7, 2022 ಪ್ರಜಾವಾಣಿ

ಕುಗ್ಗಿದ ಅರಣ್ಯ ಬಳಕೆ ಪ್ರಮಾಣ • ಬೇಕಿದೆ 49.7 ಹೆಕ್ಟೇರ್ ಅರಣ್ಯ • ಕಾಮಗಾರಿಯ ಚಾಲನೆ ಇನ್ನಷ್ಟು ವಿಳಂಬ

ಮಹದಾಯಿ: ಸಿಕ್ಕಿಲ್ಲ ಅರಣ್ಯ ಅನುಮೋದನೆ

• ಮಂಜುನಾಥ ಹೆಬ್ಬಾರ್

ನವದೆಹಲಿ: ಮಹದಾಯಿ (ಕಳಸಾ-ಬಂಡೂರಿ) ಯೋಜನೆಯ ಪರಿಷ್ಕೃತ ಪೂರ್ವ ಕಾರ್ಯಸಾಧ್ಯತಾ ವರದಿಯ ಪ್ರಕಾರ, ಯೋಜನೆಯ ಅನುಷ್ಠಾನಕ್ಕೆ 49.7 ಹೆಕ್ಟೇರ್ ಅರಣ್ಯ ಭೂಮಿ ಬೇಕಿದೆ. ಈ ಅರಣ್ಯ ಭೂಮಿ ಬಳಕೆಗೆ ಕೇಂದ್ರ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯಕ್ಕೆ ಕರ್ನಾಟಕ ಸರ್ಕಾರವು ಹೊಸ ಪ್ರಸ್ತಾವನೆ ಸಲ್ಲಿಸಿದೆ.

ಈ ಯೋಜನೆಯ ಪರಿಷ್ಕೃತ ಯೋಜನಾ ವರದಿಗೆ ಕೇಂದ್ರ ಜಲ ಆಯೋಗ ಅನುಮೋದನೆ ನೀಡಿದ್ದು, ಶೀಘ್ರದಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದು ಕರ್ನಾಟಕ ಸರ್ಕಾರ ಹೇಳಿಕೊಂಡಿದೆ. ಆದರೆ, ಪರಿಸರ ಸಚಿವಾಲಯದಿಂದ ಅನುಮೋದನೆ ಸಿಕ್ಕ ಬಳಿಕವಷ್ಟೇ ಯೋಜನೆಯ ಕಾಮಗಾರಿಗೆ ಚಾಲನೆ ನೀಡಲು ಸಾಧ್ಯ. ಹೀಗಾಗಿ, ಕಾಮಗಾರಿಗೆ ಚಾಲನೆ ನೀಡುವುದು ಇನ್ನಷ್ಟು ತಡವಾಗಲಿದೆ.

ಈ ಯೋಜನೆಗೆ 500 ಹೆಕ್ಟೇರ್ ಅರಣ್ಯ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಸ್ತಾಪಿಸಲಾಗಿತ್ತು. ಇದು ಕುಡಿಯುವ ನೀರಿನ ಯೋಜನೆ ಆಗಿರುವುದರಿಂದ 'ಪರಿಸರ ಪರಿಣಾಮ ಅಧ್ಯಯನ ಅಧಿಸೂಚನೆ-2006'ರ ವ್ಯಾಪ್ತಿಗೆ ಬರುವುದಿಲ್ಲ. ಹೀಗಾಗಿ, ಯೋಜನೆ ಅನುಷ್ಠಾನಕ್ಕೆ ಯಾವುದೇ ತಕರಾರು ಇಲ್ಲ ಎಂದು ಕೇಂದ್ರ ಪರಿಸರ ಸಚಿವಾಲಯ 2019ರಲ್ಲೇ ಸ್ಪಷ್ಟಪಡಿಸಿದೆ. ಆದರೂ, ಅರಣ್ಯ ಭೂಮಿ ಸ್ವಾಧೀನಕ್ಕೆ ಕೇಂದ್ರ ಪರಿಸರ ಸಚಿವಾಲಯದ ಒಪ್ಪಿಗೆ ಪಡೆಯಬೇಕಿದೆ. ಕಾಲುವೆಗಳ ಮೂಲಕ ನೀರು ಹರಿಸಿದರೆ 500 ಹೆಕ್ಟೇರ್ ಅರಣ್ಯ ಭೂಮಿ ಸ್ವಾಧೀನಪಡಿಸಿಕೊಳ್ಳಬೇಕಾಗುತ್ತದೆ. ಪೈಪ್‌ಗಳ ಮೂಲಕ ನೀರು ಹರಿಸಲು ಪರಿಷ್ಕೃತ ಯೋಜನೆಯಲ್ಲಿ ಪ್ರಸ್ತಾಪಿಸಲಾಗಿದೆ. ಇದರಿಂದಾಗಿ, ಅರಣ್ಯ ಭೂಮಿ ಸ್ವಾಧೀನ ಶೇ 85ರಷ್ಟು ಕಡಿಮೆ ಆಗಿದೆ.

ಕರ್ನಾಟಕ ಸರ್ಕಾರ ಸಲ್ಲಿಸಿರುವ ಪ್ರಸ್ತಾವದ ಪ್ರಕಾರ, ಕಳಸಾ ಯೋಜನೆಗೆ 16.6 ಹೆಕ್ಟೇರ್ ಅರಣ್ಯ ಹಾಗೂ 11.27 ಹೆಕ್ಟೇರ್ ಅರಣ್ಯೇತರ ಭೂಮಿ, ಬಂಡೂರಿ ಯೋಜನೆಗೆ 32.21 ಹೆಕ್ಟೇರ್ ಅರಣ್ಯ ಹಾಗೂ 11.05 ಹೆಕ್ಟೇರ್ ಅರಣ್ಯೇತರ ಭೂಮಿ ಬೇಕಿದೆ.

40 ಹೆಕ್ಟೇರ್‌ಗಿಂತ ಕಡಿಮೆ ಅರಣ್ಯ ಭೂಮಿ ಸ್ವಾಧೀನಕ್ಕೆ ಕೇಂದ್ರ ಪರಿಸರ ಸಚಿವಾಲಯದ ಬೆಂಗಳೂರು ಪ್ರಾದೇಶಿಕ ಕಚೇರಿಯಿಂದ ಅನುಮತಿ ಪಡೆದರೆ ಸಾಕು. ಹೀಗಾಗಿ, ಕಳಸಾ- ಬಂಡೂರಿ ಯೋಜನೆಗೆ ಅಗತ್ಯವಿರುವ ಅರಣ್ಯ ಭೂಮಿಗಳ ಪ್ರತ್ಯೇಕ ಪ್ರಸ್ತಾವಗಳನ್ನು ಸಲ್ಲಿಸಲಾಗಿದೆ. ಶೀಘ್ರ ಅನುಮೋದನೆ ಸಿಗುವ ವಿಶ್ವಾಸ ಇದೆ ಎಂದು ಕರ್ನಾಟಕ ಸರ್ಕಾರದ ಮೂಲಗಳು ತಿಳಿಸಿವೆ.

'ಯೋಜನೆ ಅನುಷ್ಠಾನಕ್ಕಾಗಿ ಅರಣ್ಯ ಪರಿವರ್ತನೆ ಕೋರಿರುವ ಖಾನಾಪುರ ತಾಲ್ಲೂಕಿನ ಅರಣ್ಯ ಪ್ರದೇಶಗಳು ಅಪರೂಪದ ವನ್ಯಜೀವಿಗಳಿಗೆ ಆಶ್ರಯತಾಣವಾಗಿದ್ದು, ವನ್ಯಜೀವಿಗಳ ಹಾಗೂ ವನ್ಯಜೀವಿಗಳ ಆವಾಸಸ್ಥಾನಕ್ಕೆ ಧಕ್ಕೆಯಾದಂತೆ ಯೋಜನೆ ರೂಪಿಸಬೇಕು. ಈ ಕುರಿತು ಸೂಕ್ತ ಉಪಶಮನ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ವನ್ಯಜೀವಿ ಸಂರಕ್ಷಣಾವಾದಿ ಗಿರಿಧರ್ ಕುಲಕರ್ಣಿ ಒತ್ತಾಯಿಸಿದರು.

'ವನ್ಯಜೀವಿಗಳ ಹಾಗೂ ವನ್ಯ ಜೀವಿಗಳ ಆವಾಸಸ್ಥಾನದ ಸಂರಕ್ಷಣೆಗಾಗಿ ವನ್ಯಜೀವಿ ಸಂರಕ್ಷಣಾ ಯೋಜನೆಯನ್ನು ಅರಣ್ಯ ಇಲಾಖೆ ಸಿದ್ಧಪಡಿಸಬೇಕು ಹಾಗೂ ಇದರ ಅನುಷ್ಠಾನಕ್ಕಾಗಿ ಬಳಕೆದಾರ ಸಂಸ್ಥೆಯು ಅರಣ್ಯ ಇಲಾಖೆಗೆ ಸೂಕ್ತ ಅನುದಾನ ಒದಗಿಸಬೇಕು' ಎಂದು ಅವರು ಹೇಳಿದರು.

'ಇದೇ ಭೂ ಪ್ರದೇಶದಲ್ಲಿ ಬೋರ್ಡ್ ರಸ್ತೆಯ ಉನ್ನತೀಕರಣ ಯೋಜನೆಗಾಗಿ ವನ್ಯಜೀವಿ ಅನುಮೋದನೆ ಹಾಗೂ ಗೋವಾ ರಾಜ್ಯಕ್ಕೆ ಹೆಚ್ಚುವರಿ ವಿದ್ಯುತ್ ಒದಗಿಸಲು 400 ಕೆ.ವಿ. ಪ್ರಸರಣ ಮಾರ್ಗಕ್ಕಾಗಿ ಅರಣ್ಯ ಪರಿವರ್ತನೆಯ ಪ್ರಸ್ತಾವನೆ ಇದ್ದು ಈ ಪ್ರಸ್ತಾವನೆಗಳನ್ನು ಸುಸ್ಥಿರ ಅಭಿವೃದ್ಧಿಯ ದೃಷ್ಟಿಯಿಂದ ತಿರಸ್ಕರಿಸಬೇಕು. ಯಾವುದೇ ಕಾರಣಕ್ಕೂ ಮಹದಾಯಿ ಜಲ ವಿದ್ಯುತ್ ಯೋಜನೆಗೆ ಅನುಮತಿ ನೀಡಬಾರದು' ಎಂದು ಅವರು ಆಗ್ರಹಿಸಿದರು.

'ಆರು ತಿಂಗಳಲ್ಲೇ ಅನುಷ್ಠಾನ'

ಹುಬ್ಬಳ್ಳಿ- ಧಾರವಾಡಕ್ಕೆ ಕುಡಿಯುವ ನೀರು ಪೂರೈಸಲು ಈ ಯೋಜನೆ ರೂಪಿಸಲಾಗಿದ್ದು, ಈ ನಗರಗಳ ಈಗಿನ ಜನಸಂಖ್ಯೆ 10 ಲಕ್ಷ. 2051ಕ್ಕೆ ಈ ನಗರಗಳ ಜನಸಂಖ್ಯೆ 33.41 ಲಕ್ಷಕ್ಕೆ ಏರಲಿದೆ. ನೀರಿನ ಬೇಡಿಕೆ ಪ್ರಮಾಣ 8.61 ಟಿಎಂಸಿ ಅಡಿಗೆ ಏರಲಿದೆ ಎಂದು ಪರಿಷ್ಕೃತ ಪೂರ್ವ ಕಾರ್ಯಸಾಧ್ಯತಾ ವರದಿಯಲ್ಲಿ ಹೇಳಲಾಗಿದೆ. ಕಾಲುವೆಗಳ ನಿರ್ಮಾಣ ಮಾಡಿದ್ದರೆ ಯೋಜನೆ ಅನುಷ್ಠಾನಕ್ಕೆ ಐದು ವರ್ಷಗಳು ಬೇಕಿತ್ತು. ಈಗ ಆರು ತಿಂಗಳಲ್ಲೇ ಕಾಮಗಾರಿ ಪೂರ್ಣಗೊಳಿಸಬಹುದು ಎಂದೂ ತಿಳಿಸಲಾಗಿದೆ.

ಪ್ರಜಾವಾಣಿ ವಿಶೇಷ

ಅಂಕಿ-ಅಂಶಗಳು

3.90 ಟಿಎಂಸಿ ಅಡಿ — ಮಹದಾಯಿ ನ್ಯಾಯಾಧಿಕರಣದಿಂದ ನೀರು ಹಂಚಿಕೆ
2.18 ಟಿಎಂಸಿ ಅಡಿ — ಬಂಡೂರಿ ಮೂಲಕ
1.72 ಟಿಎಂಸಿ ಅಡಿ — ಕಳಸಾ ಮೂಲಕ
₹791.50 ಕೋಟಿ — ಬಂಡೂರಿ ಯೋಜನಾ ವೆಚ್ಚ
₹598 ಕೋಟಿ — ಕಳಸಾ ಯೋಜನಾ ವೆಚ್ಚ

ಬಂಡೂರಿ ಯೋಜನೆ

59 ಹೆಕ್ಟೇರ್ — ಅಗತ್ಯವಿರುವ ಒಟ್ಟು ಭೂಮಿ
16.6 ಹೆಕ್ಟೇರ್ — ಅಗತ್ಯವಿರುವ ಅರಣ್ಯ ಭೂಮಿ
43.15 ಹೆಕ್ಟೇರ್ — ಬೇಕಾಗುವ ಖಾಸಗಿ ಭೂಮಿ

ಕಳಸಾ ಯೋಜನೆ


130 ಹೆಕ್ಟೇರ್ — ಬೇಕಾಗುವ ಒಟ್ಟು ಭೂಮಿ
32.27 ಹೆಕ್ಟೇರ್ — ಅಗತ್ಯವಿರುವ ಅರಣ್ಯ ಭೂಮಿ
96.42 ಹೆಕ್ಟೇರ್ — ಬೇಕಾಗುವ ಖಾಸಗಿ ಭೂಮಿ

ಸುದ್ದಿ 2 ನಿಮಿಷ

ಪಿಂಚಣಿ, ವೃದ್ಧಾಶ್ರಮ ಕುರಿತ ಸಮಗ್ರ ವರದಿಗೆ 'ಸುಪ್ರೀಂ' ಸೂಚನೆ

ನವದೆಹಲಿ (ಪಿಟಿಐ): ಪಿಂಚಣಿ ಸೌಲಭ್ಯ, ವೃದ್ಧಾಶ್ರಮಗಳ ಸ್ಥಾಪನೆ ಸೇರಿದಂತೆ ಹಿರಿಯ ನಾಗರಿಕರ ಕಲ್ಯಾಣ ಯೋಜನೆಗಳ ಜಾರಿ ಕುರಿತು ವರದಿ ಸಲ್ಲಿಸುವಂತೆ ಸುಪ್ರೀಂ ಕೋರ್ಟ್‌ ಎಲ್ಲ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳಿಗೆ ಆದೇಶಿಸಿದೆ.

ನ್ಯಾಯಮೂರ್ತಿಗಳಾದ ಅನಿರುದ್ಧ ಬೋಸ್ ಮತ್ತು ಸುಧಾಂಶು ಧುಲಿಯಾ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದ್ದು, ಕಲ್ಯಾಣ ಯೋಜನೆಗಳ ಅನುಷ್ಠಾನ, ಪೂರಕತೆ ಮತ್ತು ಹಿರಿಯ ನಾಗರಿಕ ಕಾಯ್ದೆಯ ಜಾರಿ ಕುರಿತು ವಸ್ತುಸ್ಥಿತಿ ವರದಿ ಸಲ್ಲಿಸಬೇಕು ಎಂದು ಸೂಚಿಸಿದೆ.



ರಾಜ್ಯ ಸರ್ಕಾರಗಳು ಎರಡು ತಿಂಗಳಲ್ಲಿ ಈ ವರದಿ ಸಲ್ಲಿಸಬೇಕು, ನಂತರದ ಒಂದು ತಿಂಗಳಲ್ಲಿ ಕೇಂದ್ರ ಸರ್ಕಾರವು ಪರಿಷ್ಕೃತ ವಸ್ತುಸ್ಥಿತಿ ವರದಿಯನ್ನು ಸಲ್ಲಿಸಬೇಕು ಎಂದು ನ್ಯಾಯಪೀಠವು ಸೂಚಿಸಿದೆ.

ಪ್ರಾಥಮಿಕ ಆರೋಗ್ಯ ಸೇವೆ ಒಳಗೊಂಡಂತೆ ವೃದ್ಧಾಶ್ರಮಗಳನ್ನು ದೇಶದಾದ್ಯಂತ ಸ್ಥಾಪಿಸಬೇಕು ಎಂದು ಕೋರಿ ಮಾಜಿ ಕಾನೂನು ಸಚಿವ ಅಶ್ವನಿಕುಮಾರ್ ಸಲ್ಲಿಸಿದ್ದ ಅರ್ಜಿ ಕುರಿತು ಈ ನಿರ್ದೇಶನ ನೀಡಿತು. 2023ರ ಜನವರಿಗೆ ವಿಚಾರಣೆ ಮುಂದೂಡಲಾಯಿತು.

ಅಲ್ಪಸಂಖ್ಯಾತ ಸಂಸ್ಥೆ ಸ್ಥಾನಮಾನ: ಪರಿಶೀಲನೆಗೆ 'ಸುಪ್ರೀಂ' ಸಮ್ಮತಿ

ನವದೆಹಲಿ (ಪಿಟಿಐ): ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗೆ ಅಲ್ಪಸಂಖ್ಯಾತ ಸಂಸ್ಥೆಯ ಸ್ಥಾನಮಾನ ನೀಡಬೇಕೆ, ಬೇಡವೆ ಎಂಬುದರ ಕುರಿತು ಪರಿಶೀಲನೆ ನಡೆಸಲು ಸುಪ್ರೀಂ ಕೋರ್ಟ್ ಗುರುವಾರ ಸಮ್ಮತಿ ಸೂಚಿಸಿದೆ.

ಅರ್ಜಿಯೊಂದರ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಮತ್ತು ಬಿ.ವಿ.ನಾಗರತ್ನ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠವು ಈ ಸಂಬಂಧ ಪ್ರತಿಕ್ರಿಯೆ ಸಲ್ಲಿಸುವಂತೆ ಉತ್ತರಪ್ರದೇಶ ಸರ್ಕಾರ, ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ರಾಷ್ಟ್ರೀಯ ಆಯೋಗ, ರಾಷ್ಟ್ರೀಯ ವೈದ್ಯಕೀಯ ಆಯೋಗ ಹಾಗೂ ಇತರರಿಗೆ ನೋಟಿಸ್ ಜಾರಿಗೊಳಿಸಿದೆ.

ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ವ್ಯಕ್ತಿಗಳ ಆಡಳಿತಕ್ಕೊಳಪಟ್ಟಿರುವ ಶಿಕ್ಷಣ ಸಂಸ್ಥೆಗಳನ್ನು ಅಲ್ಪಸಂಖ್ಯಾತ ಸಂಸ್ಥೆಗಳೆಂದು ಪರಿಗಣಿಸಲು ಸಾಧ್ಯವಿಲ್ಲ ಎಂದು ಉತ್ತರಪ್ರದೇಶ ಸರ್ಕಾರ ಆದೇಶ ಹೊರಡಿಸಿತ್ತು. ಇದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯೊಂದರ ವಿಚಾರಣೆ ನಡೆಸಿದ್ದ ಅಲಹಾಬಾದ್ ಹೈಕೋರ್ಟ್, ರಾಜ್ಯ ಸರ್ಕಾರದ ಆದೇಶವನ್ನು ಎತ್ತಿಹಿಡಿದಿತ್ತು. ಹೈಕೋರ್ಟ್‌ನ ತೀರ್ಪು ಪ್ರಶ್ನಿಸಿ ಮಹಾಯಾನ ತೇರವಾಡ ವಜ್ರಯಾನ ಬೌದ್ಧ ಧರ್ಮ ಮತ್ತು ಚಾರಿಟಬಲ್ ಟ್ರಸ್ಟ್, ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು.

ಗ್ರಾ.ಪಂ ಸದಸ್ಯರ ಅಧಿಕಾರ ಮೊಟಕು; ನಡಾವಳಿ ರದ್ದತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಗ್ರಾಮ ಪಂಚಾಯಿತಿ ನೌಕರರ ಸೇವಾ ನಿಯಮಗಳಿಗೆ ತಂದಿರುವ ತಿದ್ದುಪಡಿಯನ್ನು ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟ ಖಂಡಿಸಿದೆ.

ಈ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ 10 ಪುಟಗಳ ಮನವಿ ಸಲ್ಲಿಸಿರುವ ಒಕ್ಕೂಟ, ಹೊಸ ನಿಯಮಗಳಿಂದ ಆಗುವ ಸಮಸ್ಯೆಗಳು, ಭವಿಷ್ಯದ ಪರಿಣಾಮಗಳನ್ನು ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಿದೆ.

ಕಾರ್ಯದರ್ಶಿಗಳ ಮಟ್ಟದ ಸಭೆಯಲ್ಲಿ ರೂಪಿಸಲಾದ ನಡಾವಳಿಗಳು ಅಧಿಕಾರಿಗಳ ಕೈ ಬಲಪಡಿಸಲಿವೆ. ಪ್ರಜಾಪ್ರಭುತ್ವದ ಆಶಯ, ಗ್ರಾಮ ಪಂಚಾಯಿತಿ ವ್ಯವಸ್ಥೆಯ ಅಸ್ತಿತ್ವಕ್ಕೆ ಧಕ್ಕೆ ತರಲಿವೆ. ಪಂಚಾಯತ್ ರಾಜ್ ಕಾಯ್ದೆ–1993ರ ನಿಯಮ 64(2) ಪ್ರಕಾರ ಯಾವುದೇ ಪರವಾನಗಿ ನೀಡಲು ಗ್ರಾಮ ಪಂಚಾಯಿತಿ ಅರ್ಜಿ ಸ್ವೀಕರಿಸಿದ 60 ದಿನಗಳ ಒಳಗೆ ನೀಡಲೇಬೇಕಿದೆ. ಕೊಡಲು ವಿಫಲವಾದರೆ ಅರ್ಜಿದಾರರು ಆ ಕಾರ್ಯ ಮಾಡಲು ಕಾನೂನು ಸಮ್ಮತಿ ಇದ್ದರೂ, ಪರವಾನಗಿ ನೀಡುವ ಅಧಿಕಾರವನ್ನೂ ಪಿಡಿಒಗಳಿಗೆ ವಹಿಸಿರುವುದು ಎಷ್ಟರ ಮಟ್ಟಿಗೆ ಸರಿ ಒಕ್ಕೂಟದ ಮುಖಂಡರು ಪ್ರಶ್ನಿಸಿದ್ದಾರೆ.

ಹಣಕಾಸಿನ ವಂಚನೆ, ಅವ್ಯವಹಾರಗಳು ನಡೆದಾಗ ಚುನಾಯಿತ ಪ್ರತಿನಿಧಿಯಾದ ಅಧ್ಯಕ್ಷರನ್ನು ಹೊಣೆ ಮಾಡಲು ಆಗದು ಎಂದು ಸರ್ಕಾರ ಹೇಳಿದೆ. ಆದರೆ, ನಿಯಮ 69 (2ಡಿ,2ಸಿ) ಹಾಗೂ 48ರ ಪ್ರಕಾರ ಅಧ್ಯಕ್ಷರ ಮೇಲೆ ಕ್ರಮ ಜರುಗಿಸಲು ಅವಕಾಶವಿದೆ. ನಿಯಮ 43ರ ಅನ್ವಯ ಅಧ್ಯಕ್ಷ ಅಥವಾ ಅವರ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷರು ಸತತ ಎರಡು ಸಭೆಗಳನ್ನು ಕರೆಯಲು ವಿಫಲನಾದರೆ ಅವರ ಸದಸ್ಯತ್ವ ರದ್ದುಪಡಿಸಲು ಅವಕಾಶವಿದೆ. ತಕ್ಷಣ ನಡಾವಳಿ ರದ್ದು ಮಾಡದಿದ್ದರೆ ಇದು ಭವಿಷ್ಯದಲ್ಲಿ ಗ್ರಾಮ ಪಂಚಾಯಿತಿ ವ್ಯವಸ್ಥೆಯ ವಿನಾಶಕ್ಕೆ ಮುನ್ನುಡಿಯಾಗಲಿದೆ ಎಂದು ಮಹಾ ಒಕ್ಕೂಟದ ಅಧ್ಯಕ್ಷ ಕೆ.ಎಸ್. ಸತೀಶ್ ಅವರು ಎಚ್ಚರಿಸಿದ್ದಾರೆ.

ಜೆಡಿಎಸ್ ಅಭ್ಯರ್ಥಿಗಳಿಗೇ ಕೆಸಿಆರ್ ಬೆಂಬಲ: ಎಚ್‌.ಡಿ. ಕುಮಾರಸ್ವಾಮಿ

ರಾಜ್ಯದಲ್ಲಿ ಬಿಆರ್‌ಎಸ್ ಸ್ಪರ್ಧೆಯಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆ.ಚಂದ್ರಶೇಖರರಾವ್ ನೇತೃತ್ವದ ಭಾರತ ರಾಷ್ಟ್ರ ಸಮಿತಿಯು (ಬಿಆರ್‌ಎಸ್) ಕರ್ನಾಟಕದ ವಿಧಾನಸಭೆ ಚುನಾವಣೆಯಲ್ಲಿ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸುವುದಿಲ್ಲ. ನಮ್ಮ ಅಭ್ಯರ್ಥಿಗಳನ್ನೇ ಬೆಂಬಲಿಸುವ ನಿರ್ಧಾರವನ್ನು ಆ ಪಕ್ಷ ತೆಗೆದುಕೊಂಡಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ತೆಲಂಗಾಣದ ಮುಖ್ಯಮಂತ್ರಿಯೂ ಆಗಿರುವ ಚಂದ್ರಶೇಖರರಾವ್ ಜತೆ ನಮ್ಮ ಪಕ್ಷದ ಶಾಸಕರೊಂದಿಗೆ ಹಲವಾರು ವಿಷಯಗಳ ಕುರಿತು ಚರ್ಚಿಸಿದ್ದೇನೆ. 2024ರ ಲೋಕಸಭೆ ಚುನಾವಣೆಯಲ್ಲಿ 150ಕ್ಕೂ ಹೆಚ್ಚು ಕ್ಷೇತ್ರಗಳಿಂದ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಕೆಸಿಆರ್ ಚಿಂತನೆ ನಡೆಸಿದ್ದಾರೆ. ರಾಜ್ಯದ ಗಡಿ ಭಾಗದಲ್ಲಿನ ಕೆಲ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಹಾಕಲಿದ್ದಾರೆ' ಎಂದು ಹೇಳಿದರು.

'ರಾಜ್ಯದಲ್ಲಿ ಜೆಡಿಎಸ್ ಅಧಿಕಾರಕ್ಕೆ ಬಂದರೆ ತೆಲಂಗಾಣ ಮಾದರಿಯಲ್ಲಿ ರೈತಬಂಧು ಹಾಗೂ ದಲಿತ ಬಂಧು ಯೋಜನೆಯನ್ನು ಜಾರಿಗೆ ತರಲಾಗುವುದು. ರೈತಬಂಧು ಯೋಜನೆಯಡಿ 24 ಗಂಟೆ ಉಚಿತ ವಿದ್ಯುತ್, ಪ್ರತಿ ವರ್ಷ ಎಕರೆಗೆ ₹10 ಸಾವಿರ ಸಹಾಯ ಧನ ನೀಡುತ್ತಿದ್ದಾರೆ. ರೈತ ಅಕಾಲಿಕ ಮರಣಕ್ಕೀಡಾದರೆ ತಕ್ಷಣ ₹5 ಲಕ್ಷ ವಿಮಾ ಪರಿಹಾರ ತಲುಪಿಸುತ್ತಿದ್ದಾರೆ. ದಲಿತ ಬಂಧು ಯೋಜನೆಯಡಿ ಸ್ವ ಉದ್ಯೋಗ ಮಾಡಲು ₹10 ಲಕ್ಷ ನೆರವನ್ನು ನೀಡುತ್ತಿದ್ದಾರೆ ' ಎಂದು ಅವರು ಹೇಳಿದರು.

ಕಾಂಗ್ರೆಸ್ ಜೋಡೊ ಯಾತ್ರೆ: 'ರಾಹುಲ್ ಗಾಂಧಿ ಅವರ ಹೇಳಿಕೆ ನೋಡಿದರೆ ಭಾರತ್ ಜೋಡೊಗಿಂತ ಕಾಂಗ್ರೆಸ್ ಜೋಡೊ ಎನ್ನುವ ರೀತಿ ಅವರ ಯಾತ್ರೆ ಕಾಣಿಸುತ್ತಿದೆ. ಕರ್ನಾಟಕಕ್ಕೆ ಯಾತ್ರೆ ಪ್ರವೇಶಿಸಿದಾಗ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಕೈ ಹಿಡಿದು ರಾಹುಲ್ ನಗಾರಿ ಬಾರಿಸಿದ್ದಾರೆ. ಎಲ್ಲರೂ ಒಗ್ಗಟ್ಟಾಗಿ ಹೋಗಿ ಅಂತ ಪದೇ ಪದೇ ಹೇಳುತ್ತಿದ್ದಾರೆ. ಈ ಪಾದಯಾತ್ರೆ ಆಧರಿಸಿ ಮುಂದಿನ ಚುನಾವಣಾ ಫಲಿತಾಂಶ ನಿರ್ಧಾರವಾಗುವುದಿಲ್ಲ' ಎಂದರು.

ಜನತಾಮಿತ್ರ ಸಮಾರೋಪ ಸಮಾರಂಭ ಇದೇ 8ರಂದು ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಮಧ್ಯಾಹ್ನ 3 ಗಂಟೆಗೆ ನಡೆಯಲಿದೆ. ಮಳೆಯಿಂದ ಈ ಕಾರ್ಯಕ್ರಮ ಎರಡು ಬಾರಿ ಮುಂದೂಡಿಕೆಯಾಗಿತ್ತು. ಬಿಬಿಎಂಪಿ ಚುನಾವಣಾ ಪ್ರಚಾರವನ್ನೂ ಈ ಕಾರ್ಯಕ್ರಮದಿಂದಲೇ ಶುರು ಮಾಡಲಾಗುತ್ತದೆ ಎಂದು ಹೇಳಿದರು.

ತನಿಖೆಗೆ ಆಗ್ರಹಿಸಿ ಮುಖ್ಯಮಂತ್ರಿಗೆ ಪತ್ರ

'ಚನ್ನಪಟ್ಟಣ ಕ್ಷೇತ್ರದ ಶಾಸಕನಾದ ನನ್ನನ್ನು ಹೊರಗಿಟ್ಟು ಕಾರ್ಯಕ್ರಮ ನಡೆಸಲು ಕಾರಣರಾದ ರಾಮನಗರ ಜಿಲ್ಲಾಧಿಕಾರಿ, ಜಿಲ್ಲಾ ಎಸ್ಪಿ ಸೇರಿದಂತೆ ಎಲ್ಲ ಅಧಿಕಾರಿಗಳನ್ನು ಅಮಾನತು ಮಾಡಿ, ಮುಖ್ಯಕಾರ್ಯದರ್ಶಿ ಶ್ರೇಣಿಯ ಅಧಿಕಾರಿಯಿಂದ ತನಿಖೆ ನಡೆಸಬೇಕು' ಎಂದು ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಆಗ್ರಹಿಸಿದ್ದಾರೆ.

ಈ ಕುರಿತು ಪತ್ರ ಬರೆದಿರುವ ಅವರು, 'ಕಲಾವಿದರ ಕೋಟಾದಿಂದ ವಿಧಾನಪರಿಷತ್ತಿನ ಸದಸ್ಯರಾದವರಿಗೆ ₹50 ಕೋಟಿ ಅನುದಾನ ನೀಡಿದ್ದೇ ಸರಿಯಲ್ಲ. ಕಾರ್ಯಕ್ರಮ ನಡೆಸುವ ಮುನ್ನ ತಮ್ಮ ಜತೆ ಸಮಾಲೋಚನೆಯನ್ನೂ ನಡೆಸಲಿಲ್ಲ. ಈ ಸಂಬಂಧ ಸೂಕ್ತ ಕ್ರಮ ಕೈಗೊಳ್ಳದೇ ಇದ್ದರೆ ಶಾಸಕರ ಜತೆ ವಿಧಾನಸೌಧದ ಗಾಂಧಿ ಪ್ರತಿಮೆ ಎದುರು ಧರಣಿ ಸತ್ಯಾಗ್ರಹ ನಡೆಸಬೇಕಾಗುತ್ತದೆ' ಎಂದೂ ಅವರು ಎಚ್ಚರಿಸಿದ್ದಾರೆ.

ಸೋಲಾರ್ ಘಟಕ ಅಕ್ರಮ ಆರೋಪ: ನ್ಯಾಯಾಂಗ ತನಿಖೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಅನುಷ್ಠಾನಗೊಂಡ ಪಾವಗಡ ಸೌರವಿದ್ಯುತ್ ಉತ್ಪಾದನಾ ಘಟಕಗಳ ಹಂಚಿಕೆಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪ ಆಧರಿಸಿ ನ್ಯಾಯಾಂಗ ತನಿಖೆ ನಡೆಸಲು ಸರ್ಕಾರ ಸಿದ್ಧತೆ ನಡೆಸಿದ್ದು, ಸದ್ಯವೇ ಆದೇಶ ಹೊರಬೀಳುವ ಸಾಧ್ಯತೆ ಇದೆ.



'ಭ್ರಷ್ಟಾಚಾರದ ವಿಷಯವನ್ನು ಮುಂದಿಟ್ಟುಕೊಂಡಿರುವ ಕಾಂಗ್ರೆಸ್ ನಾಯಕರು, ಬಿಜೆಪಿ ವಿರುದ್ಧ ಆಕ್ರಮಣಕಾರಿ ಪ್ರಹಾರ ನಡೆಸುತ್ತಿದ್ದಾರೆ. ಆದರೆ, ಕಾಂಗ್ರೆಸ್ ಅವಧಿಯ ಸೌರ ಉತ್ಪಾದನಾ ಘಟಕಗಳ ಹಂಚಿಕೆಯ ಬಗ್ಗೆ ತನಿಖೆ ನಡೆಸಲು ತಮ್ಮ ಸರ್ಕಾರವೇ ಮೀನಮೇಷ ಎಣಿಸುತ್ತಿರುವ ಬಗ್ಗೆ ಬಿಜೆಪಿಯ ವರಿಷ್ಠರು ತೀವ್ರ ಅಸಮಾಧಾನಗೊಂಡಿದ್ದರು. ತನಿಖೆ ನಡೆಸುವಂತೆ ಸರ್ಕಾರಕ್ಕೆ ಸೂಚಿಸಿದ್ದರು. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತನಿಖೆಯ ಆದೇಶ ಹೊರಡಿಸಲು ತಯಾರಿ ನಡೆಸಿದ್ದಾರೆ' ಎಂದು ಬಿಜೆಪಿ ಮೂಲಗಳು ಹೇಳಿವೆ.

ಸಿದ್ದರಾಮಯ್ಯ ಅವರ ಸರ್ಕಾರದ ಅವಧಿಯಲ್ಲಿ ಸೌರ ವಿದ್ಯುತ್ ಉತ್ಪಾದನೆಗಾಗಿ ಕರೆದ ಆನ್‌ಲೈನ್ ಅರ್ಜಿ ಹಂಚಿಕೆಯಲ್ಲಿ ಭಾರಿ ಅಕ್ರಮ ನಡೆದಿದೆ ಎಂಬ ಆರೋಪ ವ್ಯಕ್ತವಾಗಿತ್ತು. ₹2,100 ಕೋಟಿ ಮೊತ್ತದ 300 ಮೆಗಾವಾಟ್ ಸಾಮರ್ಥ್ಯದ ಸೌರವಿದ್ಯುತ್ ಉತ್ಪಾದನಾ ಘಟಕಗಳ ಹಂಚಿಕೆ ಪ್ರಕ್ರಿಯೆಯನ್ನು ಕೇವಲ ಎಂಟೇ ನಿಮಿಷದಲ್ಲಿ ಮುಕ್ತಾಯಗೊಳಿಸಲಾಗಿತ್ತು. ಆದರೆ, ಅಂದು ಇಂಧನ ಸಚಿವರಾಗಿದ್ದ ಡಿ.ಕೆ. ಶಿವಕುಮಾರ್ ಅವರು, 26 ಸಾವಿರ ಅರ್ಜಿ ಬಂದಿದೆ. ಈ ಪೈಕಿ 295 ಆಯ್ಕೆ ಮಾಡಲಾಗಿದೆ ಎಂದು ಹೇಳಿಕೆ ನೀಡಿದ್ದರು.

ಆದರೆ, ಇ-ಆಡಳಿತ ಇಲಾಖೆ ಕೇವಲ ಎಂಟು ನಿಮಿಷದಲ್ಲಿ 265 ಅರ್ಜಿ ಸ್ವೀಕಾರ ಆಗಿದೆ ಎಂದು ಹೇಳಿದ್ದು ಸಾಕಷ್ಟು ಸಂಶಯಗಳಿಗೆ ಕಾರಣವಾಯಿತು. ಈ ಹಂಚಿಕೆಯಲ್ಲಿ ಕಾಂಗ್ರೆಸ್ ಶಾಸಕಿ ಲಕ್ಷ್ಮಿ ಹೆಬ್ಬಾಳ್ಕರ್ ಅವರ ಕುಟುಂಬದ ಮೂವರಿಗೆ ಅವಕಾಶ ಸಿಕ್ಕಿತ್ತು. ಹೈದರಾಬಾದ್ ಮೂಲದ ಕೆಲ ಕಂಪನಿಗಳು ಅರ್ಜಿ ಸ್ವೀಕಾರಕ್ಕೆ ಮುನ್ನ ಭೂಮಿ ಖರೀದಿ ಮಾಡಿದ್ದೂ ಅನುಮಾನಕ್ಕೆ ಕಾರಣವಾಗಿತ್ತು. ಈ ಹಿನ್ನೆಲೆಯೊಳಗೆ ತನಿಖೆಗೆ ಆದೇಶಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ವಿಶ್ವದೆಲ್ಲೆಡೆ ಮೊಳಗಲಿವೆ ಐದು ಕನ್ನಡ ಗೀತೆಗಳು

ಅ.28ರಂದು 'ಕೋಟಿ ಕಂಠ'ದಲ್ಲಿ ಗಾಯನ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಕಳೆದ ವರ್ಷ 'ಮಾತಾಡ್ ಮಾತಾಡ್ ಕನ್ನಡ' ಘೋಷ ವಾಕ್ಯದೊಂದಿಗೆ ಏರ್ಪಡಿಸಿದ್ದ 'ಲಕ್ಷ ಕಂಠ' ಗಾಯನ ಯಶಸ್ವಿಯಾಗಿದ್ದ ಹಿನ್ನೆಲೆಯಲ್ಲಿ ಇದೇ 28 ರಂದು ಏಕಕಾಲದಲ್ಲಿ ರಾಜ್ಯದಾದ್ಯಂತ ಕನ್ನಡದ ಕವಿಗಳ ಜನಪ್ರಿಯ ಗೀತೆಗಳ ಕೋಟಿ ಕಂಠ ಗಾಯನವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಮ್ಮಿಕೊಂಡಿದೆ.

ರಾಜ್ಯೋತ್ಸವ ಪ್ರಯುಕ್ತ ಏರ್ಪಡಿಸಿರುವ ಈ ಕಾರ್ಯಕ್ರಮದಲ್ಲಿ ಕರ್ನಾಟಕವಲ್ಲದೇ, ಅನಿವಾಸಿ ಕನ್ನಡಿಗರು, ಹೊರನಾಡ ಮತ್ತು ಗಡಿನಾಡ ಕನ್ನಡಿಗರೂ ಭಾಗವಹಿಸಲಿದ್ದಾರೆ. ವಿಶ್ವದಾದ್ಯಂತ ಕನ್ನಡದ ಕಂಪನ್ನು ಪಸರಿಸುವ ವಿನೂತನ ಕಾರ್ಯಕ್ರಮ ಇದಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್ ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

ಈ ಬಾರಿ ಒಟ್ಟು ಐದು ಗೀತೆಗಳನ್ನು ಗಾಯನಕ್ಕಾಗಿ ಆಯ್ಕೆ ಮಾಡಲಾಗಿದೆ. ಕುವೆಂಪು ವಿರಚಿತ ನಾಡಗೀತೆ 'ಜಯಭಾರತ ಜನನಿಯ ತನುಜಾತೆ' ಹಾಗೂ 'ಬಾರಿಸು ಕನ್ನಡ ಡಿಂಡಿಮವ', ಡಾ. ಚೆನ್ನವೀರ ಕಣವಿ ಅವರ 'ವಿಶ್ವವಿನೂತನ ವಿದ್ಯಾಚೇತನ ಸರ್ವ ಹೃದಯ ಸಂಸ್ಕಾರಿ', ಡಾ.ಡಿ.ಎಸ್.ಕರ್ಕಿ ಅವರ 'ಹಚ್ಚೇವು ಕನ್ನಡದ ದೀಪ', ಹಂಸಲೇಖ ಅವರ 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು' ಗೀತೆಗಳನ್ನು ಹಾಡಲಾಗುವುದು. ಈ ಐದು ಗೀತೆಗಳಲ್ಲದೇ, ಆಸಕ್ತರು ಬೇರೆ ಕನ್ನಡ ಗೀತೆಗಳನ್ನು ಸಮಯದ ಮಿತಿ ಆಧರಿಸಿ ಪ್ರಸ್ತುತಪಡಿಸಬಹುದಾಗಿದೆ ಎಂದು ಅವರು ಹೇಳಿದರು.

ಎಲ್ಲ ಸರ್ಕಾರಿ ಕಚೇರಿಗಳು, ಶಾಲಾ–ಕಾಲೇಜುಗಳು, ವಿಶ್ವವಿದ್ಯಾಲಯಗಳು, ತಾಲ್ಲೂಕು ಕೇಂದ್ರಗಳು, ದೆಹಲಿ ಕನ್ನಡ ಸಂಘ, ಹೊರನಾಡು, ಗಡಿನಾಡ ಕನ್ನಡ ಸಂಘಗಳ ಕಚೇರಿ, ವಿಧಾನಸೌಧದ ಮೆಟ್ಟಿಲು ಹಾಗೂ ವಿಧಾನಸೌಧ– ವಿಕಾಸ ಸೌಧದ ಮಧ್ಯೆ ಇರುವ ಗಾಂಧಿ ಪ್ರತಿಮೆ ಎದುರು, ಜನಪ್ರತಿನಿಧಿಗಳು, ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ ಸಮೂಹ ಗಾಯನ ನಡೆಸುವರು ಎಂದು ತಿಳಿಸಿದರು.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ಮೆಜೆಸ್ಟಿಕ್ ರೈಲು ನಿಲ್ದಾಣ, ಮೆಟ್ರೊ ನಿಲ್ದಾಣದಲ್ಲೂ ಈ ಐದು ಕನ್ನಡ ಗೀತೆಗಳನ್ನು ಹಾಡುವುದಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ. ಅಲ್ಲದೇ, ನಾಡಿನ ಪ್ರಮುಖ ಪ್ರವಾಸಿ ಸ್ಥಳಗಳು, ಕೋಟೆಗಳು, ಕಡಲತೀರ, ಐಟಿ ಕಂಪನಿಗಳು, ಆಸ್ಪತ್ರೆ ಮತ್ತು ಜಿಲ್ಲಾ ಕೇಂದ್ರಗಳಲ್ಲೂ ಅಭಿಯಾನ ನಡೆಯಲಿದೆ ಎಂದು ಹೇಳಿದರು.



ಕೇದಾರನಾಥ ಯಾತ್ರೆ

ಉತ್ತರಾಖಂಡದ ರುದ್ರಪ್ರಯಾಗ ಜಿಲ್ಲೆಯಲ್ಲಿರುವ ಕೇದಾರನಾಥ ದೇವಾಲಯಕ್ಕೆ ಯಾತ್ರಿಕರು ಗುರುವಾರ ಕಾಲ್ನಡಿಗೆಯಲ್ಲಿ ತೆರಳಿದರು —ಪಿಟಿಐ ಚಿತ್ರ

ಇದೇ 22ಕ್ಕೆ 36 ಉಪಗ್ರಹಗಳ ಉಡಾವಣೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಭಾರತದ ಅತ್ಯಧಿಕ ತೂಕದ ರಾಕೆಟ್ 'ಜಿಎಸ್‌ಎಲ್‌ವಿ–ಎಂಕೆ 3' ಇದೇ 22 ರಂದು ಜಾಗತಿಕ ವಾಣಿಜ್ಯ ಉದ್ದೇಶದ ಉಪಗ್ರಹಗಳ ಉಡಾವಣಾ ಸೇವೆಗೆ ಕಾಲಿಡಲಿದೆ.

ಅಂದು ಶ್ರೀಹರಿಕೋಟಾದಿಂದ ಬ್ರಿಟನ್‌ನ ನವೋದ್ಯಮ ಒನ್‌ವೆಬ್‌ನ 36 ಬ್ರಾಡ್‌ಬ್ಯಾಂಡ್ ಉಪಗ್ರಹಗಳನ್ನು ನಭಕ್ಕೆ ಹೊತ್ತು ಸಾಗಲಿದೆ. ಇದು ಜಿಎಸ್‌ಎಲ್‌ವಿ–ಎಂಕೆ 3 ರಾಕೆಟ್‌ನ ಪ್ರಪ್ರಥಮ ವಾಣಿಜ್ಯ ಉದ್ದೇಶದ ಉಡಾವಣೆಯಾಗಿದೆ. ಈ ಸಂಬಂಧ ಒನ್‌ವೆಬ್ ಜತೆಗೆ ಇಸ್ರೊದ ವಾಣಿಜ್ಯ ಉಡ್ಡಯನದ ವಿಭಾಗ 'ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್' (ಎನ್‌ಎಸ್‌ಐಎಲ್) ಜತೆ ಒಪ್ಪಂದ ನಡೆದಿತ್ತು.

ಈ ಹೊಸ ರಾಕೆಟ್ ನಾಲ್ಕು ಟನ್ ತೂಕದ ಉಪಗ್ರಹಗಳನ್ನು ಹೊತ್ತು ಭೂ ವರ್ಗಾವಣೆ ಕಕ್ಷೆಗೆ ಸೇರಿಸಲಿದೆ. ಅಕ್ಟೋಬರ್ 21 ರ ಮಧ್ಯರಾತ್ರಿ ಕಳೆದ ನಡೆದ ನಂತರ ಅಂದರೆ ಅಕ್ಟೋಬರ್ 22 ರ ನಸುಕಿನ 00:12 ಗಂಟೆಗೆ ಉಡಾವಣೆ ಮಾಡಲಾಗುವುದು ಎಂದು ಎನ್‌ಎಸ್‌ಐಎಲ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಒನ್‌ವೆಬ್‌ನ 36 ಉಪಗ್ರಹಗಳನ್ನು ಜಿಎಸ್‌ಎಲ್‌ವಿ–ಎಂಕೆ 3 ರ ಮೂಲಕ ಕಕ್ಷೆಗೆ ಉಡಾವಣೆ ಮಾಡುತ್ತಿರುವುದು ಎನ್‌ಎಸ್‌ಐಎಲ್ ಮತ್ತು ಇಸ್ರೊಗೆ ಐತಿಹಾಸಿಕ ಕ್ಷಣವಾಗಿದೆ ಎಂದು ಎನ್‌ಎಸ್‌ಐಎಲ್‌ನ ವ್ಯವಸ್ಥಾಪಕ ನಿರ್ದೇಶಕ ರಾಧಾಕೃಷ್ಣನ್ ಇತ್ತೀಚೆಗೆ ಹೇಳಿದ್ದರು.

ನೇಮಕಾತಿ ಅಕ್ರಮ: ಪಿಎಸ್‌ಐ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 545 ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಅಕ್ರಮದಲ್ಲಿ ಭಾಗಿಯಾಗಿದ್ದ ಕೆ.ಆರ್. ಪುರ ಸಂಚಾರ ಠಾಣೆ ಪಿಎಸ್‌ಐ ಸುಬ್ರಮಣಿ (35) ಅವರನ್ನು ಸಿಐಡಿ ಅಧಿಕಾರಿಗಳು ಗುರುವಾರ ಬಂಧಿಸಿದ್ದಾರೆ. ಎಡಿಜಿಪಿ ಅಮೃತ್ ಪೌಲ್, ಡಿವೈಎಸ್ಪಿ ಶಾಂತಕುಮಾರ್ ಸೇರಿದಂತೆ 60ಕ್ಕೂ ಹೆಚ್ಚು ಆರೋಪಿಗಳನ್ನು ಪ್ರಕರಣದಲ್ಲಿ ಈಗಾಗಲೇ ಬಂಧಿಸಲಾಗಿದೆ.

'ಪಿಎಸ್‌ಐ ಅಕ್ರಮ ಸಂಬಂಧ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾಗುತ್ತಿದ್ದಂತೆ ಸುಬ್ರಮಣಿ ತಲೆಮರೆಸಿಕೊಂಡಿದ್ದ. ಬೆಂಗಳೂರಿನಲ್ಲಿ ಗುರುವಾರ ಈತನನ್ನು ಬಂಧಿಸಿ ನ್ಯಾಯಾಲಯದ ಎದುರು ಹಾಜರುಪಡಿಸಲಾಯಿತು. ಹೆಚ್ಚಿನ ವಿಚಾರಣೆಗಾಗಿ 10 ದಿನ ಕಸ್ಟಡಿಗೆ ಪಡೆಯಲಾಗಿದೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

'ಪೊಲೀಸ್ ನೇಮಕಾತಿ ವಿಭಾಗದ ಸಿಬ್ಬಂದಿ ಜೊತೆ ಪಿಎಸ್‌ಐ ಸುಬ್ರಮಣಿ ಒಡನಾಟ ಹೊಂದಿದ್ದ. ಸಂಬಂಧಿಯೂ ಆಗಿದ್ದ ಅಭ್ಯರ್ಥಿ ಶಿವರಾಜ್ ಹಾಗೂ ಮನು ಕಡೆಯಿಂದ ಲಕ್ಷಾಂತರ ರೂಪಾಯಿ ಪಡೆದಿದ್ದ ಸುಬ್ರಮಣಿ, ಅದನ್ನು ನೇಮಕಾತಿ ವಿಭಾಗದ ಸಿಬ್ಬಂದಿಗೆ ಕೊಟ್ಟಿದ್ದ. ಇಬ್ಬರ ಒಎಂಆರ್ ಪ್ರತಿ ತಿದ್ದುಪಡಿ ಮಾಡಿದ್ದ ಸಿಬ್ಬಂದಿ, ಅಕ್ರಮವಾಗಿ ಆಯ್ಕೆಯಾಗುವಂತೆ ಮಾಡಿದ್ದರು' ಎಂದೂ ಮೂಲಗಳು ತಿಳಿಸಿವೆ.

'ಪ್ರಕರಣದಲ್ಲಿ ಈಗಾಗಲೇ ಶಿವರಾಜ್ ಹಾಗೂ ಮನುನನ್ನು ಬಂಧಿಸಲಾಗಿದೆ. ಇವರಿಬ್ಬರು ಸುಬ್ರಮಣಿ ಹೆಸರು ಬಾಯ್ಬಿಟ್ಟಿದ್ದರು' ಎಂದೂ ಹೇಳಿವೆ.

ಉತ್ತರ ಭಾರತದಲ್ಲಿ ಸುತ್ತಾಟ: 'ಬಂಧನ ಭೀತಿಯಲ್ಲಿ ರಾಜ್ಯವನ್ನು ತೊರೆದಿದ್ದ ಪಿಎಸ್‌ಐ ಸುಬ್ರಮಣಿ, ಉತ್ತರ ಭಾರತದ ರಾಜ್ಯಗಳಲ್ಲಿ ಸುತ್ತಾಡುತ್ತಿದ್ದ. ಪ್ರಕರಣದ ತನಿಖೆಯ ಕಾವು ಕಡಿಮೆಯಾಗಿರಬಹುದು ಎಂದು ತಿಳಿದು ಇತ್ತೀಚೆಗಷ್ಟೇ ನಗರಕ್ಕೆ ಬಂದಿದ್ದ. ಖಚಿತ ಮಾಹಿತಿ ಸಂಗ್ರಹಿಸಿ ಈತನನ್ನು ಸೆರೆಹಿಡಿಯಲಾಯಿತು' ಎಂದು ಸಿಐಡಿ ಮೂಲಗಳು ತಿಳಿಸಿವೆ.

ಪೊಲೀಸರ ನಿರ್ಲಕ್ಷ್ಯ: ಹತಾಶೆಗೊಂಡು ಅತ್ಯಾಚಾರ ಸಂತ್ರಸ್ತೆ ಆತ್ಮಹತ್ಯೆ

ಲಖನೌ: ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳುವಲ್ಲಿ ಪೊಲೀಸರು ವಿಫಲರಾಗಿದ್ದಾರೆ ಎಂದು ಆರೋಪಿಸಿ ಹತಾಶೆಗೊಂಡು ಸಾಮೂಹಿಕ ಅತ್ಯಾಚಾರ ಸಂತ್ರಸ್ತೆ ಉತ್ತರ ಪ್ರದೇಶದ ಅಂಬೇಡ್ಕರ್ ನಗರ ಜಿಲ್ಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಪೊಲೀಸ್ ಮೂಲಗಳ ಪ್ರಕಾರ, ವಿದ್ಯಾರ್ಥಿನಿ ಬುಧವಾರ ತನ್ನ ಕೊಠಡಿಯಲ್ಲಿ ಸೀಲಿಂಗ್‌ಗೆ ನೇಣು ಹಾಕಿಕೊಂಡಿದ್ದಾಳೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಹಸ್ತಾಂತರಿಸುವಂತೆ ಕುಟುಂಬಸ್ಥರ ಮನವೊಲಿಸಲು ಪೊಲೀಸರು ಹರಸಾಹಸ ಪಡಬೇಕಾಯಿತು.

ಕರ್ತವ್ಯ ಲೋಪ ಆರೋಪದ ಮೇರೆಗೆ ಸ್ಥಳೀಯ ಪೊಲೀಸ್ ಠಾಣೆಯ ಪ್ರಭಾರಿ ಸೇರಿದಂತೆ ಇಬ್ಬರು ಕಾನ್‌ಸ್ಟೆಬಲ್‌ಗಳನ್ನು ಅಮಾನತು ಮಾಡಲಾಗಿದೆ.

ಕೆಲ ದಿನಗಳ ಹಿಂದೆ ಮಾಲಿಪುರ ಪ್ರದೇಶದ ತನ್ನ ಶಾಲೆಗೆ ಹೋಗುತ್ತಿದ್ದಾಗ ಆಕೆಯನ್ನು ಅಪಹರಿಸಿ ಲಖನೌಗೆ ಕರೆದೊಯ್ದು ಇಬ್ಬರು ಯುವಕರು ಸಾಮೂಹಿಕ ಅತ್ಯಾಚಾರ ಎಸಗಿದ್ದರು. ಬಳಿಕ ಅವಳು ಖಿನ್ನತೆಗೆ ಒಳಗಾಗಿದ್ದಳು. ನಂತರ ಯುವಕರ ವಿರುದ್ಧ ದೂರು ದಾಖಲಿಸಿದೆವು. ಆದರೆ, ಆರೋಪಿಗಳ ಪೈಕಿ ಒಬ್ಬನ ಹೆಸರು ಬಹಿರಂಗಪಡಿಸಿದ ನಂತರವೂ ಪೊಲೀಸರು ಆತನ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲಿಲ್ಲ' ಎಂದು ಸಂತ್ರಸ್ತೆ ತಂದೆ ಹೇಳಿದರು.

ಆರೋಪಿಗಳನ್ನು ಬಂಧಿಸದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಪೊಲೀಸರಿಗೆ ಮಗಳು ಹೇಳಿದ್ದಳು ಎಂದು ತಂದೆ ವಿವರಿಸಿದರು.

ಇಬ್ಬರು ಪೊಲೀಸರನ್ನು ಅಮಾನತುಗೊಳಿಸಲಾಗಿದ್ದು, ಆರೋಪಿಗಳ ಪತ್ತೆಗೆ ಬಲೆ ಬೀಸಲಾಗಿದೆ ಎಂದು ಜಿಲ್ಲಾ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಅತ್ಯಾಚಾರ ಆರೋಪಿ ಹತ್ಯೆ

ಕತಿಹಾರ, ಬಿಹಾರ (ಪಿಟಿಐ): ಒಂಬತ್ತು ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಿಯನ್ನು ಬಿಹಾರದ ಕತಿಹಾರ್ ಜಿಲ್ಲೆಯ ನಿವಾಸಿಗಳು ಗುರುವಾರ ಹತ್ಯೆ ಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ನಡೆದಿರುವುದು ಬುಧವಾರ ಆಕೆ ಕುಟುಂಬದ ಸದಸ್ಯರಿಗೆ ತಿಳಿದ ಬಳಿಕ ಈ ಘಟನೆ ನಡೆದಿದೆ ಎಂದು ಕತಿಹಾರ್ ಸದರ್‌ನ ಉಪವಿಭಾಗೀಯ ಪೊಲೀಸ್ ಅಧಿಕಾರಿ ಓಂ.ಪ್ರಕಾಶ್ ಹೇಳಿದ್ದಾರೆ.

ಆರೋಪಿಯನ್ನು ಬಾಲಕಿ ಗುರುತಿಸಿದ ಬಳಿಕ ಕುಟುಂಬದ ಸದಸ್ಯರು ಆತನನ್ನು ಹಿಡಿದಿದ್ದಾರೆ. ಉದ್ರಿಕ್ತ ಗ್ರಾಮಸ್ಥರು ಆತನನ್ನು ಕಟ್ಟಿ ಹಾಕಿ ತೀವ್ರವಾಗಿ ಥಳಿಸಿದ್ದಾರೆ. ಸ್ಥಳೀಯ ಪೊಲೀಸರು ಅಲ್ಲಿಗೆ ಭೇಟಿ ನೀಡಿದಾಗ ಆತನನ್ನು ಒಪ್ಪಿಸಿದ್ದಾರೆ. ಆತನನ್ನು ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ವೈದ್ಯರು ಮೃತಪಟ್ಟಿರುವುದಾಗಿ ಘೋಷಿಸಿದರು ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ಸಂಬಂಧ ತನಿಖೆ ನಡೆಸಲಾಗುತ್ತಿದ್ದು, ಶೀಘ್ರ ಕ್ರಮ ಕೈಗೊಳ್ಳುವುದಾಗಿ ಹೇಳಿದರು.

'ಪಿಎಫ್‌ಐ ವೆಬ್‌ಸೈಟ್: ಉಗ್ರರ ಸಿದ್ಧಾಂತದ ಸುಳಿವಿಲ್ಲ'

ನವದೆಹಲಿ (ಪಿಟಿಐ): 'ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆಯ ವೆಬ್‌ಸೈಟ್ (http://www.popularfrontindia.org/) ಅನ್ನು ಬಹಳ ಯೋಜಿತವಾಗಿ ರಚಿಸಲಾಗಿದ್ದು, ತುಂಬಾ ಜಾಣ್ಮೆಯಿಂದ ಅದನ್ನು ನಿರ್ವಹಿಸಲಾಗುತ್ತಿತ್ತು. ಉಗ್ರಗಾಮಿ ಸಿದ್ಧಾಂತದ ಪರ ಒಲವು ಹೊಂದಿರುವ ಅಥವಾ ಅದನ್ನು ಬೆಂಬಲಿಸುವ ಕುರಿತ ಸಣ್ಣ ಸುಳಿವೂ ಅದರಲ್ಲಿ ಸಿಕ್ಕಿಲ್ಲ' ಎಂದು ಅಧಿಕಾರಿಗಳು ಗುರುವಾರ ಹೇಳಿದ್ದಾರೆ.

'ಪಿಎಫ್‌ಐ ವೆಬ್‌ಸೈಟ್ ತುಂಬಾ ರಚನಾತ್ಮಕವಾಗಿದೆ. ಅದನ್ನು ಎಲ್ಲಾ ಆಯಾಮಗಳಿಂದಲೂ ಆಲೋಚಿಸಿ ರಚಿಸಿದಂತಿದೆ' ಎಂದು ಸಂಘಟನೆಯ ಚಲನವಲನಗಳ ಮೇಲೆ ನಿಗಾ ಇಟ್ಟಿರುವ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಸಂಘಟನೆಯು ಉಗ್ರಗಾಮಿ ಸಿದ್ಧಾಂತವನ್ನು ಅನುಸರಿಸುತ್ತಿತ್ತು ಹಾಗೂ ಅದನ್ನು ಪ್ರಚಾರ ಮಾಡುತ್ತಿತ್ತು ಎಂಬುದನ್ನು ನಿರೂಪಿಸಲು ಬೇಕಿರುವ ಸಣ್ಣ ಸುಳಿವೂ ವೆಬ್‌ಸೈಟ್‌ನಲ್ಲಿ ದೊರೆತಿಲ್ಲ' ಎಂದು ಮತ್ತೊಬ್ಬ ಅಧಿಕಾರಿ ಹೇಳಿದ್ದಾರೆ.

ಮಾಹಿತಿ ಮತ್ತು ತಂತ್ರಜ್ಞಾನ ಸಚಿವಾಲಯದ ಆದೇಶದ ಮೇರೆಗೆ ಈ ವೆಬ್‌ಸೈಟ್ ಅನ್ನು ಈಗಾಗಲೇ ರದ್ದುಪಡಿಸಲಾಗಿದೆ.



ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಎಚ್‌.ಎಲ್‌. ಪುಷ್ಪಾ ಅವರಿಗೆ ನಿಕಟಪೂರ್ವ ಅಧ್ಯಕ್ಷೆ ವನಮಾಲಾ ಸಂಪನ್ನಕುಮಾರ್ ಅವರು ಬೆಂಗಳೂರಿನಲ್ಲಿ ಗುರುವಾರ ಅಧಿಕಾರ ಹಸ್ತಾಂತರಿಸಿದರು.

ಪಿಎಫ್‌ಐ ನಿಷೇಧ: ನ್ಯಾಯಮಂಡಳಿ ಅಧ್ಯಕ್ಷರಾಗಿ ನ್ಯಾ.ಶರ್ಮಾ ನೇಮಕ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಮತ್ತು ಅದರ ಅಂಗಸಂಸ್ಥೆಗಳನ್ನು ನಿಷೇಧಿಸಿರುವ ಕ್ರಮವನ್ನು ಪರಾಮರ್ಶಿಸಿ ಈ ಸಂಬಂಧ ತೀರ್ಪು ನೀಡಲು ರಚಿಸಲಾಗಿರುವ ಕಾನೂನುಬಾಹಿರ ಚಟುವಟಿಕೆಗಳ (ತಡೆ) ನ್ಯಾಯಮಂಡಳಿ ಅಧ್ಯಕ್ಷರನ್ನಾಗಿ ದೆಹಲಿ ಹೈಕೋರ್ಟ್‌ನ ನ್ಯಾಯಮೂರ್ತಿ ದಿನೇಶ್ ಕುಮಾರ್ ಶರ್ಮಾ ಅವರನ್ನು ಕೇಂದ್ರ ಸರ್ಕಾರ ಗುರುವಾರ ನೇಮಿಸಿದೆ.

ಈ ಸಂಸ್ಥೆಗಳನ್ನು ಕಾನೂನುಬಾಹಿರ ಎಂದು ಘೋಷಿಸಲು ಸಾಕಷ್ಟು ಕಾರಣವಿದೆಯೇ ಅಥವಾ ಇಲ್ಲವೇ ಎಂಬುದನ್ನು ನ್ಯಾಯಮಂಡಳಿ ಪರಿಶೀಲಿಸುತ್ತದೆ.

ಕೇಂದ್ರ ಸರ್ಕಾರ ಸೆ. 28 ರಂದು ಪಿಎಫ್‌ಐ ಮತ್ತು ಅದರ ಅಂಗಸಂಸ್ಥೆಗಳು, ಆರ್‌ಐಎಫ್, ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ (ಸಿಎಫ್‌ಐ), ಆಲ್ ಇಂಡಿಯಾ ಇಮಾಮ್ಸ್ ಕೌನ್ಸಿಲ್ (ಎಸಿ), ರಾಷ್ಟ್ರೀಯ ಮಾನವ ಹಕ್ಕುಗಳ ಒಕ್ಕೂಟ (ಎನ್‌ಸಿಎಚ್‌ಆರ್‌ಒ), ನ್ಯಾಷನಲ್ ವಿಮೆನ್ಸ್ ಫ್ರಂಟ್, ಜೂನಿಯರ್ ಫ್ರಂಟ್ ಎಂಪವರ್ ಇಂಡಿಯಾ ಫೌಂಡೇಶನ್ ಮತ್ತು ರಿಹ್ಯಾಬ್ ಫೌಂಡೇಶನ್‌ಗಳನ್ನು ಐದು ವರ್ಷಗಳ ಕಾಲ ನಿಷೇಧಿಸಿತ್ತು.

ಪಿಎಫ್‌ಐ ಮತ್ತು ಅದರ ಅಂಗಸಂಸ್ಥೆಗಳು ಹಲವಾರು ಕ್ರಿಮಿನಲ್ ಮತ್ತು ಭಯೋತ್ಪಾದನೆ ಪ್ರಕರಣಗಳಲ್ಲಿ ಭಾಗಿಯಾಗಿವೆ. ಇಸ್ಲಾಮಿಕ್ ಸ್ಟೇಟ್ ಆಫ್ ಇರಾಕ್ ಮತ್ತು ಸಿರಿಯಾ ಹಾಗೂ ಜಮಾತ್-ಉಲ್-ಮುಜಾಹಿದೀನ್ ಬಾಂಗ್ಲಾದೇಶದಂತಹ ಭಯೋತ್ಪಾದಕ ಸಂಘಟನೆಗಳೊಂದಿಗೆ ಸಂಪರ್ಕ ಹೊಂದಿವೆ ಎಂಬುದು ಹಲವು ವರ್ಷಗಳ ತನಿಖೆಯಲ್ಲಿ ಗೊತ್ತಾಗಿದೆ ಎಂದು ಕೇಂದ್ರ ಹೇಳಿದೆ.

ಶುಕ್ರವಾರ, ಅಕ್ಟೋಬರ್ 7, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 277 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಪುರಿ ಜಗನ್ನಾಥ ಕಾರಿಡಾರ್ ಒಡಿಶಾದಲ್ಲಿ ರಾಜಕೀಯ ಸಮರ

ಇಂದು
ಸಿನಿಮಾ ಪುರವಣಿ 5

ಅಂಬಾನಿ ಕುಟುಂಬಕ್ಕೆ ಜೀವಬೆದರಿಕೆ, ಬಂಧನ 4
ಮನೆ ಖರೀದಿಗೆ ಮಾದರಿ ಒಪ್ಪಂದ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,222 ▲	17,332 ▲	₹53,350 (ಬೆಂಗಳೂರು)	₹62,600 (ಬೆಂಗಳೂರು)	82.17 ▼

108: ವೇತನ ಪಾವತಿಗೆ ಗಡುವು– ಸಂಸ್ಥೆ, ಸಿಬ್ಬಂದಿ ಜತೆ ಇಂದು ಸಭೆ 3A

ಭಾರತ್ ಜೋಡೊ ಪಾದಯಾತ್ರೆ: 20 ನಿಮಿಷ ನಡೆದ ಕಾಂಗ್ರೆಸ್ ನಾಯಕಿ

ಉತ್ಸಾಹ ತುಂಬಿದ ಸೋನಿಯಾ

• ಎಂ.ಎನ್.ಯೋಗೇಶ್



ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಜಕ್ಕನಹಳ್ಳಿ ಕ್ರಾಸ್ ಬಳಿ ಪಾದಯಾತ್ರೆಯಲ್ಲಿ ತಾಯಿ ಸೋನಿಯಾ ಗಾಂಧಿ ಅವರ ಶೂ ಲೇಸ್ ಕಟ್ಟಿದ ರಾಹುಲ್ ಗಾಂಧಿ

ಮಂಡ್ಯ: ಆಯುಧಪೂಜೆ, ವಿಜಯ ದಶಮಿಯ ಬಿಡುವಿನ ನಂತರ ಪುನರಾರಂಭಗೊಂಡ ಭಾರತ್ ಜೋಡೊ ಪಾದಯಾತ್ರೆಗೆ ಗುರುವಾರ ಹೊಸ ಹುರುಪು ಬಂದಿತ್ತು. ಕಾಂಗ್ರೆಸ್ ನಾಯಕಿ, ತಾಯಿ ಸೋನಿಯಾ ಗಾಂಧಿ ಪಾಲ್ಗೊಂಡಿದ್ದರಿಂದ ರಾಹುಲ್ ಗಾಂಧಿ ಹೆಚ್ಚು ಉತ್ಸಾಹದಿಂದ ಹೆಜ್ಜೆ ಹಾಕಿದರು.

ಸೋನಿಯಾ ಇದೇ ಮೊದಲ ಬಾರಿಗೆ ಯಾತ್ರೆಯಲ್ಲಿ ಪಾಲ್ಗೊಂಡರು. ಪಾಂಡವಪುರ ತಾಲ್ಲೂಕು ಬೆಳ್ಳಾಳೆ ಗ್ರಾಮದಿಂದ ಆರಂಭವಾದ ಯಾತ್ರೆಗೆ ಮಾಣಿಕ್ಯನಹಳ್ಳಿ ಗೇಟ್ ಬಳಿ ಬೆಳಿಗ್ಗೆ 8.30ರಲ್ಲಿ ಸೇರಿಕೊಂಡರು. ಮಗ, ಕಾಂಗ್ರೆಸ್ ಮುಖಂಡರು, ಸಾವಿರಾರು ಕಾರ್ಯಕರ್ತರೊಂದಿಗೆ 15 ನಿಮಿಷ ನಡೆದರು. 30 ಸಾವಿರಕ್ಕೂ ಹೆಚ್ಚು ಜನರಿದ್ದರು.

ಆರತಿ ಬೆಳಗಿ, ಪೂರ್ಣಕುಂಭ ಸ್ವಾಗತ ಕೋರಿದ ಗ್ರಾಮೀಣ ಮಹಿಳೆಯರ ಬಳಿಗೆ ತೆರಳಿದ ಸೋನಿಯಾ ಗಾಂಧಿ ಫೋಟೊ ತೆಗೆಸಿಕೊಂಡರು. ವಿದ್ಯಾರ್ಥಿಗಳು, ಮಕ್ಕಳಿಗೆ ಚಾಕೊಲೇಟ್ ಕೊಟ್ಟರು. ಅಮೃತಿ ಗ್ರಾಮದವರೆಗೆ ನಡೆದು, ಪುತ್ರನ ಸಲಹೆಯಂತೆ ಕಾರು ಹತ್ತಿ, ಜಕ್ಕನಹಳ್ಳಿ ಗೇಟ್ ಬಳಿ ಅಮ್ಮಾಸ್ ಕೆಫೆಯಲ್ಲಿ ಕಾಫಿ ಕುಡಿದರು. 10 ನಿಮಿಷ ವಿಶ್ರಾಂತಿ ನಂತರ 5 ನಿಮಿಷ ನಡೆದರು.

ಬಾಲಕಿಯನ್ನು ಸಂತೈಸಿದರು: ಪಾದಯಾತ್ರೆಗೆ ಸ್ವಾಗತ ಕೋರಲು ರಸ್ತೆ ಬದಿ ನಿಂತಿದ್ದ ಬಾಲಕಿಯೊಬ್ಬಳು ಜನ ಜಂಗುಳಿಯ ತಳ್ಳಾಟದಲ್ಲಿ ಕೆಳಗೆ ಬಿದ್ದಾಗ, ಧಾವಿಸಿದ ತಾಯಿ–ಮಗ ಬಾಲಕಿಯನ್ನು ಮೇಲೆತ್ತಿ ಬೆನ್ನು ಸವರಿ ಸಂತೈಸಿ, ಚಾಕೋಲೇಟ್ ಕೊಟ್ಟು ಕಳುಹಿಸಿದರು.

ಶೂ ಲೇಸ್ ಕಟ್ಟಿದ ರಾಹುಲ್: ಜಕ್ಕನಹಳ್ಳಿ ಕ್ರಾಸ್ ಬಳಿ ತಾಯಿಯ ಎಡಗಾಲಿನ ಶೂ ಲೇಸ್ ಕಳಚಿದಾಗ ಕಟ್ಟಲು ಮುಂದಾದ ಕಾರ್ಯಕರ್ತರನ್ನು ತಡೆದ ರಾಹುಲ್ ಗಾಂಧಿ ತಾವೇ ಕಟ್ಟಿದರು. ಪಾದಯಾತ್ರೆ ನಾಗಮಂಗಲ ತಾಲ್ಲೂಕು ಖರಡ್ಯ ತಲುಪಿದಾಗ ಸೋನಿಯಾ ನಿರ್ಗಮಿಸಿದರು.

‘ಕರ್ನಾಟಕ ಶಕ್ತಿ ತುಂಬಿದೆ’

ಮಂಡ್ಯ: ‘3,500 ಕಿ.ಮೀ ಪಾದಯಾತ್ರೆ ಸುಲಭವಲ್ಲ ಎಂಬುದು ನನಗೆ ಗೊತ್ತಿದೆ. ಆದರೆ ಜನ ಸಹಕರಿಸುತ್ತಿರುವುದರಿಂದ ನನ್ನ ಉತ್ಸಾಹ ಕಡಿಮೆಯಾಗಿಲ್ಲ’ ಎಂದು ರಾಹುಲ್ ಗಾಂಧಿ ಗುರುವಾರ ಹೇಳಿದರು.

ನಾಗಮಂಗಲ ತಾಲ್ಲೂಕು ಬ್ರಹ್ಮದೇವರಹಳ್ಳಿಯಲ್ಲಿ ಮಾತನಾಡಿದ ಅವರು, ‘ಕರ್ನಾಟಕ ನನಗೆ ಶಕ್ತಿ ತುಂಬಿದೆ, ಬಸವಣ್ಣನವರ ಶಾಂತಿಮಂತ್ರವನ್ನು ನಾನು ಇಲ್ಲೇ ಕಲಿತಿದ್ದೇನೆ. ಪಾದಯಾತ್ರೆಯಲ್ಲಿ ಜನರ ನೋವಿನ ಕೂಗು ಕೇಳುತ್ತಾ ಮುನ್ನಡೆಯುತ್ತಿದ್ದೇನೆ’ ಎಂದರು.

‘ಸಮಾಜದಲ್ಲಿ ಯಾರೂ ವಿಷದ ಬೀಜ ಬಿತ್ತಬಾರದು, ದ್ವೇಷ ಮೂಡಿಸಬಾರದು. ಶಾಂತಿಯ ಸಮಾಜ ನಿರ್ಮಾಣ ಮಾಡಬೇಕು. ಇದು ಪಾದಯಾತ್ರೆಯ ಪ್ರಮುಖ ಉದ್ದೇಶ’ ಎಂದು ಅವರು ಪುನರುಚ್ಚರಿಸಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಬೊಮ್ಮಾಯಿ–ಬಿಎಸ್‌ವೈ ಯಾತ್ರೆ

ಇದೇ 11ರಿಂದ 50 ವಿಧಾನಸಭಾ ಕ್ಷೇತ್ರಗಳಲ್ಲಿ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಪರ ಅಲೆ ಸೃಷ್ಟಿಸುವ ಉದ್ದೇಶದಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಹಿರಿಯ ನಾಯಕ ಬಿ.ಎಸ್.ಯಡಿಯೂರಪ್ಪ ನೇತೃತ್ವದ ‘ಜನಸಂಕಲ್ಪ ಯಾತ್ರೆ’ ಇದೇ 11ರಿಂದ ರಾಯಚೂರಿನಿಂದ ಆರಂಭಗೊಳ್ಳಲಿದೆ.

ರಾಜ್ಯದ 50 ವಿಧಾನಸಭಾ ಕ್ಷೇತ್ರಗಳಲ್ಲಿ ಈ ಯಾತ್ರೆ ಹಾದು ಹೋಗಲಿದೆ ಎಂದು ಬಿಜೆಪಿಯ ರಾಜ್ಯ ಘಟಕದ ಉಪಾಧ್ಯಕ್ಷ ನಿರ್ಮಲ್ ಕುಮಾರ್ ಸುರಾನ ‘ಪ್ರಜಾವಾಣಿ’ಗೆ ತಿಳಿಸಿದರು.

ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲೂ 15 ಸಾವಿರದಿಂದ 20 ಸಾವಿರ ಜನರನ್ನು ಸೇರಿಸಿ ಸಮಾವೇಶಗಳನ್ನು ಹಮ್ಮಿಕೊಳ್ಳಲಾಗುವುದು. ಈ ಸಂಬಂಧ ಶುಕ್ರವಾರ ನಡೆಯುವ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಅಂತಿಮ ರೂಪುರೇಷೆ ತೀರ್ಮಾನವಾಗಲಿದೆ. ಬೊಮ್ಮಾಯಿ– ಯಡಿಯೂರಪ್ಪ ಅವರ ಜನಸಂಕಲ್ಪ ಯಾತ್ರೆಯು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅತಿ ಕಡಿಮೆ ಅಂತರದಿಂದ ಸೋತಿರುವ ಕ್ಷೇತ್ರಗಳಲ್ಲಿ ನಡೆಯಲಿದೆ ಎಂದು ಅವರು ವಿವರಿಸಿದರು.

ಮೂರು ತಂಡಗಳಲ್ಲಿ ಯಾತ್ರೆ ನಡೆಸಲು ಪಕ್ಷ ತೀರ್ಮಾನಿಸಿತ್ತು. ಜುಲೈನಿಂದ ನಿರಂತರ ಮಳೆ ಇದ್ದ ಕಾರಣ ಮುಂದೂಡುತ್ತಲೇ ಬರಲಾಗಿತ್ತು. ಈಗ ಹವಾಮಾನ ಸ್ಥಿತಿಯೂ ಉತ್ತಮವಾಗಿದೆ ಎಂದರು.

4ನೇ ಪುಟ ನೋಡಿ

24 ಮಕ್ಕಳು ಸೇರಿ 37 ಮಂದಿ ಹತ್ಯೆ

ಬ್ಯಾಂಕಾಕ್ (ಎಎಫ್‌ಪಿ/ ರಾಯಿಟರ್ಸ್, ಎಪಿ): ಮಾಜಿ ಪೊಲೀಸನೊಬ್ಬ ಶಿಶು ವಿಹಾರಕ್ಕೆ ನುಗ್ಗಿ ಬಂದೂಕಿನಿಂದ ಗುಂಡಿನ ದಾಳಿ ನಡೆಸಿ 24 ಮಕ್ಕಳು ಸೇರಿದಂತೆ 37 ಮಂದಿಯನ್ನು ಹತ್ಯೆ ಮಾಡಿದ್ದಾನೆ.

ಕೃತ್ಯದ ನಂತರ, ಘಟನಾ ಸ್ಥಳದಿಂದ ಓಡಿ ಹೋಗಿ, ತನ್ನ ಪತ್ನಿ ಮತ್ತು ಮಗುವನ್ನೂ ಹತ್ಯೆ ಮಾಡಿದ್ದಾನೆ. ಬಳಿಕ ತಾನೂ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

3B

ಶುಕ್ರವಾರದ ಉಷ್ಣಾಂಶ 27° ಗರಿಷ್ಠ 20° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಮೋಡ ಕವಿದ ವಾತಾವರಣವಿದ್ದು, ಸಣ್ಣದಾಗಿ ಮಳೆಯಾಗುವ ಸಾಧ್ಯತೆ ಇದೆ

ಹವಾಮಾನ: ಶನಿವಾರ 26° 20° | ಭಾನುವಾರ 27° 20° | ಸೋಮವಾರ 27° 20°

ಎಂಸಿಎಚ್, ಟ್ರಾಮಾ ಕೇರ್ ಸೆಂಟರ್ ಸ್ಥಾಪನೆ ಭರವಸೆ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಕೆ.ಸಿ. ಜನರಲ್ ಆಸ್ಪತ್ರೆ: ಎರಡು ಘಟಕಗಳಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಉಪಕೇಂದ್ರ ಹಾಗೂ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ 50 ಹಾಸಿಗೆಗಳ ತೀವ್ರ ನಿಗಾ ಘಟಕಕ್ಕೆ (ಐಸಿಯು) ಗುರುವಾರ ಚಾಲನೆ ದೊರೆಯಿತು.

ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ನಗರದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನೂತನ ಉಪಕೇಂದ್ರ ಹಾಗೂ ಐಸಿಯು ಘಟಕ ಉದ್ಘಾಟಿಸಿ, ಮಾತನಾಡಿದರು.

'ನಗರದ ನಾಲ್ಕು ದಿಕ್ಕುಗಳಲ್ಲೂ ತಲಾ ಒಂದು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಸ್ಥಾಪಿಸಲಾಗುತ್ತಿದೆ' ಎಂದು ಹೇಳಿದರು.

'ಕೆ.ಸಿ. ಜನರಲ್ ಆಸ್ಪತ್ರೆಯ ಆವರಣದಲ್ಲಿ 200 ಹಾಸಿಗೆಗಳ ತಾಯಿ ಮತ್ತು ಮಕ್ಕಳ ಆಸ್ಪತ್ರೆ (ಎಂಸಿಎಚ್) ಹಾಗೂ 50 ಹಾಸಿಗೆಗಳ ಟ್ರಾಮಾ ಕೇರ್ ಸೆಂಟರ್ ಸ್ಥಾಪಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಇದರಿಂದ ಕೆ.ಸಿ. ಜನರಲ್ ಆಸ್ಪತ್ರೆಯೂ ವಿಕ್ಟೋರಿಯಾ ಆಸ್ಪತ್ರೆಯಂತೆ ಸಮಗ್ರವಾಗಿ ಅಭಿವೃದ್ಧಿ ಹೊಂದಲಿದೆ' ಎಂದು ತಿಳಿಸಿದರು.

ಉತ್ತರದ ಜನರಿಗೆ ಅನುಕೂಲ: ಸ್ಥಳೀಯ ಶಾಸಕ ಮತ್ತು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, 'ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಜಯದೇವ ಹೃದ್ರೋಗ ಸಂಸ್ಥೆ ಮತ್ತು ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯು ತಲಾ 50 ಹಾಸಿಗೆಗಳ ಘಟಕಗಳನ್ನು ಸ್ಥಾಪಿಸಿರುವುದರಿಂದ ನಗರದ ಉತ್ತರ ಭಾಗದ ಜನರಿಗೆ ಅನುಕೂಲ ಆಗಲಿದೆ. ಈ ಘಟಕಗಳನ್ನು ಕ್ರಮವಾಗಿ ₹ 15 ಕೋಟಿ ಹಾಗೂ ₹3.53 ಕೋಟಿ ವೆಚ್ಚದಲ್ಲಿ ಸ್ಥಾಪಿಸಲಾಗಿದೆ. ಈ ಘಟಕಗಳನ್ನು ಜಯದೇವ ಹೃದ್ರೋಗ ಸಂಸ್ಥೆ ಹಾಗೂ ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ನಿರ್ವಹಿಸಲಿವೆ. ಮುಂದಿನ ದಿನಗಳಲ್ಲಿ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿನ ಹಾಸಿಗೆಗಳ ಸಂಖ್ಯೆಯನ್ನು 900ಕ್ಕೆ ಏರಿಸಲಾಗುವುದು' ಎಂದರು.

ಆರೋಗ್ಯ ಸಚಿವ ಡಾ.ಕೆ. ಸುಧಾಕರ್, 'ಒಂದು ಕೋಟಿಗೂ ಹೆಚ್ಚು ಜನಸಂಖ್ಯೆ ಇರುವ ಬೆಂಗಳೂರಿನಲ್ಲಿ ಜನರಿಗೆ ತೃತೀಯ ಸ್ತರದ ಆರೋಗ್ಯ ಸೇವೆಗಳು ಹೆಚ್ಚಾಗಿ ದೊರೆಯಬೇಕು. ಆದ್ದರಿಂದ ಆರೋಗ್ಯ ವಲಯವನ್ನು ಸದೃಢವಾಗಿ ಬೆಳೆಸಲಾಗುತ್ತಿದೆ. ವಿವಿಧ ಆರೋಗ್ಯ ಕೇಂದ್ರಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುತ್ತಿದೆ' ಎಂದು ಹೇಳಿದರು.

ಜಯದೇವ ಹೃದ್ರೋಗ ವಿಜ್ಞಾನ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್, ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆಯ ನಿರ್ದೇಶಕ ಡಾ.ಸಂಜಯ್ ಕೆ.ಎಸ್., ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅನಿಲ್ ಕುಮಾರ್, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ದೇಶಕ ಡಾ.ಸಿ. ರಾಮಚಂದ್ರ, ರಾಜೀವ್ ಗಾಂಧಿ ಎದೆ ರೋಗಗಳ ಆಸ್ಪತ್ರೆಯ ನಿರ್ದೇಶಕ ಡಾ.ಸಿ. ನಾಗರಾಜ್ ಇದ್ದರು.



ನೂತನ ಘಟಕವನ್ನು ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು. ಡಾ.ಕೆ. ಸುಧಾಕರ್, ಶಾಸಕ ದಿನೇಶ್ ಗುಂಡೂರಾವ್, ಡಾ.ಸಿ.ಎನ್ ಅಶ್ವತ್ಥನಾರಾಯಣ, ಜಯದೇವ ಹೃದ್ರೋಗ ವಿಜ್ಞಾನ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಇದ್ದಾರೆ – ಪ್ರಜಾವಾಣಿ ಚಿತ್ರ

ಆಸ್ಪತ್ರೆಯಲ್ಲಿನ ಸೌಲಭ್ಯಗಳು

- ಹಾಸಿಗೆಗಳ ಸಾಮರ್ಥ್ಯ 453ರಿಂದ 653ಕ್ಕೆ ಏರಿಕೆ
- ವೆಂಟಿಲೇಟರ್ ಸಹಿತ 100 ಹಾಸಿಗೆಗಳ ತೀವ್ರ ನಿಗಾ ಘಟಕದ ವ್ಯವಸ್ಥೆ
- ಎಲ್ಲ ಹಾಸಿಗೆಗಳಿಗೂ ಆಮ್ಲಜನಕ ಕೊಳವೆ ಅಳವಡಿಕೆ
- ಆಸ್ಪತ್ರೆಯ ಆಮ್ಲಜನಕ ಸಾಮರ್ಥ್ಯ 3 ಕೆ.ಎಲ್.ನಿಂದ 18 ಕೆ.ಎಲ್‌ಗೆ ಏರಿಕೆ
- 2,000 ಎಲ್.ಪಿ.ಎಂ ಸಾಮರ್ಥ್ಯದ 3 ಆಮ್ಲಜನಕ ಘಟಕಗಳ ಸ್ಥಾಪನೆಗೆ ಕ್ರಮ
- 300 ಹಾಸಿಗೆಗಳಿಗೆ ಬೆಡ್‌ಸೈಡ್ ಮಾನಿಟರ್ ಅಳವಡಿಕೆ
- ಎಕೋ, ಟ್ರೆಡ್ ಮಿಲ್, ಅತ್ಯಾಧುನಿಕ ಕ್ಯಾತ್ ಲ್ಯಾಬ್ ಸೌಲಭ್ಯ
- ಜಯದೇವ ಹೃದ್ರೋಗ ಸಂಸ್ಥೆಯ ಉಪಘಟಕದಲ್ಲಿ 20 ತುರ್ತು ನಿಗಾ ಮತ್ತು 30 ಸಾಮಾನ್ಯ ಹಾಸಿಗೆಗಳು ಲಭ್ಯ

'ಆರೋಗ್ಯ ಕೇಂದ್ರಗಳಲ್ಲಿ ತಜ್ಞ ವೈದ್ಯರ ಸಲಹೆ'

ಬೆಂಗಳೂರು: 'ವೈದ್ಯರ ತಂಡವು ಟೆಲಿಮೆಡಿಸಿನ್ ವ್ಯವಸ್ಥೆಯ ಮೂಲಕ ಆರೋಗ್ಯ ಕೇಂದ್ರಗಳಿಗೆ ಸಲಹೆ ಸೂಚನೆಗಳನ್ನು ನೀಡಲು ಆರು ಕಮಾಂಡ್ ಸೆಂಟರ್‌ಗಳನ್ನು ನಿರ್ಮಿಸಿ, ಸಮುದಾಯ ಆರೋಗ್ಯ ಕೇಂದ್ರಗಳಿಗೆ ಸಂಪರ್ಕ ಕಲ್ಪಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯು ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಗುರುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಉಪಕೇಂದ್ರ ಹಾಗೂ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ 50 ಹಾಸಿಗೆಗಳ ತೀವ್ರ ನಿಗಾ ಘಟಕವನ್ನು ಉದ್ಘಾಟಿಸಿ, ಮಾತನಾಡಿದರು.

'100 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು (ಪಿಎಚ್‌ಸಿ) ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ (ಸಿಎಚ್‌ಸಿ) ಈ ವರ್ಷ ಮೇಲ್ದರ್ಜೆಗೇರಿಸಲಾಗುತ್ತಿದೆ. ಪ್ರತಿ ಕೇಂದ್ರಕ್ಕೆ ₹ 8 ಕೋಟಿ ವೆಚ್ಚ ಆಗಲಿದೆ. ಮೇಲ್ದರ್ಜೆಗೆ ಏರಿಸಲಾದ ಕೇಂದ್ರಗಳಿಗೆ ಟೆಲಿ ಮೆಡಿಸಿನ್ ಸೇವೆ ಸಂಪರ್ಕಿಸುವ ಯೋಜನೆ ರೂಪಿಸಲಾಗುತ್ತಿದೆ. ಪ್ರಾದೇಶಿಕವಾಗಿ 6 ಕಮಾಂಡ್ ಕೇಂದ್ರಗಳನ್ನು ನಿರ್ಮಿಸಿ, ಸಿಎಚ್‌ಸಿ ಕೇಂದ್ರಗಳಿಗೆ ಸಂಪರ್ಕ ಕಲ್ಪಿಸಲಾಗುತ್ತದೆ. ಇವು 24X7 ಕಾರ್ಯನಿರ್ವಹಿಸಲಿವೆ. 81 ಪಿಎಚ್‌ಸಿ ಕೇಂದ್ರಗಳನ್ನು ಹೊಸದಾಗಿ ತೆರೆಯಲಾಗುವುದು' ಎಂದು ತಿಳಿಸಿದರು.

'ಹಿರಿಯ ನಾಗರಿಕರಿಗೆ ಆರೋಗ್ಯ ತಪಾಸಣಾ ಶಿಬಿರವನ್ನು ತಾಲ್ಲೂಕು ಮಟ್ಟದಲ್ಲಿ ರಾಜ್ಯಾದ್ಯಂತ ನಡೆಸಲಾಗುವುದು. ಎಲ್ಲಾ ಬಡವರಿಗೆ ಕಣ್ಣಿನ ಶಸ್ತ್ರಚಿಕಿತ್ಸೆಗಳನ್ನು ಉಚಿತವಾಗಿ ನಡೆಸಲಾಗುವುದು. ಬಾಲ್ಯದಿಂದಲೇ ಶ್ರವಣ ದೋಷ ಇರುವವರಿಗೆ ಕಾಕ್ಲಿಯರ್ 'ಇಂಪ್ಲಾಂಟ್' ನಡೆಸಲು ಬಜೆಟ್‌ನಲ್ಲಿ ₹ 500 ಕೋಟಿ ಮೀಸಲಿಡಲಾಗಿದೆ. ಇದಕ್ಕೆ ಸಚಿವ ಸಂಪುಟದ ಅನುಮೋದನೆ ದೊರೆತಿದೆ' ಎಂದು ಹೇಳಿದರು.

'4 ಸಾವಿರ ಅಂಗನವಾಡಿ ಕೇಂದ್ರಗಳನ್ನು ಈ ವರ್ಷದಲ್ಲೇ ಪ್ರಾರಂಭಿಸುತ್ತೇವೆ. 2023ರ ಆ.15ರೊಳಗೆ ಎಲ್ಲಾ ಶಾಲೆಗಳಲ್ಲೂ ಶೌಚಾಲಯ ನಿರ್ಮಿಸಲಾಗುವುದು. ಇದಕ್ಕಾಗಿ ₹ 650 ಕೋಟಿ ಮೀಸಲಿಡಲಾಗಿದೆ' ಎಂದರು.

ನ.1ರಿಂದ 'ಯಶಸ್ವಿನಿ' ಮರು ಜಾರಿ

'ಸಹಕಾರ ಸಂಘಗಳ ಸದಸ್ಯರು ಹಾಗೂ ಅವರ ಕುಟುಂಬದ ಸದಸ್ಯರಿಗೆ ಆರೋಗ್ಯ ವಿಮೆ ಒದಗಿಸುವ 'ಯಶಸ್ವಿನಿ ಯೋಜನೆ'ಯನ್ನು ನವೆಂಬರ್ 1 ರಿಂದ ಮರುಜಾರಿ ಮಾಡಲಾಗುವುದು. ಯೋಜನೆ ಮರುಜಾರಿಗೆ ಈಗಾಗಲೇ ಅಗತ್ಯ ಸಿದ್ಧತೆಗಳನ್ನು ಕೈಗೊಂಡಿದ್ದೇವೆ. ಈ ಯೋಜನೆಯಿಂದ ಲಕ್ಷಾಂತರ ಜನರು ಲಾಭ ಪಡೆಯಲಿದ್ದಾರೆ. ಆಯುಷ್ಮಾನ್ ಕಾರ್ಡ್‌ಗಳಿಗೆ ಸಂಬಂಧಿಸಿದ ತೊಡಕುಗಳನ್ನೂ ನಿವಾರಿಸಿ, ಸರಳ ನಿಯಮಾವಳಿಗಳನ್ನು ಶೀಘ್ರದಲ್ಲಿ ಹೊರಡಿಸಲಾಗುವುದು' ಎಂದು ಬಸವರಾಜ ಬೊಮ್ಮಾಯಿ ತಿಳಿಸಿದರು.

10ರಿಂದ ಒತ್ತುವರಿ ತೆರವು: ತುಷಾರ್ ಗಿರಿನಾಥ್

ಬೆಂಗಳೂರು: ಮಹದೇವಪುರ ವ್ಯಾಪ್ತಿಯಲ್ಲಿ ಒತ್ತುವರಿ ಮಾಡಿಕೊಂಡಿರುವ ಕಟ್ಟಡಗಳನ್ನು ಅ.10ರಿಂದ ತೆರವು ಮಾಡಲಾಗುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

'ಒತ್ತುವರಿ ತೆರವು ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಿದೆ. ಅಳತೆ, ಮಾರ್ಕಿಂಗ್ ನಡೆಯುತ್ತಿವೆ. ಕಂದಾಯ ಇಲಾಖೆಯ ಸಿಬ್ಬಂದಿಯೊಂದಿಗೆ ಸರ್ವೆ ನಡೆಸಲಾಗುತ್ತಿದೆ. ತಹಶೀಲ್ದಾರ್ ನೋಟಿಸ್ ಜಾರಿ ಮಾಡಿ, ತೆರವಿಗೆ ಆದೇಶ ನೀಡುತ್ತಾರೆ. ನಾವು ಕಟ್ಟಡಗಳ ತೆರವು ಕಾರ್ಯವನ್ನು ಆರಂಭಿಸುತ್ತೇವೆ' ಎಂದು ಸುದ್ದಿಗಾರರಿಗೆ ಗುರುವಾರ ವಿವರಿಸಿದರು.

'ಕೆಲವು ಪ್ರದೇಶದಲ್ಲಿ ಜಂಟಿ ಸರ್ವೆ ನಡೆಸಬೇಕು ಎಂದು ಹೈಕೋರ್ಟ್ ಹೇಳಿದೆ. ಅದರಂತೆ ನಾವು ನೋಟಿಸ್ ನೀಡಿ ಸರ್ವೆ ಮಾಡಿ ಗುರುತು ಮಾಡಲಾಗುತ್ತದೆ. ಈ ಬಗ್ಗೆ ಕಂದಾಯ ಇಲಾಖೆಗೆ ಮನವಿ ಮಾಡಿಕೊಳ್ಳಲಾಗಿದೆ. ಅವರ ಮಾಹಿತಿ ಹಾಗೂ ಆದೇಶದಂತೆ ತೆರವು ಕಾರ್ಯಾಚರಣೆ ನಡೆಸುತ್ತೇವೆ' ಎಂದರು.

'ನಮ್ಮ ಕ್ಲಿನಿಕ್'ಗೆ 160 ವೈದ್ಯರ ನೇಮಕ: ಸುಧಾಕರ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 243 'ನಮ್ಮ ಕ್ಲಿನಿಕ್'ಗಳು ನವೆಂಬರ್ ಅಂತ್ಯಕ್ಕೆ ಆರಂಭವಾಗಲಿದ್ದು, 160 ವೈದ್ಯರನ್ನು ನೇಮಕ ಮಾಡಿಕೊಳ್ಳಲಾಗಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಮಹಾಲಕ್ಷ್ಮಿಲೇಔಟ್‌ನ ಪಂಚಮುಖಿ ದೇವಸ್ಥಾನದ ಸಮೀಪ ರೂಪಿಸಲಾಗಿರುವ 'ನಮ್ಮ ಕ್ಲಿನಿಕ್' ಮಾದರಿ ವೀಕ್ಷಿಸಿ ಅವರು ಮಾತನಾಡಿದರು.

'ಒಂದು ಕ್ಲಿನಿಕ್‌ನಲ್ಲಿ ವೈದ್ಯ, ನರ್ಸಿಂಗ್ ಸಿಬ್ಬಂದಿ, ಲ್ಯಾಬ್ ಟೆಕ್ನೀಷಿಯನ್ ಹುದ್ದೆಗಳಿರುತ್ತವೆ. ಬಹುತೇಕ ಹುದ್ದೆಗಳು ತುಂಬಿದ್ದು, ಬಾಕಿ ಉಳಿದ 83ಕ್ಕೆ ಮತ್ತೆ ಅಧಿಸೂಚನೆ ಹೊರಡಿಸಲಾಗಿದೆ. ಇನ್ನೂ ಹತ್ತು ದಿನಗಳೊಳಗೆ ಎಲ್ಲ ನೇಮಕ ಆಗಲಿದೆ' ಎಂದರು.

'ಬಡತನ ರೇಖೆಗಿಂತ ಕೆಳಗಿರುವ ಜನರು, ಗುಡಿಸಲುಗಳಲ್ಲಿ ವಾಸಿಸುವ ಕಡು ಬಡವರಿಗಾಗಿ ಈ ಯೋಜನೆ ರೂಪಿಸಲಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರದಂತೆಯೇ ಇದು ಕಾರ್ಯ ನಿರ್ವಹಿಸಲಿದೆ' ಎಂದರು.

ಸರ್ಕಾರಿ ಕಟ್ಟಡಗಳಲ್ಲಿ, ಬಾಡಿಗೆ ಕಟ್ಟಡಗಳಲ್ಲಿ ಒಂದು ಸಾವಿರದಿಂದ 1,200 ಚದರ ಅಡಿ ವಿಸ್ತೀರ್ಣದ ಜಾಗದಲ್ಲಿ ಕ್ಲಿನಿಕ್ ರೂಪಿಸಲಾಗುತ್ತಿದೆ. ಪ್ರತಿ ವರ್ಷ ಸಿಬ್ಬಂದಿಗಾಗಿ ₹138 ಕೋಟಿ ವೆಚ್ಚವಾಗಲಿದೆ. ಇನ್ನಷ್ಟು ವೆಚ್ಚಗಳು ಸೇರಿದಂತೆ ಒಟ್ಟು ₹155 ಕೋಟಿ ವ್ಯಯವಾಗಲಿದೆ. ಯೋಗ, ಪ್ರಾಣಾಯಾಮ, ಧ್ಯಾನ, ಆಹಾರ ಪದ್ಧತಿ ಬಗ್ಗೆ ಕ್ಲಿನಿಕ್‌ನಲ್ಲಿ ಜಾಗೃತಿ ಮೂಡಿಸಲಾಗುವುದು ಎಂದರು.

ಸುದ್ದಿ 2 ನಿಮಿಷ

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ: ಪೂರ್ವಭಾವಿ ಸಭೆ 12ಕ್ಕೆ

ಬೆಂಗಳೂರು: ಹಾವೇರಿಯಲ್ಲಿ ನಡೆಯಲಿರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಂಬಂಧಿಸಿದಂತೆ ಇದೇ 12ರ ಸಂಜೆ 4 ಗಂಟೆಗೆ ಪೂರ್ವಭಾವಿ ಸಭೆ ನಡೆಸಲಾಗುವುದು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

'ಸಾಹಿತ್ಯ ಸಮ್ಮೇಳನವನ್ನು ಐತಿಹಾಸಿಕವಾಗಿ ನಡೆಸಲು ಸರ್ಕಾರ ಮುಂದಾಗಿದೆ. ಸಣ್ಣಪುಟ್ಟ ಗೊಂದಲಗಳು ತಿಳಿಯಾಗಿವೆ. ಪೂರ್ವಭಾವಿ ಸಭೆಯಲ್ಲಿ ಸರ್ಕಾರದ ಪರವಾಗಿ ಹಾವೇರಿ ಜಿಲ್ಲೆಯ ಉಸ್ತುವಾರಿ ಸಚಿವ ಶಿವರಾಮ ಹೆಬ್ಬಾರ್, ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನಿಲ್ ಕುಮಾರ್, ಹಾವೇರಿ ಜಿಲ್ಲೆಯ ಜನಪ್ರತಿನಿಧಿಗಳು ಹಾಗೂ ಜಿಲ್ಲಾಡಳಿತದ ಅಧಿಕಾರಿಗಳು ಭಾಗವಹಿಸಲಿದ್ದಾರೆ' ಎಂದು ಹೇಳಿದ್ದಾರೆ.

'ಅ.17ರಂದು ಹಾವೇರಿಯಲ್ಲಿ ಮತ್ತೊಂದು ಸಭೆ ನಡೆಸಿ, ಸ್ಥಳ ಪರಿಶೀಲನೆ ನಡೆಸಲಾಗುವುದು' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ನೀರು ಪೂರೈಕೆಯಲ್ಲಿ ವ್ಯತ್ಯಯ

ಬೆಂಗಳೂರು: ಜೆ.ಪಿ. ನಗರದ 4ನೇ ಹಂತದಿಂದ 8ನೇ ಹಂತದವರೆಗಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಕ್ಟೋಬರ್ 7ರಂದು ಕಾವೇರಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ಜಲಮಂಡಳಿಯು 4ನೇ ಹಂತದ ಜೆ.ಡಿ.ಮರ ಬನ್ನೇರುಘಟ್ಟ ರಸ್ತೆ ಸಮೀಪದಲ್ಲಿರುವ ಕೊಳವೆ ಮಾರ್ಗಕ್ಕೆ 900 ಮಿ.ಮೀ ವ್ಯಾಸದ ನೀರು ಸರಬರಾಜು ಮಾಡುವ ಕೊಳವೆ ಮಾರ್ಗ ಜೋಡಣೆ ಕಾಮಗಾರಿ ಕೈಗೊಂಡಿರುವುದರಿಂದ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಎಲ್ಲೆಲ್ಲಿ ವ್ಯತ್ಯಯ: ಪುಟ್ಟೇನಹಳ್ಳಿ, ಜರಗನಹಳ್ಳಿ, ಆರ್.ಬಿ.ಐ ಲೇಔಟ್, ಪಾಂಡುರಂಗ ನಗರ, ಅರಕೆರೆ, ಮೈಕೋ ಲೇಔಟ್, ದೊರೆಸ್ವಾಮಿ ಪಾಳ್ಯ, ಕೊತ್ತನೂರುದಿಣ್ಣೆ, ವೆಂಕಟಾದ್ರಿ ಲೇಔಟ್, ಚುಂಚಘಟ್ಟ, ಕೋಣನಕುಂಟೆ, ಎಸ್.ಬಿ.ಎಂ. ಲೇಔಟ್, ಸುಪ್ರೀಂ ರೆಸಿಡೆನ್ಸಿ ಲೇಔಟ್, ಲೇಕ್ ಸಿಟಿ, ಸಾರಕ್ಕಿ ಲೇಔಟ್, ರೋಟರಿ ನಗರ, ಕೋಣನಕುಂಟೆ, ಎಲ್.ಐ.ಸಿ. ಲೇಔಟ್ 1ನೇ ಸೆಕ್ಟರ್‌ನಿಂದ 7ನೇ ಸೆಕ್ಟರ್‌ವರೆಗೆ, ಆಗರ ವಿಲೇಜ್, ಮಂಗಮ್ಮನ ಪಾಳ್ಯ, ಮದೀನನಗರ, ಐಟಿಐ ಲೇಔಟ್, ಹೊಸಪಾಳ್ಯ, ಬಂಡೇಪಾಳ್ಯ, 4ನೇ ಟಿ ಬ್ಲಾಕ್ ಜಯನಗರ, ಬಿ.ಜಿ.ರಸ್ತೆ ಪಾರ್ಟ್ ಆಫ್ 3ನೇ ಹಂತ 2ನೇ ಘಟ್ಟ, ಬಿ.ಜಿ. ರಸ್ತೆ ಈಸ್ಟ್ ರಸ್ತೆ, ಎನ್.ಎ.ಸಿ ಲೇಔಟ್, ತಿಲಕನಗರ, ಜಯದೇವ ಆಸ್ಪತ್ರೆ, ಬಿ.ಟಿ.ಎಂ 2ನೇ ಮತ್ತು 3ನೇ ಹಂತ, ಕೆ.ಎಸ್. ಕಾಲೊನಿ, ಮಡಿವಾಳ, ತಾವರೆಕೆರೆ, ಐಕ್ಯೂಬ್ ನಗರ, ನಾರಾಯಣಪ್ಪ ಗಾರ್ಡನ್, ಡಾಲರ್ಸ್ ಕಾಲೊನಿ, ಸೋಮೇಶ್ವರ ಕಾಲೊನಿ, ವೆಂಕಟಾಪುರ, ಟೀಚರ್ಸ್ ಕಾಲೊನಿ, ಸಿದ್ಧಾರ್ಥ ಕಾಲೊನಿ, ಕೋರಮಂಗಲ 4ನೇ ಇ ಬ್ಲಾಕ್ ಮತ್ತು ಜೆ ಬ್ಲಾಕ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ಜಯನಗರದಲ್ಲಿ 15ರಿಂದ ಸಂಗೀತ ಉತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಕಿಡ್ನಿ ಫೌಂಡೇಶನ್ ವತಿಯಿಂದ ಅಕ್ಟೋಬರ್ 15 ಮತ್ತು 16ರಂದು 'ಪಂಡಿತ್ ಮಲ್ಲಿಕಾರ್ಜುನ್ ಮನ್ಸೂರ್ ಹಿಂದೂಸ್ತಾನಿ ಸಂಗೀತ ಉತ್ಸವ'ವನ್ನು ಜಯನಗರದ ಜೆಎಸ್‌ಎಸ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಅಕ್ಟೋಬರ್ 15ರಂದು ಸಂಜೆ 5ರಿಂದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಗಾಯಕರಾದ ಧನಂಜಯ ಹೆಗ್ಡೆ, ಅಜೊಯ್ ಚಕ್ರವರ್ತಿ ಹಾಡಲಿದ್ದಾರೆ. ತಬಲಾ ವಾದಕರಾದ ರಾಜೇಂದ್ರ ನಾಕೋಡ್, ಯೋಗೇಶ್ ಸಂಸಿ, ಸಾರಂಗಿ ವಾದಕರಾದ ಸರ್ಫರಾಜ್ ಖಾನ್ ಮತ್ತು ಅಜಯ್ ಜೋಗ್ಲೇಕರ್ ಸಾಥ್ ನೀಡಲಿದ್ದಾರೆ.

ಅಕ್ಟೋಬರ್ 16ರಂದು ಬೆಳಿಗ್ಗೆ 10ರಿಂದ ಗಾಯಕರಾದ ಸಮೀರ್ ಕುಲಕರ್ಣಿ ಹಾಡಲಿದ್ದು, ತಬಲಾ ವಾದಕ ಕೇದಾರನಾಥ್ ಹವಾಲ್ದಾರ್, ಹಾರ್ಮೋನಿಯಂ ವಾದಕ ಸಮೀರ್ ಹವಾಲ್ದಾರ್ ಸಾಥ್ ನೀಡಲಿದ್ದಾರೆ. ಬೆಳಿಗ್ಗೆ 11.15ಕ್ಕೆ ಉಸ್ತಾದ್ ಅನ್ವರ್ ಖಾನ್ ಮತ್ತು ರೋಷನ್ ಖಾನ್ ಹಾಡಲಿದ್ದು, ಖರ್ತಾಲ್ ವಾದಕ ಉಸ್ತಾದ್ ಗಾಜಿ ಖಾನ್ ಬಾರ್ನಾ, ಸಾರಂಗಿ ವಾದಕ ಫೇವಾರ್ ಖಾನ್, ಢೋಲಕ್ ವಾದಕ ಫಿರೋಜ್ ಖಾನ್ ಸಾಥ್ ನೀಡಲಿದ್ದು, ಸಂಗೀತಪ್ರಿಯರಿಗೆ ರಸದೌತಣ ನೀಡಲಿದ್ದಾರೆ.

ಸಂಜೆ 5ಕ್ಕೆ ಪೂರ್ವಿ ಗರುಡ್ ಹಾಡಲಿದ್ದು, ತಬಲಾ ವಾದಕ ಗುರುಚರಣ್ ಗರುಡ್, ಹಾರ್ಮೋನಿಯಂ ವಾದಕ ಸೂರ್ಯ ಉಪಾಧ್ಯ ಸಾಥ್ ನೀಡಲಿದ್ದಾರೆ.

ಸಂಜೆ 7.15ಕ್ಕೆ ಕೊಳಲು ವಾದಕ ಪಂಡಿತ್ ರೋನು ಮಜುಂದಾರ್, ಪಿಯಾನೋ ವಾದಕ ಅನಿಲ್ ಶ್ರೀನಿವಾಸನ್, ತಬಲಾ ವಾದಕ ಅನುಬ್ರತ ಚಟರ್ಜಿ ಸಂಗೀತಪ್ರಿಯರನ್ನು ರಂಜಿಸಲಿದ್ದಾರೆ.

ಈ ಸಂಗೀತ ಉತ್ಸವವನ್ನು ಡಯಾಲಿಸಿಸ್ ರೋಗಿಗಳಿಗೆ ನೆರವು ನೀಡುವ ಉದ್ದೇಶದಿಂದ ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

15ಕ್ಕೆ 'ಭೂಮಿಕಾ ಕ್ಲಬ್' ವಿಶೇಷ ಕಾರ್ಯಕ್ರಮ

ಬೆಂಗಳೂರು: ಮಹಿಳೆಯರ ಜೀವನ ಶೈಲಿಯನ್ನು ಉತ್ಕೃಷ್ಟಗೊಳಿಸಲು 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ನಿರ್ಮಿಸಿರುವ 'ಭೂಮಿಕಾ ಕ್ಲಬ್' ವೇದಿಕೆ, ಹಬ್ಬಗಳ ಪ್ರಯುಕ್ತ ಇದೇ 15ರ ಮಧ್ಯಾಹ್ನ 2.30ಕ್ಕೆ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದೆ.

ಅಶೋಕ ನಗರದಲ್ಲಿರುವ ಸೇಂಟ್ ಜೋಸೆಫ್ಸ್ ಮ್ಯಾನೇಜ್‌ಮೆಂಟ್ ಇನ್‌ಸ್ಟಿಟ್ಯೂಟ್‌ನಲ್ಲಿ ಕಾರ್ಯಕ್ರಮ ನಡೆಯಲಿದೆ. ಗಾಯಕಿ ಶಮಿತಾ ಮಲ್ನಾಡ್ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಆರೋಗ್ಯಕರ ಆಹಾರದ ಬಗ್ಗೆ ಅಪೋಲೊ ಆಸ್ಪತ್ರೆಯ ಡಾ. ಪ್ರಿಯಾಂಕಾ ರೋಹಟ್ಗಿ, ಹಬ್ಬಗಳ ಅಲಂಕಾರದ ಬಗ್ಗೆ ನಿಖಿತಾ ಪ್ರಿಯಾ ಭರಣ ಹಾಗೂ ಮನೆ ಅಲಂಕಾರದ ಬಗ್ಗೆ ಸ್ನೇಹಲ್ ಪಾಟೀಲ್ ಮಾತನಾಡಲಿದ್ದಾರೆ.

ಶಮಿತಾ ಮಲ್ನಾಡ್ ಅವರು ಸಂಗೀತ ಕಾರ್ಯಕ್ರಮ ನೀಡಲಿದ್ದಾರೆ. ಸ್ಟೈಲ್ ಸ್ಟ್ರಾಡಾದಿಂದ ಹಬ್ಬದ ಪರಿಕಲ್ಪನೆಯ ಫ್ಯಾಷನ್ ಶೋ ನಡೆಯಲಿದೆ. ನೃತ್ಯ ನಿರ್ದೇಶಕ ಮಿರ್ಜಾ ಅಲಿ, ಡಿಸೈನರ್ ಬಕಾಶ್ ಅಲಿ ಭಾಗವಹಿಸಲಿದ್ದಾರೆ. ಮಾಲಾ ಅವರಿಂದ ಮೇಕ್ ಓವರ್ ನಡೆಯಲಿದೆ.

ಇಂಡಿಯಾ ಸ್ವೀಟ್ ಹೌಸ್‌ನಿಂದ ಅಚ್ಚರಿ ಉಡುಗೊರೆ ಗೆಲ್ಲುವ ಅವಕಾಶವೂ ಇರಲಿದೆ. ಹೆಸರು ನೋಂದಾಯಿಸಿದವರಿಗೆ ಮಾತ್ರ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ಎಂದು ಪ್ರಕಟಣೆ ತಿಳಿಸಿದೆ.

ನೋಂದಣಿಗೆ: bit.ly/pvbhumikaclub



ಶಮಿತಾ ಮಲ್ನಾಡ್

ನಗರದಲ್ಲಿ ಇಂದು

ಚಂಡಿಕಾ ಮಹಾಯಾಗ: ಆಯೋಜನೆ ಮತ್ತು ಸ್ಥಳ: ಆದಿಶಕ್ತಿ ಗ್ರಾಮದೇವತೆ ಮಾರಮ್ಮ ದೇವಿ ಸೇವಾ ಸಮಿತಿ, ತಾವರೆಕೆರೆ, ಮಾಗಡಿ ಮುಖ್ಯರಸ್ತೆ


ಎಲೆಕ್ಟ್ರಿಕ್ ಬಸ್‌ಗಳ ವರ್ಚುವಲ್ ಉದ್ಘಾಟನೆ: ಮಹೇಂದ್ರನಾಥ್ ಪಾಂಡೆ, ಅತಿಥಿಗಳು: ಬಸವರಾಜ ಬೊಮ್ಮಾಯಿ, ಬಿ.ಶ್ರೀರಾಮುಲು, ಆಯೋಜನೆ: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಸ್ಥಳ: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಡಿಪೋ–30 ಯಲಹಂಕ, ಬೆಳಿಗ್ಗೆ 9

ಮಾಧ್ಯಮದ ಸ್ವಾತಂತ್ರ್ಯ, ಸ್ವರೂಪ ವ್ಯಾಪ್ತಿ ಮತ್ತು ಅದರ ಇತಿಮಿತಿಗಳ ಕುರಿತು ವಿಚಾರಸಂಕಿರಣ: ಉದ್ಘಾಟನೆ: ಎನ್.ಸಂತೋಷ್ ಹೆಗ್ಡೆ, ಉಪನ್ಯಾಸ: ಪ್ರಭುಲಿಂಗ ಕೆ. ನಾವದಗಿ, ಅಧ್ಯಕ್ಷತೆ: ಕೆ. ದ್ವಾರಕಾನಾಥ್ ಬಾಬು, ಆಯೋಜನೆ: ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಕರ್ನಾಟಕ ಪತ್ರಕರ್ತರ ಸಹಕಾರ ಸಂಘ, ಸ್ಥಳ: ಪ್ರೆಸ್‌ಕ್ಲಬ್, ಬೆಳಿಗ್ಗೆ 11

ವಿಶ್ವ ಬಾಹ್ಯಾಕಾಶ ಸಪ್ತಾಹ: ಬಾಹ್ಯಾಕಾಶ ವಿಜ್ಞಾನಿಗಳೊಂದಿಗೆ ಸಂವಾದ: ಎ.ಎಸ್. ಕಿರಣ್‌ಕುಮಾರ್, ಸೀತಾ, ಆಯೋಜನೆ ಮತ್ತು ಸ್ಥಳ: ಜವಾಹರಲಾಲ್ ನೆಹರೂ ತಾರಾಲಯ, ಸಂಜೆ 4

ಸ್ನೇಹ ಸಂಭ್ರಮ: ಅತಿಥಿಗಳು: ಲಲಿತಾ ಶ್ರೀನಿವಾಸನ್, ಮೈಸೂರು ನಾಗಮಣಿ ಶ್ರೀನಾಥ್, ರಾಘವೇಂದ್ರ, ಗಾಯನ: ಪಿ.ರಾಮಾ, ನಟುವಾಂಗ: ಸುಜಯ್ ಶಾನಭಾಗ್, ಮೃದಂಗ: ಪಿ.ಜನಾರ್ದನ ರಾವ್, ಜಯರಾಂ ಕೆ.ಎಸ್., ಆಯೋಜನೆ: ಸಂಗೀತ ಸಂಭ್ರಮ, ಸ್ಥಳ: ಸೇವಾ ಸದನ, ಸಂಜೆ 6

ಅನಂತನಾಗ್ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಅತಿಥಿಗಳು: ಸದಾಶಿವ ಶಣೈ, ಎಚ್.ಎನ್.ಸುರೇಶ್, ಅಧ್ಯಕ್ಷತೆ: ನಿರಂಜನ, ಆಯೋಜನೆ: ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10.30



ರಾಜ್ಯದಲ್ಲಿ ಒಂದು ಲಕ್ಷ ಎಕರೆ ತಲುಪಲಿದೆ ನೈಸರ್ಗಿಕ ಕೃಷಿ

ಡಿಜಿಟಲ್ ಕುರಿತ ವಿಡಿಯೋ ಸಂವಾದಲ್ಲಿ ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಒಂದು ಲಕ್ಷ ಎಕರೆ ಜಮೀನನ್ನು 2023ರ ಮಾರ್ಚ್ ಒಳಗೆ ಸಂಪೂರ್ಣ ನೈಸರ್ಗಿಕ ಕೃಷಿಗೆ ಪರಿವರ್ತಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಅವರ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ನೈಸರ್ಗಿಕ ಮತ್ತು ಡಿಜಿಟಲ್ ಕೃಷಿ ಕುರಿತ ವಿಡಿಯೊ ಸಂವಾದದಲ್ಲಿ ಅವರು ಮಾಹಿತಿ ನೀಡಿದರು.

ಒಟ್ಟಾರೆ ರಾಜ್ಯದಲ್ಲಿ 2.4 ಲಕ್ಷ ಎಕರೆ ಸಾವಯವ ಕೃಷಿ ಭೂಮಿಯನ್ನು ನೈಸರ್ಗಿಕ ಕೃಷಿಗೆ ಪರಿವರ್ತಿಸುವ ಗುರಿ ಇದೆ. ನೈಸರ್ಗಿಕ ಕೃಷಿ ದೀರ್ಘಕಾಲಿಕ ಯೋಜನೆ. ಈ ಕುರಿತು ಸಂಶೋಧನೆ ಹಾಗೂ ಪ್ರಮಾಣೀಕರಣ ಅಗತ್ಯ ಎಂದು ತಿಳಿಸಿದರು.

ರೈತರ ಆದಾಯ ದ್ವಿಗುಣಗೊಳಿಸುವ ಪ್ರಧಾನಿ ನರೇಂದ್ರ ಮೋದಿ ಅವರ ಆಶಯದಂತೆ ಮಹಾರಾಷ್ಟ್ರ ಹಾಗೂ ಗುಜರಾತ್ ರಾಜ್ಯಗಳೊಂದಿಗೆ ನೈಸರ್ಗಿಕ ಕೃಷಿ ಚಟುವಟಿಕೆ ಕಾರ್ಯದಲ್ಲಿ ರಾಜ್ಯವೂ ಸಕ್ರಿಯವಾಗಿದೆ. ನೈಸರ್ಗಿಕ ಕೃಷಿಗೆ 41,434 ಕೃಷಿಕರನ್ನು ಆಯ್ಕೆ ಮಾಡಲಾಗಿದೆ ಎಂದು ಅವರು ಹೇಳಿದರು.

ಕೃಷಿ ಕ್ಷೇತ್ರದ ಡಿಜಿಟಲೀಕರಣದಲ್ಲಿ ಮುಂಚೂಣಿಯಲ್ಲಿರುವ ರಾಜ್ಯ ಕರ್ನಾಟಕ.ಇದುವರೆಗೆ 78 ಲಕ್ಷ ರೈತರ ಜಮೀನುಗಳ ಸರ್ವೆ ನಂಬರ್ ಹಾಗೂ ಆಧಾರ್ ಜೋಡಣೆ ಮಾಡಲಾಗಿದೆ. 62 ಲಕ್ಷ ಕೃಷಿಕರು ಹಾಗೂ 16 ಲಕ್ಷ ಭೂ ರಹಿತರ ಮಾಹಿತಿಯನ್ನು ತಂತ್ರಾಂಶದಲ್ಲಿ ಸೇರಿಸಲಾಗಿದೆ ಎಂದರು.

‘ಫ್ರೂಟ್ಸ್’ ಯೋಜನೆಯನ್ನು ಎಲ್ಲಾ ರಾಜ್ಯಗಳೂ ಅಳವಡಿಸಿಕೊಳ್ಳುತ್ತಿವೆ. ಕೇಂದ್ರ ಸರ್ಕಾರದ ಸ್ವಾಮಿತ್ವ ಯೋಜನೆಯನ್ನು ಅಭಿಯಾನದ ಮಾದರಿಯಲ್ಲಿ ಕೈಗೊಳ್ಳಲಾಗಿದೆ ಎಂದರು.

ಜಿವಿಕೆ– ಇಎಂಆರ್‌ಐ ಸಂಸ್ಥೆಗೆ ಸಾಮೂಹಿಕ ರಜೆಯ ಎಚ್ಚರಿಕೆ ನೀಡಿದ ಸಿಬ್ಬಂದಿ

108: ವೇತನ ಪಾವತಿಗೆ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರದ 108-ಆರೋಗ್ಯ ಕವಚ ಯೋಜನೆಯನ್ನು ನಿರ್ವಹಿಸುತ್ತಿರುವ ಜಿವಿಕೆ-ಇಎಂಆರ್‌ಐ ಸಂಸ್ಥೆಯು ಎರಡು ತಿಂಗಳಿಂದ ವೇತನವನ್ನು ಬಾಕಿ ಉಳಿಸಿಕೊಂಡಿದೆ. ವೇತನ ಬಿಡುಗಡೆಗೆ ಸರ್ಕಾರ ಮಧ್ಯ ಪ್ರವೇಶಿಸದಿದ್ದರೆ ಶುಕ್ರವಾರದಿಂದಲೇ ಗೈರುಹಾಜರಾಗುತ್ತೇವೆ’ ಎಂದು ಸಂಸ್ಥೆಯ ಸಿಬ್ಬಂದಿ ಎಚ್ಚರಿಕೆ ನೀಡಿದ್ದಾರೆ.

ಜಿವಿಕೆ-ಇಎಂಆರ್‌ಐ ಸಂಸ್ಥೆಯಡಿ 2,500 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. 2022–23ನೇ ಸಾಲಿನ ಎರಡನೇ ತ್ರೈಮಾಸಿಕಕ್ಕೆ ಸರ್ಕಾರವು ₹ 25 ಕೋಟಿ ಅನುದಾನವನ್ನು ಸಂಸ್ಥೆಗೆ ಬಿಡುಗಡೆ ಮಾಡಿದೆ. ಇದರಲ್ಲಿ 2022ರ ಸೆಪ್ಟೆಂಬರ್‌ವರೆಗಿನ ವೇತನವೂ ಸೇರಿದೆ. ಆದರೂ ಸಂಸ್ಥೆಯು ವೇತನ ಬಿಡುಗಡೆ ಮಾಡದಿರುವುದು ಸಿಬ್ಬಂದಿಯ ಆಕ್ರೋಶಕ್ಕೆ ಕಾರಣವಾಗಿದೆ.

‘108-ಆರೋಗ್ಯ ಕವಚ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ಎರಡು ತಿಂಗಳಿಂದ ವೇತನ ನೀಡಿಲ್ಲ. ಈ ಬಗ್ಗೆ ಚರ್ಚಿಸಲು ಆರೋಗ್ಯ ಇಲಾಖೆಯ ಆಯುಕ್ತ ಡಿ. ರಂದೀಪ್ ಅವರನ್ನು ಶುಕ್ರವಾರ ಭೇಟಿ ಮಾಡಲಾಗುವುದು. ವೇತನ ಬಿಡುಗಡೆಯ ಬಗ್ಗೆ ಸೂಕ್ತ ಭರವಸೆ ಸಿಗದಿದ್ದಲ್ಲಿ



ಸಾಮೂಹಿಕ ರಜೆಯ ನಿರ್ಧಾರವನ್ನು ಕೈಗೊಳ್ಳಲಾಗುತ್ತದೆ. ಆಂಬುಲೆನ್ಸ್ ಸೇವೆಯಲ್ಲಿ ವ್ಯತ್ಯಯವಾದರೆ ಸಂಸ್ಥೆಯೇ ಹೊಣೆ’ ಎಂದು 108 ನೌಕರರ ಸಂಘದ ರಾಜ್ಯ ಉಪಾಧ್ಯಕ್ಷ ಎನ್.ಎಚ್. ಪರಮಶಿವ ತಿಳಿಸಿದರು.

‘ಸಂಸ್ಥೆಯ ಸಿಬ್ಬಂದಿ ಸಂಕಷ್ಟಕ್ಕೆ ಸಿಲುಕಿದ್ದಾರೆ. ದಸರಾ ಹಬ್ಬದ ಸಂಭ್ರಮವೂ ಈ ಬಾರಿ ಇರಲಿಲ್ಲ. ಸರ್ಕಾರವು ಸಂಸ್ಥೆಗೆ ಬಿಡುಗಡೆ ಮಾಡಿರುವ ಹಣ ಏನಾಯಿತು ಎಂಬ ಬಗ್ಗೆ ಸೂಕ್ತ ತನಿಖೆ ಆಗಬೇಕು’ ಎಂದು ಆಗ್ರಹಿಸಿದರು.

ಸಂಸ್ಥೆ–ಸಿಬ್ಬಂದಿ ಜತೆಗೆ ಇಂದು ಸಭೆ

‘ಕಳೆದ 16 ವರ್ಷದಿಂದ ಜಿವಿಕೆ ಸಂಸ್ಥೆ ಆಂಬುಲೆನ್ಸ್ ಸೇವೆ ನೀಡುತ್ತಿದೆ. ಒಪ್ಪಂದದ ಪ್ರಕಾರ ಸಂಸ್ಥೆಯೇ ಸಿಬ್ಬಂದಿಗೆ ವೇತನ ನೀಡಬೇಕು. ಸರ್ಕಾರದಿಂದ ಹಣ ಪಾವತಿ ಮಾಡಲಾಗುತ್ತಿದೆ. ಸಂಸ್ಥೆ ಹಾಗೂ ಸಿಬ್ಬಂದಿ ಜತೆಗೆ ಶುಕ್ರವಾರ ಸಭೆ ನಡೆಸಲಾಗುವುದು. ಈ ಸಮಸ್ಯೆಯಿಂದ ಜನರಿಗೆ ತೊಂದರೆಯಾಗಬಾರದು’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಹೇಳಿದರು.

‘ಆಂಬುಲೆನ್ಸ್ ಟೆಂಡರ್ ಅಂತಿಮಗೊಳ್ಳುತ್ತಿದ್ದು, ಎರಡು ತಿಂಗಳೊಳಗೆ ಮುಗಿಯಲಿದೆ. ಬಳಿಕ ಸೇವೆ ನೀಡುವವರು ಯಾರೆಂದು ತೀರ್ಮಾನವಾಗಲಿದೆ. ಬೈಕ್ ಆಂಬುಲೆನ್ಸ್ ಸೇವೆ ಸಂಬಂಧ ರಚಿಸಿದ ಸಮಿತಿಗಳು ಇದರ ಅವಶ್ಯಕತೆ ಇಲ್ಲ ಎಂದು ಅಭಿಪ್ರಾಯಪಟ್ಟಿವೆ. ಆದ್ದರಿಂದ ಹೊಸ ಟೆಂಡರ್‌ನಲ್ಲಿ ಬೈಕ್ ಆಂಬುಲೆನ್ಸ್ ಪ್ರಸ್ತಾಪ ಇಲ್ಲ’ ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ಮದರಸಾ ಸುಧಾರಣೆಗೆ ವಿಶ್ವಾಸವೇ ಅಸ್ತ್ರ: ಬಿಕೆಸಿ

ಬೆಂಗಳೂರು: ಸರ್ಕಾರ ಮದರಸಾಗಳ ವಿರುದ್ಧ ಬೆದರಿಕೆ ತಂತ್ರ ಅನುಸರಿಸುವ ಬದಲು ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸುಧಾರಣೆ ಮಾಡಬೇಕು ಎಂದು ಕಾಂಗ್ರೆಸ್ ಮುಖಂಡ ಬಿ.ಕೆ.ಚಂದ್ರಶೇಖರ್ ಒತ್ತಾಯಿಸಿದರು.

ದೇಶದಲ್ಲಿ 3.8 ಕೋಟಿ ಮುಸ್ಲಿಂ ಸಮುದಾಯದ ಮಕ್ಕಳು ಇದ್ದಾರೆ. ಅವರಲ್ಲಿ ಬಹುತೇಕರು ಶಿಕ್ಷಣ ವಂಚಿತರಾಗಿದ್ದಾರೆ. ಅಂತಹ ಮಕ್ಕಳನ್ನು ಸುಶಿಕ್ಷಿತರಾಗಿಸುವ ಹೊಣೆ ಸರ್ಕಾರದ ಮೇಲಿದೆ. ಅದಕ್ಕಾಗಿ ಮದರಸಾಗಳ ಸುಧಾರಣೆ ಅನಿವಾರ್ಯ. ಅಲ್ಲಿ ಗಣಿತ, ವಿಜ್ಞಾನ, ಸ್ಥಳೀಯ ಭಾಷೆ ಕಲಿಕೆಗೂ ಅವಕಾಶ ಕಲ್ಪಿಸಲು, ಆಧುನೀಕರಣ ಕಾರ್ಯ ಕೈಗೊಳ್ಳಲು ಯಾವುದೇ ಆಕ್ಷೇಪವಿಲ್ಲ. ಆದರೆ, ಅಧಿಕಾರಿಗಳ ಮೂಲಕ ತಪಾಸಣೆ ಮಾಡುವ, ಬೆದರಿಸುವ ಕಾರ್ಯ ಬೇಡ ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದರು.



ಬಿಜೆಪಿ ಹಾಗೂ ಸರ್ಕಾರದ ಸಚಿವರೇ ಮದರಸಾಗಳ ಬಗ್ಗೆ ತಪ್ಪು ಹೇಳಿಕೆ ನೀಡುತ್ತಿದ್ದಾರೆ. ದೇಶದಲ್ಲಿ 40 ಸಾವಿರಕ್ಕೂ ಹೆಚ್ಚು ಮದರಸಾಗಳಿದ್ದು, ಅವುಗಳ ಉನ್ನತೀಕರಣಕ್ಕೆ ಶ್ರಮಿಸಬೇಕು ಎಂದು ಒತ್ತಾಯಿಸಿದರು. ರಾಹುಲ್ ಗಾಂಧಿ ನೇತೃತ್ವದಲ್ಲಿ ಕಾಂಗ್ರೆಸ್ ಹಮ್ಮಿಕೊಂಡಿರುವ ಭಾರತ್ ಜೋಡೊ ಯಾತ್ರೆ ಕುರಿತು ಬಿಜೆಪಿ ತಲೆಬುಡವಿಲ್ಲದ ಟೀಕೆ ಮಾಡುತ್ತಿದೆ. ರಾಹುಲ್ ಕುರಿತು ಅವರಿಗೆ ಭಯ ಶುರುವಾಗಿದೆ. ರಾಹುಲ್ ಸಣ್ಣಸಣ್ಣ ಗುಂಪುಗಳ ಜತೆ ಚರ್ಚಿಸುತ್ತಿರುವುದು ಸಾಕಷ್ಟು ಪ್ರಶಂಸೆಗೆ ಒಳಗಾಗಿದೆ. ಬೆಲೆ ಏರಿಕೆ, ಅಸಹಿಷ್ಣುತೆಯಿಂದ ಬಸವಳಿದ ಜನರು ಕಾಂಗ್ರೆಸ್‌ನತ್ತ ವಾಲುತ್ತಿದ್ದಾರೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಚೀನಾ ವಿರುದ್ಧ ವಿಶ್ವಸಂಸ್ಥೆಯಲ್ಲಿ ಮತದಾನ: ಭಾರತ ಗೈರು

ವಿಶ್ವಸಂಸ್ಥೆ (ಪಿಟಿಐ): ಚೀನಾದ ಕ್ಸಿನ್‌ಜಿಯಾಂಗ್ ಪ್ರಾಂತ್ಯದಲ್ಲಿ ಮಾನವ ಹಕ್ಕು ಉಲ್ಲಂಘನೆ ಪರಿಸ್ಥಿತಿಯ ಕುರಿತು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯಲ್ಲಿ ಚರ್ಚಿಸಬೇಕೆಂಬ ಕರಡು ನಿರ್ಣಯದ ಮೇಲಿನ ಮತದಾನದಿಂದ ಭಾರತ ದೂರ ಉಳಿದಿದೆ.

ಚೀನಾದ ವಾಯವ್ಯ ಭಾಗದಲ್ಲಿರುವ ಈ ಪ್ರಾಂತ್ಯದಲ್ಲಿ 10 ಲಕ್ಷಕ್ಕೂ ಅಧಿಕ ಉಯಿಗರ್ ಮುಸ್ಲಿಮರು ನೆಲೆಸಿದ್ದು, ಮರು ಶಿಕ್ಷಣ ಶಿಬಿರದ ಹೆಸರಲ್ಲಿ ಅಪಾರ ಸಂಖ್ಯೆಯಲ್ಲಿ ಇವರನ್ನು ಬಂಧನದಲ್ಲಿ ಇಡಲಾಗಿದೆ. ಈ ಬಗ್ಗೆ ಮಾನವ ಹಕ್ಕುಗಳ ಗುಂಪುಗಳು ಎಚ್ಚರಿಕೆಯನ್ನು ನೀಡಿದ್ದು, ಅದರ ಬಗ್ಗೆ ಚರ್ಚಿಸಬೇಕೆಂಬ ನಿರ್ಣಯವನ್ನು ಗುರುವಾರ ಮತಕ್ಕೆ ಹಾಕಲಾಗಿತ್ತು. ಭಾರತ ಈ ಮತದಾನಕ್ಕೆ ಗೈರಾಯಿತು.

47 ಸದಸ್ಯ ಬಲದ ಮಂಡಳಿಯಲ್ಲಿ 17 ರಾಷ್ಟ್ರಗಳು ನಿರ್ಣಯದ ಪರವಾಗಿ, ಚೀನಾ ಸಹಿತ 19 ರಾಷ್ಟ್ರಗಳು ನಿರ್ಣಯದ ವಿರುದ್ಧವಾಗಿ ಮತ ಚಲಾಯಿಸಿದವು. ಭಾರತ, ಬ್ರೆಜಿಲ್, ಮೆಕ್ಸಿಕೊ, ಉಕ್ರೇನ್ ಸಹಿತ 11 ರಾಷ್ಟ್ರಗಳು ಮತದಾನದಿಂದ ದೂರ ಉಳಿದವು. ಹೀಗಾಗಿ ಕರಡು ನಿರ್ಣಯವನ್ನು ತಿರಸ್ಕರಿಸಲಾಯಿತು.

‘ಜನಸಂಖ್ಯೆ ನಿಯಂತ್ರಣ ಸಾರ್ವಜನಿಕ ಚರ್ಚೆ ಆಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿ ಎಲ್ಲ ಧರ್ಮೀಯರಿಗೂ ಅನ್ವಯ ಆಗುವಂತೆ ಜನಸಂಖ್ಯೆ ನಿಯಂತ್ರಣ ಆಗಬೇಕು ಎಂದು ಆರ್‌ಎಸ್‌ಎಸ್ ಸರಸಂಘ ಚಾಲಕ ಮೋಹನ್ ಭಾಗವತ್ ಅವರು ನೀಡಿರುವ ಸಲಹೆ ಸಾರ್ವಜನಿಕವಾಗಿ ಚರ್ಚೆ ಆಗಬೇಕು. ಆ ಬಳಿಕ ಎಲ್ಲ ರಾಜ್ಯಗಳ ವಿಧಾನಸಭೆಗಳು ಮತ್ತು ಸಂಸತ್ತಿನಲ್ಲೂ ಚರ್ಚೆ ನಡೆಸಿ ಕಾನೂನು ಜಾರಿ ಮಾಡಬೇಕು ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿದ್ದಾರೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕೋಳಿ ಕೇಳಿ ಮಸಾಲೆ ಅರೆಯುವುದಿಲ್ಲ ಎಂಬುದು ಹಳ್ಳಿ ಕಡೆಯಲ್ಲಿ ಚಾಲ್ತಿಯಲ್ಲಿರುವ ಮಾತು. ಆದರೆ, ನಾವು ಆ ರೀತಿ ವರ್ತಿಸುವುದಿಲ್ಲ. ಈ ವಿಷಯದಲ್ಲಿ ವಿಸ್ತೃತ ಚರ್ಚೆ ಆಗಬೇಕು ಎಂದು ಬಯಸುತ್ತೇವೆ. ಇಂದಿರಾಗಾಂಧಿ ಕಾಲದಲ್ಲಿ ಸಂಜಯ್‌ಗಾಂಧಿ ಬ್ರಿಗೇಡ್‌ನವರು ‘ಬಾರಿಸು ಕನ್ನಡ ಡಿಂಡಿಮವಾ’, ‘ಬಾರಿಸು ಕನ್ನಡ ಡಿಂಡಿಮವಾ’, ಸಂತಾನಶಕ್ತಿ ಹರಣ ಚಿಕಿತ್ಸೆ ಹೆಸರಿನಲ್ಲಿ ಸಿಕ್ಕ- ಸಿಕ್ಕವರನ್ನು ಕರೆದುಕೊಂಡು ಹೋಗಿ ಕಟ್ ಮಾಡು ತ್ತಿದ್ದರು. ನಾವು ಹಾಗೇ ಮಾಡುವುದಿಲ್ಲ’ ಎಂದರು.

‘ಜಾತೀಯತೆ ಮುಕ್ತ, ಅಸ್ಪೃಶ್ಯತೆ ಮುಕ್ತ ಹಿಂದೂ ಸಮಾಜ ನಿರ್ಮಾಣವಾಗಬೇಕೆಂಬುದು ಭಾಗವತ್ ಅವರ ಸದುದ್ದೇಶ. ಹಿಂದೂ ಸಮಾಜದಲ್ಲಿ ಯಾವುದೇ ರೀತಿಯ ತಾರತಮ್ಯ ಇರಬಾರದು ಎಂದು ಅವರು ಹೇಳಿದ್ದಾರೆ. ಹಲವಾರು ವರ್ಷಗಳಿಂದ ಸಂಘವೂ ಇದೇ ಸಂಸ್ಕಾರವನ್ನು ನಮಗೆ ನೀಡಿದೆ’ ಎಂದು ರವಿ ಹೇಳಿದರು.

ಆರ್‌ಎಸ್‌ಎಸ್ ಸರ ಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ಅಸಮಾನತೆ, ನಿರುದ್ಯೋಗದ ಕುರಿತು ಸುದುದ್ದೇಶದಿಂದ ಕೆಲವು ಮಾತುಗಳನ್ನು ಹೇಳಿದ್ದಾರೆ. ಅದನ್ನು ಪಕ್ಷ ಸ್ವೀಕಾರ ಮಾಡುತ್ತದೆ ಎಂದರು.

ಕೆಂಪೇಗೌಡರ ಪ್ರತಿಮೆ ಅನಾವರಣಕ್ಕೆ ಪ್ರಧಾನಿ

ಬೆಂಗಳೂರು: ನಾಡಪ್ರಭು ಕೆಂಪೇಗೌಡರ 108 ಅಡಿ ಕಂಚಿನ ಪ್ರತಿಮೆ ಹಾಗೂ ಕೆಂಪೇಗೌಡ ಥೀಮ್ ಪಾರ್ಕ್ ಉದ್ಘಾಟನೆಗೆ ಪ್ರಧಾನಮಂತ್ರಿ ನರೇಂದ್ರ ಆಗಮಿಸುತ್ತಿದ್ದು, ಸೂಕ್ತ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದರು.

ನಗರದಲ್ಲಿ ಗುರುವಾರ ನಡೆದ ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣ ಅಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ಅವರು ಮಾತನಾಡಿದರು.

'ನಾಡಿನ ವಿವಿಧ ಸ್ಥಳಗಳಿಂದ ಪವಿತ್ರ ಮೃತ್ತಿಕೆ ಹಾಗೂ ಜಲಸಂಗ್ರಹಿಸುವ ಅಭಿಯಾನದಡಿ ತಾಲ್ಲೂಕು ಕೇಂದ್ರಗಳಿಗೆ ಮಣ್ಣನ್ನು ತಲುಪಿಸಿ, ನಂತರ ಜಿಲ್ಲಾ ಕೇಂದ್ರಕ್ಕೆ ತರಿಸಬೇಕು. ಕೆಂಪೇಗೌಡರ ಜೀವನಚರಿತ್ರೆ ಬಿಂಬಿಸುವ ವಿಡಿಯೊ ಮ್ಯಾಪಿಂಗ್ ಹಾಗೂ ನೃತ್ಯ ರೂಪಕ ಸಿದ್ಧಪಡಿಸಲು ತಯಾರಿ ಮಾಡಿಕೊಳ್ಳಿ' ಎಂದು ನಿರ್ದೇಶನ ನೀಡಿದರು.

ಕೆಂಪೇಗೌಡರ ವೀರಸಮಾಧಿ ಅಭಿವೃದ್ಧಿಗೆ ಭೂಸ್ವಾಧೀನ ಪ್ರಕ್ರಿಯೆ, 46 ತಾಣಗಳಲ್ಲಿ ನಾಮಫಲಕಗಳ ಅಳವಡಿಕೆ, ಮಾಗಡಿ ಕೋಟೆ ಸಂರಕ್ಷಣೆ ಕಾರ್ಯಗಳನ್ನು ಚುರುಕುಗೊಳಿಸುವಂತೆ ಸೂಚಿಸಿದರು.

ಸಭೆಯಲ್ಲಿ ಸಚಿವರಾದ ಡಾ.ಸಿ.ಎನ್. ಅಶ್ವತ್ಥನಾರಾಯಣ, ಆರ್.ಅಶೋಕ, ಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್, ಸ್ಟಾರ್ಟ್ ಅಪ್ ವಿಷನ್ ಗ್ರೂಪ್ ಅಧ್ಯಕ್ಷ ಪ್ರಶಾಂತ್ ಪ್ರಕಾಶ್ ಉಪಸ್ಥಿತರಿದ್ದರು.

ತರೂರ್ ಪ್ರಣಾಳಿಕೆ ಬಿಡುಗಡೆ: ಸ್ಪರ್ಧೆಯಿಂದ ಹಿಂದೆ ಸರಿಯಲ್ಲ

ಚೆನ್ನೈ (ಪಿಟಿಐ): ಕಾಂಗ್ರೆಸ್ ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಶಶಿ ತರೂರ್ ಅವರು ತಮ್ಮ ಪ್ರಣಾಳಿಕೆಯನ್ನು ಗುರುವಾರ ಇಲ್ಲಿ ಬಿಡುಗಡೆ ಮಾಡಿದ್ದು, ಪಕ್ಷದ ರಾಜ್ಯ ಅಧ್ಯಕ್ಷರ ಅಧಿಕಾರ ಅವಧಿಯನ್ನು ಸೀಮಿತಗೊಳಿಸಿ, ಸಕ್ರಿಯ ಕಾರ್ಯಕರ್ತರಿಗೆ ಹೆಚ್ಚಿನ ಅವಕಾಶ ಕಲ್ಪಿಸಿಕೊಡುವ ಭರವಸೆ ನೀಡಿದ್ದಾರೆ.

‘ಪಕ್ಷದ ಕಾರ್ಯವಿಧಾನದಲ್ಲಿ ಸುಧಾರಣೆ ತರಬೇಕಾಗಿದೆ. ಯುವ ಕಾರ್ಯಕರ್ತರನ್ನು ಪಕ್ಷಕ್ಕೆ ಕರೆತರಬೇಕಿದೆ ಮತ್ತು ಅವರಿಗೆ ನಿಜವಾದ ಅಧಿಕಾರ ನೀಡಬೇಕಾಗಿದೆ. ಇದೇ ವೇಳೆ ಕಠಿಣ ಶ್ರಮ ವಹಿಸುವವರಿಗೆ ಮತ್ತು ದೀರ್ಘಾವಧಿಯಿಂದ ಕಾರ್ಯಕರ್ತರಾಗಿ ಇರುವವರಿಗೆ ಗೌರವ ಸಲ್ಲಿಸಬೇಕಾಗಿದೆ’ ಎಂದು ಅವರು ಇಲ್ಲಿನ ಪಕ್ಷದ ಕಚೇರಿಯಲ್ಲಿ ಸುದ್ದಿಗಾರರಿಗೆ ತಿಳಿಸಿದರು.

2024ರ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿಯನ್ನು ಎದುರಿಸಲು ಕಾಂಗ್ರೆಸ್ ಪಕ್ಷವನ್ನು ಪುನರ್ ಸಂಘಟಿಸುವ ಮತ್ತು ಅದಕ್ಕೆ ಶಕ್ತಿ ತುಂಬುವ ಅಗತ್ಯ ಇದೆ ಎಂದು ಅವರು ಹೇಳಿದರು.

ತಮಗೆ ಹೆಚ್ಚಿನ ಬೆಂಬಲ ಇಲ್ಲದ ಕಾರಣ ಸ್ಪರ್ಧಾ ಕಣದಿಂದ ಹೊರಗುಳಿಯಲಿದ್ದಾರೆ ಎಂಬ ವದಂತಿಗಳನ್ನು ತಳ್ಳಿಹಾಕಿದ ಅವರು, ವಿವಿಧ ಕಡೆಗಳಿಂದ ತಮಗೆ ಬೆಂಬಲ ದೊರಕುತ್ತಿದೆ, ಮಲ್ಲಿಕಾರ್ಜುನ ಖರ್ಗೆ ಅವರ ಬಗ್ಗೆ ಅಪಾರ ಗೌರವ ಇದ್ದು, ತಮ್ಮದೇನಿದ್ದರೂ ಸ್ನೇಹಮಯ ಹೋರಾಟ, ಇದೇನಿದ್ದರೂ ಬಿಜೆಪಿಯನ್ನು ಎದುರಿಸಲು ವಿವಿಧ ಆಯಾಮಗಳನ್ನು ಒಳಗೊಂಡ ಸ್ಪರ್ಧೆಯಷ್ಟೇ ಎಂದು ಅವರು ನುಡಿದರು.

ಒಟ್ಟು ಹತ್ತು ಅಂಶಗಳು ಇರುವ ಪ್ರಣಾಳಿಕೆಯಲ್ಲಿ ಸಂಸದೀಯ ಮಂಡಳಿಯನ್ನು ಪುನರ್ ರಚಿಸುವ ಭರವಸೆ ನೀಡಿದ್ದಾರೆ. ಸಾಮಾಜಿಕ ಕಾರ್ಯಗಳಿಗೆ ಪಕ್ಷವು ಮರಳಬೇಕು ಎಂಬುದನ್ನು ಒತ್ತಿ ಹೇಳಿದ್ದಾರೆ.

ಚಿತ್ರಾವಳಿ



ಗಾಂಧಿ ಜಯಂತಿ ಅಂಗವಾಗಿ ಬಿಬಿಎಂಪಿ ಸಹಯೋಗದಲ್ಲಿ ‘ಪ್ರೆಸ್ಟೀಜ್ ಮಿಸ್ಟಿ ವಾಟರ್ಸ್’ ಅಪಾರ್ಟ್‌ಮೆಂಟ್ ನಿವಾಸಿಗಳು ‘ಲೆಟ್ಸ್ ಬಿ ದಿ ಚೇಂಜ್’ ಮತ್ತು ಸ್ವಚ್ಛತಾ ಅಭಿಯಾನದ ಅಡಿಯಲ್ಲಿ ‘ಕ್ಲೀನ್‌ಥಾನ್’ ಕಾರ್ಯಕ್ರಮ ಆಯೋಜಿಸಿದ್ದರು.



ವಿಶ್ವ ಹೃದಯ ದಿನದ ಅಂಗವಾಗಿ ಸಾಗರ್ ಆಸ್ಪತ್ರೆಯ ವೈದ್ಯರು ನಗರದಲ್ಲಿ ಈಚೆಗೆ ಬೈಕ್‌ಥಾನ್ ನಡೆಸಿ ಹೃದಯ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಿದರು.



ಚಿಕ್ಕಬಳ್ಳಾಪುರದ 48 ವರ್ಷದ ಪುರುಷನ ಹೃದಯವನ್ನು ಚಾಮರಾಜನಗರದ 34 ವರ್ಷದ ಮಹಿಳೆಗೆ ನಗರದ ರಾಮಯ್ಯ ನಾರಾಯಣ ಹಾರ್ಟ್ ಸೆಂಟರ್‌ನಲ್ಲಿ ಕಸಿ ಮಾಡಲಾಯಿತು. ಅದಕ್ಕಾಗಿ ವೈದ್ಯಕೀಯ ಸಿಬ್ಬಂದಿ ದಾನಿಯ ಹೃದಯವನ್ನು ಸಾಗಿಸಿದ ಸಂದರ್ಭ.

ಹೊಸಕೆರೆಹಳ್ಳಿ ಕೆರೆ ಬಳಿ ತ್ಯಾಜ್ಯ ನಿರ್ವಹಣೆ ಅರಿವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸಕೆರೆಹಳ್ಳಿ ಕೆರೆಯ ಸುತ್ತಮುತ್ತ ತ್ಯಾಜ್ಯ ನಿರ್ವಹಣೆ ಕುರಿತು ಸಿಟಿಜನ್ ಎಂಗೇಜ್‌ಮೆಂಟ್ ಪ್ಲಾಟ್ ಫಾರ್ಮ್ ಮೂಲಕ ನಾಗರಿಕರಲ್ಲಿ ಅರಿವು ಮೂಡಿಸುವುದು ಮತ್ತು ಕಸ ಸಂಗ್ರ ಹಣೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

ನಾಗರಿಕರು ತಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಸ ಹಾಕುವವರ ವಿರುದ್ಧ ಕ್ರಮ ಕೈಗೊಳ್ಳಲು ಹಾಗೂ ತ್ಯಾಜ್ಯ ನಿರ್ವಹಣೆಯಲ್ಲಿ ಬಿಬಿಎಂಪಿಗೆ ಸಹಾಯ ಮಾಡಲು ಜಾಗೃತಿ ಮೂಡಿಸಲಾಯಿತು.

ಬಿ.ಎಂ. ಶ್ರೀನಿವಾಸಯ್ಯ ತಾಂತ್ರಿಕ ಮಹಾವಿದ್ಯಾಲಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

‘ಹೊಸಕೆರೆಹಳ್ಳಿ ಕೆರೆಯನ್ನು ಸ್ವಚ್ಛವಾಗಿಡಲು ಮತ್ತು ಕಸ ಸೇರದಂತೆ ಮಾಡುವ ಕಾರ್ಯಕ್ರಮದಲ್ಲಿ ಭಾಗಿಯಾಗಲು 29 ಜನರು ‘ನಮ್ಮ ಕ್ಲೀನ್ ಬೆಂಗಳೂರು’ ವೆಬ್‌ಸೈಟ್‌ನಲ್ಲಿ (ಸಿಟಿಜನ್ ಎಂಗೇಜ್ಮೆಂಟ್ ಪ್ಲಾಟ್‌ಫಾರ್ಮ್) ನೋಂದಾಯಿಸಿಕೊಂಡಿದ್ದರು. ಅವರಿಗೆ ಎಲ್ಲ ಮಾಹಿತಿ ನೀಡಲಾಗಿದೆ. ನಗರದಲ್ಲಿ ಕಸ ಪ್ರಮುಖ ಸಮಸ್ಯೆಯಾಗಿದೆ. ಇತ್ತೀಚಿನ ಅಧ್ಯಯನದ ಪ್ರಕಾರ ನಗರದಲ್ಲಿ ಕಸ ಸುಡುವ ಪ್ರಕ್ರಿಯೆಯಿಂದ ಮಾಲಿನ್ಯಕ್ಕೆ ಶೇ 16.1ರಷ್ಟು ಕಾರಕಗಳು ಸೇರುತ್ತಿವೆ. ಭವಿಷ್ಯದಲ್ಲಿ ಸುರಕ್ಷಿತ ಮತ್ತು ಸ್ವಚ್ಛ ನಗರಗಳನ್ನು ರಚಿಸಲು ಬಿಬಿಎಂಪಿಯೊಂದಿಗೆ ಕೈಜೋಡಿಸುವ ನಾಗರಿಕರಿಗಾಗಿ ಕಾರ್ಯಕ್ರಮಗಳನ್ನು ರೂಪಿಸಿ, ಅರಿವು ಮೂಡಿಸಲಾಗುತ್ತದೆ’ ಎಂದು jhatkaa.orgಯ ಚಿಕು ಅಗರ್‌ವಾಲ್ ಹೇಳಿದರು.



ಹೊಸಕೆರೆಹಳ್ಳಿ ಕೆರೆ ಸುತ್ತಮುತ್ತ ತ್ಯಾಜ್ಯ ನಿರ್ವಹಣೆ ಕುರಿತಂತೆ ಸಿಟಿಜನ್ ಎಂಗೇಜ್‌ಮೆಂಟ್ ಪ್ಲಾಟ್‌ಫಾರ್ಮ್ ಮೂಲಕ ಬಿಬಿಎಂಪಿ ಪೌರಕಾರ್ಮಿಕರೊಂದಿಗೆ ನಾಗರಿಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಆಯೋಜಿಸಲಾಗಿತ್ತು

‘ಕ್ಲೀನ್ ಬೆಂಗಳೂರು ಮೈಕ್ರೋಸೈಟ್ ಮೂಲಕ ಯಾವುದೇ ನಾಗರಿಕರು ನಗರದಾದ್ಯಂತ ಬ್ಲಾಕ್‌ಸ್ಪಾಟ್‌ಗಳು ಮತ್ತು ಕಸದ ತೊಟ್ಟಿಗಳನ್ನು ಕುರಿತು ವರದಿ ಮಾಡಬಹುದು ಹಾಗೂ ಪರಿಹಾರ ಕಂಡುಕೊಳ್ಳಬಹುದಾಗಿದೆ’ ಎಂದು ಸಿಟಿಜನ್ಸ್ ಫಾರ್ ಹೊಸಕೆರೆಹಳ್ಳಿ ಲೇಕ್‌ನ ರಚನಾ ರವಿಕಿರಣ್ ಹೇಳಿದರು.

‘ಕ್ಲೀನ್ ಬೆಂಗಳೂರು ಸೈಟ್‌ನೊಂದಿಗೆ ಕಾರ್ಯಾಗಾರಗಳ ಮೂಲಕ ನಗರದಲ್ಲಿ ಉತ್ತಮ ತ್ಯಾಜ್ಯ ನಿರ್ವಹಣೆಗೆ ಕೊಡುಗೆ ನೀಡಲು ಸರ್ಕಾರಿ ಸಂಸ್ಥೆಗಳೊಂದಿಗೆ ಕೆಲಸ ಮಾಡುವ ವ್ಯಕ್ತಿಗಳ ಬಲವಾದ ಜಾಲ ನಿರ್ಮಿಸುವ ಗುರಿಯನ್ನು ನಾವು ಹೊಂದಿದ್ದೇವೆ’ ಎಂದು jhatkaa.orgಯ ತಿಳಿಸಿದರು.

11 ವರ್ಷದ ಹಿಂದೆ ಬಿಡಿಎಯಿಂದ ಹಂಚಿಕೆ; ಬಹುತೇಕ ಒಂದು ಎಕರೆ ಪ್ರದೇಶ

ಬಿಬಿಎಂಪಿ ಮರೆತ ಆಸ್ಪತ್ರೆ ನಿವೇಶನ

• ಆರ್. ಮಂಜುನಾಥ್

ಬೆಂಗಳೂರು: ನಗರದಲ್ಲಿ ಬೃಹತ್ ಆಸ್ಪತ್ರೆ ನಿರ್ಮಿಸಲು ಸ್ಥಳದ ಕೊರತೆ ಇದೆ ಎಂದು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಹೇಳುತ್ತಿರುತ್ತಾರೆ. ಆದರೆ, ಕೈಯಲ್ಲಿರುವ ಸುಮಾರು ಒಂದು ಎಕರೆ ನಿವೇಶನದಲ್ಲಿ ಆಸ್ಪತ್ರೆ ನಿರ್ಮಿಸದೆ ಬಿಬಿಎಂಪಿ ಕೈಕಟ್ಟಿ ಕುಳಿತಿದೆ.

ಆಸ್ಪತ್ರೆ ನಿರ್ಮಿಸುವ ಉದ್ದೇಶಕ್ಕಾಗಿ ಬಿಬಿಎಂಪಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಿಎ ನಿವೇಶನವನ್ನು ಹಂಚಿಕೆ ಮಾಡಿ 11 ವರ್ಷ ಕಳೆದಿದೆ. ಆದರೂ ಯಾವ ರೀತಿಯ ಅಭಿವೃದ್ಧಿ ಕಾರ್ಯವನ್ನೂ ಬಿಬಿಎಂಪಿ ಕೈಗೊಂಡಿಲ್ಲ. ಈ ನಿವೇಶನವನ್ನು ಬೇರೆಯವರು ಪಡೆದುಕೊಳ್ಳಲು ಸಾಕಷ್ಟು ಪ್ರಯತ್ನ ಪಡುತ್ತಿದ್ದಾರೆ. ಆದರೆ ಈವರೆಗೆ ಗಿಡ–ಬಳ್ಳಿ ಬೆಳೆದುಕೊಂಡು ನಿವೇಶನ ಹಾಗೆಯೇ ಉಳಿದುಕೊಂಡಿದೆ.

ಬಿಡಿಎ ಸರ್ ಎಂ. ವಿಶ್ವೇಶ್ವರಯ್ಯ 2ನೇ ಬ್ಲಾಕ್ ಬಡಾವಣೆಯಲ್ಲಿ ನಾಗರಿಕ ಸೌಲಭ್ಯ ನಿವೇಶನವನ್ನು (ಸಿಎ) ಬಿಬಿಎಂಪಿಗೆ ಮಂಜೂರು ಮಾಡಿ 2011ರ ಜ.1ರಂದು ಹಂಚಿಕೆ ಪತ್ರ ನೀಡಿದೆ. ಸಂಖ್ಯೆ 2ರ ನಿವೇಶನದ ಅಳತೆ 3,432 ಚದರ ಮೀಟರ್. ಅಂದರೆ 36,942 ಚದರ ಅಡಿ. ಪ್ರತಿ ಚದರ ಮೀಟರ್‌ಗೆ ₹5 ಸಾವಿರದಂತೆ ₹1.71 ಕೋಟಿ ಗುತ್ತಿಗೆ ಹಣ ನೀಡಬೇಕು. ವಾರ್ಷಿಕವಾಗಿ ₹31.11 ಲಕ್ಷಗಳನ್ನು ಪಾವತಿಸಬಹುದು ಎಂದು ಹಂಚಿಕೆ ಪತ್ರದಲ್ಲಿ ವಿವರಿಸಲಾಗಿದೆ. ಬಿಡಿಎ ಸಿಎ ನಿವೇಶನ ಹಂಚಿಕೆ ಸಮಿತಿ ಸಭೆಯಲ್ಲಿ 2010ರ ಫೆ.16ರಂದು ಆದೇಶವಾಗಿದೆ. ಹಂಚಿಕೆ ಪತ್ರವನ್ನು 2011ರ ಜನವರಿಯಲ್ಲಿ ನೀಡಲಾಗಿದೆ. ಇದಾದ ನಂತರ ನಿವೇಶನದ ಕುರಿತು ನಡೆದಿರುವ ಪ್ರಕ್ರಿಯೆಯ ಮಾಹಿತಿ ಬಿಬಿಎಂಪಿಯಲ್ಲಿ ಲಭ್ಯ ಇಲ್ಲ.


ಪ್ರಜಾವಾಣಿ ವಿಶೇಷ

‘ಬೆಂಗಳೂರಿನಲ್ಲಿ ಅತ್ಯಾಧುನಿಕ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಕೊರತೆ ಇದೆ. ದೊಡ್ಡ ಆಸ್ಪತ್ರೆ ಬೇಕು ಎಂದಾಗಲೆಲ್ಲ ಇದನ್ನು ನಿರ್ಮಿಸಲು ಸ್ಥಳ ಇಲ್ಲ ಎಂದೇ ಹೇಳಲಾಗುತ್ತದೆ. ಆದರೆ, ಸುಮಾರು ಒಂದು ಎಕರೆ ಭೂಮಿ ಲಭ್ಯವಿದ್ದರೂ ಬಿಬಿಎಂಪಿ ಇದನ್ನು ಮರೆತುಹೋಗಿದೆ. ಇದಕ್ಕೆ ಅಧಿಕಾರಿಗಳ ಜಾಣ ಮರೆವು ಹಾಗೂ ಖಾಸಗಿ ವ್ಯಕ್ತಿಗಳ ಭೂಕಬಳಿಕೆ ದಾಹವೂ ಕಾರಣ’ ಎಂದು ಜಯಪ್ರಕಾಶ್ ನಾರಾಯಣ್ ವಿಚಾರ ವೇದಿಕೆಯ ಶಿವಕುಮಾರ್ ದೂರಿದರು.

‘ಎಸ್‌ಎಂವಿ 2ನೇ ಬ್ಲಾಕ್‌ನಲ್ಲಿ ಮಂಜೂರಾಗಿರುವ ಸಿಎ ನಿವೇಶನದಲ್ಲಿ ಬಿಬಿಎಂಪಿ ಈ ವೇಳೆಗಾಗಲೇ ಬೃಹತ್ ಆಸ್ಪತ್ರೆಯನ್ನು ನಿರ್ಮಾಣ ಮಾಡಬಹುದಿತ್ತು. ಕೆಂಗೇರಿ, ಮಾಗಡಿ ರಸ್ತೆ, ಮೈಸೂರು ರಸ್ತೆ, ಹೊರ ವರ್ತುಲ ರಸ್ತೆಗಳ ಸುತ್ತಮುತ್ತ ಅತ್ಯಾಧುನಿಕ ವ್ಯವಸ್ಥೆಯುಳ್ಳ ಹಾಗೂ ಹೆಚ್ಚಿನ ಹಾಸಿಗೆಗಳ ಆಸ್ಪತ್ರೆ ಇಲ್ಲ. ಈ ಕೊರತೆಯನ್ನು ಬಿಬಿಎಂಪಿ ನೀಗಿಸಬಹುದಿತ್ತು. ಖಾಸಗಿ ಆಸ್ಪತ್ರೆಗಳ ಒತ್ತಡಗಳಿಗೆ ಮಣಿಯದೆ ಈಗಲಾದರೂ ಅಧಿಕಾರಿಗಳು ಎಚ್ಚೆತ್ತುಕೊಂಡು, ಈ ಜಾಗದಲ್ಲಿ ಎಲ್ಲ ರೀತಿಯ ಚಿಕಿತ್ಸೆಯನ್ನು ನೀಡುವ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನು ನಿರ್ಮಾಣ ಮಾಡಬೇಕು’ ಎಂದು ಆಗ್ರಹಿಸಿದರು.



ಬಿಡಿಎ ಸರ್ ಎಂ. ವಿಶ್ವೇಶ್ವರಯ್ಯ 2ನೇ ಬ್ಲಾಕ್ ಬಡಾವಣೆಯಲ್ಲಿ ಬಿಬಿಎಂಪಿಗೆ ಹಂಚಿಕೆ ಮಾಡಿರುವ ನಾಗರಿಕ ಸೌಲಭ್ಯ ನಿವೇಶನ



ಬಿಡಿಎ ಸಿಎ ನಿವೇಶನದ ಹಂಚಿಕೆ ಪತ್ರ

ಪರಿಶೀಲಿಸಿ, ಕ್ರಮ...

‘11 ವರ್ಷಗಳ ಹಿಂದೆ ಬಿಡಿಎಯಿಂದ ಹಂಚಿಕೆಯಾಗಿರುವ ಸಿಎ ನಿವೇಶನ ಇದು. ಇದರ ಬಗ್ಗೆ ಮಾಹಿತಿ ಹಾಗೂ ಈಗಿನ ಸ್ಥಿತಿ ಬಗ್ಗೆ ಪರಿಶೀಲಿಸುತ್ತೇವೆ. ದಾಖಲೆಗಳನ್ನು ಹುಡುಕಿಸಿ, ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಇಷ್ಟೊಂದು ದೊಡ್ಡ ನಿವೇಶನ ಇದ್ದರೆ ಬಿಬಿಎಂಪಿಯಿಂದ ದೊಡ್ಡ ಆಸ್ಪತ್ರೆಯನ್ನು ನಿರ್ಮಿಸಿ ಜನರಿಗೆ ಚಿಕಿತ್ಸೆಯನ್ನು ಒದಗಿಸಬಹುದು. ಶೀಘ್ರ ಕ್ರಮ ಕೈಗೊಳ್ಳುತ್ತೇವೆ’ ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಡಾ. ತ್ರಿಲೋಕ್ ಚಂದ್ರ ತಿಳಿಸಿದರು.

ಕಾಂತಾವರ ಕನ್ನಡ ಸಂಘದ ದತ್ತಿ ನಿಧಿ ಪ್ರಶಸ್ತಿ ಘೋಷಣೆ


ಪ್ರಜಾವಾಣಿ ವಾರ್ತೆ

ಉಡುಪಿ: ಕಾಂತಾವರ ಕನ್ನಡ ಸಂಘದ 2022ನೇ ಸಾಲಿನ ನಾಲ್ಕು ದತ್ತಿ ನಿಧಿ ಪ್ರಶಸ್ತಿಗಳನ್ನು ಘೋಷಣೆ ಮಾಡಲಾಗಿದೆ. ಸರಸ್ವತಿ ಬಲ್ಲಾಳ್ ಹಾಗೂ ಡಾ.ಸಿ.ಕೆ.ಬಲ್ಲಾಳ್ ದಂಪತಿ ಪ್ರತಿಷ್ಠಾನದಿಂದ ಕೊಡಮಾಡುವ ಕೆ.ಬಿ. ಜಿನರಾಜ ಹೆಗ್ಡೆ ಸ್ಮಾರಕ ಸಾಂಸ್ಕೃತಿಕ ಪ್ರಶಸ್ತಿಗೆ ಕೊಪ್ಪ ತಾಲ್ಲೂಕಿನ ಹರಿಹರಪುರದಲ್ಲಿರುವ ಪ್ರಬೋಧಿನಿ ಟ್ರಸ್ಟ್ ಆಯ್ಕೆಯಾಗಿದೆ.

ಪಾ.ವೆಂ.ಆಚಾರ್ಯ ಹೆಸರಿನಲ್ಲಿ ಪಾ.ವೆಂ.ಟ್ರಸ್ಟ್ ದತ್ತಿನಿಧಿಯಿಂದ ಕೊಡಮಾಡುವ ಪಾ.ವೆಂ.ಮಾಧ್ಯಮ ಪ್ರಶಸ್ತಿಗೆ ಪತ್ರಕರ್ತ ಎನ್. ಗುರುರಾಜ್, ಭಾಷಾ ತಜ್ಞ ಡಾ.ಯು.ಪಿ.ಉಪಾಧ್ಯಾಯ ಅವರ ಹೆಸರಿನಲ್ಲಿ ಕೊಡಮಾಡುವ ಮಹೋಪಾಧ್ಯಾಯ ಪ್ರಶಸ್ತಿಗೆ ಸಂಶೋಧಕಿ ಡಾ.ಎನ್.ವಾರಿಜಾ, ಸಾಹಿತಿ ಜಿ.ಎಂ. ಹೆಗಡೆ ಧತ್ತಿನಿಧಿಯ ಪ್ರಾಧ್ಯಾಪಕ ಸಂಶೋಧಕ ಪ್ರಶಸ್ತಿಗೆ ಭಾಷಾ ವಿದ್ವಾಂಸ ಪ್ರೊ. ಆರ್. ಶೇಷಶಾಸ್ತ್ರಿ ಅವರನ್ನು ಆಯ್ಕೆ ಮಾಡಲಾಗಿದೆ.



ಡಾ. ವಾರಿಜಾ



ಪ್ರೊ. ಶೇಷಶಾಸ್ತ್ರಿ



ಎನ್ ಗುರುರಾಜ್

ಪ್ರಶಸ್ತಿ ₹10,000 ನಗದು, ತಾಮ್ರಪತ್ರ ಒಳಗೊಂಡಿದೆ.

ನ.1ರಂದು ಕಾಂತಾವರ ಉತ್ಸವದಲ್ಲಿ ಪ್ರದಾನ ಮಾಡಲಾಗುವುದು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಸದಾನಂದ ನಾರಾವಿ ಅವರು ತಿಳಿಸಿದ್ದಾರೆ.



ಮಿಯಾ ಬೈ ತನಿಷ್ಕ್ ಬೆಂಗಳೂರು ನಗರದಲ್ಲಿ ದೀಪಾವಳಿ ಹಬ್ಬದ ಅಂಗವಾಗಿ 'ಮಿಯಾ ಬೈ ತನಿಷ್ಕ್' ಅವರ ನೂತನ ವಿನ್ಯಾಸದ 'ಫೆಸ್ಟಿವ್ ಎಡಿಟ್' ಆಭರಣಗಳನ್ನು ಗುರುವಾರ ರೂಪದರ್ಶಿಗಳು ಪ್ರದರ್ಶಿಸಿದರು -ಪ್ರಜಾವಾಣಿ ಚಿತ್ರ

‘ಹಲಾಲ್ ಆರ್ಥಿಕ ವ್ಯವಸ್ಥೆಯಿಂದ ಸುರಕ್ಷತೆಗೆ ಅಪಾಯ’

ಬೆಂಗಳೂರು: ‘ಹಲಾಲ್ ಆರ್ಥಿಕ ವ್ಯವಸ್ಥೆಯಿಂದ ಭಾರತೀಯ ಅರ್ಥ ವ್ಯವಸ್ಥೆಗೆ ಹಾಗೂ ದೇಶದ ಸುರಕ್ಷತೆಗೆ ಅಪಾಯ ಎದುರಾಗಿದೆ’ ಎಂದು ಹಿಂದೂ ಜನಜಾಗೃತಿ ಸಮಿತಿಯ ರಾಷ್ಟ್ರೀಯ ವಕ್ತಾರ ರಮೇಶ್ ಶಿಂದೆ ಅವರು ಆರೋಪಿಸಿದರು.

‘ಇಸ್ಲಾಮಿಕ್ ಆರ್ಥಿಕ ವ್ಯವಸ್ಥೆಯನ್ನು ವಿರೋಧಿಸಲು ರಾಜ್ಯದಾದ್ಯಂತ ಹಲಾಲ್ ವಿರೋಧಿ ಹೋರಾಟ ಸಮಿತಿಗಳನ್ನು ಸ್ಥಾಪನೆ ಮಾಡಲಾಗುವುದು’ ಎಂದು ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ‘ಹಲಾಲ್ ಪ್ರಮಾಣಪತ್ರ ಕೇವಲ ಮಾಂಸಕ್ಕಾಗಿ ಸೀಮಿತವಾಗಿಲ್ಲ. ಅದು ಖಾದ್ಯ ಪದಾರ್ಥಗಳು, ಸೌಂದರ್ಯ ವರ್ಧಕಗಳು, ಔಷಧಗಳು, ಆಸ್ಪತ್ರೆಗಳು, ಗೃಹನಿರ್ಮಾಣ ಸಂಸ್ಥೆಗಳು, ಮಾಲ್ ಹೀಗೆ ಎಲ್ಲಾ ಕಡೆಗಳಲ್ಲಿ ಅನ್ವಯವಾಗುತ್ತದೆ. ವ್ಯಾಪಾರಿಗಳಿಗೆ ಅವಶ್ಯಕತೆ ಇಲ್ಲದಿದ್ದರೂ ಪ್ರತಿಯೊಂದು ಉತ್ಪಾದನೆಗಾಗಿ ₹50 ಸಾವಿರ ಶುಲ್ಕವನ್ನು ಭರಿಸಿ ಹಲಾಲ್ ಪ್ರಮಾಣಪತ್ರ ಮತ್ತು ಲೋಗೋ ಖರೀದಿಸಬೇಕಾದ ಅನಿವಾರ್ಯ ಎದುರಾಗಿದೆ‘ ಎಂದರು.

‘ಕೇಂದ್ರ ಸರ್ಕಾರದ ‘ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ’ ಸಂಸ್ಥೆಯಿಂದ ಅಧಿಕೃತ ಪ್ರಮಾಣಪತ್ರ ವ್ಯವಸ್ಥೆ ಇದೆ. ಆದರೆ ಮುಸಲ್ಮಾನ್ ಸಂಸ್ಥೆಯಿಂದ ಈ ಪ್ರಮಾಣಪತ್ರಗಳನ್ನು ಏಕೆ ಮತ್ತು ಯಾವುದಕ್ಕೆ ಪಡೆದುಕೊಳ್ಳಬೇಕು‘ ಎಂದು ಪ್ರಶ್ನಿಸಿದರು.

ಥಾಯ್ಲೆಂಡ್: ಶಿಶು ವಿಹಾರ ಕೇಂದ್ರಕ್ಕೆ ನುಗ್ಗಿ ಗುಂಡಿನ ದಾಳಿ

24 ಮಕ್ಕಳು ಸೇರಿ 37 ಮಂದಿ ಹತ್ಯೆ

ಬ್ಯಾಂಕಾಕ್ (ಎಎಫ್‌ಪಿ/ರಾಯಿಟರ್ಸ್, ಎಪಿ): ಮಾಜಿ ಪೊಲೀಸನೊಬ್ಬ ಶಿಶು ವಿಹಾರಕ್ಕೆ ನುಗ್ಗಿ ಬಂದೂಕಿನಿಂದ ಗುಂಡಿನ ದಾಳಿ ನಡೆಸಿ 24 ಮಕ್ಕಳು ಸೇರಿದಂತೆ 37 ಮಂದಿಯನ್ನು ಹತ್ಯೆ ಮಾಡಿದ್ದಾನೆ.



ಪ್ಯಾನ್ಯಾ ಕ್ಯಾಮ್ರಾಬ್

ಕೃತ್ಯದ ನಂತರ, ಘಟನಾ ಸ್ಥಳದಿಂದ ಓಡಿ ಹೋಗಿ, ತನ್ನ ಪತ್ನಿ ಮತ್ತು ಮಗುವನ್ನೂ ಹತ್ಯೆ ಮಾಡಿದ್ದಾನೆ. ಬಳಿಕ ತಾನೂ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

‘ದೇಶದ ಈಶಾನ್ಯ ಭಾಗದ ನೊಂಗ್ ಬುವಾ ಲ್ಯಾಂಪು ಪಟ್ಟಣದಲ್ಲಿರುವ ಶಿಶು ವಿಹಾರ ಕೇಂದ್ರಕ್ಕೆ ಮಧ್ಯಾಹ್ನ 12.30ರ ಸುಮಾರಿಗೆ ನುಗ್ಗಿದ 34 ವರ್ಷದ, ಮಾಜಿ ಪೊಲೀಸ್ ಪ್ಯಾನ್ಯಾ ಕ್ಯಾಮ್ರಾಬ್, ಮಕ್ಕಳ ಮೇಲೆ ಮನಬಂದಂತೆ ಗುಂಡು ಹಾರಿಸಿ, ಚಾಕುವಿನಿಂದ ಇರಿದಿದ್ದಾನೆ. ಶಿಶು ವಿಹಾರದ ಸಿಬ್ಬಂದಿ ಮತ್ತು ಸಾರ್ವಜನಿಕರ ಮೇಲೂ ಗುಂಡು ಹಾರಿಸಿದ್ದಾನೆ’ ಎಂದು ಪೊಲೀಸ್ ಇಲಾಖೆ ವಕ್ತಾರ ಅರ್ಚಯೊನ್ ಕ್ರೇಥಾಂಗ್ ಮಾಹಿತಿ ನೀಡಿದ್ದಾರೆ.

ಡ್ರಗ್ಸ್ ವ್ಯಸನಿ: ‘ಪ್ಯಾನ್ಯಾ ಒಬ್ಬ ಡ್ರಗ್ ವ್ಯಸನಿಯಾಗಿದ್ದ. ಡ್ರಗ್ಸ್ ಬಳಕೆ ಸಂಬಂಧದ ಪ್ರಕರಣಕ್ಕೆ ಸಂಬಂಧಿಸಿ ಕಳೆದ ವರ್ಷ ಪ್ಯಾನ್ಯಾನನ್ನು ಕೆಲಸದಿಂದ ತೆಗೆದುಹಾಕಲಾಗಿತ್ತು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಈ ಪ್ರಕರಣಕ್ಕೆ ಸಂಬಂಧಿಸಿ ಗುರುವಾರ ನ್ಯಾಯಾಲಯಕ್ಕೆ ಪ್ಯಾನ್ಯಾ ಹಾಜರಾಗಿದ್ದ. ವಿಚಾರಣೆ ಮುಗಿಸಿ, ಆತ ನೇರವಾಗಿ ಶಿಶು ವಿಹಾರಕ್ಕೆ ನುಗ್ಗಿದ. ಶಿಶು ವಿಹಾರಕ್ಕೆ ಬರುವ ಮೊದಲೇ ಆತ ವ್ಯಗ್ರನಾಗಿದ್ದ. ಅಲ್ಲಿಗೆ ಬಂದು ತನ್ನ ಮಗುವನ್ನು ಹುಡುಕಿದ. ಆದರೆ, ಮಗು ಅಲ್ಲಿರಲಿಲ್ಲ. ಇದನ್ನು ತಿಳಿದ ಆತ ಅಲ್ಲಿದ್ದವರ ಮೇಲೆ ಯದ್ವಾತದ್ವಾ ಗುಂಡು ಹಾರಿಸಿದ’ ಎಂದೂ ತಿಳಿಸಿದ್ದಾರೆ.

> ಘಟನೆ ಬಗ್ಗೆ ತ್ವರಿತವಾಗಿ ತನಿಖೆ ನಡೆಸುವಂತೆ ಆದೇಶಿಸಲಾಗಿದೆ. ಮಕ್ಕಳನ್ನು ಕಳೆದುಕೊಂಡ, ಗಾಯಾಳುಗಳ ಕುಟುಂಬಗಳಿಗೆ ಸಂತಾಪಗಳು
> **ಪ್ರಯುತ್ ಚಾನ್ ಒ ಚಾ**
> ಥಾಯ್ಲೆಂಡ್ ಪ್ರಧಾನಿ




ಮಕ್ಕಳನ್ನು ಕಳೆದುಕೊಂಡ ಪೋಷಕರು ಶಿಶು ವಿಹಾರದ ಎದುರು ದುಃಖಿಸಿದರು

ಭಾರತ ಮೂಲದ ಅಪಹೃತರ ಶವ ಪತ್ತೆ

ಲಾಸ್ ಏಂಜಲೀಸ್ (ಪಿಟಿಐ): ‘ಅಪಹರಣಗೊಂಡಿದ್ದ ಭಾರತೀಯ ಮೂಲದ ನಾಲ್ವರ ಶವಗಳು ಹಣ್ಣಿನ ತೋಟದಲ್ಲಿ ಬುಧವಾರ ಸಂಜೆ ಪತ್ತೆಯಾಗಿವೆ’ ಎಂದು ಇಲ್ಲಿನ ಅಧಿಕಾರಿಗಳು ತಿಳಿಸಿದ್ದಾರೆ.

ಮೂಲತಃ ಪಂಜಾಬ್‌ನ ಹೋಶಿಯಾರ್‌ಪುರದ ಹಾರ್ಸಿ ಪಿಂಡ್‌ನವರಾದ ಜಸ್‌ದೀಪ್ ಸಿಂಗ್ (36), ಜಸ್ಲೀನ್ ಕೌರ್ (27), ಈ ದಂಪತಿಯ ಎಂಟು ತಿಂಗಳ ಮಗು ಆರೂಹಿ ಧೇರಿ ಮತ್ತು ಈ ಮಗುವಿನ ದೊಡ್ಡಪ್ಪ ಅಮನ್‌ದೀಪ್ ಸಿಂಗ್ (39) ಅವರು ಅಮೆರಿಕದ ಕ್ಯಾಲಿಫೋರ್ನಿಯಾದ ಮರ್ಸೆಡ್ ಕೌಂಟಿಯಲ್ಲಿ ನೆಲೆಸಿದ್ದರು. ಅಲ್ಲಿ ಯುನಿಸನ್ ಟ್ರಕ್ಕಿಂಗ್ ಐಎನ್‌ಸಿ ಹೆಸರಿನಡಿ ಹೊಸದಾಗಿ ಟ್ರಕ್ ಉದ್ಯಮ ಆರಂಭಿಸಿದ್ದರು. ಇವರನ್ನು ಸೋಮವಾರ ಅಪಹರಿಸಲಾಗಿತ್ತು. ‘ನಾಲ್ವರನ್ನು ಅಪಹರಿಸಿದ ಬಳಿಕ ಸಂತ್ರಸ್ತರೊಬ್ಬರ ಎಟಿಎಂ ಕಾರ್ಡ್ ಬಳಸಿ ಹಣ ಡ್ರಾ ಮಾಡಲಾಗಿದೆ. ಅಪಹರಣಕಾರರು ಹಣಕ್ಕೆ ಬೇಡಿಕೆ ಇಟ್ಟಿಲ್ಲ. ಟ್ರಕ್ ಕಂಪನಿಯಿಂದ ಏನನ್ನೂ ಕಳವು ಮಾಡಿಲ್ಲ. ಇದನ್ನು ಮೃತರ ಕುಟುಂಬದವರು ಖಚಿತಪಡಿಸಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.



ಜಸ್‌ದೀಪ್ ಸಿಂಗ್, ಜಸ್ಲೀನ್ ಕೌರ್ ದಂಪತಿ ಮತ್ತು ಮಗು ಆರೂಹಿ ಧೇರಿ

ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಉದ್ಘಾಟನೆ

‘ಭಾರತ, ಕೆನಡಾ ವಹಿವಾಟು ವೃದ್ಧಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಾರತೀಯ ಚಿತ್ರೋದ್ಯಮ ಭಾರತ ಮತ್ತು ಕೆನಡಾ ನಡುವಿನ ವ್ಯಾಪಾರ ಮತ್ತು ವಾಣಿಜ್ಯ ಸಂಬಂಧವನ್ನು ಇನ್ನಷ್ಟು ವೃದ್ಧಿಸಬಹುದು’ ಎಂದು ಬೆಂಗಳೂರಿನ ಕೆನಡಾದ ರಾಯಭಾರ ಕಚೇರಿಯ ಮುಖ್ಯಸ್ಥ ಬೆನೋಯ್ಟ್ ಪ್ರಿಫಾಂಟೈನ್ ಅಭಿಪ್ರಾಯಪಟ್ಟರು.

ನಗರದ ಮಾರತಹಳ್ಳಿಯ ಇನ್ನೋವೇಟಿವ್ ಮಲ್ಟಿಪ್ಲೆಕ್ಸ್‌ನಲ್ಲಿ ನಡೆಯುತ್ತಿರುವ ‘ಐದನೇ ಇನ್ನೋವೇಟಿವ್ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ’ದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಭಾರತ ಮತ್ತು ಕೆನಡಾ 2014ರಿಂದ ಚಲನಚಿತ್ರಗಳ ಸಹ-ನಿರ್ಮಾಣಕ್ಕಾಗಿ ಒಪ್ಪಂದಕ್ಕೆ ಸಹಿ ಹಾಕಿವೆ. ಇದು ಕೆನಡಾದಲ್ಲಿ ಚಲನಚಿತ್ರ ಚಿತ್ರೀಕರಿಸಲು ಅನೇಕ ಭಾರತೀಯ ನಿರ್ಮಾಪಕರಿಗೆ ನೆರವಾಯಿತು. ಕೆನಡಾದಲ್ಲಿರುವ ಸುಮಾರು 14 ಲಕ್ಷ ಜನರು ಭಾರತೀಯ ಮೂಲದವರು. ಹಾಗಾಗಿ ಎರಡು ದೇಶಗಳ ನಡುವೆ ಬಲವಾದ ಸಂಪರ್ಕವಿದೆ. ಈ ನಿಟ್ಟಿನಲ್ಲಿ ಪ್ರಬಲವಾದ ಆರ್ಥಿಕತೆ ಮತ್ತು ಹೂಡಿಕೆಯನ್ನು ಉತ್ತೇಜಿಸುವ ಅಗತ್ಯವಿದೆ. ಚಲನಚಿತ್ರ ಉದ್ಯಮ ಈ ನಿಟ್ಟಿನಲ್ಲಿ ಎರಡೂ ದೇಶಗಳ ಜನರನ್ನು ಹತ್ತಿರಕ್ಕೆ ತರುವ ಆಧಾರ ಸ್ತಂಭವಾಗಬಲ್ಲದು’ ಎಂದರು.

ಅಬುಧಾಬಿ ಫಿಲ್ಮ್ ಕಮಿಷನ್‌ನ ಆಯುಕ್ತ ಹ್ಯಾನ್ಸ್ ಫ್ರೈಕಿನ್ ಮಾತನಾಡಿ, ‘ಭಾರತದ ಚಿತ್ರ ನಿರ್ಮಾಪಕರಿಗೆ ಚಿತ್ರೀಕರಣಕ್ಕೆ ಸಂಬಂಧಿಸಿ ಅಬುಧಾಬಿಯು ಅತಿದೊಡ್ಡ ಪಾಲುದಾರ. ಈ ಸಹಯೋಗದಿಂದಾಗಿ ಚಿತ್ರೋದ್ಯಮದಲ್ಲಿ ಸುಮಾರು 6 ಸಾವಿರ ಕೋಟಿ ಡಾಲರ್‌ಗಳಷ್ಟು ವ್ಯವಹಾರ ನಡೆಯಿತು. ಇನ್ನೋವೇಟಿವ್ ಫಿಲ್ಮ್ ಅಕಾಡೆಮಿಯ ಶಾಖೆಯನ್ನು ಅಬುಧಾಬಿಯಲ್ಲಿ ತೆರೆಯಲಾಗಿದೆ’ ಎಂದರು.

ಕೇಂದ್ರ ಸರ್ಕಾರದ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಕಾರ್ಯದರ್ಶಿ ಅಪೂರ್ವಚಂದ್ರ ಮಾತನಾಡಿ, ‘ದಕ್ಷಿಣ ಭಾರತದಿಂದ ನಿರ್ಮಾಣಗೊಂಡ ಪ್ಯಾನ್ ಇಂಡಿಯಾ ಚಲನಚಿತ್ರಗಳ ಇತ್ತೀಚಿನ ಸರಣಿ ಯಶಸ್ಸನ್ನು ಗಮನಿಸಿದರೆ ಚಲನಚಿತ್ರ ನಿರ್ಮಾಪಕರು ದಕ್ಷಿಣದತ್ತ ಆಕರ್ಷಿತರಾಗುತ್ತಿದ್ದಾರೆ’ ಎಂದು ಹೇಳಿದರು.

‘ಭಾರತದಲ್ಲಿ ಏಕತೆರೆಯ ಚಿತ್ರಮಂದಿರಗಳ ಸಂಖ್ಯೆ 12 ಸಾವಿರದಿಂದ 8 ಸಾವಿರಕ್ಕೆ ಇಳಿದಿದೆ. ಚಿತ್ರಮಂದಿರಗಳ ಸಂಖ್ಯೆ ಹೆಚ್ಚಾಗಬೇಕು. ಹೀಗಾದಾಗ ಗ್ರಾಮೀಣ ಭಾರತದ ಪ್ರೇಕ್ಷಕರು ಹೆಚ್ಚು ಪ್ರಮಾಣದಲ್ಲಿ ಚಿತ್ರಗಳನ್ನು ವೀಕ್ಷಿಸಬಹುದು’ ಎಂದರು.

ಕೇಂದ್ರವು ಚಲನಚಿತ್ರೋದ್ಯಮವನ್ನು ಆದ್ಯತೆಯ ಕ್ಷೇತ್ರವೆಂದು ಪರಿಗಣಿಸಿದೆ. ಚಲನಚಿತ್ರ ನಿರ್ಮಾಪಕರಿಗೆ ಪ್ರೋತ್ಸಾಹಧನ ನೀಡಲು ₹ 450 ಕೋಟಿ ಮೀಸಲಿಟ್ಟಿದೆ. ಒಟ್ಟು ಯೋಜನಾ ವೆಚ್ಚದ ಸುಮಾರು ಶೇ 40 ಅಥವಾ ₹ 2.50 ಕೋಟಿಯನ್ನು ವಿದೇಶದಲ್ಲಿ ಚಿತ್ರೀಕರಿಸುವ ಚಲನಚಿತ್ರ ಉದ್ಯಮಗಳ ಸಹಯೋಗಕ್ಕಾಗಿ ಪ್ರೋತ್ಸಾಹಧನವಾಗಿ ನೀಡಲಾಗಿದೆ. ಸರ್ಕಾರವು ಈಗಾಗಲೇ 15 ಸಹನಿರ್ಮಾಣ ಒಪ್ಪಂದಗಳಿಗೆ ಸಹಿ ಹಾಕಿದೆ. ಹೆಚ್ಚಿನ ಒಪ್ಪಂದಗಳಿಗೆ ಸಹಿ ಹಾಕಲು ಮುಂದಿನ ವಾರ ನವದೆಹಲಿಯಲ್ಲಿ ಸಭೆ ನಡೆಯಲಿದೆ ಎಂದರು.

ದಕ್ಷಿಣ ಭಾರತದ ಇಸ್ರೇಲ್‌ನ ದಕ್ಷಿಣ ಭಾರತದ ದೂತಾವಾಸದ ಮುಖ್ಯಸ್ಥ ಕಾನ್ಸುಲ್ ಜನರಲ್ ಟಾಮಿ ಬೆನ್ ಹೈಮ್, ನಿರ್ದೇಶಕ ಸಬ್ಬಾಸ್ ಜೋಸೆಫ್, ನಟ, ನಿರ್ದೇಶಕ ರಮೇಶ್ ಅರವಿಂದ್ ಮಾತನಾಡಿದರು.

ಈ ಚಿತ್ರೋತ್ಸವದಲ್ಲಿ 40 ದೇಶಗಳ 30 ಭಾಷೆಗಳ 150 ಚಲನಚಿತ್ರಗಳ ಪ್ರದರ್ಶನ ನಡೆಯಲಿದೆ. ಪರಿಣತರೊಂದಿಗೆ ಸಂವಾದ ನಡೆಯಲಿದೆ.

ಚಿತ್ರಾವಳಿ



ದಸರಾ ಹಬ್ಬದ ಅಂಗವಾಗಿ ಉತ್ತರಹಳ್ಳಿಯ ನಿವಾಸಿ ಸೌಮ್ಯಶ್ರೀ ಅವರ ಮನೆಯಲ್ಲಿ ಪ್ರತಿಷ್ಠಾಪಿಸಿದ್ದ ದಸಾರ ಬೊಂಬೆಗಳು



ವಿದ್ಯಾರಣ್ಯಪುರದ ನಿವಾಸಿ ಸವಿತಾ ಅವರ ಮನೆಯಲ್ಲಿ ಪ್ರತಿಷ್ಠಾಪಿಸಿರುವ ದಸರಾ ಗೊಂಬೆಗಗಳು.



ಗದಗ ನಗರದ ತೋಂಟದಾರ್ಯ ಮಠದಲ್ಲಿ ಗುರುವಾರ ನಡೆದ ಲಿಂಗೈಕ್ಯ ಡಾ.ತೋಂಟದ ಸಿದ್ಧಲಿಂಗ ಸ್ವಾಮೀಜಿಯವರ ನಾಲ್ಕನೇ ಪುಣ್ಯಸ್ಮರಣೆ ಸಮಾರಂಭದಲ್ಲಿ ಬೀದರ್‌ನ ಭಾಲ್ಕಿ ಹಿರೇಮಠ ಸಂಸ್ಥಾನದ ಡಾ. ಬಸವಲಿಂಗ ಪಟ್ಟದ್ದೇವರು ಅವರಿಗೆ ‘ಡಾ.ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ’ಯನ್ನು ಸಚಿವ ಸಿ.ಸಿ.ಪಾಟೀಲ ಪ್ರದಾನ ಮಾಡಿದರು. ತೋಂಟದಾರ್ಯ ಮಠದ ಡಾ.ಸಿದ್ಧರಾಮ ಸ್ವಾಮೀಜಿ, ನಿಜಗುಣಪ್ರಭು ತೋಂಟದಾರ್ಯ ಸ್ವಾಮೀಜಿ, ವಿಧಾನ ಪರಿಷತ್ ಸದಸ್ಯ ಎಸ್‌.ವಿ.ಸಂಕನೂರ, ಮಾಜಿ ಸಚಿವ ಎಸ್‌.ಎಸ್‌.ಪಾಟೀಲ, ತೋಂಟದಾರ್ಯ ಮಠದ ಆಡಳಿತಾಧಿಕಾರಿ ಎಸ್‌.ಎಸ್‌.ಪಟ್ಟಣಶೆಟ್ಟಿ ಇದ್ದಾರೆ

ಶಿವಮೂರ್ತಿ ಮುರುಘಾ ಶರಣರ ಅನುಪಸ್ಥಿತಿಯಲ್ಲಿ ನೆರವೇರಿದ ಸಂಪ್ರದಾಯ

ಶೂನ್ಯಪೀಠ ಅಲಂಕರಿಸಿದ ಮುರಿಗಾಶ್ರೀ ಭಾವಚಿತ್ರ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಇಲ್ಲಿನ ಮುರುಘಾಮಠದ ಶೂನ್ಯಪೀಠದಲ್ಲಿ ಗುರುವಾರ ಮುರಿಗಾ ಶಾಂತವೀರ ಸ್ವಾಮೀಜಿ ಭಾವಚಿತ್ರ ಇಟ್ಟು ಸಾಂಪ್ರದಾಯಿಕವಾಗಿ ಶೂನ್ಯ ಪೀಠಾರೋಹಣ ನೆರವೇರಿಸಲಾಯಿತು.

ಶರಣ ಸಂಸ್ಕೃತಿ ಉತ್ಸವದಲ್ಲಿ ಮಠದ ಪೀಠಾಧ್ಯಕ್ಷರು ಶೂನ್ಯಪೀಠಾರೋಹಣ ಮಾಡಿ ಭಕ್ತರಿಗೆ ದರ್ಶನ ನೀಡುವುದು ವಾಡಿಕೆ. ಲೈಂಗಿಕ ಕಿರುಕುಳ ಆರೋಪದಡಿ ಶಿವಮೂರ್ತಿ ಮುರುಘಾ ಶರಣರು ಬಂಧನದಲ್ಲಿರುವುದರಿಂದ ಮುರಿಗಾ ಶಾಂತವೀರ ಸ್ವಾಮೀಜಿಯವರ ಭಾವಚಿತ್ರ, ಪಾದುಕೆಗಳನ್ನು ಇಟ್ಟು ಪೀಠಾರೋಹಣ ವಿಧಿ–ವಿಧಾನ ನಡೆಸಲಾಯಿತು.

ಮಠದ ಪ್ರಾಂಗಣದಲ್ಲಿರುವ ಪೀಠವನ್ನು ಪುಷ್ಪಗಳಿಂದ ಅಲಂಕರಿಸಲಾಗಿತ್ತು. ಪ್ರಭಾರ ಪೀಠಾಧಿಪತಿ ಮಹಾಂತ ರುದ್ರೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ಮುರಿಗಾಶ್ರೀ ಕಾರ್ಯಕ್ರಮ ನಡೆಸಲಾಯಿತು. ಮಠದ ಪ್ರಾಂಗಣದಲ್ಲಿ ಸೇರಿದ್ದ ಭಕ್ತರು ಜಯಘೋಷ ಮೊಳಗಿಸಿ ಭಕ್ತಿ ಸಮರ್ಪಿಸಿದರು.

ಮಠದ ಪೀಠಾಧ್ಯಕ್ಷರು ಚಿನ್ನದ ಕಿರೀಟ, ಬಂಗಾರದ ಪಾದುಕೆ ಹಾಗೂ ಆಭರಣ ಧರಿಸಿ ರತ್ನಖಚಿತ ಸಿಂಹಾಸನದ ಪೀಠಾರೋಹಣ ಮಾಡುವುದು ವಾಡಿಕೆಯಾಗಿತ್ತು. ಈ ಆಡಂಬರದ ಆಚರಣೆಯನ್ನು ಸರಳೀಕರಿಸಿದ್ದ ಶಿವಮೂರ್ತಿ ಮುರುಘಾ ಶರಣರು ರುದ್ರಾಕ್ಷಿ ಕಿರೀಟ, ಮರದ ಪಾದುಕೆ ಧರಿಸಿ ಮರದ ಆಸನದ ಮೇಲೆ ಕುಳಿತುಕೊಳ್ಳುವ ಪರಂಪರೆ ಆರಂಭಿಸಿದ್ದರು. ಪೀಠದ ಮೇಲೆ ಭಾವಚಿತ್ರ ಇಟ್ಟು ಕೈಂಕರ್ಯ ಪೂರೈಸಿದ್ದು ಇದೇ ಮೊದಲು.

> ಮುರುಘಾ ಮಠದ ಮೊದಲ ಪೀಠಾಧಿಪತಿ ಮುರಿಗಾ ಶಾಂತವೀರ ಸ್ವಾಮೀಜಿ ಭಾವಚಿತ್ರ ಇಟ್ಟು ಸರಳವಾಗಿ ಶೂನ್ಯಪೀಠಾರೋಹಣ ನೆರವೇರಿಸಲಾಗಿದೆ. ಉತ್ಸವ ಸಂಪ್ರದಾಯಿಕವಾಗಿ ನಡೆದಿದೆ.
> **ಮಹಾಂತ ರುದ್ರೇಶ್ವರ ಸ್ವಾಮೀಜಿ,**
> ಪ್ರಭಾರ ಪೀಠಾಧ್ಯಕ್ಷ, ಮುರುಘಾ ಮಠ



ಚಿತ್ರದುರ್ಗದ ಮುರುಘಾ ಮಠದಲ್ಲಿ ಗುರುವಾರ ಮುರಿಗಾ ಶಾಂತವೀರ ಸ್ವಾಮೀಜಿ ಭಾವಚಿತ್ರ ಇಟ್ಟು ಶೂನ್ಯಪೀಠಾರೋಹಣ ನೆರವೇರಿಸಲಾಯಿತು. ಶರಣ ಸಂಸ್ಕೃತಿ ಉತ್ಸವ ಸಮಿತಿ ಕಾರ್ಯಾಧ್ಯಕ್ಷ ಎಸ್‌.ಲಿಂಗಮೂರ್ತಿ, ಶಿವಬಸವ ಸ್ವಾಮೀಜಿ, ಬಸವಕುಮಾರ ಸ್ವಾಮೀಜಿ, ಮಹಾಂತ ರುದ್ರೇಶ್ವರ ಸ್ವಾಮೀಜಿ ಇದ್ದಾರೆ

ಜಮ್ಮು, ಕಾಶ್ಮೀರಕ್ಕೆ 1.62 ಕೋಟಿ ಜನ ಭೇಟಿ

ಶ್ರೀನಗರ (ಪಿಟಿಐ): ಈ ವರ್ಷ ಸೆಪ್ಟೆಂಬರ್‌ವರೆಗೆ 1.62 ಕೋಟಿ ಪ್ರವಾಸಿಗರು ಜಮ್ಮು ಮತ್ತು ಕಾಶ್ಮೀರಕ್ಕೆ ಭೇಟಿ ನೀಡಿದ್ದಾರೆ. ಸ್ವಾತಂತ್ರ್ಯಾನಂತರ ಇದೇ ಮೊದಲ ಬಾರಿಗೆ ದೊಡ್ಡ ಸಂಖ್ಯೆಯಲ್ಲಿ ಪ್ರವಾಸಿಗರು ಇಲ್ಲಿಗೆ ಬಂದಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಚನಜ್ಯೋತಿ ಬಳಗದಿಂದ ಸಂಭ್ರಮದ ವಚನ ವಿಜಯದಶಮಿ

‘ಬಸವಣ್ಣನೇ ನಾಡ ದೇವರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪುರಾಣಗಳ ಹಿಂಸೆಯ ಚಿತ್ರಣದ ಬದಲಿಗೆ ಪ್ರೀತಿ ವಿಶ್ವಾಸದಿಂದ ಎಲ್ಲರನ್ನೂ ಒಪ್ಪಿಕೊಂಡು ಅಪ್ಪಿಕೊಂಡು ತನ್ನ ಜೊತೆಗೆ ಕರೆದುಕೊಂಡು ಹೆಜ್ಜೆ ಹಾಕಿದ ಬಸವಣ್ಣನೇ ನಾಡ ದೇವರು’ ಎಂದು ಬೇಲಿಮಠದ ಶಿವರುದ್ರ ಸ್ವಾಮೀಜಿ ಅಭಿಪ್ರಾಯ ವ್ಯಕ್ತಪಡಿಸಿದರು.

ವಚನಜ್ಯೋತಿ ಬಳಗದಿಂದ ಆಯೋಜಿಸಿದ್ದ ‘ವಚನ ವಿಜಯದಶಮಿ’ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ‘ಬಸವಣ್ಣ 12ನೇ ಶತಮಾನದಲ್ಲಿಯೇ ವಚನಗಳ ಮೂಲಕ ವಿಶ್ವಮಾನವ ಸಂದೇಶವನ್ನು ಜಗತ್ತಿಗೆ ಸಾರಿದ್ದರು. ಅವರು ರಚಿಸಿರುವ ವಚನಗಳು ಈಗಲೂ ಜೀವಂತವಾಗಿವೆ. ಜನರ ನಾಲಿಗೆಯಲ್ಲಿ ನಲಿದಾಡುತ್ತಿವೆ’ ಎಂದು ಹೇಳಿದರು.

‘ನವರಾತ್ರಿ ಹಬ್ಬದ ಅಂಗವಾಗಿ ವಚನಜ್ಯೋತಿ ಬಳಗದ ವತಿಯಿಂದ ಒಂಬತ್ತು ದಿನಗಳವರೆಗೂ ವಚನಕಾರ್ತಿಯರನ್ನು ಪರಿಚಯಿಸಲಾಗಿದೆ. ವಿಜಯದಶಮಿ ದಿನ ಬಸವಣ್ಣನವರ ವಚನ ಸಂಪುಟಗಳನ್ನು ಮೆರವಣಿಗೆ ಮಾಡುವುದರ ಮೂಲಕ ನಾಡಹಬ್ಬ ಆಚರಿಸುತ್ತಿರುವುದು ಶ್ಲಾಘನೀಯ’ ಎಂದರು.

ವಚನಜ್ಯೋತಿ ಬಳಗದ ಅಧ್ಯಕ್ಷ ಎಸ್. ಪಿನಾಕಪಾಣಿ ಮಾತನಾಡಿದರು. ಚೆನ್ನಮಲ್ಲಯ್ಯ, ಬಸವರಾಜು, ಚಂದ್ರಶೇಖರಯ್ಯ, ಮಲ್ಲಿಕಾರ್ಜುನ್, ಪ್ರಭು ಇಸುವನಹಳ್ಳಿ, ರಾಜಾಗುರುಪ್ರಸಾದ್, ರುದ್ರೇಶ್, ಗುರುಪ್ರಸಾದ್ ಕುಚ್ಚಂಗಿ ಇದ್ದರು.



ವಿಜಯದಶಮಿಯ ಪ್ರಯುಕ್ತ ನಗರದ ಕಲ್ಯಾಣ ಬಡಾವಣೆಯಲ್ಲಿ ಆಯೋಜಿಸಿದ್ದ ಬಸವಣ್ಣನ ವಚನ ಸಂಪುಟಗಳ ಮೆರವಣಿಗೆಯಲ್ಲಿ ಬೇಲಿಮಠದ ಶಿವರುದ್ರ ಸ್ವಾಮೀಜಿ ಭಾಗವಹಿಸಿದ್ದರು.

ಮೈಸೂರು ರೇಸ್

ಸುಕ್ರೆ ಗೆಲ್ಲುವ ನಿರೀಕ್ಷೆ

ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ ಮೈಸೂರು 2000 ಗಿನ್ನಿಸ್ ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸುಕ್ರೆ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.00ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ನ್ಯೂಸ್‌ಮೇಕರ್ 2, ಅಡೆಲಾ 1, ಸದರ್ನ್‌ಅರಿಸ್ಟೋಕ್ರಾಟ್ 5
2ನೇ ರೇಸ್: ಎಂಗೆಲ್‌ಬರ್ಗ್ 11, ಫೆಸ್ಟಿವ್ ಸ್ಟಾರ್ 3, ಸ್ಯಾಂಡ್ ಕ್ಯಾಸ್ಲ್ಸ್ 10
3ನೇ ರೇಸ್: ಸ್ಟಾರ್ಸ್ ಎಬೌವ್ 7, ಪರ್ಫೆಕ್ಟ್ ಜಸ್ಟೀಸ್ 1, ಕಲ್ಲು ಸಕ್ಕರೆ 6
4ನೇ ರೇಸ್: ಯೂನಿಕ್ ಸ್ಟೈಲ್ 3, ಸುಪ್ರೀಮ್ ಏಂಜೆಲ್ 7, ಆಲ್‌ಟೈರ್ 4
5ನೇ ರೇಸ್: ಕೇಪಬಲ್ 1, ಇಂಪೆಲ್ಲಿಂಗ್ ಪವರ್ 6, ಟೈಟಾ ಆಲ್ಟೊ 7
6ನೇ ರೇಸ್: ಕ್ಯಾರಕಸ್ 5, ಪೆಯೋ 2, ಕ್ಲೆಟಸ್ 6
7ನೇ ರೇಸ್: ಸುಕ್ರೆ 5, ರಾವಿಷಿಂಗ್ ಫಾರ್ಮ್ 3, ಒನ್ಸ್ ಯು ಗೋ ಬ್ಲ್ಯಾಕ್ 2
8ನೇ ರೇಸ್: ಸ್ಟಾರ್ ಅಡ್ಮಿರಲ್ 2, ಇಂಡಿಯನ್ ಪ್ಯಾಟ್ರಿಯಾಟ್ 6, ಫಾಸ್‌ಬೈಂಡರ್ 4
9ನೇ ರೇಸ್: ಡೈಮನ್ 2, ಚಿಸಾಕ್ 3, ಗೋಲ್ಡ್‌ಗ್ರೇ 8

ಉತ್ತಮ ಬೆಟ್: ಕ್ಯಾರಕಸ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
5,6,7,8,9	1,2,3	4,5,6	7,8,9

ಶುಕ್ರವಾರ • ಅಕ್ಟೋಬರ್ 7, 2022 ಪ್ರಜಾವಾಣಿ

ಸೊಂಟದಲ್ಲಿ ಪಿಸ್ತೂಲ್, ಅಶ್ಲೀಲ ನೃತ್ಯ

ಬೆಂಗಳೂರು: ಸೊಂಟದಲ್ಲಿ ಪಿಸ್ತೂಲ್ ಇಟ್ಟುಕೊಂಡು ಸಾರ್ವಜನಿಕರನ್ನು ಭಯಪಡಿಸಿಯುವತಿಯರಜೊತೆಅಶ್ಲೀಲವಾಗಿ ನೃತ್ಯ ಮಾಡಿದ್ದ ಅಪರಿಚಿತನ ವಿರುದ್ಧ ಅಕ್ರಮ ಶಸ್ತ್ರಾಸ್ತ್ರ ಕಾಯ್ದೆಯಡಿ ಅಶೋಕನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ರೆಸಿಡೆನ್ಸಿ ರಸ್ತೆಯಲ್ಲಿರುವ ಟ್ರೈಮ್ ಬಾರ್ ಆ್ಯಂಡ್ ರೆಸ್ಟೋರೆಂಟ್‌ನಲ್ಲಿ ಆಗಸ್ಟ್ 21ರಂದು ತಡರಾತ್ರಿ ನೃತ್ಯ ಮಾಡಿದ್ದ ಅಪರಿಚಿತನ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಇದನ್ನು ಆಧರಿಸಿ ಅಪರಿಚಿತ ವ್ಯಕ್ತಿ ಹಾಗೂ ರೆಸ್ಟೋರೆಂಟ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'40 ವರ್ಷದಿಂದ 50 ವರ್ಷದವರೆಗಿನ ವ್ಯಕ್ತಿ, ತಡರಾತ್ರಿಯವರೆಗೂ ಬಾರ್ ಆ್ಯಂಡ್ ರೆಸ್ಟೋರೆಂಟ್‌ನಲ್ಲಿದ್ದ. ಜನರಿಗೆ ಕಾಣುವಂತೆ ಸೊಂಟದಲ್ಲಿ ಪಿಸ್ತೂಲ್ ಇರಿಸಿಕೊಂಡಿದ್ದ. ಜೊತೆಗೆ, ರೆಸ್ಟೋರೆಂಟ್‌ನಲ್ಲಿದ್ದ ಯುವತಿಯರ ಜೊತೆ ಅಸಭ್ಯವಾಗಿ ವರ್ತಿಸಿ ಅಶ್ಲೀಲವಾಗಿ ನೃತ್ಯ ಮಾಡಿದ್ದ. ಅಪರಿಚಿತ ವ್ಯಕ್ತಿ ಯಾರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

ಬಿಎಂಟಿಸಿ ಬಸ್‌ಗಳು ನಾಲ್ಕೈದು ಕಿಲೋ ಮೀಟರ್ ಸುತ್ತಾಡಬೇಕಾದ ಅನಿವಾರ್ಯತೆ

ಕಾಟನ್‌ಪೇಟೆ: ಬಸ್ ಸಂಚಾರಕ್ಕೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಟನ್‌ಪೇಟೆ ಮುಖ್ಯ ರಸ್ತೆಯನ್ನು ಟೆಂಡರ್ ಶ್ಯೂರ್ ಯೋಜನೆ ಅಡಿ ಅಭಿವೃದ್ಧಿಪಡಿಸಿದ ಬಳಿಕ ಈ ರಸ್ತೆಯಲ್ಲಿ ಬಿಎಂಟಿಸಿ ಬಸ್‌ಗಳ ಸಂಚಾರ ನಿರ್ಬಂಧಿಸಲಾಗಿದೆ. ಬಸ್‌ಗಳು ಈಗ ನಾಲ್ಕೈದು ಕಿಲೋ ಮೀಟರ್ ಸುತ್ತಾಡಬೇಕಾದ ಅನಿವಾರ್ಯ ಇದೆ.

1.15 ಕಿಲೋ ಮೀಟರ್ ಉದ್ದದ ಕಾಟನ್‌ಪೇಟೆ ಮುಖ್ಯ ರಸ್ತೆಯಲ್ಲಿ ಸುಸಜ್ಜಿತ ಪಾದಚಾರಿ ಮಾರ್ಗ ಸಹಿತ ಕಾಂಕ್ರೀಟ್ ರಸ್ತೆ ನಿರ್ಮಿಸಲಾಗಿದೆ. ಮೆಜೆಸ್ಟಿಕ್‌ನಿಂದ ಮೈಸೂರು ರಸ್ತೆಯನ್ನು ಕೆಲವೇ ನಿಮಿಷಗಳಲ್ಲಿ ಸಂಪರ್ಕಿಸಲು ಇರುವ ಮಾರ್ಗ ಇದು. ರಸ್ತೆ ಅಭಿವೃದ್ಧಿಪಡಿಸುವ ಸಂದರ್ಭದಲ್ಲಿ ಸಂಚಾರ ಸಂಪೂರ್ಣವಾಗಿ ಬಂದ್ ಮಾಡಲಾಗಿತ್ತು. ವಾಹನ ಸಂಚಾರ ಪುನರ್ ಆರಂಭಗೊಂಡ ಬಳಿಕ ಬಿಎಂಟಿಸಿ ಬಸ್‌ಗಳ ಸಂಚಾರಕ್ಕೆ ಪೊಲೀಸರು ತಡೆಯೊಡ್ಡಿದ್ದಾರೆ.

ಪಾದಚಾರಿ ಮಾರ್ಗ ವಿಶಾಲವಾದ ಬಳಿಕ ರಸ್ತೆ ಕಿರಿದಾಗಿದ್ದು, ಬಿಎಂಟಿಸಿ ಬಸ್‌ಗಳು ಸಂಚರಿಸಿದರೆ ಸಂಚಾರ ದಟ್ಟಣೆ ಉಂಟಾಗಲಿದೆ ಎಂಬುದು ಪೊಲೀಸರ ಅಭಿಪ್ರಾಯ. 10ರಿಂದ 15 ನಿಮಿಷದಲ್ಲಿ ಮೈಸೂರು ರಸ್ತೆ ತಲುಪುತ್ತಿದ್ದ ಬಸ್ ಪ್ರಯಾಣಿಕರು ಈಗ ಅರ್ಧ ಗಂಟೆಗೂ ಹೆಚ್ಚು ಕಾಲ ಪ್ರಯಾಣ ಮಾಡಬೇಕಿದೆ.

ಮೆಜೆಸ್ಟಿಕ್‌ನಿಂದ ಹೊರಡುವ ಬಸ್‌ಗಳು ಹಳೇ ಮೈಸೂರು ರಸ್ತೆ, ಟ್ಯಾಂಕ್ ಬಂಡ್ ರಸ್ತೆ ಮೂಲಕ ಮೈಸೂರು ರಸ್ತೆ ತಲುಪುತ್ತಿವೆ. 1.15 ಕಿಲೋ ಮೀಟರ್ ಕ್ರಮಿಸುವ ಬದಲು ನಾಲ್ಕೈದು ಕಿಲೋ ಮೀಟರ್ ಸುತ್ತಾಡಬೇಕಾದ ಸ್ಥಿತಿ ಇದೆ.

'ಸಂಚಾರ ದಟ್ಟಣೆಗೆ ಬಿಎಂಟಿಸಿ ಬಸ್‌ಗಳು ಕಾರಣವಲ್ಲ. ಖಾಸಗಿ ವಾಹನಗಳ ಸಂಖ್ಯೆ ಹೆಚ್ಚಾಗುತ್ತಿರುವುದೇ ಕಾರಣ. ಬಸ್‌ಗಳ ಸಂಚಾರಕ್ಕೆ ನಿರ್ಬಂಧ ಹೇರುವುದು ಸಂಚಾರ ದಟ್ಟಣೆ ಸಮಸ್ಯೆಗೆ ಪರಿಹಾರವಲ್ಲ' ಎಂಬುದು ಬಸ್ ಪ್ರಯಾಣಿಕರ ಅಭಿಪ್ರಾಯ.


ಕಾಟನ್‌ಪೇಟೆ ಮುಖ್ಯ ರಸ್ತೆ

> **ಪೊಲೀಸರು ಅನುಮತಿ ನೀಡದ ಕಾರಣ ಕಾಟನ್‌ಪೇಟೆ ಮಾರ್ಗದಲ್ಲಿ ಬಸ್‌ಗಳು ಸಂಚರಿಸುತ್ತಿಲ್ಲ. ಪ್ರಯಾಣಿಕರಿಗೆ ಅನನುಕೂಲ ಆಗಿರುವುದರಿಂದ ಮತ್ತೊಮ್ಮೆ ಅನುಮತಿ ಕೋರಿದ್ದೇವೆ**
> **ರಾಜೇಶ್,**
> ಬಿಎಂಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕ

'ಕಾರುಗಳ ಸಂಚಾರ ನಿರ್ಬಂಧಿಸಲಿ'

'ಕಾಟನ್‌ಪೇಟೆ ಮುಖ್ಯರಸ್ತೆಯಲ್ಲಿ ಬಿಎಂಟಿಸಿ ಬಸ್‌ಗಳ ಸಂಚಾರ ನಿರ್ಬಂಧಿಸಿರುವುದು ದುರಂತದ ವಿಷಯ' ಎಂದು ಬಸ್ ಪ್ರಯಾಣಿಕರ ವೇದಿಕೆಯ ವಿನಯ್ ಶ್ರೀನಿವಾಸ್ ಅಸಮಾಧಾನ ವ್ಯಕ್ತಪಡಿಸಿದರು.

'ಕಳೆದ ಐದಾರು ವರ್ಷಗಳಲ್ಲಿ ಬಸ್‌ಗಳ ಸಂಖ್ಯೆ ಕಡಿಮೆಯಾಗುತ್ತಿದ್ದರೆ, ಖಾಸಗಿ ವಾಹನಗಳ ಸಂಖ್ಯೆ ಅದರಲ್ಲೂ ಕಾರುಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿದೆ. ಖಾಸಗಿ ವಾಹನ ಸವಾರರ ಅನುಕೂಲಕ್ಕೆ ಸಾರ್ವಜನಿಕ ಸೇವೆ ಒದಗಿಸುವ ಬಸ್‌ಗಳ ಸಂಚಾರಕ್ಕೆ ಕಡಿವಾಣ ಹಾಕುವುದು ಸರಿಯಾದ ಕ್ರಮ ಅಲ್ಲ' ಎಂದು ಅವರು ಹೇಳಿದರು.

'ಬಡವರು, ಕೂಲಿ ಕಾರ್ಮಿಕರು ಪ್ರಯಾಣಿಸುವ ಬಿಎಂಟಿಸಿ ಬಸ್‌ಗಳ ಸಂಚಾರ ನಿರ್ಬಂಧಿಸುವ ಬದಲು ಕಾರುಗಳ ಸಂಚಾರವನ್ನು ನಿರ್ಬಂಧಿಸಲಿ. ಪೊಲೀಸರು ಬಡ ಸಾರ್ವಜನಿಕರಿಗೆ ಅನುಕೂಲ ಆಗುವ ಕೆಲಸಗಳನ್ನು ಮಾಡಬೇಕು. ಕಾಟನ್‌ಪೇಟೆ ಮುಖ್ಯ ರಸ್ತೆಯಲ್ಲಿ ಬಿಎಂಟಿಸಿ ಬಸ್‌ಗಳ ಸಂಚಾರಕ್ಕೆ ಕೂಡಲೇ ಅನುಮತಿ ನೀಡಬೇಕು' ಎಂದು ಒತ್ತಾಯಿಸಿದರು.

ಸುದ್ದಿ 2 ನಿಮಿಷ

ಸಾರಿಗೆ ನೌಕರರ ಸೈಕಲ್ ಜಾಥಾ

ಬೆಂಗಳೂರು: ಸಮಾನ ವೇತನಕ್ಕೆ ಆಗ್ರಹಿಸಿ ರಾಜ್ಯದಾದ್ಯಂತ ಸೈಕಲ್ ಜಾಥಾ ನಡೆಸಲು ಸಾರಿಗೆ ಸಂಸ್ಥೆಗಳ ನೌಕರರು ನಿರ್ಧರಿಸಿದ್ದಾರೆ.

ಇದೇ 10ರಂದು ಬಳ್ಳಾರಿಯಿಂದ ಜಾಥಾ ಹೊರಡಲಿದ್ದು, ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಜಾಥಾ ಸಂಚರಿಸಲಿದೆ. ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ಸಾರಿಗೆ ಸಂಸ್ಥೆಗಳ ನೌಕರರ ಕೂಟದ ಅಧ್ಯಕ್ಷ ಚಂದ್ರಶೇಖರ್ ತಿಳಿಸಿದರು.

ವಜಾಗೊಂಡ ನೌಕರರ ಮರು ನೇಮಕ, ಸಮಾನ ವೇತನದ ಲಿಖಿತ ಭರವಸೆ ಈಡೇರಿಕೆ, ನೌಕರರ ಪೊಲೀಸ್ ಪ್ರಕರಣ ವಾಪಸ್ ಪಡೆಯಬೇಕು, ಸಂಘಕ್ಕೆ ಚುನಾವಣೆ ನಡೆಸಬೇಕು ಎಂದು ಒತ್ತಾಯಿಸಿ ಈ ಜಾಥಾ ನಡೆಸಲಾಗುತ್ತಿದೆ. ಎಲ್ಲಾ ಜಿಲ್ಲಾ ಕೇಂದ್ರಗಳ ಮೂಲಕ ಜಾಥಾ ಸಂಚರಿಸಿ ಬೆಂಗಳೂರಿಗೆ ಬರಲು ಕನಿಷ್ಠ 50 ದಿನ ಬೇಕಾಗಲಿದೆ ಎಂದು ಅವರು ಹೇಳಿದರು.

ಹಿಮಪಾತ: ಮತ್ತೆ 12 ಮಂದಿ ಪರ್ವತಾರೋಹಿಗಳ ಶವ ಪತ್ತೆ



ಡೆಹ್ರಾಡೂನ್ (ಪಿಟಿಐ): 'ಉತ್ತರ ಕಾಶಿ ಬಳಿ ಸಂಭವಿಸಿದ್ದ ಹಿಮಪಾತದಲ್ಲಿ ಸಿಲುಕಿ ಅಸುನೀಗಿರುವ ಪರ್ವತಾರೋಹಿಗಳ ಪೈಕಿ ಮತ್ತೆ 12 ಮಂದಿಯ ಶವಗಳನ್ನು ಗುರುವಾರ ಹೊರತೆಗೆಯಲಾಗಿದೆ' ಎಂದು ನೆಹರೂ ಪರ್ವತಾರೋಹಣ ಸಂಸ್ಥೆ (ಎನ್‌ಐಎಂ) ತಿಳಿಸಿದೆ.

ಇದರೊಂದಿಗೆ ಮೃತರ ಒಟ್ಟು ಸಂಖ್ಯೆ 16ಕ್ಕೆ ಏರಿಕೆಯಾಗಿದ್ದು, ಇನ್ನೂ 15 ಮಂದಿ ನಾಪತ್ತೆಯಾಗಿದ್ದಾರೆ.

ಎನ್‌ಐಎಂನಲ್ಲಿ ತರಬೇತಿ ಪಡೆಯುತ್ತಿದ್ದ 61 ಮಂದಿಯ ತಂಡವು ಮಂಗಳವಾರ ಬೆಳಿಗ್ಗೆ ಪರ್ವತಾರೋಹಣ ಅಭ್ಯಾಸ ನಡೆಸಿ ಹಿಂತಿರುಗುತ್ತಿದ್ದಾಗ ದ್ರೌಪದಿ ಕಾ ದಂಡ–2 ಶಿಖರದ ಬಳಿ ಹಠಾತ್ತನೆ ಹಿಮಪಾತ ಉಂಟಾಗಿತ್ತು. ಹಿಮದಡಿ ಸಿಲುಕಿದ್ದ ನಾಲ್ವರ ಶವಗಳನ್ನು ಮಂಗಳವಾರವೇ ಹೊರತೆಗೆಯಲಾಗಿತ್ತು. ಮೃತರಪೈಕಿ ಬಹುತೇಕರು ಶಿಬಿರಾರ್ಥಿಗಳಾಗಿದ್ದಾರೆ.

'61 ಮಂದಿಯ ತಂಡವು ಪರ್ವತಾರೋಹಣ ಅಭ್ಯಾಸಕ್ಕೆಂದು ಶಿಖರವೇರಿತ್ತು. ಈ ಪೈಕಿ 30 ಮಂದಿ ಸುರಕ್ಷಿತವಾಗಿದ್ದಾರೆ. 27 ಮಂದಿಯ ಸುಳಿವು ಸಿಕ್ಕಿಲ್ಲ' ಎಂದು ರಾಜ್ಯ ತುರ್ತು ಕಾರ್ಯಾಚರಣೆ ಕೇಂದ್ರವು (ಎಸ್‌ಇಒಸಿ) ಬುಧವಾರ ಹೇಳಿತ್ತು.

'ಜಮ್ಮು ಮತ್ತು ಕಾಶ್ಮೀರದ ಹೈ ಆಲ್ಟಿಟ್ಯೂಡ್ ವಾರ್‌ಫೇರ್ ಸ್ಕೂಲ್‌ನ 14 ಮಂದಿಯನ್ನೊಳಗೊಂಡ ತಂಡವು ರಕ್ಷಣಾ ಕಾರ್ಯದಲ್ಲಿ ತೊಡಗಿದೆ. ಈ ತಂಡವು ಎಸ್‌ಡಿಆರ್‌ಎಫ್ ಮತ್ತು ಇಂಡೊ ಟಿಬೇಟನ್ ಬಾರ್ಡರ್ ಪೊಲೀಸ್ (ಐಟಿಬಿಪಿ) ತಂಡಗಳ ಜೊತೆಗೂಡಿ ಕೆಲಸ ಮಾಡಲಿದೆ' ಎಂದು ಎಸ್‌ಇಒಸಿ ತಿಳಿಸಿದೆ.

ಸ್ಮಾರಕದೊಳಗೆ ಅಕ್ರಮ ಪ್ರವೇಶಿಸಿ ಪೂಜೆ: ಬೀದರ್ ಉದ್ವಿಗ್ನ

ಪ್ರಜಾವಾಣಿ ವಾರ್ತೆ

ಬೀದರ್: ಒಳಕೋಟೆ ಭವಾನಿದೇವಿ ಮೂರ್ತಿಯ ಮೆರವಣಿಗೆಯಲ್ಲಿ ಬಂದ ಕೆಲವರು ನಗರದ ಓಲ್ಡ್‌ಸಿಟಿಯಲ್ಲಿ ಇರುವ ಮಹಮೂದ್ ಗವಾನ್ ಸ್ಮಾರಕದ ಬಳಿ ಪೂಜೆ ಸಲ್ಲಿಸಿದ ದೃಶ್ಯ ಸೆರೆ ಹಿಡಿದು ವೈರಲ್ ಮಾಡಿದ ವಿಡಿಯೊದಿಂದ ದ್ವೇಷಮಯ ವಾತಾವರಣ ಸೃಷ್ಟಿಯಾಗಿದೆ.

'ಗುಂಪಿನಲ್ಲಿ ಬಂದ ಕೆಲವರು ಪೊಲೀಸರ ಸಮ್ಮುಖದಲ್ಲೇ ಭಾರತೀಯ ಪುರಾತತ್ವ ಇಲಾಖೆಯ ಅಧೀನದಲ್ಲಿರುವ ಸ್ಮಾರಕದೊಳಗೆ ಅಕ್ರಮವಾಗಿ ಪ್ರವೇಶಿಸಿ ಕಾನೂನು ಬಾಹಿರವಾಗಿ ಪೂಜೆ ಸಲ್ಲಿಸಿದ್ದಾರೆ. ಧಾರ್ಮಿಕ ಸಾಮರಸ್ಯ ಕದಡಲು ಯತ್ನಿಸಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿ ಮುಸ್ಲಿಂ ಸಮುದಾಯದ ಕೆಲವರು ಟೌನ್ ಪೊಲೀಸ್ ಠಾಣೆ ಎದುರು ಪ್ರತಿಭಟನೆ ನಡೆಸಿದರು.

'ನಗರದ ನರೇಶ ಗೌಳಿ, ಪ್ರಕಾಶ, ವಿನು, ಮನ್ನಾ, ಸಾಗರ ಬಂಟಿ, ಜಗದೀಶ ಗೌಳಿ, ಅರುಣ ಗೌಳಿ, ಗೋರಖ ಗೌಳಿ ಸೇರಿ 60 ಜನರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಉದ್ಯಮಿ ಸೈಯ್ಯದ್ ಮುಬಾಶಿರ್ ಅಲಿ ಮಾರ್ಕೆಟ್ ಠಾಣೆಯಲ್ಲಿ ನೀಡಿದ ದೂರು ಆಧರಿಸಿ ಕ್ರಮ ತೆಗೆದುಕೊಳ್ಳಲಾಗಿದೆ' ಎಂದು ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮಹೇಶ ಮೇಘಣ್ಣವರ್ ತಿಳಿಸಿದರು.

'ಕೋಟೆಯೊಳಗಿನ ಭವಾನಿ ಮಂದಿರದ ಭಕ್ತರು ಪ್ರತಿ ವರ್ಷ ಸಾಂಕೇತಿಕವಾಗಿ ಓಲ್ಡ್‌ಸಿಟಿಯ ಮಹಮೂದ್ ಗವಾನ್ ಸ್ಮಾರಕ ಬಳಿ ಕಟ್ಟೆಗೆ ಪೂಜೆ ಸಲ್ಲಿಸುತ್ತಾರೆ. ಮೊದಲು ಚಿಕ್ಕ ಅರಳಿ ಮರ ಇತ್ತು. ಈಗ ಮರ ಇಲ್ಲ. ಆದರೆ, ಅಲ್ಲಿ ತೆಂಗಿನಕಾಯಿ ಒಡೆದುಕೊಂಡು ಹೋಗುವ ಸಂಪ್ರದಾಯ ಈಗಲೂ ಇದೆ. ಸ್ಮಾರಕಕ್ಕೆ ಯಾವುದೇ ರೀತಿಯ ಹಾನಿ ಆಗಿಲ್ಲ' ಎಂದು ಭಾರತೀಯ ಪುರಾತತ್ವ ಇಲಾಖೆಯ ಬೀದರ್‌ನ ಸ್ಮಾರಕ ಸಂರಕ್ಷಣಾಧಿಕಾರಿ ಅನಿರುದ್ಧ ದೇಸಾಯಿ ತಿಳಿಸಿದ್ದಾರೆ.

ಸಿಬ್ಬಂದಿ ಕೊರತೆ: ಡಿಪೊಗಳಲ್ಲೇ ನಿಂತ ಬಸ್

ಒ.ಟಿಯಿಂದಲೂ ಸರಿಯಾಗದ ಸಮಸ್ಯೆ: ನೇಮಕಕ್ಕೆ ಅನುಮತಿ ನೀಡದ ಸರ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಬ್ಬಂದಿ ಕೊರತೆ ಸಮಸ್ಯೆ ಎದುರಿಸುತ್ತಿರುವ ಬಿಎಂಟಿಸಿ, ಎಲ್ಲಾ ಮಾರ್ಗಗಳ ಕಾರ್ಯಾಚರಣೆಗೆ ಪರದಾಡುತ್ತಿದೆ. ಚಾಲನಾ ಸಿಬ್ಬಂದಿಗೆ ಅವಧಿ ಮೀರಿದ ಹೆಚ್ಚುವರಿ ಕರ್ತವ್ಯ (ಒ.ಟಿ)ನೀಡುತ್ತಿದ್ದರೂ ನಿತ್ಯ 600ಕ್ಕೂ ಹೆಚ್ಚು ಬಸ್‌ಗಳು ಡಿಪೊಗಳಲ್ಲೇ ನಿಲ್ಲುವಂತಾಗಿದೆ.

ಕೋವಿಡ್ ಬಳಿಕ ಬಸ್‌ಗಳ ಕಾರ್ಯಾಚರಣೆ ಸಂಖ್ಯೆ ಕಡಿಮೆ ಮಾಡಲಾಗಿತ್ತು. ಸಹಜ ಸ್ಥಿತಿಗೆ ಮರಳಿದ ಬಳಿಕ ಎಲ್ಲಾ ಮಾರ್ಗಗಳಲ್ಲೂ ಬಸ್‌ಗಳನ್ನು ಕಾರ್ಯಾಚರಣೆಗೆ ಇಳಿಸಲು ಪ್ರಯತ್ನಿಸುತ್ತಿದೆ. ಆದರೆ, ಸಿಬ್ಬಂದಿ ಕೊರತೆ ಸಮಸ್ಯೆ ದೊಡ್ಡದಾಗಿದೆ.

5,632 ಮಾರ್ಗಗಳಲ್ಲಿ ಬಸ್‌ಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ನಿಗಮದಲ್ಲಿ ಸದ್ಯ 6,798 ಬಸ್‌ಗಳಿದ್ದು, 29,726 ಸಿಬ್ಬಂದಿ ಇದ್ದಾರೆ. ಐದಾರು ವರ್ಷಗಳಲ್ಲಿ 6 ಸಾವಿರಕ್ಕೂ ಅಧಿಕ ಸಿಬ್ಬಂದಿ ಕಡಿಮೆಯಾಗಿದ್ದಾರೆ. ಮುಷ್ಕರದ ಸಂದರ್ಭದಲ್ಲಿ ವಜಾಗೊಂಡ ಸಿಬ್ಬಂದಿಯಲ್ಲಿ 650ಕ್ಕೂ ಹೆಚ್ಚು ಮಂದಿ ಇನ್ನೂ ಕರ್ತವ್ಯದಿಂದ ಹೊರಗಿದ್ದಾರೆ. ಅಂತರ ನಿಗಮ ವರ್ಗಾವಣೆ ಕೋರಿ ಹಲವರು ಕೆಎಸ್‌ಆರ್‌ಟಿಸಿ ಮತ್ತು ಇತರ ನಿಗಮಗಳಿಗೆ ವರ್ಗಾವಣೆಯಾಗಿದ್ದಾರೆ. ಜತೆಗೆ ಪ್ರತಿ ತಿಂಗಳು ಸಿಬ್ಬಂದಿ ವಯೋನಿವೃತ್ತಿ ಆಗುತ್ತಿದ್ದು, ಕರ್ತವ್ಯದಲ್ಲಿರುವ ಸಿಬ್ಬಂದಿ ಮೇಲೆ ಕಾರ್ಯದ ಒತ್ತಡ ಹೆಚ್ಚುತ್ತಿದೆ. ಕರ್ತವ್ಯ ಮುಗಿದ ಬಳಿಕವೂ ಅವರನ್ನು ಹೆಚ್ಚುವರಿ ಸೇವೆಗೆ ನಿಯೋಜಿಸಿಕೊಳ್ಳಲಾಗುತ್ತಿದೆ. ಆದರೂ, ಬಸ್‌ಗಳು ಡಿಪೊಗಳಲ್ಲೇ ನಿಲ್ಲುವುದು ತಪ್ಪಿಲ್ಲ.

2018ರ ಬಳಿಕ ಸಿಬ್ಬಂದಿ ನೇಮಕ ಪ್ರಕ್ರಿಯೆಯನ್ನೇ ಬಿಎಂಟಿಸಿ ನಡೆಸಿಲ್ಲ. ಸದ್ಯ ನಿಗಮದಲ್ಲಿರುವ ಬಸ್‌ಗಳು ಮತ್ತು ಎಲ್ಲಾ ಮಾರ್ಗಗಳಲ್ಲೂ ಬಸ್‌ಗಳನ್ನು ಕಾರ್ಯಾಚರಣೆ ಮಾಡಲು ಕನಿಷ್ಠ 5 ಸಾವಿರ ಸಿಬ್ಬಂದಿ ಅಗತ್ಯವಿದೆ ಎನ್ನುತ್ತಾರೆ ಬಿಎಂಟಿಸಿ ಅಧಿಕಾರಿಗಳು.


ಸಾಂದರ್ಭಿಕ ಚಿತ್ರ

> **ಸುಮಾರು 600 ಬಸ್‌ಗಳು ಡಿಪೊಗಳಲ್ಲೇ ನಿಲ್ಲುವಂತಾಗಿದೆ. ಒ.ಟಿ ನೀಡಿದರೂ ಎಲ್ಲಾ ಬಸ್‌ಗಳ ಕಾರ್ಯಾಚರಣೆ ಕಷ್ಟವಾಗಿದೆ. ಸರ್ಕಾರದ ಅನುಮತಿಗೆ ಕಾಯುತ್ತಿದ್ದೇವೆ.**
> **ರಾಜೇಶ್,**
> ಬಿಎಂಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕ

'ಹೊಸದಾಗಿ ಸಿಬ್ಬಂದಿ ನೇಮಕಕ್ಕೆ ಸರ್ಕಾರ ಅನುಮತಿ ನೀಡುತ್ತಿಲ್ಲ. ಆದ್ದರಿಂದ ಇರುವ ಸಿಬ್ಬಂದಿಯಲ್ಲೇ ಕಾರ್ಯಾಚರಣೆ ಮಾಡಬೇಕಿದೆ. ಸಿಬ್ಬಂದಿ ನೇಮಕಕ್ಕೆ ಅನುಮತಿ ಕೋರಿದ್ದೇವೆ. ಕೋವಿಡ್ ಬಳಿಕ ಸಾರಿಗೆ ಸಂಸ್ಥೆಗಳು ಆರ್ಥಿಕ ಸಂಕಷ್ಟ ಎದುರಿಸುತ್ತಿರುವುದರಿಂದ ಅನುಮತಿ ಸಿಕ್ಕಿಲ್ಲ. ಗುತ್ತಿಗೆ ಆಧಾರದಲ್ಲಿ ಒಂದು ಸಾವಿರ ಚಾಲಕರನ್ನು ನೇಮಿಸಿಕೊಳ್ಳಲು ಅವಕಾಶ ಇದೆ. ಈ ಪ್ರಯತ್ನ ನಡೆಯುತ್ತಿದೆ' ಎಂದು ಅಧಿಕಾರಿಯೊಬ್ಬರು ವಿವರಿಸಿದರು.



ಆಹಾ... ಕಾರು!

ಚಿಣ್ಣರಿಗೆ ಕಾರು ಸದಾ ಆಕರ್ಷಣೆ. ಅಂಥ ಮಕ್ಕಳು ಕಣ್ತುಂಬಿಕೊಳ್ಳಲೆಂದೇ ಯಲಹಂಕದಲ್ಲಿ ಕಾರುಗಳ ಪ್ರತಿಕೃತಿಗಳಿಂದಲೇ ರೂಪಿಸಿದ ಈ ವಿನ್ಯಾಸ ಈಗ ವಿಶೇಷವಾಗಿ ಗಮನ ಸೆಳೆಯುತ್ತಿದೆ

–ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

₹28 ಲಕ್ಷ ಮೌಲ್ಯದ ಡಾಲರ್ ವಶ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಬ್ಯಾಂಕಾಕ್‌ಗೆ ಹೊರಟಿದ್ದ ಪ್ರಯಾಣಿಕರೊಬ್ಬರು ದಾಖಲೆಗಳು ಇಲ್ಲದೆ ಸಾಗಿಸುತ್ತಿದ್ದ ₹28 ಲಕ್ಷ ಮೌಲ್ಯದ 35000 ಅಮೆರಿಕನ್ ಡಾಲರ್ ನಗದನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಗುರುವಾರ ವಶಪಡಿಸಿಕೊಳ್ಳಲಾಗಿದೆ.

ಕಸ್ಟಮ್ಸ್ ಇಲಾಖೆಯ ಕಂದಾಯ ಗುಪ್ತಚರ ದಳದ ಅಧಿಕಾರಿಗಳು ಪ್ರಯಾಣಿಕರನ್ನು ಪರಿಶೀಲನೆ ಮಾಡಿದಾಗ ಬ್ಯಾಂಕಾಕ್‌ಗೆ ಹೊರಟಿದ್ದ ಪ್ರಯಾಣಿಕರೊಬ್ಬರ ಹ್ಯಾಂಡ್ ಬ್ಯಾಗ್‌ನಲ್ಲಿ 35000 ಅಮೆರಿಕನ್ ಡಾಲರ್ ಪತ್ತೆಯಾಗಿದೆ.


ಅಕ್ರಮವಾಗಿ ಸಾಗಿಸುತ್ತಿದ್ದ ಅಮೆರಿಕನ್ ಡಾಲರ್ ನಗದು

ಪ್ರಯಾಣಿಕ ಕಾನೂನು ಬಾಹಿರವಾಗಿ ಈ ನಗದನ್ನು ಸಾಗಿಸುತ್ತಿದ್ದ. ಹಣಕ್ಕೆ ಸೂಕ್ತ ದಾಖಲೆಗಳು ಅವರ ಬಳಿ ಇರಲಿಲ್ಲ. ವಶಪಡಿಸಿಕೊಂಡ ಡಾಲರ್ ಮೌಲ್ಯ ₹28 ಲಕ್ಷ ಎಂದು ಅಂದಾಜಿಸಲಾಗಿದೆ. ಆರೋಪಿ ವಿರುದ್ಧ ವಾಯು ಗುಪ್ತಚರ ವಿಭಾಗದಲ್ಲಿ ಪ್ರಕರಣ ದಾಖಲಾಗಿದೆ.

ಮದ್ಯದ ಅಮಲಿನಲ್ಲಿ ಮಾರಾಮಾರಿ: ಮೂವರಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯನಗರ ಠಾಣೆ ವ್ಯಾಪ್ತಿಯ ಎಂ.ಆರ್. ಗಾರ್ಡನ್‌ನ ಬಾರ್ ಎದುರು ಎರಡು ಗುಂಪುಗಳ ನಡುವೆ ಮಾರಾಮಾರಿ ನಡೆದಿದ್ದು, ಮೂವರು ಗಾಯಗೊಂಡಿದ್ದಾರೆ.

'ಬುಧವಾರ ರಾತ್ರಿ ನಡೆದಿರುವ ಗಲಾಟೆ ಸಂಬಂಧ ಪ್ರಕರಣ ದಾಖಲಾಗಿದೆ. ಗಾಯಗೊಂಡಿರುವ ಮೂವರು ಯುವಕರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಾರ್‌ನಲ್ಲಿ ಅಕ್ಕ–ಪಕ್ಕದ ಟೇಬಲ್‌ನಲ್ಲಿ ಕುಳಿತಿದ್ದವರ ನಡುವೆ ಕ್ಷುಲ್ಲಕ ಕಾರಣಕ್ಕೆ ಜಗಳ ನಡೆದಿತ್ತು. ಬಾರ್‌ನಿಂದ ಹೊರ ಬಂದ ನಂತರ, ಮತ್ತಷ್ಟು ಮಂದಿ ಸ್ಥಳಕ್ಕೆ ಬಂದು ಕೈ ಕೈ ಮಿಲಾಯಿಸಿದ್ದರು. ದೊಣ್ಣೆಗಳಿಂದ ಹೊಡೆದಾಡಿದ್ದರು. ಪ್ರಕರಣದ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದು ತಿಳಿಸಿವೆ.

ಚಂದ್ರಾ ಲೇಔಟ್ ಪೊಲೀಸರಿಂದ ಬಂಧನ: ಸೇವೆಯಿಂದ ಅಮಾನತು

ವಿಚಾರಣೆ ನೆಪ: ₹10 ಲಕ್ಷ ಕದ್ದ ಹೆಡ್ ಕಾನ್‌ಸ್ಟೆಬಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣ ಬದಲಾವಣೆ ಮಾಡಲು ಹೊರಟಿದ್ದ ತಂಡವೊಂದನ್ನು ವಿಚಾರಣೆ ನೆಪದಲ್ಲಿ ತಡೆದು ₹ 10 ಲಕ್ಷ ಕಳ್ಳತನ ಮಾಡಿದ್ದ ಆರೋಪದಡಿ ಹೆಡ್ ಕಾನ್‌ಸ್ಟೆಬಲ್ ಮಹೇಂದ್ರಗೌಡ ಅವರನ್ನು ಚಂದ್ರಾ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಬಂಧಿತ ಮಹೇಂದ್ರಗೌಡ, ಚಂದ್ರಾ ಲೇಔಟ್ ಠಾಣೆಯಲ್ಲಿ ಹಲವು ತಿಂಗಳಿನಿಂದ ಕೆಲಸ ಮಾಡುತ್ತಿದ್ದ. ಹೊಯ್ಸಳ ಗಸ್ತು ವಾಹನದ ಕೆಲಸಕ್ಕೆ ಈತನನ್ನು ನಿಯೋಜಿಸಲಾಗಿತ್ತು. ಹಣ ಬದಲಾವಣೆ ಜಾಲದ ಬಗ್ಗೆ ತಿಳಿದುಕೊಂಡಿದ್ದ ಈತ, ಆರೋಪಿ ಶಶಿ ಹಾಗೂ ಇತರರ ಜೊತೆ ಸೇರಿ ಕೃತ್ಯ ಎಸಗಿದ್ದ. ಮಹೇಂದ್ರಗೌಡ ಜೊತೆಯಲ್ಲಿ ಶಶಿಯನ್ನೂ ಬಂಧಿಸಲಾಗಿದೆ. ಇಬ್ಬರೂ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಚನ್ನಪಟ್ಟಣ ತಾಲ್ಲೂಕಿನ ರಾಮಪುರದ ಲಿಂಗೇಶ್ ಎಂಬುವವರ ಬಳಿಯ ₹ 10 ಲಕ್ಷವನ್ನು ಕಳ್ಳತನ ಮಾಡಲಾಗಿತ್ತು. ಲಿಂಗೇಶ್ ನೀಡಿದ್ದ ದೂರು ಆಧರಿಸಿ ತನಿಖೆ ನಡೆಸಿದಾಗ, ಹೆಡ್ ಕಾನ್‌ಸ್ಟೆಬಲ್ ಸಿಕ್ಕಿಬಿದ್ದ. ಈತನನ್ನು ಅಮಾನತು ಮಾಡಿ ಪಶ್ಚಿಮ ವಿಭಾಗದ ಡಿಸಿಪಿ ಲಕ್ಷ್ಮಣ ನಿಂಬರಗಿ ಆದೇಶ ಹೊರಡಿಸಿದ್ದಾರೆ' ಎಂದು ತಿಳಿಸಿವೆ.

ಅಪರಾಧ ಸುದ್ದಿ

ನೋಟು ಬದಲಾವಣೆ ಜಾಲ: 'ಕೃಷಿಕರಾದ ಲಿಂಗೇಶ್, ರಿಯಲ್ ಎಸ್ಟೇಟ್ ಉದ್ಯಮದಲ್ಲೂ ತೊಡಗಿದ್ದಾರೆ. ಇವರಿಗೆ ಬೆಂಗಳೂರಿನ ಪ್ರದೀಪ್ ಎಂಬುವವರ ಪರಿಚಯವಾಗಿತ್ತು. ಕೆಲ ದಿನಗಳ ಹಿಂದೆಯಷ್ಟೇ ಲಿಂಗೇಶ್ ಅವರಿಗೆ ಕರೆ ಮಾಡಿದ್ದ ಪ್ರದೀಪ್, '₹ 2,000 ಮುಖಬೆಲೆಯ ನೋಟುಗಳು ಕೆಲವೇ ದಿನಗಳಲ್ಲಿ ರದ್ದಾಗುವ ಸಾಧ್ಯತೆ ಇದೆ. ನನ್ನ ಪರಿಚಯಸ್ಥರೊಬ್ಬರ ಬಳಿ ₹ 2,000 ಮುಖಬೆಲೆಯ ನೂರಾರು ಕೋಟಿ ರೂಪಾಯಿ ಹಣವಿದೆ. ಅವರಿಗೆ ₹ 500 ಮುಖಬೆಲೆಯ ನೋಟುಗಳನ್ನು ನೀಡಿದರೆ, ಶೇ 10ರಷ್ಟು ಕಮಿಷನ್ ಕೊಡುತ್ತಾರೆ' ಎಂದಿದ್ದ. ಇದನ್ನು ನಂಬಿದ್ದ ಲಿಂಗೇಶ್, ₹ 50 ಲಕ್ಷ ನೀಡಲು ಸಿದ್ಧರಾಗಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಅಕ್ಟೋಬರ್ 2ರಂದು ₹ 50 ಲಕ್ಷ ಸಮೇತ ನಗರಕ್ಕೆ ಬಂದಿದ್ದ ಲಿಂಗೇಶ್, ಪ್ರದೀಪ್ ಅವರ ಹೊಂಡಾ ಸಿಟಿ ಕಾರಿನಲ್ಲಿ ಎಲೆಕ್ಟ್ರಾನಿಕ್ ಸಿಟಿಯ ಸಿಂಗಸಂದ್ರಕ್ಕೆ ಹೋಗಿದ್ದರು. ನೋಟು ಬದಲಾವಣೆ ಜಾಲದ ಸದಸ್ಯರು ಎನ್ನಲಾದ ವೆಟ್ರಿವೇಲು ಹಾಗೂ ಇತರರು, 'ಈ ಸ್ಥಳದಲ್ಲಿ ಹಣ ಬದಲಾವಣೆ ಸಾಧ್ಯವಿಲ್ಲ. ಜ್ಞಾನಭಾರತಿಯ ಬೆಂಗಳೂರು ವಿಶ್ವವಿದ್ಯಾಲಯದ ಕ್ಯಾಂಪಸ್ ಬಳಿ ಹೋಗೋಣ' ಎಂದು ಲಿಂಗೇಶ್ ಹಾಗೂ ಪ್ರದೀಪ್ ಕರೆದುಕೊಂಡು ಅಲ್ಲಿಂದ ಹೊರಟಿದ್ದರು' ಎಂದು ಮೂಲಗಳು ತಿಳಿಸಿವೆ.

'ಮಾರ್ಗಮಧ್ಯೆ ಸ್ಥಳ ಬದಲಿಸಿದ್ದ ವೆಟ್ರಿವೇಲು ಹಾಗೂ ಇತರರು, ಲಿಂಗೇಶ್ ಹಾಗೂ ಪ್ರದೀಪ್ ಅವರನ್ನು ಚಂದ್ರಾ ಲೇಔಟ್‌ಗೆ ಕರೆದೊಯ್ದಿದ್ದರು. ಅದೇ ಸ್ಥಳಕ್ಕೆ ಶ್ಯಾಮ್ ಸಂತೋಷ್ ಎಂಬಾತ ಬಂದಿದ್ದ. ಎಲ್ಲರೂ ಸೇರಿ ಕಾರಿನ ಎದುರು ನಿಂತುಕೊಂಡು ಮಾತನಾಡುತ್ತಿದ್ದರು. ಅದೇ ಸಂದರ್ಭದಲ್ಲೇ ಸ್ಥಳಕ್ಕೆ ಹೋಗಿದ್ದ ಹೆಡ್ ಕಾನ್‌ಸ್ಟೆಬಲ್ ಮಹೇಂದ್ರಗೌಡ, ಎಲ್ಲರನ್ನೂ ವಿಚಾರಣೆ ನಡೆಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕಾರಿನಲ್ಲಿದ್ದ ಬ್ಯಾಗ್‌ನಲ್ಲಿ ₹ 50 ಲಕ್ಷ ಹಣವಿರುವುದನ್ನು ನೋಡಿದ್ದ ಹೆಡ್ ಕಾನ್‌ಸ್ಟೆಬಲ್, ಪ್ರಕರಣ ದಾಖಲಿಸುವುದಾಗಿ ಬೆದರಿಸಿದ್ದ. ನಂತರ, ಕಾರು ಜಪ್ತಿ ಮಾಡಿ ಲಿಂಗೇಶ್ ಹಾಗೂ ಇತರರನ್ನು ಠಾಣೆಗೆ ಕಳುಹಿಸಿದ್ದ' ಎಂದು ತಿಳಿಸಿವೆ.

ಪತ್ನಿ ಬಳಿ ಹಣ ಜಪ್ತಿ

'ಕಾರನ್ನು ಠಾಣೆಗೆ ತೆಗೆದುಕೊಂಡು ಹೋಗುವ ಸಂದರ್ಭದಲ್ಲೇ ₹ 10 ಲಕ್ಷ ಕದ್ದಿದ್ದ ಆರೋಪಿ, ಅದನ್ನು ಪ್ಲಾಸ್ಟಿಕ್ ಪೊಟ್ಟಣದಲ್ಲಿ ಸುತ್ತಿ ಪರಿಚಯಸ್ಥರೊಬ್ಬರ ಮೂಲಕ ಪತ್ನಿಗೆ ತಲುಪಿಸಿದ್ದ. ನಂತರ, ಯಥಾಪ್ರಕಾರ ಠಾಣೆಗೆ ಕಾರು ತಂದಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕಾರಿನಲ್ಲಿದ್ದ ಬ್ಯಾಗ್ ಇಳಿಸಿಕೊಂಡಿದ್ದ ಪೊಲೀಸರು, ನೋಟು ಎಣಿಸಿದ್ದರು. ₹ 40 ಲಕ್ಷ ಇರುವುದಾಗಿ ಹೇಳಿದ್ದರು. ಅವಾಗಲೇ ಲಿಂಗೇಶ್, 'ಕಾರಿನಲ್ಲಿ ₹ 50 ಲಕ್ಷವಿತ್ತು. ಉಳಿದ ₹ 10 ಲಕ್ಷವನ್ನು ಹೆಡ್ ಕಾನ್‌ಸ್ಟೆಬಲ್ ಮಹೇಂದ್ರಗೌಡ ಕಳ್ಳತನ ಮಾಡಿರುವ ಅನುಮಾನವಿದೆ' ಎಂದು ದೂರು ನೀಡಿದ್ದರು.

ಮಹೇಂದ್ರಗೌಡನನ್ನು ವಶಕ್ಕೆ ಪಡೆದು ವಿಚಾರಿಸಿದಾಗ ತಪ್ಪೊಪ್ಪಿಕೊಂಡ. ಈತನ ಪತ್ನಿ ಬಳಿಯಿದ್ದ ಹಣವನ್ನೂ ಜಪ್ತಿ ಮಾಡಲಾಯಿತು' ಎಂದು ತಿಳಿಸಿವೆ.

'₹ 2,000 ಮುಖಬೆಲೆಯ ನೋಟುಗಳು ರದ್ದಾಗುವುದಾಗಿ ಸುಳ್ಳು ಸುದ್ದಿ ಹಬ್ಬಿಸಿ, ಹಣ ಬದಲಾವಣೆ ನೆಪದಲ್ಲಿ ವಂಚಿಸಿರುವ ಜಾಲ ಇದಾಗಿದೆ. ಜಾಲದ ಸದಸ್ಯರ ಜೊತೆ ಹೆಡ್ ಕಾನ್‌ಸ್ಟೆಬಲ್ ಸಹ ಶಾಮೀಲಾಗಿ ಕೃತ್ಯ ಎಸಗಿರುವ ಅನುಮಾನವಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿವೆ.

ಕ್ಯಾಮೆರಾ ಕಿತ್ತೆಸೆದು ಕಾನ್‌ಸ್ಟೆಬಲ್ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯನಗರ ಸಂಚಾರ ಠಾಣೆ ಕಾನ್‌ಸ್ಟೆಬಲ್ ಮಹೇಶ್ ಕರ್ತವ್ಯಕ್ಕೆ ಅಡ್ಡಿಪಡಿಸಿ ಹಲ್ಲೆ ಮಾಡಿದ್ದ ಆರೋಪದಡಿ ಗೂಡ್ಸ್ ಆಟೊ ಚಾಲಕ ರಮೇಶ್ ಎಂಬುವವರ ಮೇಲೆ ಬಸವೇಶ್ವರನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮಂಡ್ಯದ ರಮೇಶ್ ನಗರದಲ್ಲಿ ನೆಲೆಸಿದ್ದ. ಅಕ್ಟೋಬರ್ 1ರಂದು ನಡೆದಿರುವ ಘಟನೆ ಸಂಬಂಧ ಮಹೇಶ್ ದೂರು ನೀಡಿದ್ದರು. ರಮೇಶ್‌ನನ್ನು ಬಂಧಿಸಲಾಗಿದೆ. ಸದ್ಯ ಈತ ನ್ಯಾಯಾಂಗ ಬಂಧನದಲ್ಲಿದ್ದಾನೆ' ಎಂದು ಪೊಲೀಸರು ಹೇಳಿದರು.

'ಕಾನ್‌ಸ್ಟೆಬಲ್ ಮಹೇಶ್, ಮೋದಿ ಸೇತುವೆ ಬಳಿ ಕರ್ತವ್ಯ ನಿರ್ವಹಿಸುತ್ತಿದ್ದರು. ಆರೋಪಿ ರಮೇಶ್ ರಸ್ತೆಯಲ್ಲಿ ಸಾರ್ವಜನಿಕರಿಗೆ ತೊಂದರೆಯಾಗುವಂತೆ ಆಟೊ ನಿಲ್ಲಿಸಿದ್ದ. ಅದನ್ನು ಪ್ರಶ್ನಿಸಿದ್ದ ಮಹೇಶ್, ಆಟೊ ತೆಗೆಯುವಂತೆ ಹೇಳಿದ್ದರು. ಅಷ್ಟಕ್ಕೇ ಸಿಟ್ಟಾಗಿದ್ದ ಆರೋಪಿ, ಏರುಧ್ವನಿಯಲ್ಲಿ ಮಾತನಾಡಿದ್ದ. ಆಟೊ ತೆಗೆದಿರಲಿಲ್ಲ. ಚಾಲಕನ ನಿಯಮ ಉಲ್ಲಂಘನೆಯ ಫೋಟೊ ಕ್ಲಿಕ್ಕಿಸಲೆಂದು ಮಹೇಶ್ ಮೊಬೈಲ್ ಹೊರತೆಗೆದಿದ್ದರು. ಕೋಪಗೊಂಡ ಚಾಲಕ, ಮೊಬೈಲ್ ಕಿತ್ತುಕೊಂಡು ಬಿಸಾಕಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದ. ಸಮವಸ್ತ್ರ ಹಿಡಿದು ಎಳೆದಾಡಿ ಹಲ್ಲೆ ಮಾಡಿದ್ದ. ಮಹೇಶ್ ಧರಿಸಿದ್ದ ಬಾಡಿವೋರ್ನ್ ಕ್ಯಾಮೆರಾವನ್ನೂ ಕಿತ್ತೆಸೆದಿದ್ದ' ಎಂದು ತಿಳಿಸಿದರು.

'ಘಟನೆ ಬಗ್ಗೆ ಹಿರಿಯ ಅಧಿಕಾರಿಗಳಿಗೆ ತಿಳಿಸಿದ ಮಹೇಶ್, ನಂತರ ಠಾಣೆಗೆ ದೂರು ನೀಡಿದ್ದರು' ಎಂದರು.

ಮೂರ್ತಿ ವಿಸರ್ಜನೆ ಅವಘಡ: ಯುವಕರ ಮೃತದೇಹಗಳು ಪತ್ತೆ

ಬೆಂಗಳೂರು: ಸುಣಕಲ್ ಪಾಳ್ಯದ ಕೆರೆಯಲ್ಲಿ ದುರ್ಗಾ ಮೂರ್ತಿ ವಿಸರ್ಜನೆ ವೇಳೆ ಮುಳುಗಿದ್ದ ಇಬ್ಬರು ಯುವಕರ ಮೃತದೇಹಗಳು ಗುರುವಾರ ಪತ್ತೆಯಾಗಿದ್ದು, ಈ ಘಟನೆ ಸಂಬಂಧ ಕೆಂಗೇರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಬುಧವಾರ ರಾತ್ರಿ ಕೆರೆ ಬಳಿ ಬಂದಿದ್ದ ಗುಂಪು, ದುರ್ಗಾ ಮೂರ್ತಿ ವಿಸರ್ಜನೆಗಾಗಿ ನೀರಿನಲ್ಲಿ ಇಳಿದಿತ್ತು. ಇದೇ ಸಂದರ್ಭದಲ್ಲೇ ಸೋಮೇಶ್ (21) ಹಾಗೂ ಜಿತೇಂದ್ರ (22) ನೀರಿನಲ್ಲಿ ಮುಳುಗಿದ್ದರು. ರಾತ್ರಿಯಿಡೀ ಹುಡುಕಾಟ ನಡೆಸಿದರೂ ಇಬ್ಬರೂ ಪತ್ತೆ ಆಗಿರಲಿಲ್ಲ. ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಪೊಲೀಸರು ಜಂಟಿಯಾಗಿ ಕಾರ್ಯಾಚರಣೆ ನಡೆಸಿ, ಇಬ್ಬರ ಮೃತದೇಹಗಳನ್ನು ಪತ್ತೆ ಮಾಡಿ ಕೆರೆಯಿಂದ ಹೊರಗೆ ತೆಗೆದಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಮೃತ ಸೋಮೇಶ್ ಹಾಗೂ ಜಿತೇಂದ್ರ ಮಹಾರಾಷ್ಟ್ರದವರು. ನಗರದ ನಿರ್ಮಾಣ ಹಂತದ ಕಟ್ಟಡಗಳಲ್ಲಿ ಸೆಂಟ್ರಿಂಗ್ ಕೆಲಸ ಮಾಡುತ್ತಿದ್ದರು. ಕುಟುಂಬದ ಜೊತೆ ರಾಜರಾಜೇಶ್ವರಿನಗರದಲ್ಲಿ ವಾಸವಿದ್ದರು' ಎಂದರು.

ಸಂಕ್ಷಿಪ್ತ ಸುದ್ದಿ

ಮಾರಕಾಸ್ತ್ರಗಳಿಂದ ಜೋಡಿ ಕೊಲೆ

ಬೆಳಗಾವಿ: ತಾಲ್ಲೂಕಿನ ಸುಳೇಭಾವಿ ಗ್ರಾಮದಲ್ಲಿ ಗುರುವಾರ ರಾತ್ರಿ ಮಾರಕಾಸ್ತ್ರಗಳಿಂದ ಕೊಚ್ಚಿ ಇಬ್ಬರು ಯುವಕರನ್ನು ಕೊಲೆ ಮಾಡಲಾಗಿದೆ.

ಸುಳೇಭಾವಿ ಗ್ರಾಮದ ಮಹೇಶ ಮುರಾರಿ (26) ಹಾಗೂ ಪ್ರಕಾಶ ಹುಂಕ್ರಿಪಾಟೀಲ (24) ಹತ್ಯೆಯಾದವರು. ಕೊಲೆಗೆ ನಿಖರ ಕಾರಣ ತಿಳಿದಿಲ್ಲ. ಘಟನೆಯಿಂದಾಗಿ ಗ್ರಾಮದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ.

ಇಬ್ಬರೂ ವ್ಯಕ್ತಿಗಳು ಸುಳೇಭಾವಿ ಗ್ರಾಮದ ಶಿವಾಜಿ ಮಹಾರಾಜರ ಪ್ರತಿಮೆ ಬಳಿ ನಿಂತಿದ್ದರು. ಅಲ್ಲಿಗೆ ಬಂದ ದುಷ್ಕರ್ಮಿಗಳ ಗುಂಪು ಏಕಾಏಕಿ ಮಾರಕಾಸ್ತ್ರಗಳಿಂದ ಇಬ್ಬರ ಮೇಲೆ ಹಲ್ಲೆ ಮಾಡಿತು. ದಾಳಿಯಿಂದ ತಪ್ಪಿಸಿಕೊಳ್ಳಲು ಇಬ್ಬರೂ ಓಡಿದರು. ಬೆನ್ನಟ್ಟಿದ ಗುಂಪು ಪದೇಪದೇ ಅವರ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ, ಅವರು ಸತ್ತಿದ್ದನ್ನು ಖಚಿತ ಮಾಡಿಕೊಂಡು ಪರಾರಿಯಾಯಿತು ಎಂದು ಪೊಲೀಸ್ ಮೂಲಗಳು ಮಾಹಿತಿ ನೀಡಿವೆ.

ನಗರ ಪೊಲೀಸ್ ಆಯುಕ್ತ ಡಾ.ಬೋರಲಿಂಗಯ್ಯ, ಡಿಸಿಪಿ ರವೀಂದ್ರ ಗಡಾಡಿ ಹಾಗೂ ಮಾರಿಹಾಳ ಠಾಣೆ ಸಿಬ್ಬಂದಿ ಸೇರಿ ನೂರಕ್ಕೂ ಹೆಚ್ಚು ಪೊಲೀಸರು ಗ್ರಾಮಕ್ಕೆ ದೌಡಾಯಿಸಿದರು. ಎಲ್ಲೆಡೆ ಬಂದೋಬಸ್ತ್ ಮಾಡಿ, ರಾತ್ರಿ ಜನ ಹೊರಬರದಂತೆ ಎಚ್ಚರಿಕೆ ನೀಡಿದರು.

ಶಿರಾಳಕೊಪ್ಪ: ಭೂಕಂಪನದ ಅನುಭವ

ಶಿರಾಳಕೊಪ್ಪ (ಶಿವಮೊಗ್ಗ ಜಿಲ್ಲೆ): ಶಿರಾಳಕೊಪ್ಪ ಹಾಗೂ ಸುತ್ತಲಿನ ಗ್ರಾಮಗಳಲ್ಲಿ ಗುರುವಾರ ನಸುಕಿನ 3.55ಕ್ಕೆ ಭೂಮಿ ಕಂಪಿಸಿದ ಅನುಭವವಾಗಿದೆ.

ಸೊರಬ ರಸ್ತೆಯ ಬಾಲಾಜಿ ಪೆಟ್ರೋಲ್ ಬಂಕ್ ಕಚೇರಿ ಕಟ್ಟಡದ ಮುಂದಿನ ಗಾಜುಗಳು ಒಡೆದಿವೆ. ಭೂಕಂಪನವಾಗಿರುವ ಬಗ್ಗೆ ಸ್ಥಳೀಯರು ಅನುಭವ ಹೇಳಿಕೊಂಡಿದ್ದು, ಸಾಮಾಜಿಕ ಜಾಲತಾಣಗಳಲ್ಲೂ ಮಾಹಿತಿ ಹಂಚಿಕೊಂಡಿದ್ದಾರೆ.

ಪಟ್ಟಣಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿ ಡಾ.ಆರ್. ಸೆಲ್ವಮಣಿ ಅವರು ಪುರಸಭೆ, ಕಂದಾಯ ಹಾಗೂ ಪೊಲೀಸ್ ಇಲಾಖೆ ಅಧಿಕಾರಿಗಳ ಸಭೆ ನಡೆಸಿದರು.

ಯುವಕನ ಅಂಗಾಂಗ ದಾನ

ಚನ್ನಪಟ್ಟಣ: ಅನಾರೋಗ್ಯದಿಂದ ಮೃತರಾದ ತಮ್ಮ ಪುತ್ರನ ಕಣ್ಣು ಹಾಗೂ ವಿವಿಧ ಅಂಗಾಂಗಗಳನ್ನು ಕುಟುಂಬ ದಾನ ಮಾಡಿದ್ದಾರೆ.

ತಾಲ್ಲೂಕಿನ ನಾಗವಾರದ ರತ್ನಮ್ಮ ಕಾಳೇಗೌಡ ದಂಪತಿ ಒಬ್ಬನೇ ಪುತ್ರ ರಾಕೇಶ್ (31) ಮಂಗಳವಾರ ಅನಾರೋಗ್ಯದಿಂದ ನಿಧನರಾದರು. ಇವರಿಗೆ ಕಳೆದ ಒಂದು ವರ್ಷದ ಹಿಂದೆ ವಿವಾಹವಾಗಿತ್ತು. ಕಳೆದ ಕೆಲವು ದಿನಗಳಿಂದ ಅನಾರೋಗ್ಯಕ್ಕೆ ಒಳಗಾಗಿದ್ದರು. ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಮಂಗಳವಾರ ಮೃತಪಟ್ಟರು.

₹76 ಲಕ್ಷ ಮೌಲ್ಯದ ಎಂಡಿಎಂಎ ಮಾತ್ರೆ ಪತ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬೆಲ್ಜಿಯಂನಿಂದ ಬಂದಿದ್ದ ಕೋರಿಯರ್ ಬ್ಯಾಗ್‌ನಲ್ಲಿ 5080 ಎಂಡಿಎಂಎ ಮಾದಕ ವಸ್ತುವಿನ ಮಾತ್ರೆಗಳನ್ನು ವಶಕ್ಕೆ ಪಡೆಯಲಾಗಿದೆ.

ಪಾರ್ಸೆಲ್ ಬಗ್ಗೆ ಅನುಮಾನಗೊಂಡ ಅಧಿಕಾರಿಗಳು ಎಕ್ಸ್ ರೇ ವಿಭಾಗದಲ್ಲಿ ತಪಾಸಣೆ ಮಾಡಿದಾಗ ಅದನ್ನು ತೆಗೆದು ನೋಡಿದಾಗ 5080 ಎಂಡಿಎಂಎ ಮಾದಕ ಮಾತ್ರೆಗಳು ಇರುವುದು ಬೆಳಕಿಗೆ ಬಂದಿದೆ. ವಶಪಡಿಸಿಕೊಂಡ ಮಾದಕ ಮಾತ್ರೆಗಳ ಮೌಲ್ಯ ₹76.02 ಲಕ್ಷ ಎಂದು ಏರ್ ಕಾರ್ಗೋ, ಬೆಂಗಳೂರು ಕಸ್ಟಮ್ಸ್ ಮಾದಕ ವಸ್ತು ನಿಗ್ರಹ ದಳ ಹಾಗೂ ವಾಯು ಗುಪ್ತಚರ ದಳದ ಅಧಿಕಾರಿಗಳು ತಿಳಿಸಿದ್ದಾರೆ.

ವಿಳಾಸ ಗೊತ್ತಿಲ್ಲವೆಂದಿದ್ದಕ್ಕೆ ಹಲ್ಲೆ

ಬೆಂಗಳೂರು: ಮಾಗಡಿ ರಸ್ತೆ ಠಾಣೆ ವ್ಯಾಪ್ತಿಯಲ್ಲಿ ದೀಪಕ್ ರಾಜ್ ಎಂಬುವವರ ಮೇಲೆ ಮಾರಕಾಸ್ತ್ರದಿಂದ ಹಲ್ಲೆ ಮಾಡಲಾಗಿದ್ದು, ಈ ಸಂಬಂಧ ಪ್ರಕರಣ ದಾಖಲಾಗಿದೆ.

'ಕೆಎಚ್‌ಬಿ ಕಾಲೊನಿ ನಿವಾಸಿ ದೀಪಕ್ ಅವರು ಬುಧವಾರ ರಾತ್ರಿ ಮನೆ ಸಮೀಪದಲ್ಲಿ ಸ್ನೇಹಿತನ ಜೊತೆ ಮಾತನಾಡುತ್ತ ನಿಂತಿದ್ದರು. ಇದೇ ವೇಳೆ ಸ್ಥಳಕ್ಕೆ ಬಂದಿದ್ದ ದುಷ್ಕರ್ಮಿಗಳು ಹಲ್ಲೆ ಮಾಡಿ ಪರಾರಿಯಾಗಿದ್ದಾರೆ. ಗಾಯಗೊಂಡಿರುವ ದೀಪಕ್ ಚಿಕಿತ್ಸೆ ಪಡೆಯುತ್ತಿದ್ದು, ಅವರ ತಂದೆ ದೂರು ನೀಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಯುವತಿ ವಿಚಾರವಾಗಿ ಕೆಎಚ್‌ಬಿ ಕಾಲೊನಿ ಯುವಕನೊಬ್ಬನ ಜೊತೆ ದುಷ್ಕರ್ಮಿಗಳು ದ್ವೇಷ ಸಾಧಿಸುತ್ತಿದ್ದರು. ಯುವಕನ ಮೇಲೆ ಹಲ್ಲೆ ಮಾಡುವ ಉದ್ದೇಶದಿಂದ ದುಷ್ಕರ್ಮಿಗಳು ಬೈಕ್‌ನಲ್ಲಿ ಕೆಎಚ್‌ಬಿ ಕಾಲೊನಿಗೆ ಬಂದಿದ್ದರು. ರಸ್ತೆಯಲ್ಲಿ ನಿಂತಿದ್ದ ದೀಪಕ್ ಅವರನ್ನು ಮಾತನಾಡಿಸಿ, ಯುವಕನ ಮನೆ ವಿಳಾಸ ಕೇಳಿದ್ದರು. ತಮಗೆ ಗೊತ್ತಿಲ್ಲವೆಂದು ಹೇಳುತ್ತಿದ್ದಂತೆ ದೀಪಕ್ ಮೇಲೆ ಆರೋಪಿಗಳು ಹಲ್ಲೆ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಮೂಲಗಳು ತಿಳಿಸಿವೆ.

10ರಿಂದ ಮಾದಕ ದ್ರವ್ಯಮುಕ್ತ ಕರ್ನಾಟಕ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು : ಸಾಲಿಡಾರಿಟಿ ಯೂತ್ ಮೂವ್‌ಮೆಂಟ್ ಅಕ್ಟೋಬರ್ 10ರಿಂದ ನವೆಂಬರ್ 10ರ ವರೆಗೆ 'ಸೇ ನೋ ಟು ಡ್ರಗ್ಸ್' ಮಾದಕ ದ್ರವ್ಯ ಮುಕ್ತ ಕರ್ನಾಟಕ ಅಭಿಯಾನಕ್ಕೆ ಚಾಲನೆ ನೀಡುವುದಾಗಿ ತಿಳಿಸಿದೆ.

'ಇಂದಿನ ಯುವ ಸಮೂಹ ಅದರಲ್ಲೂ ವಿದ್ಯಾರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಮಾದಕ ದ್ರವ್ಯ ವ್ಯಸನಿಗಳಾಗುತ್ತಿದ್ದಾರೆ. ಈ ಬಗ್ಗೆ ಸಾರ್ವಜನಿಕರಲ್ಲಿ ಅದರಲ್ಲಿಯೂ ಯುವ ಪೀಳಿಗೆಯಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ' ಎಂದು ಸಾಲಿಡಾರಿಟಿ ಯೂತ್ ಮೂವ್‌ಮೆಂಟ್ ರಾಜ್ಯ ಘಟಕದ ಅಧ್ಯಕ್ಷ ಲಬೀದ್ ಶಾಫಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'2021ರ ವರದಿ ಪ್ರಕಾರ ಜಗತ್ತಿನ 27.5 ಕೋಟಿ ಜನ ಮಾದಕ ವ್ಯಸನಿಗಳಾಗಿದ್ದಾರೆ. ನ್ಯಾಷನಲ್ ಕ್ರೈಂ ರೇಕಾರ್ಡ್ ಬ್ಯೂರೋ (ಎನ್‌ಸಿಆರ್‌ಬಿ) ಪ್ರಕಾರ ದೇಶದಲ್ಲಿ 2018, 2019 ಮತ್ತು 2020ರಲ್ಲಿ ಮಾದಕ ವ್ಯಸನ ಮತ್ತು ಮದ್ಯದ ಚಟಗಳಿಗೆ 7,193, 7,860 ಮತ್ತು 9,169 ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಮಾಹಿತಿ ನೀಡಿದರು.

'ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ಸಾಮಾಜಿಕ ಜಾಲತಾಣ ಸೇರಿ ಶಾಲಾ–ಕಾಲೇಜುಗಳಲ್ಲಿ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಲಾಗುವುದು, ಬೀದಿ ನಾಟಕಗಳ ಮೂಲಕ ಜಾಗೃತಿ ಮೂಡಿಸಲಾಗುವುದು' ಎಂದು ತಿಳಿಸಿದರು.

ರಾಜ್ಯ ಕಾರ್ಯದರ್ಶಿ ರಿಯಾನ್ ಉಡುಪಿ, ಇಮ್ತಿಯಾಜ್, ಅಖಿಲ್ ಬೆಂಗಳೂರು ಹಾಗೂ ಮಾಧ್ಯಮ ಕಾರ್ಯದರ್ಶಿ ನವಾಝ್ ಇದ್ದರು.

ಬಿಜೆಪಿಗರು ಭಾರತ ಬಿಟ್ಟು ಓಡೋ ಯಾತ್ರೆ: ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತ ಜೋಡೊ ಯಾತ್ರೆಯು ಬಿಜೆಪಿಯವರು ಭಾರತ ಬಿಟ್ಟು ಓಡೋ ಯಾತ್ರೆಯೂ ಹೌದು' ಎಂದು ಕರ್ನಾಟಕ ಕಾಂಗ್ರೆಸ್ ಹೇಳಿದೆ.

'ಕಾಂಗ್ರೆಸ್ ನಡೆಸುತ್ತಿರುವುದು ಭಾರತ ಬಿಟ್ಟು ಓಡೋ ಯಾತ್ರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ವ್ಯಂಗ್ಯವಾಡಿದ್ದರು. ಇದನ್ನು ಉಲ್ಲೇಖಿಸಿ ಪ್ರತಿ ಟ್ವೀಟ್ ಮಾಡಿರುವ ಕಾಂಗ್ರೆಸ್, 'ನಿಜ ಕಟೀಲ್ ಅವರೇ, ಸುಳ್ಯದಲ್ಲಿ ನೀವು ಕಾರು ಬಿಟ್ಟು ಓಡಿ ಹೋಗಿದ್ದೀರಲ್ಲ. ನಿಮಗೆ ಅದರ ಅಭ್ಯಾಸ ಚೆನ್ನಾಗಿ ಆಗಿರಬೇಕಲ್ಲವೇ' ಎಂದೂ ಕುಟುಕಿದೆ.

'ಭಾರತ ಜೋಡೊ ಯಾತ್ರೆಯು ಭಾರತದ ವಿಭಜನಾ ಜಾತ್ರೆ ಮಾಡುವವರಿಗೆ ತಮ್ಮ ಅಸ್ತಿತ್ವದ ಆತಂಕ ಮೂಡಿಸಿರುವುದು ಅಕ್ಷರಶಃ ಸತ್ಯ. ಯಾತ್ರೆಯ ದೃಶ್ಯಗಳು ಬಿಜೆಪಿಗೆ ಅಪಾರವಾದ ನೋವನ್ನು ತರುತ್ತಿವೆ. ಯೋಚಿಸಬೇಡಿ, ನಾವು ಅಧಿಕಾರಕ್ಕೇರಿದ ಮೇಲೆ ನಿಮಗೆ ಬರ್ನಲ್ ಭಾಗ್ಯ ಯೋಜನೆ ನೀಡುತ್ತೇವೆ' ಎಂದು ಹೇಳಿದೆ.

'ಇಂದಿರಾ ಗಾಂಧಿಗೆ ರಾಜಕೀಯ ಶಕ್ತಿ ತುಂಬಿದ್ದು ಚಿಕ್ಕಮಗಳೂರು. ಸೋನಿಯಾ ಗಾಂಧಿಯವರನ್ನು ಲೋಕಸಭೆಗೆ ಆಯ್ಕೆ ಮಾಡಿದ್ದು ಬಳ್ಳಾರಿ. ಇತಿಹಾಸದಲ್ಲಿ ಕಾಂಗ್ರೆಸ್ ಪುಟಿದೆದ್ದಿರುವುದು ಕರ್ನಾಟಕದ ನೆಲದಿಂದಲೇ, ಈಗಲೂ ಮತ್ತೊಮ್ಮೆ ಇತಿಹಾಸ ಮರುಕಳಿಸಲಿದೆ' ಎಂದೂ ಕಾಂಗ್ರೆಸ್ ಟ್ವೀಟ್ ಮಾಡಿದೆ.

'ಯಾತ್ರೆ ಸಾಗುವಾಗ ಯಾರಾದರೂ ಬಿದ್ದರೆ ಎಲ್ಲರೂ ಸೇರಿ ಅವರನ್ನು ಮೇಲೆತ್ತುತ್ತಾರೆ. ಯಾರೂ ನಿಮ್ಮ ಧರ್ಮ, ಜಾತಿ, ಭಾಷೆ ಯಾವುದೆಂದು ಕೇಳುವುದಿಲ್ಲ. ಇದೇ ಶಾಂತಿ, ಸೌಹಾರ್ದದ ಭಾರತ' ಎಂದು ರಾಹುಲ್ ಗಾಂಧಿ ಹೇಳುತ್ತಿರುತ್ತಾರೆ. ಅದನ್ನು ಸೋನಿಯಾಗಾಂಧಿ ಮಾಡಿ ತೋರಿಸಿದ್ದಾರೆ' ಎಂದಿರುವ ಕಾಂಗ್ರೆಸ್, ಯಾತ್ರೆಯಲ್ಲಿ ಬಿದ್ದ ಬಾಲಕಿಯನ್ನು ಸೋನಿಯಾ ಅವರು ಸಂತೈಸುವ ವಿಡಿಯೊವನ್ನೂ ಟ್ವೀಟ್‌ಗೆ ಲಗತ್ತಿಸಿದೆ.

ಎಚ್‌ಎಎಲ್‌ಗೆ ಹೆಲಿಕಾಪ್ಟರ್

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ಎಚ್‌ಎಎಲ್ ವಿಮಾನ ನಿಲ್ದಾಣದ ನಡುವೆ ಅಕ್ಟೋಬರ್ 10 ರಿಂದ ಹೆಲಿಕಾಪ್ಟರ್ ಸೇವೆ ಆರಂಭವಾಗಲಿದೆ. ಟ್ರಾಫಿಕ್ ಜಂಜಾಟ ಇಲ್ಲದೆ ಕೇವಲ 12 ನಿಮಿಷಗಳಲ್ಲಿ ಎಚ್‌ಎಎಲ್ ತಲುಪಬಹುದಾಗಿದೆ.

ಬ್ಲೇಡ್ ಇಂಡಿಯಾ ಕಂಪನಿ ಪ್ರಾಯೋಗಿಕವಾಗಿ ಈ ಸೇವೆ ಆರಂಭಿಸಲಿದೆ. ಬೆಂಗಳೂರು ನಗರ ಹೃದಯ ಭಾಗಗಳಾದ ಕೊರಮಂಗಲ, ಇಂದಿರಾನಗರ ಮತ್ತು ಐಟಿ ಪಾರ್ಕ್‌ಗಳಿಗೆ ಟ್ರಾಫಿಕ್ ಕಿರಿಕಿರಿ ಇಲ್ಲದೆ ಪ್ರಯಾಣಿಸಬಹುದಾಗಿದೆ ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಅಮಿತ್ ದತ್ತಾ ಗುರುವಾರ ತಿಳಿಸಿದರು.

ವಿಮಾನ ಪ್ರಯಾಣದ ಟಿಕೆಟ್ ಬುಕ್ ಮಾಡುವಂತೆ ಹೆಲಿಕಾಪ್ಟರ್ ಟಿಕೆಟ್ ಕೂಡ ಬುಕ್ ಮಾಡಬಹುದು. ತೆರಿಗೆ ಹೊರತುಪಡಿಸಿ ಟಿಕೆಟ್ ದರ ₹3,250.

ದಿನಕ್ಕೆ ಎರಡು ಬಾರಿ ಹಾರಾಟ: ಸೋಮವಾರದಿಂದ ಶುಕ್ರವಾರದವರೆಗೆ ದಿನಕ್ಕೆ ಎರಡು ಹೆಲಿಕಾಪ್ಟರ್ ಸೇವೆ ಲಭ್ಯವಿದೆ. ಮೊದಲ ಹೆಲಿಕಾಪ್ಟರ್ ಕೆಂಪೇಗೌಡ ವಿಮಾನ ನಿಲ್ದಾಣದಿಂದ ಬೆಳಗ್ಗೆ 8.30ಕ್ಕೆ ಹೊರಟು ಬೆಳಗ್ಗೆ 9ಕ್ಕೆ ಎಚ್‌ಎಎಲ್ ತಲುಪಲಿದೆ. ಎರಡನೇ ಹೆಲಿಕಾಪ್ಟರ್ ಮಧ್ಯಾಹ್ನ 4.15ಕ್ಕೆ ಎಚ್‌ಎಲ್‌ಎದಿಂದ ಹೊರಟು ಮಧ್ಯಾಹ್ನ 4.45ಕ್ಕೆ ಕೆಂಪೇಗೌಡ ವಿಮಾನ ನಿಲ್ದಾಣ ತಲುಪಲಿದೆ.

ಶಿವಪುತ್ರಪ್ಪ ಬೆಲ್ಲದ ನಿಧನ

ಧಾರವಾಡ: ಮಾಜಿ ಶಾಸಕ ಚಂದ್ರಕಾಂತ್ ಬೆಲ್ಲದ ಅವರ ಸಹೋದರ, ಶಾಸಕ ಅರವಿಂದ ಬೆಲ್ಲದ ಅವರ ಚಿಕ್ಕಪ್ಪ, ಉದ್ಯಮಿ, ಲಿಂಗಾಯತ ಸಮಾಜದ ಹಿರಿಯ ಮುಖಂಡ ಶಿವಪುತ್ರಪ್ಪ (ಶಿವಣ್ಣ) ಗುರಪ್ಪ ಬೆಲ್ಲದ (82) ಗುರುವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ. ಹಲವಾರು ಸಂಘ-ಸಂಸ್ಥೆಗಳ ಪದಾಧಿಕಾರಿಯಾಗಿ ಅವರು ಸೇವೆ ಸಲ್ಲಿಸಿದ್ದಾರೆ.

ಅಂಬಾನಿ ಕುಟುಂಬಕ್ಕೆ ಬೆದರಿಕೆ, ಬಂಧನ

ನವದೆಹಲಿ (ರಾಯಿಟರ್ಸ್): ರಿಲಯನ್ಸ್ ಕೈಗಾರಿಕೆಗಳ ಒಕ್ಕೂಟದ ಮಾಲೀಕ ಮುಕೇಶ್ ಅಂಬಾನಿ ಹಾಗೂ ಅವರ ಕುಟುಂಬ ಸದಸ್ಯರಿಗೆ ಜೀವಬೆದರಿಕೆ ಒಡ್ಡಿದ ಆರೋಪದಡಿ ಬಿಹಾರದ ವ್ಯಕ್ತಿಯನ್ನು ಮುಂಬೈನ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಕಂಪನಿಯ ಪ್ರತಿಷ್ಠಾನ ನಡೆಸುವ ಆಸ್ಪತ್ರೆಯೊಂದರ ಸ್ಥಿರದೂರವಾಣಿಗೆ ಬುಧವಾರ ಎರಡು ದೂರವಾಣಿ ಕರೆಗಳು ಬಂದಿದ್ದವು. ಆಸ್ಪತ್ರೆ ಸ್ಫೋಟಿಸುವ ಹಾಗೂ ಅಂಬಾನಿ, ಅವರ ಪತ್ನಿ, ಇಬ್ಬರು ಮಕ್ಕಳನ್ನು ಹತ್ಯೆ ಮಾಡುವುದಾಗಿ ಬೆದರಿಕೆ ಒಡ್ಡಲಾಗಿತ್ತು. ಅಲ್ಲದೆ, ಅಂಬಾನಿ ಕುಟುಂಬವನ್ನು ಬೆದರಿಸುವ ನಿಟ್ಟಿನಲ್ಲಿ ಕುಟುಂಬದ ನಿವಾಸವಾದ ಗಗನಚುಂಬಿ ಕಟ್ಟಡ ಅಂಟಿಲಿಯಾ ಅನ್ನು ಸ್ಫೋಟಿಸುವುದಾಗಿ ಹೇಳಲಾಗಿತ್ತು. ಈ ಬೆದರಿಕೆ ಕರೆಗೆ ಸಂಬಂಧಿಸಿದಂತೆ ಬಿಹಾರದ ದರ್ಭಾಂಗದಿಂದ ವ್ಯಕ್ತಿಯೊಬ್ಬನನ್ನು ವಶಕ್ಕೆ ಪಡೆದಿದ್ದು ಈ ಕುರಿತು ತನಿಖೆ ನಡೆದಿದೆ ಎಂದು ಮುಂಬೈ ಪೊಲೀಸರು ತಿಳಿಸಿದ್ದಾರೆ.

ಖರೀದಿದಾರರ ರಕ್ಷಣೆ: ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿದ ಕೇಂದ್ರ

ಮನೆ ಖರೀದಿಗೆ ಮಾದರಿ ಒಪ್ಪಂದ

ಪ್ರಜಾವಾಣಿ ವಾರ್ತೆ

ನವದೆಹಲಿ: ಫ್ಲ್ಯಾಟ್ ಖರೀದಿದಾರರು ಭವಿಷ್ಯದಲ್ಲಿ ಸಮಸ್ಯೆ ಎದುರಿಸುವುದನ್ನು ತಪ್ಪಿಸುವುದಕ್ಕಾಗಿ ಬಿಲ್ಡರ್-ಖರೀದಿದಾರರ ನಡುವಣ ಒಪ್ಪಂದದ ಮಾದರಿಯೊಂದನ್ನು ಸಿದ್ಧಪಡಿಸಲಾಗುವುದು ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಹೇಳಿದೆ. ಒಪ್ಪಂದದಲ್ಲಿ ಇರುವ ಕೆಲವು ಷರತ್ತುಗಳನ್ನು ರಾಜ್ಯ ಮಟ್ಟದಲ್ಲಿ ಬದಲಾಯಿಸಲು ಅವಕಾಶ ಇರುವುದಿಲ್ಲ ಎಂದೂ ತಿಳಿಸಿದೆ.

ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆ 2016ರಲ್ಲಿರುವ ಅವಕಾಶಗಳಿಗೆ ಅನುಗುಣವಾಗಿಯೇ ಈ ಮಾದರಿ ಒಪ್ಪಂದವೂ ಇರಲಿದೆ. ಈ ಮಾದರಿಯನ್ನು ನ್ಯಾಯಾಲಯದ ಅನುಮೋದನೆಗಾಗಿ ಸಲ್ಲಿಸಲಾಗುವುದು. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಸ್ಥಳೀಯ ಅಗತ್ಯಗಳ ಅನುಸಾರ ಹೆಚ್ಚುವರಿ ಷರತ್ತುಗಳನ್ನು ಸೇರಿಸಲು ಅವಕಾಶ ಇದೆ. ಆದರೆ, ಕೇಂದ್ರವು ಸಿದ್ಧಪಡಿಸಿದ ಷರತ್ತುಗಳಿಗೆ ವ್ಯತಿರಿಕ್ತವಾಗಿ ಇರುವಂತಿಲ್ಲ ಎಂದು ಸರ್ಕಾರವು ಕೋರ್ಟ್‌ಗೆ ಹೇಳಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಹಿಮಾ ಕೊಹ್ಲಿ ಅವರಿದ್ದ ಪೀಠವು ಬಿಜೆಪಿ ಮುಖಂಡ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ಬಿಲ್ಡರ್-ಖರೀದಿದಾರರ ನಡುವಣ ಮಾದರಿ ಒಪ್ಪಂದ ಬೇಕು ಎಂದು ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನಡೆಸಿತು. ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ ಮತ್ತು ನ್ಯಾಯಾಲಯದ ಸಹಾಯಕ ದೇವಾಶಿಶ್ ಭರೂಕ ಅವರ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಯಿತು.

ಮುಖ್ಯಾಂಶಗಳು

- ಕೇಂದ್ರದ ಷರತ್ತು ಬದಲಿಸಲು ರಾಜ್ಯಗಳಿಗೆ ಅವಕಾಶ ಇಲ್ಲ
- ಸ್ಥಳೀಯ ಅಗತ್ಯಕ್ಕೆ ತಕ್ಕಂತೆ ಹೆಚ್ಚುವರಿ ಷರತ್ತು ಸೇರ್ಪಡೆಗೆ ಅವಕಾಶ
- ನವೆಂಬರ್ 28ರಂದು ಮುಂದಿನ ವಿಚಾರಣೆ



ಕೇಂದ್ರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ಸಲ್ಲಿಸಿದ್ದ ಪ್ರತಿಕ್ರಿಯೆಗೆ ಆಂಧ್ರ ಪ್ರದೇಶ, ಛತ್ತೀಸಗಢ, ಗುಜರಾತ್, ಜಾರ್ಖಂಡ್, ಮಧ್ಯ ಪ್ರದೇಶ, ಮಹಾರಾಷ್ಟ್ರ, ಮಣಿಪುರ, ಮಿಜೋರಾಂ, ಒಡಿಶಾ, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳು ಉತ್ತರಿಸಿಲ್ಲ ಎಂದು ನ್ಯಾಯಾಲಯವು ಈ ಹಿಂದೆ ಅಸಮಾಧಾನ ವ್ಯಕ್ತಪಡಿಸಿತ್ತು.

ನಾಲ್ಕು ವಾರಗಳಲ್ಲಿ ಪ್ರತಿಕ್ರಿಯೆ ಸಲ್ಲಿಸದೇ ಇದ್ದರೆ ಈ ರಾಜ್ಯಗಳ ನಗರಾಭಿವೃದ್ಧಿ ಸಚಿವಾಲಯಗಳ ಪ್ರಧಾನ ಕಾರ್ಯದರ್ಶಿಗಳು ಮುಂದಿನ ವಿಚಾರಣೆ ವೇಳೆ ಖುದ್ದಾಗಿ ಹಾಜರಾಗಬೇಕಾಗುತ್ತದೆ ಎಂದು ಪೀಠವು ಎಚ್ಚರಿಕೆ ನೀಡಿದೆ. ಪ್ರತಿಕ್ರಿಯೆ ಸಲ್ಲಿಸದೇ ಇರುವುದಕ್ಕೆ ಕಾನೂನು ಕ್ರಮ ಏಕೆ ಕೈಗೊಳ್ಳಬಾರದು ಎಂಬುದಕ್ಕೆ ವಿವರಣೆಯನ್ನೂ ನೀಡಬೇಕಾಗುತ್ತದೆ ಎಂದು ಪೀಠವು ಹೇಳಿದೆ.

ಮನೆ ಖರೀದಿಸುವ ಲಕ್ಷಾಂತರ ಜನರ ಹಿತಾಸಕ್ತಿ ರಕ್ಷಿಸುವುದು ಮಹತ್ವದ ವಿಚಾರ. ಸಾಮಾನ್ಯವಾಗಿ ಈ ವಿಚಾರನ್ನು ನಿರ್ಲಕ್ಷಿಸಲಾಗುತ್ತಿದೆ ಎಂದು ಸುಪ್ರೀಂ ಕೋರ್ಟ್ ಈ ಹಿಂದೆಯೂ ಹೇಳಿತ್ತು.

ಬಿಲ್ಡರ್‌ಗಳು ಮತ್ತು ಅವರ ದಲ್ಲಾಳಿಗಳು ನ್ಯಾಯಬದ್ಧವಲ್ಲದ ರೀತಿಯಲ್ಲಿ ವ್ಯವಹರಿಸುವುದನ್ನು ತಡೆಯಲು ಮಾದರಿ ಒಪ್ಪಂದ ಅಗತ್ಯ ಎಂದು ಉಪಾಧ್ಯಾಯ ಅವರು ಅರ್ಜಿಯಲ್ಲಿ ಕೋರಿದ್ದರು.

ಸುದ್ದಿ 2 ನಿಮಿಷ

ಮುಂಬೈ ವಿಮಾನ ನಿಲ್ದಾಣದಲ್ಲಿ ₹100 ಕೋಟಿ ಮೌಲ್ಯದ ಹೆರಾಯಿನ್ ವಶ

ಮುಂಬೈ (ಪಿಟಿಐ): ಕಂದಾಯ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ಮುಂಬೈ ವಿಮಾನ ನಿಲ್ದಾಣದಲ್ಲಿ ₹100 ಕೋಟಿಯಷ್ಟು ಹೆಚ್ಚು ಮೌಲ್ಯದ 16 ಕೆ.ಜಿ ಹೆರಾಯಿನ್ ವಶಪಡಿಸಿಕೊಂಡಿದ್ದು, ಈ ಸಂಬಂಧ ಜಾಂಬಿಯಾದ ಪ್ರಯಾಣಿಕ ಹಾಗೂ ಮಹಿಳೆಯೊಬ್ಬರನ್ನು ಬಂಧಿಸಿದೆ ಎಂದು ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಘಾನಾ ಮಹಿಳೆಯನ್ನು ದೆಹಲಿ ಹೋಟೆಲ್‌ನಲ್ಲಿ ಬಂಧಿಸಲಾಯಿತು. ಆಫ್ರಿಕನ್ ದೇಶ ಮಲಾವಿಯಿಂದ ಕತಾರ್ ಮೂಲಕ ವಿಮಾನದ ಮೂಲಕ ಪ್ರಯಾಣಿಸುತ್ತಿದ್ದ ಪ್ರಯಾಣಿಕರೊಬ್ಬರು ಮಾದಕ ವಸ್ತುಗಳನ್ನು ದೇಶಕ್ಕೆ ಕಳ್ಳಸಾಗಣೆ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂಬ ಸುಳಿವಿನ ಮೇರೆಗೆ ಡಿಆರ್‌ಐನ ಮುಂಬೈ ಘಟಕ ಮಂಗಳವಾರ ಛತ್ರಪತಿ ಶಿವಾಜಿ ಮಹಾರಾಜ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂಧಿಸಲಾಯಿತು ಎಂದು ಅವರು ಹೇಳಿದರು.

ವಿಮಾನ ನಿಲ್ದಾಣದಲ್ಲಿ ಅಧಿಕಾರಿಗಳು ಪ್ರಯಾಣಿಕರ ತಪಾಸಣೆ ನಡೆಸಿದಾಗ ಟ್ರಾಲಿ ಬ್ಯಾಗ್‌ಗಳಲ್ಲಿ ಬಚ್ಚಿಟ್ಟಿದ್ದ 16 ಕೆ.ಜಿ ಹೆರಾಯಿನ್ ಪತ್ತೆಯಾಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇದರ ಮೌಲ್ಯ ₹ 100 ಕೋಟಿ. ಮುಂಬೈ ಸ್ಥಳೀಯ ನ್ಯಾಯಾಲಯವು ಆರೋಪಿಯನ್ನು ಡಿಆರ್‌ಐ ವಶಕ್ಕೆ ನೀಡಿದೆ. ಹೋಟೆಲ್‌ನಲ್ಲಿ ಮಾದಕ ವಸ್ತು ಪಡೆಯಲು ಬಂದ ಮಹಿಳೆಯನ್ನು ಬಂಧಿಸಲಾಯಿತು. ಪ್ರಕರಣದ ತನಿಖೆ ಮುಂದುವರಿದಿದೆ ಎಂದು ಮಾಹಿತಿ ನೀಡಿದ್ದಾರೆ.



ಆಕಾಸಾ ಏರ್: ಕ್ಯಾಬಿನ್‌ನೊಳಗೆ ಸಾಕುಪ್ರಾಣಿಗೂ ಅನುಮತಿ

ನವದೆಹಲಿ: ಆಕಾಸಾ ಏರ್ ವಿಮಾನಯಾನ ಕಂಪನಿಯು ಸಾಕುನಾಯಿ ಮತ್ತು ಬೆಕ್ಕುಗಳನ್ನು ವಿಮಾನದ ಕ್ಯಾಬಿನ್‌ನೊಳಗೆ ಕೊಂಡೊಯ್ಯಲು ನವೆಂಬರ್‌ನಿಂದ ಅನುಮತಿ ನೀಡಲು ನಿರ್ಧರಿಸಿದೆ.

ಈ ಸಂಬಂಧ ಬುಕ್ಕಿಂಗ್‌ಗಳು ಅಕ್ಟೋಬರ್ 15ರಿಂದ ಆರಂಭಗೊಳ್ಳಲಿವೆ. ಸಾಕು ಪ್ರಾಣಿಗಳು ಗೂಡಿನೊಳಗಿರಬೇಕು ಮತ್ತು ಅವುಗಳ ಭಾರವು ಗೂಡು ಸೇರಿದಂತೆ 7 ಕೆ.ಜಿ.ಯೊಳಗಿರಬೇಕು ಎಂದು ಕಂಪನಿಯ ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಕಂಪನಿಯ ಕಾರ್ಯನಿರ್ವಹಣೆಯು ಮೊದಲ 60 ದಿನಗಳಲ್ಲಿ ತೃಪ್ತಿಕರವಾಗಿದೆ. ಶುಕ್ರವಾರ ದೆಹಲಿಯಿಂದ ಸೇವೆ ಆರಂಭಿಸಲಿದ್ದೇವೆ. ನವೆಂಬರ್‌ನಿಂದ ಸರಕು ಸೇವೆ ಕೂಡ ಆರಂಭವಾಗಲಿದೆ ಎಂದು ಸಂಸ್ಥೆಯ ಸಂಸ್ಥಾಪಕ ಮತ್ತು ಸಿಇಒ ವಿನಯ್ ದುಬೆ ತಿಳಿಸಿದ್ದಾರೆ. 2023ರ ದ್ವಿತೀಯಾರ್ಧದಲ್ಲಿ ಅಂತರ ರಾಷ್ಟ್ರೀಯ ಸೇವೆಗಳನ್ನು ಆರಂಭಿಸಲು ಚಿಂತನೆ ನಡೆಸಿದ್ದೇವೆ ಎಂದಿದ್ದಾರೆ.

ಕಾಂಗ್ರೆಸ್ ಮುಖಂಡನ ಟೀಕೆ • ಬುಡಕಟ್ಟು ವಿರೋಧಿ ಮನೋಭಾವ: ಬಿಜೆಪಿ

'ಮುರ್ಮು ಹೇಳಿಕೆ ಭಟ್ಟಂಗಿತನದ್ದು'

ನವದೆಹಲಿ (ಪಿಟಿಐ): 'ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇತ್ತೀಚೆಗೆ ನೀಡಿದ್ದ ಹೇಳಿಕೆಯು ಭಟ್ಟಂಗಿತನದ ಪರಮಾವಧಿಯಿಂದ ಕೂಡಿದೆ' ಎಂದು ಕಾಂಗ್ರೆಸ್ ಮುಖಂಡ ಉದಿತ್ ರಾಜ್ ಟೀಕಿಸಿದ್ದು, ಅವರ ಹೇಳಿಕೆಗೆ ಸಾಮಾಜಿಕ ಜಾಲತಾಣಗಳಲ್ಲಿ ವಿರೋಧ ವ್ಯಕ್ತವಾಗಿದೆ.



ಉದಿತ್ ರಾಜ್

ರಾಜ್ ಅವರ ಹೇಳಿಕೆಯು ಕಾಂಗ್ರೆಸ್‌ನ ಬುಡಕಟ್ಟು ವಿರೋಧಿ ಮನೋಭಾವನೆಯನ್ನು ಸಾಕ್ಷೀಕರಿಸಿದೆ ಎಂದು ಬಿಜೆಪಿ ಟೀಕಿಸಿದೆ. ಮುರ್ಮು ಅವರು ರಾಷ್ಟ್ರಪತಿ ಹುದ್ದೆಗೇರಿದ ಬುಡಕಟ್ಟು ಸಮುದಾಯದ ಮೊದಲ ಮಹಿಳೆಯಾಗಿದ್ದು, ಅವರ ಬಗ್ಗೆ ಕಾಂಗ್ರೆಸ್ ಮುಖಂಡರು ಈ ಹಿಂದೆಯೂ ಲಘುವಾಗಿ ಮಾತನಾಡಿದ್ದಾರೆ ಎಂದು ಕಿಡಿಕಾರಿದೆ.

'ಇತ್ತೀಚೆಗೆ ನಡೆದಿದ್ದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ್ದ ಮುರ್ಮು ಅವರು, 'ದೇಶದ ಉಪ್ಪು ಉತ್ಪಾದನೆಯಲ್ಲಿ ಗುಜರಾತ್ ರಾಜ್ಯದ ಕೊಡುಗೆ ಶೇ 76ರಷ್ಟಿದ್ದು, ದೇಶದಲ್ಲಿ ವಾಸಿಸುತ್ತಿರುವ ಎಲ್ಲರೂ ಗುಜರಾತ್‌ನ ಉಪ್ಪನ್ನೇ ತಿನ್ನುತ್ತಾರೆ ಎಂದು ಹೇಳಿದರೆ ತಪ್ಪಾಗುವುದಿಲ್ಲ' ಎಂದಿದ್ದರು.

ರಾಷ್ಟ್ರಪತಿ ಅವರ ಹೇಳಿಕೆಯನ್ನು ಕಟುವಾಗಿ ಖಂಡಿಸಿದ್ದ ರಾಜ್, 'ದ್ರೌಪದಿ ಮುರ್ಮು ಅವರಂತಹ ರಾಷ್ಟ್ರಪತಿ ಯಾವ ದೇಶಕ್ಕೂ ಸಿಗದಿರಲಿ. ಅವರ ಹೇಳಿಕೆಯು ಭಟ್ಟಂಗಿತನದ ಪರಮಾವಧಿಯಿಂದ ಕೂಡಿದೆ. ದೇಶದ ಶೇ 70ರಷ್ಟು ಮಂದಿ ಗುಜರಾತ್‌ನ ಉಪ್ಪನ್ನು ತಿನ್ನುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ. ಬದುಕಿರುವವರೆಗೂ ಉಪ್ಪು ತಿನ್ನಿ. ಆಗ ನಿಮಗೆ ಸತ್ಯದ ಅರಿವಾಗುತ್ತದೆ' ಎಂದು ಬುಧವಾರ ಟ್ವೀಟ್ ಮಾಡಿದ್ದರು.

'ಕಾಂಗ್ರೆಸ್ ಮುಖಂಡರು ರಾಷ್ಟ್ರಪತಿಯವರ ವಿರುದ್ಧ ಆಗಿಂದಾಗ್ಗೆ ಮಾತನಾಡುವುದನ್ನು ಮುಂದುವರಿಸಿರುವುದು ನೋವು ಹಾಗೂ ಆಶ್ಚರ್ಯದ ಸಂಗತಿ. ಇದು ಆ ಪಕ್ಷದ ಬುಡಕಟ್ಟು ವಿರೋಧಿ ಧೋರಣೆಯನ್ನು ಬಿಂಬಿಸುತ್ತದೆ. ಇದಕ್ಕೆ ಕಾಂಗ್ರೆಸ್ ಕ್ಷಮೆಯಾಚಿಸಬೇಕು' ಎಂದು ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ ಒತ್ತಾಯಿಸಿದ್ದಾರೆ.

'ಕಾಂಗ್ರೆಸ್ ಪಕ್ಷವು ದೇಶದ ಮೊದಲ ಪ್ರಜೆಯನ್ನು ಅವಮಾನಿಸುತ್ತಿದೆ. ರಾಷ್ಟ್ರಪತಿಯವರನ್ನು 'ಚಮ್ಚಾ' ಎಂದು ಕರೆದಿರುವ ಉದಿತ್ ರಾಜ್ ಅವರನ್ನು ಪಕ್ಷದಿಂದ ಉಚ್ಚಾಟಿಸಲಾಗುತ್ತದೆಯೇ? ಅವರ ಹೇಳಿಕೆಯನ್ನು ಸೋನಿಯಾ ಹಾಗೂ ರಾಹುಲ್ ಗಾಂಧಿ ಅವರು ಬೆಂಬಲಿಸುತ್ತಾರೆಯೇ?' ಎಂದು ಬಿಜೆಪಿ ವಕ್ತಾರ ಶೆಹಜಾದ್ ಪೂನಾವಾಲಾ ಪ್ರಶ್ನಿಸಿದ್ದಾರೆ.

ಉದಿತ್ ಅವರು ಈ ಹಿಂದೆ ಬಿಜೆಪಿಯಲ್ಲಿದ್ದರು. 2014ರ ಲೋಕಸಭಾ ಚುನಾವಣೆಯಲ್ಲಿ ವಾಯುವ್ಯ ದೆಹಲಿ ಕ್ಷೇತ್ರದ ಅಭ್ಯರ್ಥಿಯಾಗಿ ಕಣಕ್ಕಿಳಿದು ಗೆದ್ದಿದ್ದರು. 2019ರಲ್ಲಿ ಅವರು ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದರು.

ನನ್ನ ಹೇಳಿಕೆ ವೈಯಕ್ತಿಕವಾದುದು. ಎಸ್‌ಸಿ-ಎಸ್‌ಟಿ ಸಮುದಾಯದವರು ಉನ್ನತ ಹುದ್ದೆಗೇರಿದ ಬಳಿಕ ತಮ್ಮ ಸಮುದಾಯವನ್ನೇ ಮರೆತುಬಿಡುತ್ತಾರೆ. ಅದು ನೋವುಂಟು ಮಾಡುತ್ತದೆ
ಉದಿತ್ ರಾಜ್, ಕಾಂಗ್ರೆಸ್ ಮುಖಂಡ

ದ್ರೌಪದಿ ಮುರ್ಮು ಅವರು ಕಠಿಣ ಪರಿಶ್ರಮ ಹಾಗೂ ಬದ್ಧತೆಯಿಂದ ಕೆಲಸ ಮಾಡಿ ದೇಶದ ಅತ್ಯುನ್ನತ ಹುದ್ದೆಗೇರಿದ್ದಾರೆ. ಇದನ್ನು ಕಾಂಗ್ರೆಸ್ ಒಪ್ಪಿಕೊಳ್ಳಲು ಸಿದ್ಧವಿಲ್ಲ
ಶೆಹಜಾದ್ ಪೂನಾವಾಲಾ, ಬಿಜೆಪಿ ವಕ್ತಾರ

ಮಹಿಳಾ ಆಯೋಗದಿಂದ ನೋಟಿಸ್

ರಾಷ್ಟ್ರಪತಿ ಅವರ ವಿರುದ್ಧ ಅವಹೇಳನಕಾರಿ ಟ್ವೀಟ್ ಮಾಡಿರುವ ಉದಿತ್ ರಾಜ್‌ಗೆ ರಾಷ್ಟ್ರೀಯ ಮಹಿಳಾ ಆಯೋಗವು (ಎನ್‌ಸಿಡಬ್ಲ್ಯು) ಗುರುವಾರ ನೋಟಿಸ್ ನೀಡಿದೆ.

'ಅಕ್ಟೋಬರ್ 10ರಂದು 3 ಗಂಟೆಯೊಳಗೆ ಆಯೋಗದ ಎದುರು ಹಾಜರಾಗಿ ನಿಮ್ಮ ಹೇಳಿಕೆ ಕುರಿತು ವಿವರಣೆ ನೀಡಿ' ಎಂದು ನೋಟಿಸ್‌ನಲ್ಲಿ ಸೂಚಿಸಲಾಗಿದೆ.

'ರಾಜ್ ಅವರ ಹೇಳಿಕೆಯು ನಾಚಿಕೆಗೇಡಿನಿಂದ ಕೂಡಿದೆ. ಇದು ಖಂಡನಾರ್ಹವಾದುದು. ಹೀಗಾಗಿ ಅವರಿಗೆ ನೋಟಿಸ್ ನೀಡಲಾಗಿದೆ' ಎಂದು ಆಯೋಗವು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಕೋರ್ಟ್‌ನ ಭದ್ರತೆ: 11ಕ್ಕೆ ವಿಚಾರಣೆ

ನವದೆಹಲಿ (ಪಿಟಿಐ): ದೇಶದಾದ್ಯಂತ ಇರುವ ವಿಚಾರಣಾ ನ್ಯಾಯಾಲಯಗಳಲ್ಲಿನ ಸುರಕ್ಷತಾ ಕ್ರಮಗಳ ಕುರಿತಂತೆ ವಕೀಲ ರಿಷಿ ಮಲ್ಹೋತ್ರಾ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಇದೇ 11ರಂದು ನಡೆಸಲಿದೆ.

ಸುಪ್ರೀಂ ಕೋರ್ಟ್ ಅಪ್‌ಲೋಡ್ ಮಾಡಿರುವ ಮಾಹಿತಿಯ ಪ್ರಕಾರ, ಸಿಜೆಐ ಉದಯ್ ಉಮೇಶ್ ಲಲಿತ್ ಅವರನ್ನು ಒಳಗೊಂಡ ಪೀಠ 11ರಂದು ಅರ್ಜಿಯ ವಿಚಾರಣೆ ನಡೆಸಲಿದೆ.

ಗ್ಯಾಂಬಿಯಾದಲ್ಲಿ 66 ಮಕ್ಕಳ ಸಾವು

ಭಾರತದ ಔಷಧಗಳ ಮಾದರಿಗಳು ಪರೀಕ್ಷೆಗೆ

ನವದೆಹಲಿ (ಪಿಟಿಐ): ಗ್ಯಾಂಬಿಯಾದಲ್ಲಿ 66 ಮಕ್ಕಳ ಸಾವಿಗೆ ಕಾರಣವಾಗಿವೆ ಎನ್ನಲಾದ ಭಾರತೀಯ ಕಂಪನಿಯ ಕೆಮ್ಮಿನ ಔಷಧಿಯ ಮಾದರಿಗಳ ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಪರೀಕ್ಷೆಯ ವರದಿಗಳು ಬಂದ ನಂತರ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ ಎಂದು ಭಾರತೀಯ ಔಷಧ ಮಹಾನಿಯಂತ್ರಕರು (ಡಿಸಿಜಿಐ) ಹೇಳಿದ್ದಾರೆ.

ಗ್ಯಾಂಬಿಯಾದಲ್ಲಿ ಕಳೆದ ತಿಂಗಳು 66 ಮಕ್ಕಳು ವಿಷದ ಕಾರಣದಿಂದ ಮೃತಪಟ್ಟಿದ್ದವು. ಆ ಮಕ್ಕಳಿಗೆ ಭಾರತೀಯ ಕಂಪನಿ ಮೈಡೇನ್ ಫಾರ್ಮಾಸ್ಯುಟಿಕಲ್ಸ್ ಲಿಮಿಟೆಡ್ ತಯಾರಿಸಿದ್ದ ನಾಲ್ಕು ರೀತಿಯ ಕೆಮ್ಮಿನ ಸಿರಪ್ ಅನ್ನು ನೀಡಲಾಗಿತ್ತು. ಆ ಸಿರಪ್‌ಗಳ ಮಾದರಿಗಳನ್ನು ಪರೀಕ್ಷಿಸಿದಾಗ, ಅವುಗಳಲ್ಲಿ ವಿಷಕಾರಿ ರಾಸಾಯನಿಕಗಳು ಪತ್ತೆಯಾಗಿದ್ದವು ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಡಿಸಿಜಿಐಗೆ ಮಾಹಿತಿ ನೀಡಿತ್ತು.

ಗ್ಯಾಂಬಿಯಾದಲ್ಲಿ ಮಾರಾಟವಾದ ಮತ್ತು ಡಬ್ಲ್ಯುಎಚ್‌ಒ ಪರೀಕ್ಷೆಗೆ ಒಳಪಡಿಸಿದ್ದ ಸಿರಪ್‌ಗಳ ಬ್ಯಾಚ್‌ನದ್ದೇ ಮಾದರಿಗಳನ್ನು ಭಾರತದಲ್ಲೂ ಸಂಗ್ರಹಿಸಲಾಗಿದೆ. ಕೆಲವು ಮಾದರಿಗಳನ್ನು ಚಂಡೀಗಢದಲ್ಲಿ ಇರುವ ಕೇಂದ್ರೀಯ ಔಷಧ ಪ್ರಯೋಗಾಲಯಕ್ಕೆ ಮತ್ತು ಕೋಲ್ಕತ್ತದಲ್ಲಿರುವ ಕೇಂದ್ರೀಯ ಔಷಧ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ.

ಮುಖ್ಯಾಂಶಗಳು

- ಹರಿಯಾಣದ ಮೈಡೇನ್ ಫಾರ್ಮಾಸ್ಯುಟಿಕಲ್ಸ್‌ನ ಔಷಧಗಳು
- ಈ ಔಷಧಗಳು ಭಾರತದಲ್ಲಿ ಮಾರಾಟಕ್ಕೆ ಲಭ್ಯವಿಲ್ಲ

ಹರಿಯಾಣದ ಸೋನಿಪತ್‌ನಲ್ಲಿ ಕಂಪನಿಯ ತಯಾರಿಕ ಘಟಕವಿದೆ.

ರಫ್ತು ಮಾಡಲಷ್ಟೇ ಪರವಾನಗಿ: ಈ ಔಷಧಗಳನ್ನು ತಯಾರಿಸಿ ರಫ್ತು ಮಾಡಲಷ್ಟೇ ಮೈಡೇನ್ ಫಾರ್ಮಾಸ್ಯುಟಿಕಲ್ಸ್‌ಗೆ ಪರವಾನಗಿ ನೀಡಲಾಗಿದೆ ಎಂದು ಹರಿಯಾಣ ಸರ್ಕಾರ ಮಾಹಿತಿ ನೀಡಿದೆ. ಈ ಔಷಧಗಳು ಭಾರತದಲ್ಲಿ ಮಾರಾಟಕ್ಕೆ ಲಭ್ಯವಿಲ್ಲ.

ಕೆಮ್ಮಿನ ಸಿರಪ್ ಹಿಂಪಡೆಯಲು ಅಭಿಯಾನ: ಬಂಜುಲ್, ಗ್ಯಾಂಬಿಯಾ (ಎಪಿ): ಮೈಡೇನ್ ಫಾರ್ಮಾಸ್ಯುಟಿಕಲ್ಸ್‌ನ ಸಿರಪ್‌ಗಳನ್ನು ಹಿಂಪಡೆಯಲು ಇಲ್ಲಿ ಅಭಿಯಾನವನ್ನು ಪ್ರಾರಂಭಿಸಲಾಗಿದೆ. ಈ ಸಂಬಂಧ ಮನೆ ಮನೆಗೆ ತೆರಳಿ, ಕೆಮ್ಮಿನ ಸಿರಪ್‌ನ ಸೀಸೆಗಳನ್ನು ಸಂಗ್ರಹಿಸಲಾಗುತ್ತಿದೆ.

'ಕಲಬೆರಕೆ ಔಷಧ'

ಮೈಡೇನ್ ಫಾರ್ಮಾಸ್ಯುಟಿಕಲ್ಸ್ ಲಿಮಿಟೆಡ್ ತಯಾರಿಸುವ 'Promethazine Oral Solution BP, Kofexnalin Baby Cough Syrup, MaKoff Baby Cough Syrup and MaGrip n Cold Syrup' ಔಷಧಗಳ ಮಾದರಿಯಲ್ಲಿ ವಿಷಕಾರಿ ಅಂಶಗಳು ಪತ್ತೆಯಾಗಿವೆ ಎಂದು ಡಬ್ಲ್ಯುಎಚ್‌ಒ ಹೇಳಿದೆ. ಮಕ್ಕಳ ಸಾವಿಗೆ ಈ ಔಷಧಗಳೇ ಕಾರಣವೇ ಎಂಬುದು ದೃಢಪಟ್ಟಿಲ್ಲ.

'ಈ ನಾಲ್ಕೂ ಔಷಧಗಳ ಒಟ್ಟು 23 ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು. ಅವುಗಳಲ್ಲಿ ನಾಲ್ಕು ಮಾದರಿಗಳಲ್ಲಿ ಡೈಥ್ಲೇನ್ ಗ್ಲೈಕೋಲ್/ಎಥ್ಲೇನ್ ಗ್ಲೈಕೋಲ್ (Diethylene Glycol/ Ethylene Glycol) ಎಂಬ ರಾಸಾಯನಿಕಗಳು ಪತ್ತೆಯಾಗಿವೆ. ನೀರು ಮತ್ತು ದ್ರವ ಪದಾರ್ಥಗಳು ಘನೀಕರಿಸುವುದನ್ನು ತಡೆಯಲು ಇವನ್ನು ಬಳಸಲಾಗುತ್ತದೆ. ಇವು ಮಾನವ ದೇಹಕ್ಕೆ ವಿಷಕಾರಿಯಾಗಿ ಪರಿಣಮಿಸುತ್ತದೆ. ಈ ನಾಲ್ಕೂ ಔಷಧಗಳಲ್ಲಿ ಈ ರಾಸಾಯನಿಕಗಳು ಕಂಡು ಬಂದಿವೆ' ಎಂದು ಡಬ್ಲ್ಯುಎಚ್‌ಒ ಹೇಳಿದೆ. ಈ ಪರೀಕ್ಷೆಯ ವರದಿಯನ್ನು ಶೀಘ್ರವೇ ನೀಡುತ್ತೇವೆ ಎಂದು ಡಬ್ಲ್ಯುಎಚ್‌ಒ ಹೇಳಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಮಾಹಿತಿ ನೀಡಿದೆ.

ಬೊಮ್ಮಾಯಿ -ಬಿಎಸ್‌ವೈ ಯಾತ್ರೆ

ಒಂದನೇ ಪುಟದಿಂದ...


ಈಗಾಗಲೇ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರ ತಂಡ ಬೆಳಗಾವಿಯಿಂದಲೂ, ಪಕ್ಷದ ರಾಜ್ಯ ಉಸ್ತುವಾರಿ ಅರುಣ್‌ಸಿಂಗ್ ಅವರು ಬೀದರ್‌ನಿಂದ ಯಾತ್ರೆ ಆರಂಭಿಸಿದ್ದು, ಮಳೆ ಮತ್ತು ದಸರಾ ಹಬ್ಬದ ಕಾರಣ ಯಾತ್ರೆಗೆ ಬಿಡುವು ನೀಡಲಾಗಿತ್ತು ಎಂದು ಅವರು ಹೇಳಿದರು.

ಜನಸಂಕಲ್ಪ ಯಾತ್ರೆಯ ಸಂದರ್ಭದಲ್ಲಿ ವಿವಿಧ ಕಾರ್ಯಕ್ರಮಗಳ ಫಲಾನುಭವಿಗಳ ಸಮಾವೇಶ, ಎಸ್‌ಸಿ-ಎಸ್‌ಟಿ, ಒಬಿಸಿ ಕಾರ್ಯಕರ್ತರ ಮನೆಯಲ್ಲಿ ಉಪಾಹಾರ ಮತ್ತು ಅದೇ ಪರಿಸರದಲ್ಲಿ ಸಭೆ ನಡೆಸಲಾಗುತ್ತದೆ. ರಾಜ್ಯಾಧ್ಯಕ್ಷರ ತಂಡದ ಯಾತ್ರೆಯು ಸಂಘಟನೆಗೆ ಹೆಚ್ಚಿನ ಒತ್ತು ನೀಡಲಿದೆ. 52 ಕ್ಷೇತ್ರಗಳಲ್ಲಿ ಬೂತ್, ಶಕ್ತಿಕೇಂದ್ರಗಳ ಹಾಗೂ ಚುನಾಯಿತ ಪ್ರತಿನಿಧಿಗಳ ಸಭೆ ನಡೆಸಲಿದ್ದಾರೆ. ಅವಶ್ಯಕತೆಗೆ ಅನುಗುಣವಾಗಿ ಪ್ರಮುಖರ ಸಮಿತಿಯ 16 ಸದಸ್ಯರು ಈ ಯಾತ್ರೆಗಳಲ್ಲಿ ಭಾಗವಹಿಸಲಿದ್ದಾರೆ ಎಂದರು.

ರೈತ ಸಮಾವೇಶ, ಎಸ್‌ಸಿ ಸಮಾವೇಶ, ಒಬಿಸಿ ಸಮಾವೇಶ, ಯುವ ಸಮಾವೇಶ, ಮಹಿಳಾ ಸಮಾವೇಶ, ಎಸ್‌ಟಿ, ಅಲ್ಪಸಂಖ್ಯಾತರ ಸಮಾವೇಶಗಳನ್ನೂ ಆಯೋಜಿಸಲಾಗುತ್ತದೆ. ಡಿಸೆಂಬರ್ 15 ರೊಳಗೆ 104 ಕ್ಷೇತ್ರಗಳಲ್ಲಿ ಯಾತ್ರೆ ಮತ್ತು 7 ಬೃಹತ್ ಸಮಾವೇಶಗಳನ್ನೂ ಆಯೋಜಿಸಿದೆ ಎಂದು ಸುರಾನ ಹೇಳಿದರು.

ಇಂದು ಬಿಜೆಪಿ ಕಾರ್ಯಕಾರಿಣಿ

ಬೆಂಗಳೂರು: ರಾಜ್ಯ ಬಿಜೆಪಿ ಘಟಕದ ಕಾರ್ಯಕಾರಿಣಿ ಶುಕ್ರವಾರ ಅರಮನೆ ಮೈದಾನದಲ್ಲಿ ನಡೆಯಲಿದ್ದು, ಪಕ್ಷದ ಸಂಘಟನೆ, ರಾಜಕೀಯ ವಿದ್ಯಮಾನಗಳ ವಿಶ್ಲೇಷಣೆ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳ ಬಗ್ಗೆ ಪರಾಮರ್ಶೆ ನಡೆಯಲಿದೆ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ತಿಳಿಸಿದರು.



ಬಿಜೆಪಿ ರಾಜ್ಯ ಕಾರ್ಯಕಾರಿಣಿ ನಡೆಯುವ ಸ್ಥಳಕ್ಕೆ ಭೇಟಿ ನೀಡಿದ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರು ಸಭಾಂಗಣದಲ್ಲಿನ ವಿ.ಡಿ. ಸಾವರ್ಕರ್ ಅವರ ಪ್ರತಿಮೆಯನ್ನು ವೀಕ್ಷಿಸಿದರು.

ಕಾರ್ಯಕಾರಿಣಿ ಸಿದ್ಧತೆಯನ್ನು ಗುರುವಾರ ವೀಕ್ಷಿಸಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿ, ಬೆಳಿಗ್ಗೆ 10.30 ರಿಂದ ಕಾರ್ಯಕಾರಿಣಿ ಆರಂಭಗೊಳ್ಳಲಿದೆ. ಈ ಸಭೆಯಲ್ಲಿ 592 ಮಂದಿ ಸದಸ್ಯರು ಭಾಗವಹಿಸಲಿದ್ದಾರೆ. ಸಂಜೆ ಪಕ್ಷದ ಪ್ರಮುಖ ನಾಯಕರ ಸಭೆಯೂ ನಡೆಯಲಿದೆ ಎಂದರು.

ಮುಂದಿನ 25 ವರ್ಷಗಳ 'ಅಮೃತ ಕಾಲ'ದಲ್ಲಿ ದೇಶಕ್ಕೆ ಕರ್ನಾಟಕದ ಕೊಡುಗೆ ಏನಿರಬೇಕು ಎಂಬ ಕಾರ್ಯಸೂಚಿಯನ್ನು ಸಿದ್ಧಪಡಿಸಲಾಗಿದೆ. ಕಾರ್ಯಕಾರಿಣಿಯಲ್ಲಿ ಈ ವಿಷಯವನ್ನು ಚರ್ಚಿಸಲಾಗುವುದು ಎಂದು ರವಿ ಹೇಳಿದರು.

ಅಧ್ಯಕ್ಷರ ಬದಲಾವಣೆ ಇಲ್ಲ: 2023ರ ವಿಧಾನಸಭಾ ಚುನಾವಣೆಯನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರ ನಾಯಕತ್ವದಲ್ಲೇ ಎದುರಿಸಲಾಗುವುದು. ನಳಿನ್ ಅವರೂ ಸೇರಿದಂತೆ ಯಾವುದೇ ಪದಾಧಿಕಾರಿಗಳ ಬದಲಾವಣೆ ಆಗುವುದಿಲ್ಲ. ಆದರೆ, ಬೊಮ್ಮಾಯಿ ಸಂಪುಟದಲ್ಲಿರುವ ಆರು ಸಚಿವರ ಸ್ಥಾನಗಳನ್ನು ಭರ್ತಿ ಮಾಡುವ ಸಾಧ್ಯತೆ ಇದೆ ಎಂದು ಸುರಾನ ಹೇಳಿದರು.

ಅಲ್ಲದೆ, ನಿಗಮ- ಮಂಡಳಿಗಳ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರ ನೇಮಕದ ಪಟ್ಟಿ ಆಗಿದ್ದು, ಮುಂದಿನ ವಾರ ಆದೇಶ ಹೊರಬೀಳಲಿದೆ ಎಂದೂ ಹೇಳಿದರು.

ಬಸ್ ಅಪಘಾತ: ವಿದ್ಯಾರ್ಥಿಗಳು ಸೇರಿ 9 ಮಂದಿ ಸಾವು

ಪಾಲಕ್ಕಾಡ್/ತಿರುವನಂತಪುರ/ ಕೊಚ್ಚಿ (ಪಿಟಿಐ): ಪಾಲಕ್ಕಾಡ್ ಜಿಲ್ಲೆಯ ವಡಕ್ಕಾಂಚೇರಿಯಲ್ಲಿ ಮಕ್ಕಳನ್ನು ಪ್ರವಾಸಕ್ಕೆ ಕರೆದೊಯ್ಯುತ್ತಿದ್ದ ಖಾಸಗಿ ಬಸ್ಸೊಂದು ಕೆಎಸ್‌ಆರ್‌ಟಿಸಿ ಬಸ್‌ಗೆ ಡಿಕ್ಕಿ ಹೊಡೆದ ಪರಿಣಾಮ ಐವರು ವಿದ್ಯಾರ್ಥಿಗಳು ಸೇರಿದಂತೆ ಒಂಬತ್ತು ಮಂದಿ ಸಾವನ್ನಪ್ಪಿದ್ದಾರೆ ಎಂದು ಕೇರಳದ ಸಾರಿಗೆ ಸಚಿವ ಆಂಟನಿ ರಾಜು ಗುರುವಾರ ತಿಳಿಸಿದ್ದಾರೆ.

'ಬುಧವಾರ ರಾತ್ರಿ 11.30ರ ವೇಳೆ ಈ ಅವಘಡ ಸಂಭವಿಸಿದ್ದು, ಅತಿ ವೇಗದಿಂದ ಸಂಚರಿಸುತ್ತಿದ್ದ ಖಾಸಗಿ ಬಸ್ ಕಾರೊಂದನ್ನು ಹಿಂದಿಕ್ಕುವ ವೇಳೆ ಕೆಎಸ್‌ಆರ್‌ಟಿಸಿ ಬಸ್‌ಗೆ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ' ಎಂದೂ ಹೇಳಿದ್ದಾರೆ.

ಎರ್ನಾಕುಳಂನ ಬಾಸೆಲಿಯೋಸ್ ವಿದ್ಯಾನಿಕೇತನ್ ಸೀನಿಯರ್ ಸೆಕೆಂಡರಿ ಶಾಲೆಯ 42 ವಿದ್ಯಾರ್ಥಿಗಳು ಹಾಗೂ ಐವರು ಅಧ್ಯಾಪಕರಿದ್ದ ಈ ಬಸ್ ತಮಿಳುನಾಡಿನ ಊಟಿಗೆ ಪ್ರವಾಸ ಹೊರಟಿತ್ತು.

ಐವರು ವಿದ್ಯಾರ್ಥಿಗಳು, ಅಧ್ಯಾಪಕರೊಬ್ಬರು ಹಾಗೂ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿದ್ದ ಮೂವರು ಪ್ರಯಾಣಿಕರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

'ವರದಿ ನೀಡಿ'

ಅಪಘಾತದ ಕುರಿತು ವರದಿ ನೀಡುವಂತೆ ಪೊಲೀಸ್ ಹಾಗೂ ಸಾರಿಗೆ ಇಲಾಖೆಗೆ ಹೈಕೋರ್ಟ್ ಸೂಚಿಸಿದೆ. ಲೇಸರ್ ದೀಪ ಹಾಗೂ ಭಾರಿ ಶಬ್ದ ಹೊರಡಿಸುವ ಹಾರ್ನ್ ಹೊಂದಿರುವ ಬಸ್‌ಗೆ ಹೇಗೆ ಕ್ಷಮತಾ ಪ್ರಮಾಣಪತ್ರ ನೀಡಲಾಯಿತು ಎಂದೂ ಪ್ರಶ್ನಿಸಿದೆ.

ಘಟನೆಯ ಬಗ್ಗೆ ತನಿಖೆ ನಡೆಸಲಾಗುವುದು ಮತ್ತು ಸಾರಿಗೆ ನಿಯಮ ಉಲ್ಲಂಘಿಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದಾರೆ.

ಲೆಫ್ಟಿನೆಂಟ್ ಗವರ್ನರ್ ವಿರುದ್ಧ ಕೇಜ್ರಿವಾಲ್ ವ್ಯಂಗ್ಯ

'ಹೆಂಡತಿಗಿಂತ ಹೆಚ್ಚು ಬಯ್ಯುತ್ತಾರೆ'

ನವದೆಹಲಿ (ಪಿಟಿಐ): 'ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರು ನನ್ನ ಪತ್ನಿಗಿಂತಲೂ ಹೆಚ್ಚಾಗಿ ನನ್ನನ್ನು ಬಯ್ಯುತ್ತಾರೆ' ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ. ದೆಹಲಿ ಸರ್ಕಾರ ಹಾಗೂ ಲೆಫ್ಟಿನೆಂಟ್ ಗವರ್ನರ್ ನಡುವೆ ಹಲವು ವಿಚಾರಗಳಲ್ಲಿ ಆಗಾಗ್ಗೆ ತಿಕ್ಕಾಟ ನಡೆಯುತ್ತಿರುತ್ತದೆ.

ವ್ಯಂಗ್ಯದ ಧಾಟಿಯಲ್ಲಿ ಟ್ವೀಟ್ ಮಾಡಿರುವ ಕೇಜ್ರಿವಾಲ್ ಅವರು, 'ನನ್ನ ಇಡೀ ಜೀವನದಲ್ಲಿ ನನ್ನ ಪತ್ನಿಯಿಂದ ಸ್ವೀಕರಿಸಿರುವ ಪ್ರೇಮಪತ್ರಗಳಿಗಿಂತ ಹೆಚ್ಚು ಪತ್ರಗಳನ್ನು ಕಳೆದ ಆರು ತಿಂಗಳಲ್ಲಿ ಲೆಫ್ಟಿನೆಂಟ್ ಗವರ್ನರ್ ಅವರಿಂದ ಪಡೆದಿದ್ದೇನೆ' ಎಂದಿದ್ದಾರೆ. 'ಲೆಫ್ಟಿನೆಂಟ್ ಗವರ್ನರ್ ಸಾಹೇಬರೇ ಸ್ವಲ್ಪ ಆರಾಮಾಗಿರಿ. ನಿಮ್ಮ ಮುಖ್ಯಸ್ಥರಿಗೂ ಹೇಳಿ' ಎಂದು ಉಲ್ಲೇಖಿಸಿದ್ದಾರೆ.

ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ಬಿಜೆಪಿ, ಮಕ್ಕಳಾಟದ ಭಾಷೆಯಲ್ಲಿ ಮತನಾಡಬೇಡಿ ಎಂದು ಕೇಜ್ರಿವಾಲ್ ಅವರಿಗೆ ಹೇಳಿದೆ. 'ಲೆಫ್ಟಿನೆಂಟ್ ಗವರ್ನರ್ ಅವರು ಬುದ್ಧಿ ಹೇಳಿರಬಹುದು. ಹಗರಣಗಳನ್ನು ನಿಲ್ಲಿಸಿ, ದೀಪಾವಳಿಯ ಒಳಗೆ ಪೌರಕಾರ್ಮಿಕರಿಗೆ ವೇತನ ನೀಡಿ' ಎಂದು ಸಲಹೆ ನೀಡಿದೆ.

ಗಾಂಧೀಜಿ ಹಾಗೂ ಶಾಸ್ತ್ರಿ ಜನ್ಮದಿನಾಚರಣೆ ಕಾರ್ಯಕ್ರಮಗಳಲ್ಲಿ ಎಎಪಿ ಶಾಸಕರು ಭಾಗಿಯಾಗದೇ ಅಗೌರವ ತೋರಿದ್ದಾರೆ ಎಂದು ಆರೋಪಿಸಿ ಸಕ್ಸೇನಾ ಅವರು ಕೇಜ್ರಿವಾಲ್ ಅವರಿಗೆ ಪತ್ರ ಬರೆದಿದ್ದರು. ಮೂಲಸೌಕರ್ಯ ಕಾಮಗಾರಿಗಳನ್ನು ಚುರುಕುಗೊಳಿಸುವಂತೆ ಸೂಚಿಸಿ ಅವರು ಕಳೆದವಾರವೂ ಪತ್ರ ಬರೆದಿದ್ದರು. ಈ ಪತ್ರಗಳ ಕಾರಣದಿಂದ ಕೇಜ್ರಿವಾಲ್ ತಿರುಗೇಟು ನೀಡಿದ್ದಾರೆ.

'ಟೋಲ್ ಹಗರಣದ ತನಿಖೆ ಏಕಿಲ್ಲ'

ದೆಹಲಿ ಮಹಾನಗರ ಪಾಲಿಕೆಯಲ್ಲಿ ನಡೆದಿರುವ ₹6,000 ಕೋಟಿ ಮೊತ್ತದ ಟೋಲ್ ಹಗರಣದಲ್ಲಿ ಇನ್ನೂ ಏಕೆ ತನಿಖೆಗೆ ಆದೇಶ ನೀಡಿಲ್ಲ ಎಂದು ಲೆಫ್ಟಿನೆಂಟ್ ಗವರ್ನರ್ ಅವರನ್ನು ಎಎಪಿ ಗುರುವಾರ ಪ್ರಶ್ನಿಸಿದೆ. ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರು ಎರಡು ತಿಂಗಳ ಹಿಂದೆಯೇ ಹಗರಣಕ್ಕೆ ಸಂಬಂಧಿಸಿದ ಕಡತಗಳನ್ನು ನೀಡಿದ್ದರೂ, ತನಿಖೆಗೆ ಆದೇಶ ನೀಡಲು ಏಕೆ ವಿಳಂಬ ಮಾಡುತ್ತಿದ್ದೀರಿ ಎಂದು ಕೇಳಿದೆ.

ಸಾಕ್ಷ್ಯಾಧಾರ ಇಲ್ಲದಿದ್ದರೂ, ಎಎಪಿ ವಿರುದ್ಧದ ಆರೋಪಗಳಲ್ಲಿ ತಕ್ಷಣ ತನಿಖೆಗೆ ಆದೇಶಿಸುವ ಸಕ್ಸೇನಾ ಅವರು, ಬಿಜೆಪಿ ಮುಖಂಡರೊಬ್ಬರು ಭಾಗಿಯಾಗಿರುವ ಟೋಲ್ ಹಗರಣವನ್ನು ತನಿಖೆಗೆ ಒಪ್ಪಿಸಲು ಏಕೆ ಧೈರ್ಯ ತೋರುಸುತ್ತಿಲ್ಲ ಎಂದು ಎಎಪಿ ಮುಖಂಡ ದುರ್ಗೇಶ್ ಪಾಠಕ್ ಪ್ರಶ್ನಿಸಿದ್ದಾರೆ.

ದೆಹಲಿಗೆ ಪ್ರತಿನಿತ್ಯ 10 ಲಕ್ಷ ವಾಣಿಜ್ಯ ವಾಹನಗಳು ಬರುತ್ತವೆ. ವಾಹನಗಳಿಂದ ಟೋಲ್ ಸಂಗ್ರಹಿಸಲಾಗುತ್ತದೆ. ಆದರೆ ಅದು ಮಹಾನಗರ ಪಾಲಿಕೆ ಖಜಾನೆ ಸೇರುತ್ತಿಲ್ಲ ಎಂದು ಎಎಪಿ ಆರೋಪಿಸಿದೆ.

ದುರ್ಗಾ ಮೂರ್ತಿ ವಿಸರ್ಜನೆ ವೇಳೆ ಪ್ರವಾಹ

ನವದೆಹಲಿ/ಕೋಲ್ಕತ್ತಾ (ರಾಯಿಟರ್ಸ್, ಪಿಟಿಐ): ದುರ್ಗಾ ಮೂರ್ತಿಯ ವಿಸರ್ಜನೆ ವೇಳೆ ಬುಧವಾರ ಉಂಟಾದ ದಿಢೀರ್ ಪ್ರವಾಹದಲ್ಲಿ ಎಂಟು ಮಂದಿ ಮೃತಪಟ್ಟಿದ್ದಾರೆ. ಪಶ್ಚಿಮ ಬಂಗಾಳದ ಜಲಪಾಯಿಗುಡಿ ಜಿಲ್ಲೆಯ ಮಾಲ್ ನದಿಯಲ್ಲಿ ದುರ್ಗಾ ಮೂರ್ತಿಯನ್ನು ಜನರು ವಿಸರ್ಜಿಸುತ್ತಿದ್ದರು.

'ವಿಪತ್ತು ಸ್ಪಂದನ ಪಡೆಯವರು 70 ಮಂದಿಯನ್ನು ರಕ್ಷಿಸಿದ್ದಾರೆ. 13 ಮಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಗುರುವಾರ ಟ್ವೀಟ್ ಮಾಡಿದ್ದಾರೆ.

ಪರಿಹಾರ ಘೋಷಣೆ: ಕೇಂದ್ರ ಮತ್ತು ರಾಜ್ಯ ಸರ್ಕಾರವು ಮೃತರ ಕುಟುಂಬಗಳಿಗೆ ತಲಾ ₹2 ಲಕ್ಷ ಪರಿಹಾರ ಘೋಷಿಸಿದೆ. ಗಾಯಾಳುಗಳಿಗೂ ತಲಾ ₹50 ಸಾವಿರ ಪರಿಹಾರ ಘೋಷಿಸಿವೆ.

ದಿಲ್ ಪಸಂದ್ ಸವಿದ ಮೇಘಾ

ಎಂಬಿಎ ಓದಿಕೊಂಡು ಐಎಎಸ್ ಅಧಿಕಾರಿ ಆಗಬೇಕು ಎಂಬ ಕನಸು ಹೊತ್ತಿದ್ದ ಮೇಘಾ ಶೆಟ್ಟಿ ಅವರನ್ನು ಇದ್ದಕ್ಕಿದ್ದಂತೆಯೇ ಬಣ್ಣದ ಲೋಕ ಕರೆಯಿತು. 'ಜೊತೆಜೊತೆಯಲಿ' ಧಾರಾವಾಹಿಗೆ ಬಣ್ಣ ಹಚ್ಚಿದ ಮೇಘಾ ಅವರನ್ನು ಬೆಳ್ಳಿ ತೆರೆಯೂ ಅರಸಿ ಬಂದಿತು. ಚಿತ್ರ 'ತ್ರಿಬಲ್ ರೈಡಿಂಗ್' ಮತ್ತು 'ದಿಲ್ ಪಸಂದ್' ಬಿಡುಗಡೆಯ ಹೊಸ್ತಿಲಿನಲ್ಲಿವೆ. ಈ ಹೊತ್ತಿನಲ್ಲಿ ಮೇಘಾ ಅವರ ಜೊತೆಗೊಂದಿಷ್ಟು ಮಾತು...


ಮೇಘಾ ಶೆಟ್ಟಿ

ಶರತ್ ಹೆಗ್ಡೆ

- **ಕಿರುತೆರೆಯಿಂದ ಬೆಳ್ಳಿ ತೆರೆಗೆ ಹೋಗುವ ಬದಲಾವಣೆ ಹೇಗಿತ್ತು?**

ಕಷ್ಟವೆನಿಸಲಿಲ್ಲ. ಕಿರುತೆರೆಯಲ್ಲಿ ಕ್ಯಾಮೆರಾ ಎದುರಿಸಿ ಅಭಿನಯಿಸಿದ ಅನುಭವ ಇತ್ತಲ್ಲಾ. ಹಾಗಾಗಿ ಸರಳವೆನಿಸಿತು. ಚಿತ್ರದಲ್ಲಿ ಅಭಿನಯಿಸುವಾಗ ಅವೆಲ್ಲಾ ನೆರವಾದವು. ಹಾಗಾಗಿ ತುಂಬಾ ಖುಷಿಪಟ್ಟಿದ್ದೇನೆ.

- **'ದಿಲ್ ಪಸಂದ್' ಚಿತ್ರದ ಅನುಭವ?**

ತುಂಬಾ ಖುಷಿಯಾಗಿ ಅನುಭವಿಸಿಕೊಂಡು ಈ ಚಿತ್ರದಲ್ಲಿ ತೊಡಗಿದ್ದೇನೆ. ಒಂಥರಾ ಪರಕಾಯ ಪ್ರವೇಶ ಇಲ್ಲಿ ಇದೆ. ಈ ಚಿತ್ರದಲ್ಲಿ ತುಂಬಾ ಮುಗ್ಧ ಹುಡುಗಿಯ ಪಾತ್ರ ನನ್ನದು. ಎಷ್ಟು ಮುಗ್ಧತೆ ಎಂದರೆ ನಾಯಕ (ಡಾರ್ಲಿಂಗ್ ಕೃಷ್ಣ) ಒಂದು ವೇಳೆ ವಿಷ ತಂದು ಕೊಟ್ಟರೂ ಅದನ್ನು ಅಮೃತ ಎಂದು ಭಾವಿಸಿಯೇ ಕುಡಿಯುವ ಮನಸ್ಥಿತಿ. ಇಂಥ ಪಾತ್ರ ನನ್ನದು. ಜೊತೆಗೆ ನಿಶ್ವಿಕಾ ನಾಯ್ಡು ಅವರ ಜೊತೆಗೂ ಅದ್ಭುತ ಹೊಂದಾಣಿಕೆಯೂ ಇತ್ತು. ಹಾಗಾಗಿ ಇಡೀ ಚಿತ್ರ ತಂಡ ಖುಷಿ ಪಟ್ಟಿದೆ.

- **'ತ್ರಿಬಲ್ ರೈಡಿಂಗ್'ಗಿಂತ ಮೊದಲೇ 'ದಿಲ್ ಪಸಂದ್' ಬರುತ್ತಿದೆಯಲ್ಲಾ?**

ಎರಡೂ ಚಿತ್ರಗಳು ಈಗಾಗಲೇ ಸಿದ್ಧವಾಗಿವೆ. ಆಯಾ ತಂಡದ ಯೋಜನೆಗಳು ಬೇರೆಯೇ ಇರುತ್ತವೆ. 'ತ್ರಿಬಲ್ ರೈಡಿಂಗ್'ನ ಹಾಡುಗಳೂ ಬಿಡುಗಡೆಯಾಗಿವೆ. ಅಲ್ಲಿ ಯಾವ ಕೆಲಸವೂ ಬಾಕಿ ಇಲ್ಲ. ಸ್ವಲ್ಪ ವಿಳಂಬ ಆಗಿರಬಹುದು. ಆದರೆ, ಎರಡೂ ಚಿತ್ರಗಳು ಪ್ರೇಕ್ಷಕನಿಗೆ ತುಂಬಾ ಹಿಡಿಸುತ್ತವೆ. ಖುಷಿ ಕೊಡುತ್ತವೆ.

- **'ದಿಲ್ ಪಸಂದ್'ನ್ನು ನಾವು ಯಾಕೆ ನೋಡಬೇಕು?**

ಬಾಯಿ ಹುಣ್ಣಾಗುವಷ್ಟು ನಗದೇ ಬಹಳ ಕಾಲವಾಗಿದೆಯೇ? ಈ ಚಿತ್ರ ನೋಡಿ. ನಿಮ್ಮನ್ನು ಪೂರ್ತಿ ನಗಿಸುತ್ತದೆ. ಮನಸ್ಸಿಗೆ ನಿರಾಳತೆ ಉಂಟು ಮಾಡುತ್ತದೆ. ಕುಟುಂಬ ಸಮೇತ ನೋಡಬೇಕಾದ ಸದಭಿರುಚಿಯ ಚಿತ್ರವಿದು. ಪೂರ್ಣ ಪೈಸಾ ವಸೂಲ್ ಸಿನಿಮಾ. ಹಾಗಾಗಿ ಪ್ರೇಕ್ಷಕರು ಈ ಚಿತ್ರ ನೋಡಬೇಕು.

- **ಸಿನಿಮಾ ಕ್ಷೇತ್ರಕ್ಕೆ ಬರುವ ಮುನ್ನ ನಿಮ್ಮ ಸಿದ್ಧತೆ ಏನಿತ್ತು?**

ಏನೂ ಇರಲಿಲ್ಲ. ಅದೊಂಥರಾ ವರ ಎಂದೇ ಹೇಳಬೇಕು. ಎಂಬಿಎ ಓದುತ್ತಿದ್ದವಳನ್ನು ಕಿರುತೆರೆಗೆ ಕರೆತಂದದ್ದೇ ಜೀ ಕನ್ನಡದ ಮುಖ್ಯಸ್ಥ ರಾಘವೇಂದ್ರ ಹುಣಸೂರು. ನನ್ನ ಕಾಲೇಜಿನ ಪರೀಕ್ಷೆಗಳೆಲ್ಲಾ ಮುಗಿಯುವವರೆಗೆ ಕಾದು ಆ ಬಳಿಕ 'ಜೊತೆ ಜೊತೆಯಲಿ' ಧಾರಾವಾಹಿಗೆ ಆಯ್ಕೆ ಮಾಡಿದರು. ಅದೇನೋ ಗೊತ್ತಿಲ್ಲ. ಒಂದು ಸ್ಕ್ರಿಪ್ಟ್ ಕೊಟ್ಟಾಗ ಸ್ವಲ್ಪ ಓದಿಕೊಂಡು ಪರಕಾಯ ಪ್ರವೇಶ ಮಾಡಿಬಿಡುತ್ತೇನೆ. ಮುಖ್ಯವಾಗಿ ಪ್ರೇಕ್ಷಕರು ಸ್ವೀಕರಿಸಿದ್ದಾರೆ. ಅವರ ಆಶೀರ್ವಾದ ಸಿಕ್ಕಿದೆ. ಇದೇ ಕಾರಣ ಎನ್ನಬೇಕು.

- **ಕುಟುಂಬದ ಬಗ್ಗೆ ಹೇಳಿ.**

ನನ್ನ ತಂದೆ ಸುರೇಶ್ ಶೆಟ್ಟಿ ರಂಗಭೂಮಿ ಕಲಾವಿದರು. ಅಮ್ಮ ಗೃಹಿಣಿ. ಹಿರಿಯ ಅಕ್ಕ ಧಾರಾವಾಹಿ ನಿರ್ಮಾಪಕಿ. ತೆಲುಗು ಧಾರಾವಾಹಿ ನಿರ್ಮಿಸುತ್ತಿದ್ದಾರೆ. ಎರಡನೇ ಅಕ್ಕ ಮೇಕಪ್ ಮತ್ತು ಫ್ಯಾಷನ್ ಡಿಸೈನಿಂಗ್ ಕ್ಷೇತ್ರದಲ್ಲಿದ್ದಾರೆ. ಹೀಗೆ ನಮ್ಮ ಕುಟುಂಬಕ್ಕೆ ಕಲಾ ಕ್ಷೇತ್ರದ ನಂಟು ಇದೆ. ಅದು ನನ್ನ ಮೂಲಕವೂ ಮುಂದುವರಿದಿದೆ.

- **ಅಭಿಮಾನಿಗಳು ಎಲ್ಲಿ ಹೆಚ್ಚು ಇದ್ದಾರೆ? ಕಿರುತೆರೆಯಲ್ಲೋ ಅಥವಾ ಬೆಳ್ಳಿ ತೆರೆಯಲ್ಲೋ?**

ಬೆಳ್ಳಿತೆರೆಯಲ್ಲಿ ಇತ್ತೀಚೆಗಷ್ಟೇ ಕಾಣಿಸಿಕೊಂಡಿದ್ದೇನೆ. ಈ ಕ್ಷೇತ್ರಕ್ಕೆ ಕರೆತಂದ ಕಿರುತೆರೆಯನ್ನಂತೂ ಮರೆಯಲು ಸಾಧ್ಯವೇ ಇಲ್ಲ. ಅಷ್ಟೊಂದು ಕೆಲಸ ಕಲಿಸಿದೆ. ಬೆಳೆಸಿ, ಪೋಷಿಸಿದೆ. ಜನ ಗುರುತಿಸಿ ತುಂಬಾ ಪ್ರೀತಿ ಕೊಟ್ಟಿದ್ದಾರೆ. ಅಷ್ಟೂ ತಂಡಕ್ಕೆ ಆ ಕ್ಷೇತ್ರಕ್ಕೆ, ಅವರ ಆಶೀರ್ವಾದಕ್ಕೆ ನಾನು ಋಣಿ.

- **ಮುಂದಿನ ಕನಸುಗಳು?**

ಖಂಡಿತಾ ತುಂಬಾ ಇವೆ. ಒಂದಿಷ್ಟು ಯೋಜನೆಗಳನ್ನು ಹಾಕಿಕೊಂಡಿದ್ದೇನೆ. ಅದಕ್ಕಾಗಿ ಸ್ವಲ್ಪ ಸಮಯವೂ ಬೇಕು. ಶೀಘ್ರವೇ ತಿಳಿಸುತ್ತೇನೆ.


ಸುಷ್ಮಾ ರಾವ್
ಭೂಮಿಕಾ

ಬಾಗಿಲು ತೆರೆಯಲಿದ್ದಾಳೆ 'ಭಾಗ್ಯಲಕ್ಷ್ಮೀ'

ಕಿರುತೆರೆ

ಕಲರ್ಸ್ ಕನ್ನಡ ವಾಹಿನಿಯಲ್ಲಿ ಹೊಸ ಧಾರಾವಾಹಿಯೊಂದು ಪ್ರಸಾರವಾಗಲಿದೆ. ದಸರಾ ಮುಗಿದು ದೀಪಾವಳಿ ಹತ್ತಿರವಾಗುತ್ತಿರುವ ಹೊತ್ತಿನಲ್ಲಿ 'ಭಾಗ್ಯಲಕ್ಷ್ಮೀ' ಕಿರು ತೆರೆಯಲ್ಲಿ ಹೆಜ್ಜೆ ಹಾಕಲಿದ್ದಾಳೆ. ಅಕ್ಟೋಬರ್ 10ರಿಂದ ಪ್ರತಿದಿನ ಸಂಜೆ 7 ಗಂಟೆಗೆ ಈ ಧಾರಾವಾಹಿ ಪ್ರಸಾರವಾಗಲಿದೆ.

ಈ ಧಾರಾವಾಹಿ ದೊಡ್ಡ ತಾರಾಬಳಗವನ್ನು ಹೊಂದಿದೆ. ನಿರೂಪಕಿ ಸುಷ್ಮಾ ಕಥಾ ನಾಯಕಿಯಾಗಿ ನಟಿಸುತ್ತಿದ್ದಾರೆ. ಬಿಗ್ ಬಾಸ್ ಖ್ಯಾತಿಯ ಶಮಂತ್ ಗೌಡ(ಬ್ರೋ ಗೌಡ), ಸುದರ್ಶನ್, ಪದ್ಮಜಾ ರಾವ್, ಭೂಮಿಕಾ, ತಾಂಡವ ಸೂರ್ಯವಂಶಿ ತಾರಾಬಳಗದಲ್ಲಿದ್ದಾರೆ. ಜೈ ಮಾತಾ ಕಂಬೈನ್ಸ್ ಈ ಧಾರಾವಾಹಿಯನ್ನು ನಿರ್ಮಾಣ ಮಾಡುತ್ತಿದೆ. ಅಕ್ಕತಂಗಿಯ ಬಾಂಧವ್ಯದ ಕಥೆ ಹೊಂದಿದೆ ಈ ಧಾರಾವಾಹಿ.

ಸುಷ್ಮಾ ಹೇಳುವಂತೆ, 'ಭಾಗ್ಯಲಕ್ಷ್ಮೀ ಮೂಲಕ ಹತ್ತು ವರ್ಷಗಳ ನಂತರ ಮತ್ತೆ ಧಾರಾವಾಹಿಯಲ್ಲಿ ನಟಿಸುತ್ತಿದ್ದೇನೆ. ಜೀವನದಲ್ಲಿ ಏನೇ ಬಂದರೂ ಅದನ್ನು ಖುಷಿಯಿಂದ ಸ್ವಾಗತಿಸಿ ಸುತ್ತಮುತ್ತಲಿನವರನ್ನು ಖುಷಿಯಿಂದ ಇಡುವ, ಮನೆಯ ಜವಾಬ್ದಾರಿಯನ್ನು ಹೊತ್ತು ಇಡೀ ಜೀವನವನ್ನೇ ಸಂಸಾರಕ್ಕಾಗಿ ಮುಡಿಪಾಗಿಟ್ಟಿರುವ ಹೆಣ್ಣು ಮಗಳ ಪಾತ್ರ ನನ್ನದು' ಎಂದರು.

ಹಿರಿಯ ಕಲಾವಿದೆ ಪದ್ಮಜಾ ರಾವ್, 'ಈ ಧಾರಾವಾಹಿಯಲ್ಲಿ ನನ್ನದು ಅತ್ತೆಯ ಪಾತ್ರ. ಇಲ್ಲಿ ನಾನು ಗಟ್ಟಿಗಿತ್ತಿಯಾದ ಅತ್ತೆ ಪಾತ್ರ ನಿರ್ವಹಿಸುತ್ತಿದ್ದೇನೆ. ಗದರುವ ಪಾತ್ರ ನನ್ನದು. ಇಲ್ಲಿವರೆಗೂ ಮೃದು ಪಾತ್ರಗಳನ್ನು ಮಾಡಿದ್ದ ನನಗೂ ಬದಲಾವಣೆ ಬೇಕಿತ್ತು. ಈ ಪಾತ್ರ ತುಂಬಾ ಗಟ್ಟಿಯಾಗಿದೆ. ಆರಂಭದಲ್ಲಿ ಪಾತ್ರಕ್ಕೆ ಒಗ್ಗಿಕೊಳ್ಳಲು ಮೂರು–ನಾಲ್ಕು ದಿನ ಬೇಕಾದವು' ಎಂದರು.

ಪ್ರಜಾವಾಣಿ ನೋಡಿಯೊ

ಸಿನಿಮಾತು ನೋಡಲು ಕೋಡ್ ಸ್ಕ್ಯಾನ್ ಮಾಡಿ

ಇನ್ನಷ್ಟು ಸಿನಿಮಾ, ಕಿರುತೆರೆ ಸುದ್ದಿಗಳನ್ನು ಓದಲು www.prajavani.net ನೋಡಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in




❦ ಸುಭಾಷಿತ ❦

ಒಳ್ಳೆಯದು ಮತ್ತು ಕೆಟ್ಟದ್ದು ಎಂಬ ಇತರರ ಅಭಿಪ್ರಾಯದ ಪ್ರಭಾವದಿಂದ ನೀವು ಮುಕ್ತರಾಗದಿದ್ದರೆ ಯಾವ ಸಾಧನೆಯನ್ನೂ ಮಾಡಲಾಗದು.

-ದೀಪಕ್ ಚೋಪ್ರಾ

ಸುದ್ದಿವಾಹಿನಿಗಳಲ್ಲಿ ದ್ವೇಷದ ಮಾತು ಹತ್ತಿಕ್ಕಬೇಕಾದ ಪ್ರವೃತ್ತಿ

ದೇಶದ ಕೆಲವು ಟಿ.ವಿ. ಸುದ್ದಿವಾಹಿನಿಗಳ ಮೂಲಕ ದ್ವೇಷದ ಮಾತುಗಳನ್ನು ಪ್ರಸಾರ ಮಾಡುವುದರ ವಿಚಾರವಾಗಿ ಸುಪ್ರೀಂ ಕೋರ್ಟ್ ತೀವ್ರ ಕಳವಳ ವ್ಯಕ್ತಪಡಿಸಿರುವುದು ಸರಿಯಾಗಿಯೇ ಇದೆ. ಇಂತಹ ಮಾತುಗಳನ್ನು ಪ್ರಸಾರ ಮಾಡುತ್ತಿರುವ ಕಾರಣದಿಂದಾಗಿ ದೇಶದ ಸಾಮಾಜಿಕ ಹಾಗೂ ರಾಜಕೀಯ ಸಂವಾದಗಳ ಮೇಲೆ ಆಗುತ್ತಿರುವ ದುಷ್ಪರಿಣಾಮ ಕಡಿಮೆಯೇನೂ ಅಲ್ಲ. ವಾಸ್ತವದಲ್ಲಿ ಇಂತಹ ಮಾತುಗಳು ಧರ್ಮ, ಸಮುದಾಯ, ಜಾತಿ ಮತ್ತು ಇತರ ವರ್ಗಗಳ ಆಧಾರದಲ್ಲಿ ಸಮಾಜವನ್ನು ಒಡೆಯುತ್ತಿವೆ, ಇರುವ ಕಂದಕವನ್ನು ಹೆಚ್ಚಿಸುತ್ತಿವೆ, ಬಿಕ್ಕಟ್ಟು ಹಾಗೂ ಸಂಘರ್ಷಗಳನ್ನು ಜಾಸ್ತಿ ಮಾಡುತ್ತಿವೆ. ಆ ಮೂಲಕ ದೇಶದ ಸಾಮಾಜಿಕ ಬೆಸುಗೆಯನ್ನು ಹಾಳು ಮಾಡುತ್ತಿವೆ. ಟಿ.ವಿ. ಸುದ್ದಿವಾಹಿನಿಗಳು ದ್ವೇಷದ ಮಾತುಗಳನ್ನು ಹರಡುವ ಪ್ರಧಾನ ಮಾಧ್ಯಮ ಆಗುತ್ತಿವೆ ಎಂದು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್ ಹಾಗೂ ಹೃಷಿಕೇಶ್ ರಾಯ್ ಅವರಿದ್ದ ಪೀಠ ಹೇಳಿದೆ. ಅಲ್ಲದೆ, 'ಇಂಥವೆಲ್ಲ ನಡೆಯುತ್ತಿದ್ದರೂ ಕೇಂದ್ರ ಸರ್ಕಾರವು ಮೌನವಾಗಿ ನೋಡುತ್ತಿರುವುದು ಏಕೆ' ಎಂದು ಪ್ರಶ್ನಿಸಿದೆ. ದ್ವೇಷದ ಮಾತುಗಳ ಪ್ರಸಾರದ ವಿಚಾರವಾಗಿ ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿರುವುದು ಇದು ಮೊದಲೇನೂ ಅಲ್ಲ. ದ್ವೇಷ ಭಾಷಣವನ್ನು ಹತ್ತಿಕ್ಕಲು ಕೈಗೊಂಡ ಕ್ರಮಗಳು ಯಾವುವು ಎಂಬುದನ್ನು ವಿವರಿಸುವಂತೆ ಸುಪ್ರೀಂ ಕೋರ್ಟ್ ಕೆಲವು ವಾರಗಳ ಹಿಂದೆ ರಾಜ್ಯ ಸರ್ಕಾರಗಳಿಗೆ ಸೂಚಿಸಿತ್ತು. ಈಗ, ರಾಜ್ಯಗಳಿಂದ ದೊರೆತಿರುವ ಪ್ರತಿಕ್ರಿಯೆ ಆಧರಿಸಿ ವರದಿಯೊಂದನ್ನು ಸಿದ್ಧಪಡಿಸುವಂತೆ ಅದು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿದೆ.



ಈಗಾಗಲೇ ಜಾರಿಯಲ್ಲಿ ಇರುವ ಕಾನೂನುಗಳನ್ನು ಬಳಸಿಯೂ ದ್ವೇಷದ ಭಾಷಣಗಳನ್ನು ನಿಯಂತ್ರಿಸಲು ಸಾಧ್ಯವಿದೆ

ಹಲವು ಟಿ.ವಿ. ಸುದ್ದಿವಾಹಿನಿಗಳಲ್ಲಿ ದ್ವೇಷ ಭಾಷಣವು ಈಗ ಮಾಮೂಲು ಎಂಬಂತಾಗಿದೆ. ಹಿಂದೆ ಮಾತಿನ ಮೇಲೆ ನಿಯಂತ್ರಣ ಇತ್ತು. ಈಗ ಅದು ಇಲ್ಲವಾಗಿದೆ. ಅಂತಹ ಮಾತುಗಳು ಈಗ ಯಾವ ತಡೆ ಇಲ್ಲದೆ ಪ್ರಸಾರ ಆಗುತ್ತಿವೆ. ಘಟನೆಗಳ ವರದಿಗಾರಿಕೆಯು ಎಲ್ಲ ಸಂದರ್ಭಗಳಲ್ಲಿಯೂ ವಾಸ್ತವ ಆಧರಿಸಿ ಇರುವುದಿಲ್ಲ. ಹಲವು ಸಂದರ್ಭಗಳಲ್ಲಿ ವರದಿಗಾರಿಕೆಯು ಪಕ್ಷಪಾತಿಯಾಗಿ ಇರುತ್ತದೆ. ಕೆಲವು ಸುದ್ದಿವಾಹಿನಿಗಳ ನಿರೂಪಕರು ನಿಷ್ಪಕ್ಷಪಾತ ಧೋರಣೆಯಿಂದ, ನ್ಯಾಯಸಮ್ಮತವಾಗಿ ವರ್ತಿಸುವುದಿಲ್ಲ. ಟಿ.ವಿ. ಸುದ್ದಿವಾಹಿನಿಗಳ ಮೂಲಕ ಪ್ರಸಾರವಾಗುವ ಚರ್ಚೆಗಳು ಭಾವನಾತ್ಮಕವಾಗಿಯೂ ಪ್ರಚೋದನಕಾರಿ ಆಗಿಯೂ ಇರುತ್ತವೆ. ನಿರೂಪಕರು ಇಂಥವುಗಳಲ್ಲಿ ತಾವೂ ಭಾಗಿಯಾಗಿರುತ್ತಾರೆ. ದ್ವೇಷದ ಮಾತುಗಳ ಪ್ರಸಾರದಿಂದ ಲಾಭ ಪಡೆದುಕೊಳ್ಳುವ, ಸಮಾಜದ ಧ್ರುವೀಕರಣದಿಂದ ಪ್ರಯೋಜನ ಪಡೆದುಕೊಳ್ಳುವ ಹಿತಾಸಕ್ತ ಗುಂಪುಗಳ ನಿಯಂತ್ರಣದಲ್ಲಿ ಹಲವು ವಾಹಿನಿಗಳು ಇವೆ. ಇವೆಲ್ಲವುಗಳ ಹಿಂದೆ ವಾಣಿಜ್ಯಿಕ ಆಯಾಮವೂ ಇದೆ. ಟಿಆರ್‌ಪಿ ಲೆಕ್ಕಾಚಾರ ಇಲ್ಲಿದೆ. ಭಾವನೆಗಳು ಅತಿಯಾದಾಗ ಅವು ಕೂಡ ಸರಕಿನಂತೆ ಬಿಕರಿಯಾಗುತ್ತವೆ. ನ್ಯಾಯಮೂರ್ತಿ ರಾಯ್ ಅವರು ಹೇಳಿದಂತೆ, 'ದ್ವೇಷವು ಲಾಭ ತಂದುಕೊಡುತ್ತದೆ'. ಈ ಬಗೆಯ ಕಾರ್ಯಕ್ರಮಗಳು ವೀಕ್ಷಕರನ್ನು ಸೆಳೆಯುತ್ತವೆ, ವಾಹಿನಿಗಳ ನಡುವೆ ಇಂತಹ ಕಾರ್ಯಕ್ರಮಗಳ ವಿಚಾರವಾಗಿಯೇ ಸ್ಪರ್ಧೆ ಏರ್ಪಡುತ್ತದೆ. ಹೆಚ್ಚಿನ ವೀಕ್ಷಕರನ್ನು ಸೆಳೆಯುವ ಉದ್ದೇಶದಿಂದ ಹಲವು ವಾಹಿನಿಗಳು 'ಇಂದಿಗಿಂತ ನಾಳೆ ಹೆಚ್ಚು ಗದ್ದಲ ಉಂಟುಮಾಡಬೇಕು, ಇಂದಿಗಿಂತ ನಾಳೆ ಹೆಚ್ಚು ಅತಿರೇಕದಿಂದ ವರ್ತಿಸಬೇಕು, ಇತರ ವಾಹಿನಿಗಳಿಗಿಂತ ತಾನು ಹೆಚ್ಚು ಕೆಟ್ಟದ್ದಾಗಿರಬೇಕು' ಎಂಬಂತೆ ವರ್ತಿಸುತ್ತಿವೆ.

ದ್ವೇಷದ ಮಾತುಗಳ ಪ್ರಸಾರದ ವಿಚಾರವಾಗಿ ಸರ್ಕಾರ ಮೌನವಾಗಿ ಇರುವುದು ಏಕೆ ಎಂದು ಕೋರ್ಟ್ ಕೇಳಿರುವ ಪ್ರಶ್ನೆಗೆ ಉತ್ತರ ಸರಳವಾಗಿದೆ. ಆಡಳಿತಾರೂಢ ಪಕ್ಷವು ದ್ವೇಷದ ಮಾತುಗಳಿಂದ ಪ್ರಯೋಜನ ಪಡೆದುಕೊಂಡಿದೆ. ಪಕ್ಷದ ನೇತೃತ್ವದ ಸರ್ಕಾರದಿಂದಲೇ ಆ ಮಾತುಗಳು ಪೋಷಣೆ ಪಡೆದಿವೆ. ಭಾಷಣಕ್ಕೆ ಉತ್ತೇಜನ ನೀಡುವ ಹಾಗೂ ದ್ವೇಷದ ಭಾಷಣಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ತಂತ್ರಗಾರಿಕೆಯನ್ನು ಕರಗತ ಮಾಡಿಕೊಳ್ಳುವ ವ್ಯವಸ್ಥೆಯನ್ನು ಕಟ್ಟುವಲ್ಲಿ ಪಕ್ಷ ಮತ್ತು ಸರ್ಕಾರದ ಪಾತ್ರ ಇದೆ. ದ್ವೇಷದ ಭಾಷಣಗಳನ್ನು ನಿಯಂತ್ರಿಸಲು ಸರ್ಕಾರವು ಮಾರ್ಗಸೂಚಿಗಳನ್ನು ರೂಪಿಸುವವರೆಗೆ ತಾನೇ ಕೆಲವು ಮಾರ್ಗಸೂಚಿಗಳನ್ನು ರೂಪಿಸುವ ಬಗ್ಗೆ ಪರಿಶೀಲನೆ ನಡೆಸುವ ಸಾಧ್ಯತೆ ಇದೆ ಎಂದು ಕೋರ್ಟ್ ಹೇಳಿದೆ. ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ತಡೆಯಲು ವಿಶಾಖ ಮಾರ್ಗಸೂಚಿಯನ್ನು ಕೋರ್ಟ್ ಹೊರಡಿಸಿದ್ದು ಕೂಡ ಇದೇ ಮಾದರಿಯಲ್ಲಿಯೇ. ಕೋರ್ಟ್‌ನ ನಡೆ ಸ್ವಾಗತಾರ್ಹ. ಆದರೆ ದ್ವೇಷದ ಮಾತುಗಳು, ಭಾಷಣದ ವಿಚಾರವಾಗಿ ಸರ್ಕಾರವು ಕಾನೂನು ರೂಪಿಸುತ್ತದೆ ಎಂದು ನಿರೀಕ್ಷಿಸಲು ಆಗದು. ಒಂದು ವೇಳೆ ಸರ್ಕಾರ ಕಾನೂನು ರೂಪಿಸಿದರೂ ಅದು ಪರಿಣಾಮಕಾರಿ ಆಗಿರುತ್ತದೆ ಎಂದು ಬಯಸಲು ಆಗದು. ಈಗಾಗಲೇ ಜಾರಿಯಲ್ಲಿ ಇರುವ ಕಾನೂನುಗಳನ್ನು ಬಳಸಿಯೂ ದ್ವೇಷದ ಭಾಷಣಗಳನ್ನು ನಿಯಂತ್ರಿಸಲು ಸಾಧ್ಯವಿದೆ. ಆದರೆ, ಅವುಗಳ ಬಳಕೆ ಆಗುತ್ತಿಲ್ಲ ಎಂಬುದು ಇಲ್ಲಿ ಗಮನಿಸಬೇಕಾದ ಅಂಶ.

ದಿನದ ಟ್ವೀಟ್

ಏಕಸಂಸ್ಕೃತಿ ಹೇರಿಕೆ ಸಲ್ಲ



ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳ ಹುದ್ದೆಗಳಿಗೆ ಸ್ಟಾಫ್ ಸೆಲೆಕ್ಷನ್ ಕಮಿಷನ್ ನಡೆಸುವ ಸಿಜಿಎಲ್ (ಕಂಬೈನ್ಡ್ ಗ್ರ್ಯಾಜುಯೇಟ್ ಲೆವೆಲ್) ಪರೀಕ್ಷೆಗಳನ್ನು ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಮಾತ್ರ ನಡೆಸಲಾಗುವುದು ಎಂಬ ಕೇಂದ್ರ ಸರ್ಕಾರದ ಪ್ರಕಟಣೆಯನ್ನು ತೀವ್ರವಾಗಿ ವಿರೋಧಿಸುತ್ತೇನೆ. ಭಾರತೀಯ ಒಕ್ಕೂಟದ ಸಾರ್ವಭೌಮತ್ವವು ಅದರ ಬಹುತ್ವದಲ್ಲಿ ಬೇರೂರಿದೆ. ಇದಕ್ಕೆ ವ್ಯತಿರಿಕ್ತವಾಗಿ, ಎಲ್ಲದರ ಮೇಲೆ ಏಕಸಂಸ್ಕೃತಿಯನ್ನು ಹೇರಲು ಪ್ರಯತ್ನಿಸುವುದು ಪ್ರಜಾಪ್ರಭುತ್ವದ ಆಶಯಕ್ಕೆ ವಿರುದ್ಧವಾದುದು.

ಕನಿಮೊಳಿ, ರಾಜ್ಯಸಭಾ ಸದಸ್ಯೆ

ಕಿಡಿನುಡಿ



ಮಲ್ಲಿಕಾರ್ಜುನ ಖರ್ಗೆಯವರು ಎಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಸ್ವಇಚ್ಛೆಯಿಂದ ಸ್ಪರ್ಧೆ ಮಾಡಿಲ್ಲ. ಸೋನಿಯಾ ಗಾಂಧಿ ನಿರ್ದೇಶನದಂತೆ ನಾಮಪತ್ರ ಸಲ್ಲಿಸಿದ್ದಾರೆ. ಖರ್ಗೆ ಅವರು ಮೊದಲು ಜೀತದ ಮನಃಸ್ಥಿತಿಯಿಂದ ಹೊರಬರಬೇಕು. ಸುದೀರ್ಘ ರಾಜಕೀಯ ಅನುಭವ ಇರುವ ಅವರ ವ್ಯಕ್ತಿತ್ವವು ಜೀತದ ಮನಃಸ್ಥಿತಿಯನ್ನು ಒಪ್ಪುವಂತಹದ್ದಲ್ಲ ಎಂದು ಭಾವಿಸಿದ್ದೇನೆ. ಮುಳುಗುತ್ತಿರುವ ದೋಣಿಯ ನಾವಿಕನಂತಿರುವ ಅಧ್ಯಕ್ಷ ಹುದ್ದೆಗೆ ಯಾರೇ ನಾಯಕತ್ವ ವಹಿಸಿದರೂ ಏನು ಪ್ರಯೋಜನ?

ಸಿ.ಟಿ.ರವಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಬಿಜೆಪಿ

25 ವರ್ಷಗಳ ಹಿಂದೆ

ಮಂಗಳವಾರ, 7-10-1997

• **ರತನ್ ಟಾಟಾ ಫೋನ್ ಕದ್ದಾಲಿಕೆ: ತನಿಖೆಗೆ ಆದೇಶ**

ನವದೆಹಲಿ, ಅ. 6 (ಯುಎನ್‌ಐ)– 'ಟಾಟಾ ಚಹಾ ಮತ್ತು ಉಲ್ಫಾ' ಹಗರಣ ಕುರಿತು ಖ್ಯಾತ ಉದ್ಯಮಿ ರತನ್ ಟಾಟಾ ಹಾಗೂ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಅವರು ದೂರವಾಣಿ ಮೂಲಕ ನಡೆಸಿದ ಸಂಭಾಷಣೆಯನ್ನು ಕದ್ದಾಲಿಸಲಾಗಿದೆ ಎಂಬ ಆರೋಪದ ಬಗ್ಗೆ ತನಿಖೆ ಆರಂಭಿಸುವಂತೆ ಗೃಹ ಕಾರ್ಯದರ್ಶಿ ಆದೇಶ ನೀಡಿದ್ದಾರೆ.

'ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಈ ಕದ್ದಾಲಿಕೆಯಲ್ಲಿ ಷಾಮೀಲಾಗಿಲ್ಲ. ಈ ಅವ್ಯವಹಾರದಲ್ಲಿ ಯಾವ ಶಕ್ತಿಗಳ ಕೈವಾಡ ಇದೆ ಎಂಬ ಬಗ್ಗೆ ತನಿಖೆ ನಡೆಸಬೇಕು' ಎಂದು ಗೃಹ ಕಾರ್ಯದರ್ಶಿ ಪದ್ಮನಾಭಯ್ಯ ಅವರು ಟೆಲಿಕಾಂ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

ರತನ್ ಟಾಟಾ ಅವರು ಮುಂಬೈನ ಬಾಂಬೆ ಡೈಯಿಂಗ್‌ನ ಮುಖ್ಯಸ್ಥ ನುಸ್ಲಿ ವಾಡಿಯಾ ಜೊತೆಗೆ ನಡೆಸಿದ ಸಂಭಾಷಣೆಯನ್ನು ಕೂಡಾ ಕದ್ದಾಲಿಸಲಾಗಿದೆ ಎಂದು ಕೆಲವು ಪ್ರಮುಖ ಉದ್ಯಮಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

• **ದಕ್ಷಿಣ ಆಫ್ರಿಕಾದಲ್ಲಿ ಪ್ರಧಾನಿ ಗುಜ್ರಾಲ್**

ಜೊಹಾನ್ಸ್‌ಬರ್ಗ್, ಅ. 6 (ಯುಎನ್‌ಐ)– ತಮ್ಮ ಮೂರು ಆಫ್ರಿಕನ್ ರಾಷ್ಟ್ರಗಳ ಪ್ರವಾಸದ ಎರಡನೇ ಹಂತವಾಗಿ ಪ್ರಧಾನಿ ಐ.ಕೆ. ಗುಜ್ರಾಲ್ ಇಂದು ಉಗಾಂಡದ ರಾಜಧಾನಿ ಕಂಪಾಲದಿಂದ ಇಂದು ಇಲ್ಲಿಗೆ ಆಗಮಿಸಿದರು.

ಆಫ್ರಿಕನ್ ರಾಷ್ಟ್ರಗಳ ಜತೆ, ವಿಶೇಷವಾಗಿ ದಕ್ಷಿಣ ಆಫ್ರಿಕಾದ ಜತೆ ಬಲವಾದ ಆರ್ಥಿಕ ಮತ್ತು ವ್ಯಾಪಾರೀ ಸಂಬಂಧ ಕುದುರಿಸುವುದು ಈ ಭೇಟಿಯ ಉದ್ದೇಶ.

ದಕ್ಷಿಣ ಆಫ್ರಿಕಾದ ಜತೆ ಹೊಸ ಪಾಲುದಾರಿಕೆ ಸೇರಿದಂತೆ ಹಲವಾರು ವಿಷಯಗಳ ಬಗ್ಗೆ ಅವರು ದಕ್ಷಿಣ ಆಫ್ರಿಕಾ ಅಧ್ಯಕ್ಷ ನೆಲ್ಸನ್ ಮಂಡೇಲಾ ಅವರ ಜತೆ ಮಾತುಕತೆ ನಡೆಸಲಿದ್ದಾರೆ.

• **ಲಂಕಾ ಕಾಳಗ: 202 ಸಾವು**

ಕೊಲಂಬೊ, ಅ. 6 (ಪಿಟಿಐ)– ಶ್ರೀಲಂಕಾದ ಉತ್ತರ ಮತ್ತು ಪೂರ್ವಭಾಗದಲ್ಲಿ ಎಲ್‌ಟಿಟಿಇ ಮತ್ತು ಭದ್ರತಾ ಪಡೆಗಳ ನಡುವೆ ಮತ್ತೆ ಕಾಳಗ ಆರಂಭವಾಗಿದ್ದು, ನಿನ್ನೆ ಸಂಜೆಯಿಂದೀಚೆಗೆ 160 ತಮಿಳು ಉಗ್ರರು ಮತ್ತು 42 ಮಂದಿ ಸೈನಿಕರು ಸತ್ತಿದ್ದಾರೆ. ಅಲ್ಲದೆ ಕಾಳಗದಲ್ಲಿ ಸುಮಾರು 260 ಮಂದಿಗೆ ಗಾಯಗಳಾಗಿವೆ.

ಎಲ್‌ಟಿಟಿಇ ವಶದಲ್ಲಿರುವ ಉತ್ತರ ವನ್ನಿ ಪ್ರದೇಶವನ್ನು ಬಿಡಿಸಿಕೊಳ್ಳಲು ಮುನ್ನುಗ್ಗುತ್ತಿರುವ ಸೇನೆಯನ್ನು ತಡೆಯಲು ತಮಿಳು ಬಂಡುಕೋರರು ನಿನ್ನೆ ಹಠಾತ್ ದಾಳಿ ನಡೆಸಿದರು.

• **ಇನ್ಸಾಟ್ 3ಎ ಉಡಾವಣೆಗೆ ಯೋಜನೆ**

ಬೆಂಗಳೂರು, ಅ. 6– ಇನ್ಸಾಟ್– 2ಡಿ ಉಪಗ್ರಹವನ್ನು ಸ್ಥಗಿತಗೊಳಿಸಿದ ಕಾರಣದಿಂದ ಉಂಟಾದ ಸಂಪರ್ಕ ನಷ್ಟವನ್ನು ಸರಿದೂಗಿಸಲು ಶಕ್ತಿಶಾಲಿ ಇನ್ಸಾಟ್– 3ಎ ಉಪಗ್ರಹವನ್ನು ಬರುವ ವರ್ಷದ ಆರಂಭದಲ್ಲಿ ತುರ್ತಾಗಿ ಬಾಹ್ಯಾಕಾಶಕ್ಕೆ ಹಾರಿಬಿಡಲು ಇಸ್ರೊ ಯೋಜಿಸಿದೆ ಎಂದು ಇನ್ಸಾಟ್ ಯೋಜನೆಯ ನಿರ್ದೇಶಕ ಡಾ.ಕೆ. ನಾರಾಯಣನ್ ಇಂದು ಇಲ್ಲಿ ತಿಳಿಸಿದರು.

ಹೊಲ ಹಾಗೂ ಕಾಡಿನಲ್ಲಿ ಕಾಣಸಿಗುವ ತಳಿವೈವಿಧ್ಯದ ಸಂರಕ್ಷಣೆಯು ಭವಿಷ್ಯದ ಕೃಷಿಯ ಸುರಕ್ಷತೆಗಾಗಿ ಅಗತ್ಯ

'ಬಿಳಿ ನೇರಳೆ' ಹಾಗೂ 'ಕಪ್ಪು ಅರಿಸಿನ'!



ವಿಶ್ಲೇಷಣೆ

ಡಾ. ಕೇಶವ ಎಚ್. ಕೊರ್ಸೆ

ಪಶ್ಚಿಮಘಟ್ಟದ ತಪ್ಪಲಿನಲ್ಲಿ ಆಕಸ್ಮಿಕವಾಗಿ ಕಂಡುಬಂದ ನೇರಳೆ ಮರವೊಂದರ ಹಣ್ಣು ಬಿಳಿಬಣ್ಣದ್ದಾಗಿತ್ತು! ನೇರಳೆ ಬಣ್ಣಕ್ಕೆ ಕಾರಣವಾದ 'ಎಂತೋಸೈನಿನ್' ಧಾತುವೇ ಇರದೆ, ಹಣ್ಣು ಬಿಳಿಯಾಗುವ ನೈಸರ್ಗಿಕ ವಿದ್ಯಮಾನವದು. ಅದರ ಬೀಜದಿಂದ ಹುಟ್ಟುವ ಸಂತತಿಯ ಹಣ್ಣುಗಳು ಪುನಃ ನೇರಳೆಬಣ್ಣ ಪಡೆಯುವ ಸಾಧ್ಯತೆಯೇ ಹೆಚ್ಚು. ಹೀಗಾಗಿ, ಮಲೆನಾಡಿನ ತಪ್ಪಲಿನ ಶಿರಸಿಯಲ್ಲಿ ವಿನಯ ಮತ್ತು ವಿಂಧ್ಯಾ ಭಂಡಿ ಯುವದಂಪತಿ ಮುನ್ನಡೆಸುತ್ತಿರುವ 'ಸಸ್ಯ ಅಂಗಾಂಶ ಕೃಷಿ ಹಾಗೂ ಸಂರಕ್ಷಣಾ ಪ್ರಯೋಗಾಲಯ'ವು ಈ ವಿಶಿಷ್ಟ 'ಬಿಳಿ ನೇರಳೆ' ತಳಿಯ ತದ್ರೂಪಿಗಳನ್ನು ಸೃಷ್ಟಿಸುವ ಪ್ರಯತ್ನಕ್ಕೆ ಮುಂದಾಗಿದೆ.

ಇಂಥದ್ದೇ ಇನ್ನೊಂದು ವಿಶಿಷ್ಟ ತಳಿ ಈಶಾನ್ಯಭಾರತ ಮೂಲದ 'ಕಪ್ಪು ಅರಿಸಿನ'. ಅರಿಸಿನದ್ದೇ ಇನ್ನೊಂದು ಪ್ರಭೇದವದು. ಕಾಂಡವನ್ನು ಒಣಗಿಸಿ ಪುಡಿಯಾಗಿಸಿದಾಗ ಕಪ್ಪುಬಣ್ಣಕ್ಕೆ ತಿರುಗುವುದರಿಂದ ಬಂದ ಹೆಸರದು. ಅರಿಸಿನದ ಔಷಧಿಗುಣಕ್ಕೆ ಕಾರಣವಾದ 'ಕುರ್ಕುಮಿನ್' ಅಂಶವು ಈ 'ಕಪ್ಪು ಅರಿಸಿನ'ದಲ್ಲೇ ಅಧಿಕವಾಗಿರುವುದರಿಂದ, ಇದಕ್ಕೆ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಹಾಗೂ ಮೌಲ್ಯವಿದೆ. ಇದರ ಬೇಸಾಯಕ್ರಮಗಳ ಅಧ್ಯಯನವೂ ಇಲ್ಲಿ ಸಾಗಿದೆ. ಈ ಹೊಸ ತಳಿಗಳೆಲ್ಲ ಕೃಷಿ ಬೆಳೆಯಾಗಿ ಹೊರಹೊಮ್ಮಿದರೆ, ರೈತರ ಆದಾಯವೂ ವೃದ್ಧಿಯಾದೀತೆಂಬುದು ಅವರ ಆಶಯ.

ತೋಟಗಾರಿಕೆಗೆ ಈ ಬಗೆಯ ವನ್ಯತಳಿಗಳ ಪ್ರವೇಶ ನಿಜಕ್ಕೂ ಸ್ವಾಗತಾರ್ಹ. ರಾಜ್ಯದ ಪ್ರಮುಖ ವಾಣಿಜ್ಯ ಬೆಳೆಯಾಗಿ ಹೊರಹೊಮ್ಮಿರುವ ಅಡಿಕೆಯ ತೋಟಗಳಿಗಂತೂ, ಮಿಶ್ರಕೃಷಿ ಪೋಷಿಸುವ ಈ ತೆರನ ಹೊಸ ಮಾರ್ಗಗಳು ತೀರಾ ಅಗತ್ಯ. ಏಕೆಂದರೆ, ಈವರೆಗೂ ಪೋಷಿಸಿದ ಅಡಿಕೆಯು ಭವಿಷ್ಯದಲ್ಲೂ ಸಲಹಬಹುದೆಂಬ ವಿಶ್ವಾಸವೇ ಕರಾವಳಿ ಹಾಗೂ ಮಲೆನಾಡಿನ ರೈತರಲ್ಲಿ ಇದೀಗ ಮಾಯವಾಗುತ್ತಿದೆ. ಹಳದಿಮುಂಡಿಗೆ, ಎಲೆಚುಕ್ಕೆ, ಕಾಯಿಕೊಳೆಯಂಥ ರೋಗಗಳೆಲ್ಲ ಅಡಿಕೆಯಲ್ಲಿ ವ್ಯಾಪಕವಾಗಿ ಹಬ್ಬುತ್ತಿದ್ದು, ಕೃತಕ ಕ್ರಿಮಿನಾಶಕಗಳ ಬಳಕೆ ಮಿತಿಮೀರುತ್ತಿದೆ. ಅಕಾಲಿಕ ಮಳೆಯು ತೋಟಗಳ ಸ್ವರೂಪವನ್ನೇ ನಾಶ ಮಾಡುತ್ತಿದೆ. ಕಾಡುಹಂದಿಯು ಮರದ ಬೇರು ಬಗೆದರೆ, ಮಂಗಗಳು ಎಳೆಮಿಡಿಯನ್ನೇ ತಿನ್ನುತ್ತಿವೆ! ಆಮದಿನ ಅಡಿಕೆಯಿಂದಾಗುವ ಬೆಲೆ ಏರಿಳಿತದ ಭಯ ಬೇರೆ. ತೀವ್ರವಾಗಿ ಕುಗ್ಗುತ್ತಿರುವ ಇಳುವರಿ ಹಾಗೂ ಹೆಚ್ಚುತ್ತಿರುವ ನಿರ್ವಹಣಾ ವೆಚ್ಚಕ್ಕೆ ಸಣ್ಣ ರೈತರಂತೂ ನಲುಗುತ್ತಿದ್ದಾರೆ.

ತಂಬಾಕು ಸಂಗದ ಅಡಿಕೆ ಉತ್ಪನ್ನಗಳನ್ನು ನಿಷೇಧಿಸುವ ಪ್ರಸ್ತಾಪವಂತೂ ಜಾಗತಿಕವಾಗಿ ದಶಕಗಳಿಂದ ಇದ್ದೇ ಇದೆ. ಅಡಿಕೆಯು ಭವಿಷ್ಯದಲ್ಲಿ ಮಾನ ಕಾಪಾಡೀತೇ ಎಂಬ ಪ್ರಶ್ನೆ ರೈತರನ್ನು ಈಗ ಕಾಡುತ್ತಿದೆ!

ವಿಪರ್ಯಾಸವೆಂದರೆ, ಈ ಯಾವ ಅಂಶಗಳನ್ನೂ ಲೆಕ್ಕಿಸದೆ ಅಡಿಕೆ ಬೆಳೆ ರಾಜ್ಯದೆಲ್ಲೆಡೆ ವ್ಯಾಪಿಸುತ್ತಿದೆ. ಬಯಲುನಾಡಿನ ನೀರಾವರಿ ಪ್ರದೇಶವೂ ಸೇರಿದಂತೆ ಭತ್ತ, ರಾಗಿ, ಮೆಣಸು, ಕಾಳು-ಬೇಳೆ ಬೆಳೆಯಬಲ್ಲ ಹೊಲಗಳೆಲ್ಲ ಶೀಘ್ರ ಲಾಭದ ಮೋಹಕ್ಕೆ ಮರುಳಾದವರ ಅಡಿಕೆ ನೆಡುತೋಪಾಗುತ್ತಿವೆ. ಭೂಬಳಕೆ ಹಾಗೂ ಬೆಳೆ ವಿಸ್ತರಣೆ ಕುರಿತಾಗಿ ಕನಿಷ್ಠ ಮಾರ್ಗಸೂತ್ರಗಳೂ ರಾಜ್ಯದಲ್ಲಿ ಇರದಿರುವುದರ ಪ್ರತೀಕವಿದು. ಈ ಸಂಕೀರ್ಣ ಸ್ಥಿತಿಯಿಂದ ಹೊರಬರಲು, ತೋಟಗಾರಿಕಾ ಕ್ಷೇತ್ರವು ಹಣ್ಣು-ಹಂಪಲು, ಸಾಂಬಾರು ಬೆಳೆ, ಔಷಧಿಮೂಲಿಕೆ ಇತ್ಯಾದಿ ಬೆಳೆ ವೈವಿಧ್ಯದತ್ತ ಹೊರಳಬೇಕಾದ್ದು ಅನಿವಾರ್ಯ. ಸಹ್ಯಾದ್ರಿ ತಪ್ಪಲಿನ ಪಾರಂಪರಿಕ ಅಡಿಕೆ ರೈತರೇನೋ ತಮ್ಮ ತೋಟಗಳಲ್ಲಿ ಬೆಳೆವೈವಿಧ್ಯ ಕಾಪಾಡಿಕೊಳ್ಳಲು ಮೊದಲಿನಿಂದಲೂ ಪ್ರಯತ್ನಿಸುತ್ತಿದ್ದಾರೆ. ಬಾಳೆ, ಕಾಳುಮೆಣಸು, ಕೊಕ್ಕೋ, ಏಲಕ್ಕಿ, ಜಾಯಿಕಾಯಿ, ಅರಿಸಿನ, ಹಲಸು, ಮಾವು, ವೆನಿಲ್ಲಾದಂತಹವೆಲ್ಲ ಅಡಿಕೆ ತೋಟದಲ್ಲಿ ನೆಲೆ ಕಂಡಿದ್ದು ಅವರ ದೀರ್ಘಕಾಲದ ಪರಿಶ್ರಮದಿಂದಾಗಿಯೇ. 'ಬಿಳಿ ನೇರಳೆ' ಹಾಗೂ 'ಕಪ್ಪು ಅರಿಸಿನ' ಸಹ ರೈತರ ಕೈಹಿಡಿಯಬಲ್ಲ ಹೊಸಬೆಳೆಗಳಾದಾವು.

ಕೃಷಿ ಬೆಳೆಯೊಂದಕ್ಕೆ ಹಲವು ತಳಿಗಳಿರುವುದು ಸಸ್ಯಗಳ ನಿರಂತರ ವಿಕಾಸ ಪ್ರಕ್ರಿಯೆಯಿಂದಾಗಿ. ಇದನ್ನು ಸ್ಥೂಲವಾಗಿ ಎರಡು ವಿಧದಲ್ಲಿ ಗುರುತಿಸಬಹುದು. ಒಂದನೆಯದು, ನೈಸರ್ಗಿಕವಾಗಿ ಸಾವಿರಾರು ವರ್ಷಗಳ ಕಾಲಾವಧಿಯಲ್ಲಿ ಜರುಗುವ 'ಮ್ಯುಟೇಷನ್' ವಿಧಾನದಿಂದ ಒದಗುವ ತಳಿಗಳು. ಬರ-ನೆರೆ, ರೋಗ, ಪೋಷಕಾಂಶ-ಬೆಳಕಿಗಾಗಿ ಸ್ಪರ್ಧೆಯಂತಹ ಅನೇಕ ಒತ್ತಡಗಳ ಪರಿಣಾಮವಾಗಿ, ಸಸ್ಯಗಳ ವಂಶವಾಹಿ ಅಥವಾ ವರ್ಣತಂತುಗಳ ರಚನೆಯಲ್ಲಿ ವ್ಯತ್ಯಯವಾಗಿ ಜರುಗುವ ತಳಿ ರೂಪಾಂತರವೇ 'ಮ್ಯುಟೇಷನ್'. ಮೂಲತಃ ಎಲ್ಲ ಬೆಳೆಗಳೂ ಕಾಡಿನಿಂದಲೇ ಬಂದಿರುವುದು. ರೈತರ ಕೈಸೇರಿದ ಪ್ರಭೇದಗಳಿಂದ ಬೇರ್ಪಟ್ಟು ಕಾಡಿನಲ್ಲೇ ಉಳಿದ ಗಿಡಗಳು ಕಾಲಾಂತರದಲ್ಲಿ ವಿಶಿಷ್ಟ ಗುಣ ಬೆಳೆಸಿಕೊಂಡು ಭಿನ್ನ ತಳಿಗಳಾಗಿ ವಿಕಾಸವಾಗುವುದಕ್ಕೆ ಈ ವಂಶವಾಹಿ ರೂಪಾಂತರವೇ ಕಾರಣ.

ಶರಾವತಿ ನದಿ ಕಣಿವೆಯಲ್ಲಿ ದೊರಕುವ ಉಪ್ಪಿನಕಾಯಿ ಮಿಡಿಮಾವಿನ ಕಾಡುತಳಿಗಳು, ಅಘನಾಶಿನಿ ಹಾಗೂ ಕಾಳಿನದಿ ತಪ್ಪಲಿನಲ್ಲಿ ಕಾಣಸಿಗುವ ಉಪ್ಪಾಗೆ-ಜಾರಿಗೆಯಂಥ ಕೋಕಂ ಸಂಬಂಧಿ ಪ್ರಭೇದಗಳು, ನೇತ್ರಾವತಿ ನದಿ ಜಲಾನಯನದಲ್ಲಿರುವ ಜಾಯಿಕಾಯಿಯ ಕಾಡುತಳಿ ಎನ್ನಬಹುದಾದ ರಾಮಪತ್ರೆ, ಕೊಡಚಾದ್ರಿ ಮಡಿಲಲ್ಲಿರುವ ಪಾಂಡವರ ಅಡಿಕೆ ಇವೆಲ್ಲ ಈ ತಳಿವಿಕಾಸಕ್ಕೆ ಉದಾಹರಣೆ. 'ಬಿಳಿ ನೇರಳೆ' ಹಾಗೂ 'ಕಪ್ಪು ಅರಿಸಿನ' ವಿಕಾಸವಾದದ್ದೂ ಹೀಗೇ.



ಹೊಲ-ತೋಟಗಳಲ್ಲೇ ವಿಕಾಸವಾಗುವ ತಳಿಗಳು ಎರಡನೇ ಬಗೆಯವು. ಗಿಡದ ಭಾಗ ಅಥವಾ ಬೀಜವನ್ನು ಬಳಸಿ ರೈತರು ನಿರಂತರವಾಗಿ ಬೆಳೆಸಸ್ಯಗಳ ಪುನರುತ್ಪತ್ತಿ ಮಾಡುತ್ತಿರುತ್ತಾರಷ್ಟೇ. ಅಲ್ಲಿನ ವಾತಾವರಣ, ಮಣ್ಣಿನಗುಣ, ರೋಗಗಳಂತಹ ಪ್ರಾಕೃತಿಕ ಅಂಶಗಳ ಜೊತೆಗೆ ರೈತರ ವಿಶಿಷ್ಟ ಬೇಸಾಯಕ್ರಮಗಳೂ ಬೆಸೆದು, ಕಾಲಾಂತರದಲ್ಲಿ ಬೆಳೆಗಳು ತಮ್ಮ ರೂಪ-ಗುಣಗಳಲ್ಲಿ ಪ್ರತ್ಯೇಕತೆ ತೋರತೊಡಗುತ್ತವೆ. ಹಲವು ತಲೆಮಾರುಗಳ ನಂತರ ಅವು ಹೊಸ ತಳಿಗಳಾಗಿಯೇ ವಿಕಾಸವಾಗುತ್ತವೆ! ತುಂಗಭದ್ರೆಯ ಉಪನದಿ ವರದಾ ನದಿ ಜಲಾನಯನ ಪ್ರದೇಶದಲ್ಲಿ, ಅರವತ್ತಕ್ಕೂ ಹೆಚ್ಚಿನ ಭತ್ತದ ಪಾರಂಪರಿಕ ತಳಿಗಳನ್ನು ರೈತರು ಇಂದಿಗೂ ಬೆಳೆಯುತ್ತಿರುವುದನ್ನು ಕರ್ನಾಟಕ ಜೀವವೈವಿಧ್ಯ ಮಂಡಳಿ ದಾಖಲಿಸಿದೆ.


ಸಣ್ಣಕ್ಕಿ, ಜೀರಿಗೆಸಾಲಿ, ಒಂದುಕಡ್ಡಿ, ಹಳಗಾ, ಆಲೂರುಸಣ್ಣ, ದೊಡ್ಡಗ್ಯಾ, ಬದ್ನಾರಿ... ಹೀಗೆ ಒಂದೊಂದು ಹೆಸರಿನ ಭತ್ತವೂ ವಿಭಿನ್ನವೇ! ಉತ್ತರ ಕನ್ನಡದ ಅಡಿಕೆ ತೋಟಗಳಲ್ಲಿ ಇಪ್ಪತ್ತೈದಕ್ಕೂ ಹೆಚ್ಚಿನ ಕಾಳುಮೆಣಸಿನ ದೇಸಿ ತಳಿಗಳಿರುವುದನ್ನು ಇತ್ತೀಚಿನ ಅಧ್ಯಯನಗಳು ತೋರಿಸಿವೆ. ರೈತರ ಪಾರಂಪರಿಕ ಜ್ಞಾನ ಹಾಗೂ ಕೌಶಲಗಳಿಂದ ಸೃಷ್ಟಿಯಾದ ತಳಿವೈವಿಧ್ಯವಿದು.

ಕಾಡಿನ ವನ್ಯತಳಿ ಅಥವಾ ರೈತರ ಹೊಲದತಳಿ- ಯಾವುದೇ ಇರಲಿ, ಈ ಬೆಳೆವೈವಿಧ್ಯದ ಸಂರಕ್ಷಣೆಯ ಜರೂರತ್ತಿದೆ ಈಗ. ಹವಾಮಾನ ಬದಲಾವಣೆಯ ಸವಾಲುಗಳನ್ನೆಲ್ಲ ಮೀರಿ ಭವಿಷ್ಯದ ಕೃಷಿ ಸಾಗಬೇಕಾದರೆ, ನಮ್ಮ ಅಗತ್ಯಗಳನ್ನೆಲ್ಲ ಪೂರೈಸಬಲ್ಲ ಸಶಕ್ತ ತಳಿಗಳು ನಿರಂತರವಾಗಿ ಕೃಷಿಯಂಗಳಕ್ಕೆ ಬರುತ್ತಿರಬೇಕು. ಈ ದಿಸೆಯಲ್ಲಿ ಸರ್ಕಾರಿ ಕೃಷಿ ಸಂಶೋಧನಾ ಸಂಸ್ಥೆಗಳು, ತಳಿವೈವಿಧ್ಯ ಮತ್ತು ರೈತರ ಹಕ್ಕುಗಳ ಸಂರಕ್ಷಣಾ ಪ್ರಾಧಿಕಾರ, ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ ಇವೆಲ್ಲ ಕೆಲಸ ಮಾಡುತ್ತಿವೆ. ಆದರೆ, ತಳಿನಾಶದ ವೇಗ ಮಾತ್ರ ಈ ಪ್ರಯತ್ನಗಳನ್ನೆಲ್ಲ ಮೀರಿಸುತ್ತಿದೆ! ಕೃತಕ ರಾಸಾಯನಿಕ ಒಳಸುರಿಗಳ ಅತಿಬಳಕೆ, ಅವೈಜ್ಞಾನಿಕ ಭೂಬಳಕೆ, ಮಿತಿಯಿಲ್ಲದ ನೀರಿನ ಬಳಕೆ, ಹೆಚ್ಚುತ್ತಿರುವ ಏಕಬೆಳೆ ಪದ್ಧತಿ- ಇವೆಲ್ಲ, ರೈತರ ಹೊಲಗಳ ತಳಿವೈವಿಧ್ಯವನ್ನು ಕರಗಿಸುತ್ತಿವೆ. ಇತ್ತ, ಅರಣ್ಯ ಒತ್ತುವರಿ, ಬೃಹತ್ ಅಭಿವೃದ್ಧಿ ಕಾಮಗಾರಿ, ಗಣಿಗಾರಿಕೆ ಇವೆಲ್ಲ ಪಶ್ಚಿಮಘಟ್ಟದಂಥ ಅಪರೂಪದ ಕಾಡನ್ನೂ ಕರಗಿಸುತ್ತಿರುವುದರಿಂದ, ಅಲ್ಲಿನ ವನ್ಯತಳಿಗಳ ಖಜಾನೆಯೂ ಬರಿದಾಗುತ್ತಿದೆ.

ಭವಿಷ್ಯದ ಕೃಷಿಯಾದರೂ ಸುಸ್ಥಿರ ದಾರಿಯಲ್ಲಿ ಸಾಗಬೇಕೆಂದರೆ, ಎರಡು ತೆರನಲ್ಲಿ ಪ್ರಯತ್ನಗಳು ಸಾಗಬೇಕಿದೆ. ಒಂದು, ಈಗಿರುವ ತಳಿವೈವಿಧ್ಯವನ್ನೆಲ್ಲ ಕಾಪಾಡಿಕೊಳ್ಳುವ ಮಿಶ್ರಬೆಳೆ ಬೇಸಾಯವನ್ನು ಪ್ರೋತ್ಸಾಹಿಸುವುದು. ಇನ್ನೊಂದು, ಅವಕಾಶ ದೊರಕಿದಲ್ಲೆಲ್ಲ ಹೊಸ ವನ್ಯತಳಿಗಳನ್ನು ಕೃಷಿಗೆ ಅಳವಡಿಸುವುದು. ಬಿಳಿ ನೇರಳೆ ಹಾಗೂ ಕಪ್ಪು ಅರಿಸಿನವು ಈ ಸಾಧ್ಯತೆಗಳ ಪ್ರತೀಕ ಮಾತ್ರ. ಸಾಂಬಾರು ಪದಾರ್ಥ, ಹಣ್ಣುಹಂಪಲು, ಔಷಧಿ-ಮೂಲಿಕೆಗಳಲ್ಲಂತೂ ಅಂಥ ನೂರಾರು ಹೊಸಬೆಳೆಗಳ ಸಾಧ್ಯತೆಗಳಿವೆ. ಅಂತೆಯೇ, ಕೃಷಿಯ ಅಂಗಳವನ್ನು ಹಾಗೆ ಸಮೃದ್ಧವಾಗಿಸಲು, ಕಾಡಿನ ಹಿತ್ತಿಲನ್ನು ಜೋಪಾನ ಮಾಡುವ ಅಗತ್ಯವೂ ಇದೆ!

ಲೇಖಕ: ನಿರ್ದೇಶಕ, ಸಂರಕ್ಷಣಾ ಜೀವಶಾಸ್ತ್ರ ಮತ್ತು ಸುಸ್ಥಿರ ಅಭಿವೃದ್ಧಿ ಅಧ್ಯಯನ ಕೇಂದ್ರ, ಶಿರಸಿ

ಚುರುಮುರಿ



ಆಯುಧ ಪುರಾಣ!

• ಬಿ.ಎನ್.ಮಲ್ಲೇಶ್

'ಏನ್ರಲೆ ಹಬ್ಬ ಜೋರಾ? ಹೆಂಗಾತು ದಸರಾ, ಆಯುಧ ಪೂಜಿ?' ಗುಡ್ಡೆ ಹರಟೆ ಗೆಳೆಯರನ್ನ ವಿಚಾರಿಸಿದ.

'ಏನ್ ಹಬ್ಬ ಬಿಡಲೆ, ನನ್ನೆಂಡ್ತಿ ಪೇಪರ್ ಜಾಹೀರಾತು ನೋಡಿ 'ರೀ... ಆ ಚಿನ್ನದ ಅಂಗಡೀಲಿ ಬೆಳ್ಳಿ ನಾಣ್ಯ ಫ್ರೀ ಕೊಡ್ತಾರಂತೆ, ಒಂದು ನೆಕ್ಲೆಸ್ ಕೊಡಿಸ್ರೀ' ಅಂತ ಗಂಟು ಬಿದ್ದಿದ್ಲು' ದುಬ್ಬೀರ ಬೆವರೊರೆಸಿಕೊಂಡ.

'ಹೌದಾ? ಇದು ಹೆಂಗಾತು ಅಂದ್ರೆ, 'ಗೂಟ ಖಾಲಿ ಐತಿ, ಅದಕ್ಕೊಂದು ಎಮ್ಮಿ ಕೊಂಡು ತಂದು ಕಟ್ರಿ' ಅಂದಂಗಾತು' ಗುಡ್ಡೆ ಹೇಳಿದ.

'ಸೈನಿಕರ ಆಯುಧ ಗನ್ನು, ಪತ್ರಕರ್ತರ ಆಯುಧ ಪೆನ್ನು, ರಾಜಕಾರಣಿಗಳ ಆಯುಧ ಯಾವುದು?' ಕಡೆಮನಿ ಕೊಟ್ರೇಶಿ ಗಮನ ಸೆಳೆದ.

'ಅವುರವು ಬಾಳದಾವು ಬಿಡಲೆ, ಸಿ.ಡಿ, ಇ.ಡಿ, ಸಿಬಿಐ, ಗುಡಿಗುಂಡಾರ, ಪಾದಯಾತ್ರೆ... ಒಂದಾ ಎರಡಾ?' ಗುಡ್ಡೆ ವಿವರಿಸಿದ.

'ಅವೆಲ್ಲಕ್ಕಿಂತ ರಾಜಕಾರಣಿಗಳತ್ರ ಒಂದು ದೊಡ್ಡ ಆಯುಧ ಐತಿ'

'ಹೌದಾ? ಯಾವುದು?'

'ಎಲುಬಿಲ್ಲದ ನಾಲಿಗಿ!' ನಕ್ಕ ತೆಪರೇಸಿ.

'ಲೇ ತೆಪರ, ರಾಜಕಾರಣಿಗಳ ನಾಲಿಗಿ ಬಗ್ಗೆ ಹೇಳ್ತಿಯಲ್ಲ, ನಿನ್ನೆಂಡ್ತಿ ನಾಲಿಗಿ ಮುಂದೆ ಯಾವ ಆಯುಧ ನಿಲ್ತಾವೆ ಹೇಳಲೆ' ದುಬ್ಬೀರ ಕಾಲೆಳೆದ.

'ದುಬ್ಬೀರ ಸರಿಯಾಗಿ ಮಾತಾಡು, ತೆಪರೇಸಿ ಆಯುಧಗಳ ಬಗ್ಗೆ ನಿಂಗೊತ್ತಿಲ್ಲ' ಗುಡ್ಡೆ ಆಕ್ಷೇಪಿಸಿದ.

'ಏನು? ತೆಪರನ ಆಯುಧಗಳಾ? ಯಾವಪ್ಪ ಅವು?'

'ಒಂದು ಮೌನಾಯುಧ! ಹೆಂಡ್ತಿ ಎಷ್ಟು ಕೂಗಾಡಿದ್ರು ಪಿಟಿಕ್ಕನ್ನಂಗಿಲ್ಲ...'

'ಎರಡು?'

'ನಿದ್ರಾಯುಧ! ಹೆಂಡ್ತಿ ಎಷ್ಟೇ ಹಾರಾಡ್ಲಿ, ಶಿವಾ ಅಂತ ಗುಬುರಾಕ್ಕಂಡ್ ಮಲಗಿದ್ರೆ ಮುಗೀತು, ಖೇಲ್ ಖತಂ ನಾಟಕ್ ಬಂದ್!'

ಸಂಗತ

ಎಲ್ಲರೂ ನಮ್ಮವರೆ, ನಮ್ಮ ಗೆಳೆಯರೆ!

ತಾನು ನಾಗರಿಕ ಅಂದುಕೊಂಡ ಮನುಷ್ಯನೊಳಗೆ ಅನಾಗರಿಕತೆ ಇನ್ನೂ ಜೀವಂತವಾಗಿರುವುದನ್ನು ಅಲ್ಲಲ್ಲಿ ನಡೆಯುವ ಪ್ರಕರಣಗಳು ಸಾಬೀತುಪಡಿಸುತ್ತಲೇ ಇವೆ

• ಸದಾಶಿವ್ ಸೊರಟೂರು

ಮನುಕುಲದ ಕಥೆ ಅನಾಗರಿಕತೆಯಿಂದ ನಾಗರಿಕತೆಯೆಡೆಗೆ ನಡೆದ ಕಥೆಯಷ್ಟೇ ಅಲ್ಲ ಶೋಷಣೆಯ ಕಥೆಯೂ ಹೌದು. ಮನುಷ್ಯ ತಾನು ಎಷ್ಟೇ ಬೆಳೆದು ಮುಂದೆ ಬಂದಿದ್ದರೂ ಶೋಷಿಸುವ ಮನೋಭಾವವನ್ನು ಅಷ್ಟೇ ಜತನವಾಗಿ ಉಳಿಸಿಕೊಂಡು ಬಂದಿರುವುದು ದುರ್ದೈವ. ಹೊಸ ಹೊಸ ರೂಪದಲ್ಲಿ ಶೋಷಣೆ ಅಸ್ತಿತ್ವದಲ್ಲಿರುವುದು ವಿಷಾದಕರ. ಅದು ಮನುಷ್ಯನ ರಕ್ತದಲ್ಲಿ ಬೆರೆತುಹೋದ ಅಮಲು. ತಾನು ನಾಗರಿಕ ಅಂದುಕೊಂಡ ಅವನೊಳಗೆ ಅನಾಗರಿಕತೆ ಇನ್ನೂ ಜೀವಂತವಾಗಿದೆ.

ಮೊನ್ನೆಯಷ್ಟೆ ಒಬ್ಬ ಫೋಟೊಗ್ರಾಫರ್ ಮಾಡಿದ ಟ್ವೀಟ್ ಸಾಮಾಜಿಕ ಜಾಲತಾಣದಲ್ಲಿ ಚರ್ಚೆಗೆ ಒಳಗಾಯಿತು. ಪತ್ರಿಕೆಗಳು ಕೂಡ ಅದನ್ನು ವರದಿ ಮಾಡಿದವು. ಒಂದು ಮದುವೆ ಕಾರ್ಯಕ್ಕೆ ಫೋಟೊ ತೆಗೆಯಲು ಹೋದ ಫೋಟೊಗ್ರಾಫರ್‌ನಿಂದ ಬೆಳಿಗ್ಗೆಯಿಂದ ಸಂಜೆವರೆಗೂ ನಿರಂತರವಾಗಿ ಫೋಟೊ ತೆಗೆಸಿಕೊಳ್ಳಲಾಗಿದೆ. ಅವನಿಗೆ ಕುಡಿಯಲು ಒಂದು ಲೋಟ ನೀರೂ ಕೊಡಲಾಗಿಲ್ಲ. ಊಟವೂ ಇಲ್ಲ. ಅವನು 'ಹತ್ತು ನಿಮಿಷದಲ್ಲಿ ಊಟ ಮಾಡುವೆ, ಅವಕಾಶ ಕೊಡಿ' ಎಂದು ಕೋರಿದ್ದಾನೆ. ಅವರು ಅದಕ್ಕೂ ಆಸ್ಪದ ನೀಡಿಲ್ಲ. ಹಸಿವಿನಿಂದ ಬಳಲಿದ್ದಾನೆ. ಹಸಿವು ಕೋಪಕ್ಕೆ ತಿರುಗಿದೆ. ಅವನು ಬೆಳಿಗ್ಗೆಯಿಂದ ತೆಗೆದ ಅಷ್ಟೂ ಫೋಟೊಗಳನ್ನು ವರನ ಮುಂದೆಯೇ ಅಳಿಸಿಹಾಕಿದ್ದಾನೆ. ಕಾರಣ ಏನೇ ಇರಲಿ, ಊಟ ಮಾಡಲೂ ಬಿಡದಂತೆ ದಿನಪೂರ್ತಿ ದುಡಿಸಿಕೊಂಡಿದ್ದು ಅನಾಗರಿಕ ವರ್ತನೆ.

ಮೇಲ್ನೋಟಕ್ಕೆ ಇದೊಂದು ನಗೆಯುಕ್ಕಿಸುವ ಪ್ರಸಂಗದಂತೆ ಕಾಣಿಸಿದರೂ ನಾಗರಿಕರೆನಿಸಿಕೊಂಡವರ ಅನಾಗರಿಕತೆಯನ್ನು, ಸಂವೇದನಾರಾಹಿತ್ಯವನ್ನು ತೆರೆದಿಡುತ್ತದೆ. ಫೋಟೊಗ್ರಾಫರ್‌ನ ಜಾಗದಲ್ಲಿ ನಾವು ನಿಂತು ನೋಡಬೇಕು. ಸಾರ್ವಜನಿಕರ ನಡುವೆ ನಿಂತು ಕೆಲಸ ಮಾಡುವ ಕೆಲವರ ಪಾಡು ಹೀಗೇ ಆಗುತ್ತದೆ. ಮನುಷ್ಯರೊಳಗಿನ ಮನುಷ್ಯತ್ವ ಕ್ಷೀಣಿಸುತ್ತಿರುವುದರ ಲಕ್ಷಣಗಳಿವು. ಮದುವೆ ಮನೆಯವರ ದರ್ಪ ಕಾಣಿಸುತ್ತದೆ. 'ನಾವು ಹಣ ಕೊಡುತ್ತೇವೆ ನೀನು ಕೆಲಸ ಮಾಡಬೇಕಷ್ಟೇ' ಅನ್ನುವ ಮನಸ್ಥಿತಿ ಅಲ್ಲಿದೆ.

ಇಲ್ಲಿ ಬರೀ ಜನರಿದ್ದಾರೆ, ಮನುಷ್ಯರ ಸಂಖ್ಯೆ ಕಡಿಮೆ ಇದೆ. ಪ್ರತಿಯೊಬ್ಬನೂ ಇನ್ನೊಬ್ಬ ಕೂಡ ತನ್ನಂತೆ ಎಂದು ಯೋಚಿಸುವಲ್ಲಿ ಸೋಲುತ್ತಿದ್ದಾನೆ. ಅದಕ್ಕೆ ಅವನು ಬೆಳೆಸಿಕೊಂಡಿರುವ ಹಲವು ಅಹಂಗಳು ಅಡ್ಡ ಬರುತ್ತಿವೆ. ನಿಜಕ್ಕೂ ಬೇರೆಯವರ ಖುಷಿಯಲ್ಲೇ ನಮ್ಮ ಖುಷಿಯೂ ಅಡಗಿದೆ ಎಂಬುದು ಅವನ ಅರಿವಿಗೆ ಬರುತ್ತಿಲ್ಲ. ಇದನ್ನೇ 'ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು' ಎಂದು ಸರ್ವಜ್ಞ ಹೇಳಿರುವುದು.

ಒಬ್ಬ ತನ್ನ ಮನೆ ಮೇಲಿನ ಹುಲ್ಲು ತೆಗೆಸಲು ಕೆಲಸದವನನ್ನು ಕರೆದ. ಅವನು ಅದಕ್ಕೆ ಎರಡು ರೂಪಾಯಿ, ಎರಡು ರೊಟ್ಟಿ ಕೇಳಿದ. ಇವನು ಒಪ್ಪಲಿಲ್ಲ, ಬರೀ ಎರಡು ರೊಟ್ಟಿಗಳನ್ನು ಕೊಡುವುದಾಗಿ ಹೇಳಿದ. ಅವನು ಹೊರಟುಹೋದ. ಮಧ್ಯಾಹ್ನ ಮತ್ತೆ ಬಂದು ಒಂದು ರೂಪಾಯಿ, ಎರಡು ರೊಟ್ಟಿ ಕೇಳಿದ. ಇವನು ಮತ್ತೂ ಒಪ್ಪಲಿಲ್ಲ. ಇನ್ನಷ್ಟು ಹೊತ್ತು ಕಳೆದು ಬಂದು ಅವನು ಐವತ್ತು ಪೈಸೆ ಎರಡು ರೊಟ್ಟಿ ಕೇಳಿದ. ಇವನು ಸುತರಾಂ ಒಪ್ಪಲಿಲ್ಲ. ಅವನು ಮತ್ತೆ ಹೋಗಿ ಸಂಜೆ ಮರಳಿ ಬಂದು ಎರಡು ರೊಟ್ಟಿಗೆ ಒಪ್ಪಿಕೊಂಡು ಕೆಲಸ ಮಾಡಿದ. ಕೆಲವರ ಅಸಹಾಯಕತೆ ಹೇಗೆ ಉಳ್ಳವರಿಗೆ ಶೋಷಣೆಯ ಅಸ್ತ್ರವಾಗುತ್ತಿದೆ ಎಂಬುದನ್ನು ಈ ಪುಟ್ಟ ಕಥೆ ಹೇಳುತ್ತದೆ.

ಕವಿ ಬಶೀರ್ ಬಾದ್ರ ಅವರ ಮಾತು ಎಷ್ಟೊಂದು ಮಾರ್ಮಿಕವಾಗಿದೆ, 'ಮನೆಗಳ ಮೇಲೆ ಹೆಸರು, ಹೆಸರಿನ ಜೊತೆ ಹುದ್ದೆ, ಘನತೆ ಕಾಣಿಸುತ್ತಿತ್ತು. ಎಷ್ಟೋ ಹುಡುಕಿದೆ, ಆದರೆ ಸಿಗಲಿಲ್ಲ ಒಬ್ಬ ಮನುಷ್ಯನ ವಿಳಾಸ ಕೂಡ' ಅಂತ ಬರೆಯುತ್ತಾರೆ. ಹೌದು, ನಮ್ಮಲ್ಲಿ ಮನುಷ್ಯರ ಕೊರತೆ ಇದೆ. ಮನುಷ್ಯತ್ವದ ಕೊರತೆ ಇದೆ. ನಮ್ಮ ಬಹುತೇಕ ಸಮಸ್ಯೆಗಳು ಮನುಷ್ಯತ್ವದಿಂದ ಬಗೆಹರಿಯುತ್ತವೆ.



ಪತ್ರಿಕೆ ಹಾಕುವ ಹುಡುಗ ಹತ್ತು ನಿಮಿಷ ತಡವಾಗಿ ಬಂದರೆ ಬೈಯುತ್ತೇವೆ. ಅವನ ಸೈಕಲ್ ಕೈಕೊಟ್ಟಿತ್ತೊ, ಮಳೆ ಸುರಿದ ಕಾರಣವೊ ನಾವು ಯೋಚಿಸುವುದಿಲ್ಲ, ಮನೆ ಕೆಲಸದವರನ್ನು ಮನಬಂದಂತೆ ನಡೆಸಿಕೊಳ್ಳುತ್ತೇವೆ. ಪೌರಕಾರ್ಮಿಕರು ಬರೀ ಸ್ವಚ್ಛ ಮಾಡಲು ಹುಟ್ಟಿದವರು ಎಂಬಂತೆ ಒಂದು ನಿರ್ಲಕ್ಷ್ಯದ ದೃಷ್ಟಿಯಿಂದ ಅವರನ್ನು ನೋಡುತ್ತೇವೆ. ಹೋಟೆಲ್ ಮಾಣಿ, ಕಾವಲುಗಾರ, ಕೂಲಿಯವರನ್ನೆಲ್ಲ ಉಡಾಫೆಯಿಂದ ನಡೆಸಿಕೊಳ್ಳುತ್ತೇವೆ. ನಾವು ಅವರಿಗೆ ದುಡ್ಡು ಕೊಡುತ್ತೇವೆ ಮತ್ತು ಅವರಿರುವುದು ನಮ್ಮ ಸೇವೆಗೆ ಎಂಬ ದರ್ಪದ ಮನೋಭಾವ ನಮ್ಮದು. ನಾವು ಮನಸ್ಸಿನಿಂದ ನೋಡುವುದಿಲ್ಲ, ಹಣದಿಂದ ನೋಡುತ್ತೇವೆ.

ನೆನಪಿರಲಿ, ಅವರಿಗೂ ಮನಸ್ಸಿದೆ, ಸ್ವಾಭಿಮಾನವಿದೆ. ನೀವು ಹಣ ಕೊಡುವುದು ಅವರ ಕೆಲಸಕ್ಕಷ್ಟೇ. ಅವರ ಆತ್ಮಗೌರವಕ್ಕಲ್ಲ. ಅದಕ್ಕೆ ಬೆಲೆ ಕಟ್ಟಲಾಗದು. ಇನ್ನೊಬ್ಬರನ್ನು ಗೌರವಿಸುವುದರಲ್ಲಿ ಮನುಷ್ಯನ ಶ್ರೇಷ್ಠತೆ ಅಡಗಿದೆ. ತಮಿಳು ಉಕ್ತಿಯೊಂದಿದೆ. 'ಎಲ್ಲವೂ ನಮ್ಮೂರೆ, ಎಲ್ಲರೂ ನಮ್ಮ ಗೆಳೆಯರೆ' ಎನ್ನುವುದು ಅದರ ತತ್ವ. ನಮ್ಮನ್ನು ಎಂದಿಗೂ ಪೊರೆಯಬೇಕಾದ ತತ್ವ ಇದು.

ವಾಚಕರ ವಾಣಿ

ಅಧಿಕಾರ ಮೊಟಕು ಎಷ್ಟು ಸರಿ?

ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಇದ್ದ ಹಣಕಾಸು ನಿರ್ವಹಣೆಯ ಅಧಿಕಾರವನ್ನು ಸರ್ಕಾರವು ಪಿಡಿಒ ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರಿಗೆ ನೀಡಲು ಮುಂದಾಗಿರುವುದು (ಪ್ರ.ವಾ., ಅ. 6) ವಿಕೇಂದ್ರೀಕರಣ ತತ್ವಕ್ಕೆ ನೀಡುತ್ತಿರುವ ಬಹುದೊಡ್ಡ ಪೆಟ್ಟಾಗಿದೆ. ಉದ್ದೇಶಿತ ಈ ಬದಲಾವಣೆಗೆ ನೀಡಿರುವ ಕಾರಣಗಳು ನಗೆ ಉಕ್ಕಿಸುತ್ತವೆ. ಬಿಲ್ ಪಾವತಿಗೆ ಲಂಚ ಪಡೆಯುವಾಗ ಗ್ರಾಮ ಪಂಚಾಯಿತಿಗಳ ಕೆಲವು ಅಧ್ಯಕ್ಷರು ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ ಎಂಬುದೂ ಒಂದು ಕಾರಣವಂತೆ.

ಭ್ರಷ್ಟಾಚಾರದಲ್ಲಿ ಅಧ್ಯಕ್ಷ, ಸದಸ್ಯ, ಅಧಿಕಾರಿಗಳು ಈ ಎಲ್ಲರೂ ಪಾಲುದಾರರು. ಕಿಲಾಡಿಗಳು ಬಚಾವಾಗುತ್ತಾರೆ, ಕೆಲವರು ಸಿಕ್ಕಿಬೀಳುತ್ತಾರೆ. ಅಧ್ಯಕ್ಷರ ಅಧಿಕಾರಕ್ಕೆ ಕತ್ತರಿ ಹಾಕುವುದರಿಂದ ಭ್ರಷ್ಟಾಚಾರ ಕಡಿಮೆ ಆಗುವುದಿಲ್ಲ. ಅದು, ಬೇರೊಂದು ರೂಪದಲ್ಲಿ ಪ್ರತ್ಯಕ್ಷವಾಗುತ್ತದೆ. ಅದನ್ನು ನಿರ್ಮೂಲಗೊಳಿಸಲು ಇಚ್ಛಾಶಕ್ತಿ ಬೇಕು. ಪಂಚಾಯಿತಿ ವ್ಯವಸ್ಥೆಯನ್ನು ಬಲಪಡಿಸುವ ದಿಸೆಯಲ್ಲಿ ಸರ್ಕಾರ ಚಿಂತಿಸಬೇಕು. ಅದನ್ನು ಬಿಟ್ಟು, ಇರುವ ಅಧಿಕಾರವನ್ನು ಮೊಟಕುಗೊಳಿಸುವ ಷಡ್ಯಂತ್ರವನ್ನು ಒಪ್ಪಲಾಗದು.

ಶಿವಕುಮಾರ್ ಯರಗಟ್ಟಿಹಳ್ಳಿ, ಚನ್ನಗಿರಿ

ಸಾಮಾನ್ಯರಿಗೇನಿದೆ ಶಸ್ತ್ರ ಬಳಕೆಯ ಅಗತ್ಯ?

'ಹಿಂದೂಗಳು ಶಸ್ತ್ರಗಳನ್ನು ಪೂಜಿಸಿದರೆ ಸಾಲದು, ಬಳಸುವುದನ್ನೂ ಕಲಿಯಬೇಕು' ಎಂದು ವಿಶ್ವ ಹಿಂದೂ ಪರಿಷತ್ತಿನ ಕೇಂದ್ರೀಯ ಸಹಕಾರ್ಯದರ್ಶಿ ಹಾಗೂ ಅಯೋಧ್ಯೆಯ ರಾಮಮಂದಿರ ನವನಿರ್ಮಾಣದ ಉಸ್ತುವಾರಿಯಲ್ಲಿ ಒಬ್ಬರಾದ ಗೋಪಾಲ್ ನಾಗರಕಟ್ಟೆ ಹೇಳಿದ್ದಾರೆ (ಪ್ರ.ವಾ., ಅ. 6). ನಮ್ಮದು ಪ್ರಜಾಪ್ರಭುತ್ವದ ಆಡಳಿತ ಇರುವ ದೇಶ. ನಮಗೀಗ ಆಂತರಿಕವಾಗಿ ಯಾರ ಮೇಲೂ ಗುದ್ದಾಟ ನಡೆಸಬೇಕಾದ ಅಗತ್ಯ ಇಲ್ಲ. ಬೇರೆ ದೇಶಗಳೊಂದಿಗೆ ಯುದ್ಧದಂತಹ ಸಂದರ್ಭಗಳನ್ನು ಎದುರಿಸಲು ಸೈನ್ಯ ಇದೆ. ಆಂತರಿಕ ಸಮಸ್ಯೆಗಳನ್ನು ನಿಭಾಯಿಸಲು ಪೊಲೀಸರಿದ್ದಾರೆ.

ಜನರು ತಮ್ಮ ನಿತ್ಯ ಬದುಕಿಗೆ ಸಹಕಾರಿ ಆಗುವ ಕಸುಬಿಗೆ ಸಂಬಂಧಿಸಿದ ಆಯುಧಗಳನ್ನು ಈ ಹಬ್ಬದಲ್ಲಿ ಪೂಜಿಸಿ ಖುಷಿಪಡುತ್ತಾರೆ. ಹೋರಾಟಕ್ಕೆ, ಹೊಡೆದಾಟಕ್ಕೆ ಬಳಸುವ ಅಸ್ತ್ರಗಳನ್ನೂ ಪೂಜಿಸಿ ಬಳಸಿ ಎಂದು ಸಂಘ ಸಂಸ್ಥೆಗಳ ಮುಖ್ಯಸ್ಥರು ಕರೆ ಕೊಡುವುದು ಸರಿಯಲ್ಲ. ಸಹಬಾಳ್ವೆಯ ಜೀವನ ಮಾಡಬೇಕಾದ ಸಮಾಜದಲ್ಲಿ ಇಂತಹ ಬೆಂಕಿ ಹಚ್ಚುವ ಮಾತನಾಡಿ, ಯುವಕರ ಕಣ್ಣು ಕೆಂಪಾಗಿಸುವುದು ಯಾವ ನ್ಯಾಯ? ಎಲ್ಲ ಧರ್ಮೀಯರೂ ಹೀಗೆಯೇ ಕರೆ ಕೊಟ್ಟು ಪ್ರಚೋದಿಸಿದರೆ, ಸಮಾಜದ ಪರಿಸ್ಥಿತಿ ಏನಾಗಬಹುದು?

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಲದ್ದಿ!

ಮೈಸೂರಿನಲ್ಲಿ
ದಸರಾ ಆನೆಗಳ
ಲದ್ದಿಯನ್ನು ಕೆಲವರು
ಪೂಜಿಸಿದರಂತೆ!
ಸೋಜಿಗವೇನು,
ನಮ್ಮ ಬಹುಮಂದಿಯ
ಬುದ್ಧಿಯೆ ಲದ್ದಿಯಾಗಿರುವಾಗ?

ಸಿ.ಪಿ.ಕೆ., ಮೈಸೂರು

ಮಕ್ಕಳಿಗಾಗಿ ಸಮಯ ಹೊಂದಿಸಿಕೊಳ್ಳಿ

ಕೊರೊನಾ ಕಾರಣದಿಂದ ಆನ್‌ಲೈನ್ ಪಾಠ ಆಲಿಸಲು ಮಕ್ಕಳು ಮೊಬೈಲ್ ಫೋನ್ ಬಳಸುವುದನ್ನು ರೂಢಿಸಿಕೊಂಡರು. ಅದು ಗೀಳಾಗಿ ಪರಿವರ್ತನೆ ಆಗಿದೆ ಎಂಬ ಅಳಲು ಅನೇಕ ಪೋಷಕರದು. ಈ ಗೀಳಿನಿಂದ ಮಕ್ಕಳನ್ನು ಹೊರತರುವ ಸವಾಲು ತಂದೆ-ತಾಯಿ ಎದುರಿಗಿದೆ. ಮಕ್ಕಳಿಗಾಗಿ ಸಮಯ ಹೊಂದಿಸಿಕೊಂಡು, ಆಟೋಟಗಳಿಗೆ ಅವರನ್ನು ಅನುವಾಗಿಸುವ ಮೂಲಕ ಅದನ್ನು ಮಾಡಬೇಕಿದೆ.

ಕೊರಗುವುದರಿಂದ ಯಾವುದೇ ಪ್ರಯೋಜನ ಇಲ್ಲ. ಮಕ್ಕಳ ಆಸಕ್ತಿ- ಅಭಿರುಚಿ ಅರಿತು ಅದಕ್ಕೆ ತಕ್ಕಂತೆ ಓದು, ಸಿನಿಮಾ-ನಾಟಕ ವೀಕ್ಷಣೆ, ಕೇರಂ, ಚೆಸ್, ಚಾರಣದಂತಹ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಲು ಅವರನ್ನು ಹುರಿದುಂಬಿಸಬೇಕು. ಓರಗೆಯ ಮಕ್ಕಳ ಜತೆ ಒಡನಾಡಲು ಬಿಡಬೇಕು. ಸಾಧ್ಯವಾದರೆ ಅಕ್ಕಪಕ್ಕದ ಮನೆಗಳಲ್ಲಿನ ಮಕ್ಕಳನ್ನೂ ಸೇರಿಸಿಕೊಂಡು ಆಟಗಳನ್ನು ಆಡಬಹುದು.

ಮಾನಸಾ ಎಂ.ಎನ್., ದಾವಣಗೆರೆ

ಹಾಕಿ: ಸವಿತಾ ಸಾಧನೆ ಮಾದರಿ

ಅಂತರರಾಷ್ಟ್ರೀಯ ಹಾಕಿ ಫೆಡರೇಷನ್‌ನ ವರ್ಷದ ಶ್ರೇಷ್ಠ ಮಹಿಳಾ ಗೋಲ್ ಕೀಪರ್ ಆಗಿ ಭಾರತದ ಸವಿತಾ ಪೂನಿಯಾ ಅವರು ಸತತ ಎರಡನೇ ಬಾರಿಗೆ ಆಯ್ಕೆಯಾಗಿರುವುದು ಸಂತಸದ ಸಂಗತಿ. ಸವಿತಾ ಅವರ ಜತೆಗೆ ಭಾರತದ ಮುಮ್ತಾಜ್ ಖಾನ್ ಅವರು ಉದಯೋನ್ಮುಖ ಆಟಗಾರ್ತಿ ಗೌರವಕ್ಕೆ ಭಾಜನರಾಗಿರುವುದು ಹಾಕಿ ಕ್ರೀಡೆಯಲ್ಲಿ ಭಾರತೀಯ ವನಿತೆಯರ ಸಾಧನೆಗೆ ಹಿಡಿದ ಕೈಗನ್ನಡಿಯಾಗಿದೆ.

ಹಾಕಿಯಂಥ ಕ್ರೀಡೆಯಲ್ಲಿ ಆಟಗಾರ್ತಿಯರು ಸತತವಾಗಿ ತಮ್ಮ ದೈಹಿಕ ಸಾಮರ್ಥ್ಯವನ್ನು ಕಾಪಾಡಿಕೊಳ್ಳುವುದು ಸುಲಭವಲ್ಲ. ಈ ದಿಸೆಯಲ್ಲಿ ಸವಿತಾ ಅವರು ಇತರ ಆಟಗಾರ್ತಿಯರಿಗೆ ಮಾದರಿಯಾಗಿದ್ದಾರೆ. ಅಂತರರಾಷ್ಟ್ರೀಯ ಮಟ್ಟದಲ್ಲೂ ಭಾರತೀಯ ವನಿತೆಯರು ತಮ್ಮ ಹಿರಿಮೆ ಮೆರೆದಿರುವುದು ಎಲ್ಲ ಕ್ಷೇತ್ರಗಳ ಮಹಿಳೆಯರಿಗೂ ಸ್ಫೂರ್ತಿದಾಯಕ.

ಕೆ. ಆಶಾ, ಶಿವಮೊಗ್ಗ

ಸಕ್ಕರೆ ಸಿಹಿ, ಅಡಿಕೆ ಕಹಿ!

2021- 22ನೇ ಮಾರುಕಟ್ಟೆ ವರ್ಷದಲ್ಲಿ ಸಕ್ಕರೆ ರಫ್ತು ಪ್ರಮಾಣವು ಶೇಕಡ 57ರಷ್ಟು ಹೆಚ್ಚಾಗಿದೆ ಎಂದು ವರದಿಯಾಗಿದೆ (ಪ್ರ.ವಾ., ಅ. 6). ಇದು, ಸಕ್ಕರೆಯಷ್ಟೇ ಸಿಹಿ ಸಮಾಚಾರ. ಕಬ್ಬು ಬೆಳೆಗಾರರ ಮುಖ ಅರಳಿಸುವಂತಹ ಸುದ್ದಿ. ಆದರೆ ಭೂತಾನ್‌ನಿಂದ ಪ್ರತಿವರ್ಷ 17 ಸಾವಿರ ಟನ್ ಹಸಿರು ಅಡಿಕೆ ಆಮದು ಮಾಡಿಕೊಳ್ಳಲು ಅನುಮತಿ ನೀಡಿ ವಿದೇಶಿ ವ್ಯಾಪಾರ ನಿರ್ದೇಶನಾಲಯವು ಅಧಿಸೂಚನೆ ಹೊರಡಿಸಿರುವುದು ಅತ್ಯಂತ ಕಹಿ ಸಮಾಚಾರ. ಅಂತೂ ಸಕ್ಕರೆಯಲ್ಲಿ ಬಂದ ಮಾನ ಅಡಿಕೆಯಲ್ಲಿ ಹೋಯ್ತು!

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಒಡಿಶಾದ ಪುರಿ ಜಗನ್ನಾಥ ಕಾರಿಡಾರ್
ರಾಜಕೀಯ ಸಮರ

ಪ್ರಜಾವಾಣಿ ವಾರ್ತೆ

ಪುರಿ ಜಗನ್ನಾಥ ಮಂದಿರದ 'ರತ್ನ ಭಂಡಾರ'ದ ಕೊಠಡಿಯ ಬೀಗವನ್ನು ತೆರೆದು, ಕೊಠಡಿಯ ಭೌತಿಕ ಸ್ಥಿತಿಯನ್ನು ಪರಿಶೀಲಿಸಬೇಕು ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ (ಎಎಸ್‌ಐ) ಕಚೇರಿ ಹೇಳಿದೆ. ಇದರ ಜತೆಯಲ್ಲಿಯೇ ದೇವಾಲಯದ ಭೌತಿಕ ಸ್ಥಿತಿಗತಿಯ ಸರ್ವೇಕ್ಷಣೆ ನಡೆಸಬೇಕೂ ಎಂದು ಎಎಸ್‌ಐ ಹೇಳಿದೆ. ಇವೆಲ್ಲವೂ, ಒಡಿಶಾ ಸರ್ಕಾರ ಕೈಗೊಂಡಿರುವ 'ಪುರಿ ಪರಂಪರಾ ಕಾರಿಡಾರ್ ಯೋಜನೆ'ಗೆ ತಡೆ ಒಡ್ಡುವ ಯತ್ನಗಳು ಎಂದೇ ವಿಶ್ಲೇಷಿಸಲಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಕೆಲ ತಿಂಗಳ ಹಿಂದಷ್ಟೇ ವಾರಾಣಸಿಯಲ್ಲಿ ಹೊಸದಾಗಿ ಅಭಿವೃದ್ಧಿಪಡಿಸಲಾದ ಕಾಶಿ ವಿಶ್ವನಾಥ ಕಾರಿಡಾರ್ ಅನ್ನು ಉದ್ಘಾಟನೆ ಮಾಡಿದ್ದರು. ಎಎಸ್‌ಐ ನಿಯಮಗಳ ಅಡಿ ಸಂರಕ್ಷಿತ ಪ್ರದೇಶವಾಗಿದ್ದ ಕಾಶಿ ದೇವಾಲಯ ಸಂಕೀರ್ಣದಲ್ಲಿ, ಹೊಸ ದೇವಾಲಯಗಳು, ಅತಿಥಿ ಗೃಹ, ಸ್ನಾನಘಟ್ಟ, ಅಡುಗೆ ಕೋಣೆ, ಶೌಚಾಲಯಗಳನ್ನು ನಿರ್ಮಿಸಲಾಗಿತ್ತು. ದೇವಾಲಯದ ಆವರಣಕ್ಕೆ ಕೆಂಪು ಕಲ್ಲಿನ ಹಾಸು ಹಾಕಲಾಗಿತ್ತು. ಕಾಶಿ ವಿಶ್ವನಾಥನ ದರ್ಶನಕ್ಕೆ ಬರುವ ಭಕ್ತಾದಿಗಳ ಅನುಕೂಲಕ್ಕೆಂದು ಈ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗಿದೆ ಎಂದು ಪ್ರಧಾನಿ ಮೋದಿ ಹೇಳಿದ್ದರು.

ಇಂಥದ್ದೇ ಒಂದು ಪ್ರಯತ್ನವನ್ನು ಒಡಿಶಾ ಸರ್ಕಾರ ಸಹ ಮಾಡುತ್ತಿದೆ. ಆದರೆ ಈ ಯೋಜನೆಗೆ ಬಿಜೆಪಿಯೇ ತಕರಾರು ತೆಗೆಯುತ್ತಿದೆ. ಜಗತ್ಪ್ರಸಿದ್ಧ ಪುರಿ ಜಗನ್ನಾಥನ ದೇವಾಲಯ ಸಂಕೀರ್ಣ, ರಥಬೀದಿ ಮತ್ತು ದೇವಾಲಯದ ಸುತ್ತ ಇರುವ ಮಠಗಳ ಸಂಕೀರ್ಣವನ್ನು ಅಭಿವೃದ್ಧಿಪಡಿಸುವ ಹಾಗೂ ಶೌಚಾಲಯ ಮತ್ತು ಅತಿಥಿಗೃಹವನ್ನು ನಿರ್ಮಿಸುವ ಯೋಜನೆ ಇದಾಗಿದೆ.

ಆದರೆ, ಯೋಜನೆ ಆರಂಭವಾದಾಗಿನಿಂದ ಒಂದಿಲ್ಲೊಂದು ತಡೆಗಳು ಎದುರಾಗುತ್ತಲೇ ಇವೆ. ಯೋಜನೆ ವಿರುದ್ಧ ಪುರಿಯ ಕೆಲವು ನಿವಾಸಿಗಳು ಹೈಕೋರ್ಟ್‌ ಮತ್ತು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರಾದರೂ, ವಿರೋಧ ಪಕ್ಷ ಬಿಜೆಪಿ ಬಹಿರಂಗವಾಗಿ ಈ ಯೋಜನೆಯನ್ನು ವಿರೋಧಿಸುತ್ತಿದೆ.

2016ರಲ್ಲೇ ಒಡಿಶಾ ಸರ್ಕಾರ ಈ ಯೋಜನೆಗೆ ಯೋಜನಾ ವರದಿ ಸಿದ್ಧಪಡಿಸಿತ್ತು. ಆದರೆ, ಯೋಜನೆ ಕಾಮಗಾರಿ ಆರಂಭವಾಗಿದ್ದು 2020ರ ಕೋವಿಡ್ ಲಾಕ್‌ಡೌನ್ ಅವಧಿಯಲ್ಲಿ. ಯೋಜನೆ ಅನುಷ್ಠಾನಕ್ಕೆ ದೇವಾಲಯ ಸಂಕೀರ್ಣವೂ ಸೇರಿ ಒಟ್ಟು 15 ಎಕರೆಗಳಷ್ಟು ಜಾಗದ ಅವಶ್ಯಕತೆ ಇತ್ತು. ದೇವಾಲಯ ಸಂಕೀರ್ಣದ ಸುತ್ತ ಇರುವ ವಸತಿ ಕಟ್ಟಡಗಳು ಮತ್ತು ಮಠಗಳ ಖಾಸಗಿ ಜಮೀನನ್ನು ಸರ್ಕಾರವು ಸ್ವಾಧೀನ ಪಡಿಸಿಕೊಂಡಿದೆ. ಅದಕ್ಕಾಗಿ ಪರಿಹಾರವನ್ನೂ ನೀಡಿದೆ. ಹೀಗೆ ಸ್ವಾಧೀನ ಪಡಿಸಿಕೊಂಡ ಪ್ರದೇಶದಲ್ಲಿ ಇದ್ದ ಕಟ್ಟಡಗಳನ್ನು ನೆಲಸಮ ಮಾಡಿ, ಪುನರ್ ಅಭಿವೃದ್ಧಿ ಪಡಿಸಲಾಗುತ್ತಿದೆ.

ಸಂರಕ್ಷಿತ ಪ್ರದೇಶದ 100 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ಕಾಮಗಾರಿ ನಡೆಸುವಂತಿಲ್ಲ. ಈ ಕಾಮಗಾರಿಯಿಂದ ದೇವಾಲಯದ ಕಟ್ಟಡಕ್ಕೆ ಧಕ್ಕೆಯಾಗುತ್ತದೆ ಎಂದು ಪುರಿಯ ನಿವಾಸಿಯೊಬ್ಬರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಸರ್ಕಾರ ಮತ್ತು ಎಎಸ್‌ಐನ ವಾದಗಳನ್ನು ಆಲಿಸಿದ್ದ ಹೈಕೋರ್ಟ್ ಅರ್ಜಿಯನ್ನು ವಜಾ ಮಾಡಿತ್ತು. ಅದೇ ಅರ್ಜಿದಾರರು ಸುಪ್ರೀಂ ಕೋರ್ಟ್‌ಗೂ ಹೋಗಿದ್ದರು. ಅವರ ಅರ್ಜಿಯನ್ನು ವಜಾ ಮಾಡಿದ್ದ ಸುಪ್ರೀಂ ಕೋರ್ಟ್, ಪ್ರತಿದಿನ 60,000ಕ್ಕೂ ಹೆಚ್ಚು ಜನರು ಭೇಟಿ ನೀಡುವ ಪ್ರದೇಶದಲ್ಲಿ ಮೂಲಸೌಕರ್ಯ ಅಭಿವೃದ್ಧಿಪಡಿಸುವುದು ಅನಿವಾರ್ಯ ಎಂದು ತೀರ್ಪು ನೀಡಿತ್ತು. ಇದರ ಮಧ್ಯೆ ಬಿಜೆಪಿ ಶಾಸಕರು ಯೋಜನೆಯನ್ನು ವಿರೋಧಿಸಿ, ಒಡಿಶಾ ವಿಧಾನಸಭೆಯಲ್ಲಿ ಗದ್ದಲ ನಡೆಸಿದ್ದರು. ಬಿಜೆಪಿ ಸಂಸದ ಅಪರಾಜಿತಾ ಸಾರಂಗಿ ಲೋಕಸಭೆಯಲ್ಲೂ ಯೋಜನೆಯನ್ನು ವಿರೋಧಿಸಿ ಮಾತನಾಡಿದ್ದರು. ಆದರೆ ಇವು ಯಾವುವೂ ಫಲ ನೀಡಿರಲಿಲ್ಲ. ಸುಪ್ರೀಂ ಕೋರ್ಟ್‌ನ ಅನುಮತಿಯ ಮೇರೆಗೆ ಒಡಿಶಾ ಸರ್ಕಾರ ಕಾಮಗಾರಿ ಮುಂದುವರಿಸಿದೆ.

ಆದರೆ, ಈಗ ದೇವಾಲಯದದಲ್ಲಿರವ ರತ್ನ ಭಂಡಾರ ಕೊಠಡಿಯನ್ನು ತೆರೆಯುವ ಬೇಡಿಕೆ ಚಾಲ್ತಿಗೆ ಬಂದಿದೆ. ಇದನ್ನು ಆಗ್ರಹಿಸಿದವರಲ್ಲಿ ಬಿಜೆಪಿಯ ಶಾಸಕರೇ ಮೊದಲಿಗರು. ರತ್ನ ಭಂಡಾರದ ಪರಿಶೀಲನೆಯ ಜೊತೆಗೆ, ದೇವಾಲಯದ ಸದೃಢತೆಯನ್ನೂ ಪರಿಸೀಲಿಸಲು ಬಿಜೆಪಿ ಶಾಸಕರು ಬೇಡಿಕೆ ಇಟ್ಟಿದ್ದಾರೆ. 'ಕಾಮಗಾರಿಯಿಂದ ದೇವಾಲಯಕ್ಕೆ ಧಕ್ಕೆಯಾಗಿದೆ ಎಂದು ಹೇಳಿ, ಯೋಜನೆಗೆ ಅಡ್ಡಿಪಡಿಸುವುದೇ ಇದರ ಹಿಂದಿನ ಉದ್ದೇಶ' ಎಂದು ವಿಶ್ಲೇಷಿಸಲಾಗಿದೆ.



₹3,200 ಕೋಟಿ ಯೋಜನೆಯ ಒಟ್ಟು ವೆಚ್ಚ

22 ಯೋಜನೆ ಅಡಿ ಕೈಗೊಳ್ಳಲಾಗುತ್ತಿರುವ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳ ಸಂಖ್ಯೆ



ಪುರಿ ಕಾರಿಡಾರ್ ಅಭಿವೃದ್ಧಿಯ ಮಾದರಿ

ರತ್ನಭಂಡಾರದ ಸುತ್ತ ಅನುಮಾನಗಳ ಹುತ್ತ

ಒಡಿಶಾದ ಆಡಳಿತಾರೂಢ ಬಿಜು ಜನತಾದಳ (ಬಿಜೆಡಿ) ಹಾಗೂ ಬಿಜೆಪಿ ನಡುವೆ 'ರತ್ನಭಂಡಾರ' ವಿಚಾರದಲ್ಲಿ ಜಟಾಪಟಿ ನಡೆಯುತ್ತಿದೆ. ಇದು ರಾಜಕೀಯ ತಿರುವು ಪಡೆದಿದ್ದು, ಮುಂಬರುವ ಒಡಿಶಾ ವಿಧಾನಸಭೆ ಚುನಾವಣೆಯ ವಿಷಯವಾ ಗಿಯೂ ಮಾರ್ಪಾಟಾಗಿದೆ. ಪುರಿಯಲ್ಲಿ ರುವ ಐತಿಹಾಸಿಕ ಜಗನ್ನಾಥ ಮಂದಿರದ ನೆಲಮಾಳಿಗೆಯಲ್ಲಿ ಚಿನ್ನ, ಬೆಳ್ಳಿ, ರತ್ನ ಮೊದಲಾದ ಬೆಲೆಬಾಳುವ ಆಭರಣಗಳ 'ರತ್ನಭಂಡಾರ' ಇದೆ. ಈ ಭಂಡಾರದ ಬಾಗಿಲು ತೆರೆಯಬೇಕು ಎಂಬುದು ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳ ಆಗ್ರಹವಾಗಿದ್ದರೆ, ಬಿಜೆಡಿ ಸರ್ಕಾರವು ಭಂಡಾರದ ಬಾಗಿಲು ತೆರೆಯುವ ಆಲೋಚನೆಯಲ್ಲಿ ಇಲ್ಲ.

ಅಚ್ಚರಿಯೆಂದರೆ, ರತ್ನಭಂಡಾರದ ಬೀಗ ಕಳೆದುಹೋಗಿದೆಯಂತೆ. ನಾಲ್ಕು ವರ್ಷಗಳ ಹಿಂದೆ ಒಳಕೋಣೆಯ ಬಾಗಿಲು ತೆರೆಯುಲು ಮುಂದಾಗಿ ದ್ದಾಗ ಬೀಗ ಕಳೆದುಹೋಗಿರುವ ವಿಷಯ ಬಹಿರಂಗವಾಗಿತ್ತು. ಇದು ಜನರಲ್ಲಿ ಇನ್ನಷ್ಟು ಅನಮಾನಗಳನ್ನು ಹುಟ್ಟು ಹಾಕಿತ್ತು. ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಕಳೆದ ತಿಂಗಳು ದೇವಸ್ಥಾನಕ್ಕೆ ಭೇಟಿ ನೀಡಿದ್ದರು. ರಾಜ್ಯ ಸರ್ಕಾರವು ಭಂಡಾರದ ಬಾಗಿಲನ್ನು ತೆರೆಯದೇ ಜನರ ಕಣ್ಣಿಗೆ ಮಣ್ಣೆರಚುತ್ತಿದೆ ಎಂದು ಅವರು ವಾಗ್ದಾಳಿ ನಡೆಸಿದ್ದರು. ಬಿಜೆಡಿ ಆಡಳಿತದಲ್ಲಿ ದೇವಸ್ಥಾನದ ಖಜಾನೆಯೂ ಸುರಕ್ಷಿತವಾಗಿಲ್ಲ ಎಂದು ತರಾಟೆಗೆ ತೆಗೆದುಕೊಂಡಿದ್ದರು. 'ನಕಲಿ' ಬೀಗದ ಕೈ ಇದೆ ಎಂದು ಕೆಲವು ದಿನಗಳ ಬಳಿಕ ಜಿಲ್ಲಾಧಿಕಾರಿ ಹೇಳಿದ್ದರು. 'ನಕಲಿ ಸರ್ಕಾರದ ಬಳಿ ಮಾತ್ರವೇ ನಕಲಿ ಬೀಗದ ಕೈ ಇರಲು ಸಾಧ್ಯ' ಎಂದು ನಡ್ಡಾ ಲೇವಡಿ ಮಾಡಿದ್ದರು.

ಕೇರಳದ ಅನಂತಪದ್ಮನಾಭ ದೇವಸ್ಥಾನದ ನೆಲಮಾಳಿಗೆಯ ಬಿ ಕೋಣೆಯಲ್ಲಿ ಅಪಾರ ಪ್ರಮಾಣದ ಚಿನ್ನಾಭರಣಗಳು ಇವೆ ಎಂಬ ಸುದ್ದಿ ಕೆಲವು ವರ್ಷಗಳ ಹಿಂದೆ ಭಾರಿ ಸದ್ದು ಮಾಡಿತ್ತು. ಕೋಣೆಯ ಬಾಗಿಲನ್ನು ತೆರೆಯಬೇಕೇ ಬೇಡವೇ ಎಂಬ ಬಗ್ಗೆ ವಾದ-ವಿವಾದಗಳು ನಡೆದಿದ್ದವು. ಅದೇ ರೀತಿ ಜಗನ್ನಾಥ ಮಂದಿರದ ರತ್ನಭಂಡಾರ ಇದೀಗ ಚರ್ಚಿತ ವಿಷಯವಾಗಿದೆ. ಅನಂತಪದ್ಮನಾಭ ಮಂದಿರದಲ್ಲಿ ಇದೆ ಎನ್ನಲಾದ ಸಂಪತ್ತಿನ ಪ್ರಮಾಣಕ್ಕೆ ಹೋಲಿಸಿದರೆ, ಜಗನ್ನಾಥ ಮಂದಿರದ ಸಂಪತ್ತು ಕಡಿಮೆ ಎಂಬ ಮಾತಿದ್ದರೂ, ಐತಿಹಾಸಿಕವಾಗಿ ಇದು ಮಹತ್ವದ್ದು ಎಂದು ಪರಿಣತರು ಹೇಳುತ್ತಾರೆ.

ಎಷ್ಟಿದೆ ಆಭರಣ?: ರತ್ನಭಂಡಾರದಲ್ಲಿ 1978ರಲ್ಲಿ ನಡೆಸಿದ್ದ ಪರಿಶೀಲನೆಯ ಮಾಹಿತಿಯನ್ನು ರಾಜ್ಯ ಸರ್ಕಾರವು ವಿಧಾನಸಭೆಗೆ 2021ರಲ್ಲಿ ನೀಡಿತ್ತು. ರತ್ನಭಂಡಾರದಲ್ಲಿ 149 ಕೆ.ಜಿ. ಬಂಗಾರ, 258 ಕೆ.ಜಿ ಬೆಳ್ಳಿ ವಸ್ತುಗಳಿವೆ. ವಿವಿಧ ಕಾರಣಗಳಿಂದ, 14 ಬಗೆಯ ಚಿನ್ನ ಹಾಗೂ ಬೆಳ್ಳಿ ಆಭರಣಗಳನ್ನು ತೂಕ ಮಾಡಿಲ್ಲ ಎಂದು ಸರ್ಕಾರ ಮಾಹಿತಿ ನೀಡಿತ್ತು.

44 ವರ್ಷಗಳ ಹಿಂದೆ ತೆರೆಯಲಾಗಿತ್ತು: ಈ ಭಂಡಾರವನ್ನು ಒಮ್ಮೆಯೂ ತೆರೆದಿಲ್ಲ ಎಂದಲ್ಲ. ಭಂಡಾರದ ಬಾಗಿಲನ್ನು ಪ್ರತೀ ಮೂರು ವರ್ಷಗಳಿಗೆ ಒಮ್ಮೆ ತೆರೆಯಬೇಕು ಎಂದು 1955ರ ಶ್ರೀ ಜಗನ್ನಾಥ ದೇವಸ್ಥಾನ ಕಾಯ್ದೆ ಹೇಳುತ್ತದೆ. 1803, 1926 ಹಾಗೂ 1978ರಲ್ಲಿ ಬಾಗಿಲು ತೆರೆಯಲಾಗಿತ್ತು. ಆದರೆ, ಕಳೆದ 44 ವರ್ಷಗಳಿಂದ ಇದರ ಬಾಗಿಲನ್ನು ತೆರೆದಿಲ್ಲ.

2018ರಲ್ಲಿ ಭಂಡಾರವನ್ನು ಪರಿಶೀಲಿಸುವ ಯತ್ನ ನಡೆದಿತ್ತು. ಭಾರತೀಯ ಪುರಾತತ್ವ ಇಲಾಖೆ ಅಧಿಕಾರಿಗಳು, ದೇವಸ್ಥಾನದ ಅರ್ಚಕರು ಸಮೀಕ್ಷೆಗೆ ತೆರಳಿದ್ದರು. ಆದರೆ, ಭಂಡಾರದ ಬೀಗದ ಕೈ ಸಿಗಲಿಲ್ಲ. ಹೀಗಾಗಿ ಹೊರಗಡೆಯಿಂದಲೇ ಸಮೀಕ್ಷೆ ನಡೆಸಲಾಗಿತ್ತು. ಬೀಗ ಕಳವಾಗಿರುವ ವಿಚಾರ ರಾಜ್ಯದಲ್ಲಿ ಸಂಚಲನ ಸೃಷ್ಟಿಸಿತ್ತು.

ಬೀಗ ನಾಪತ್ತೆಯಾದ ಪ್ರಕರಣದ ತನಿಖೆ ನಡೆಸಲು, ನಿವೃತ್ತ ನ್ಯಾಯಮೂರ್ತಿ ರಘುಬೀರ್ ದಾಸ್ ನೇತೃತ್ವದಲ್ಲಿ ಸರ್ಕಾರವು ನ್ಯಾಯಾಂಗ ಆಯೋಗ ರಚಿಸಿತ್ತು. ಆಯೋಗವು 324 ಪುಟಗಳ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತ್ತು. ಆದರೆ ಸರ್ಕಾರವು ವಿಧಾನಸಭೆಯಲ್ಲಿ ಈ ವರದಿಯನ್ನು ಈವರೆಗೂ ಮಂಡಿಸಿಲ್ಲ.

ಏನಿದು ರತ್ನ ಭಂಡಾರ

12ನೇ ಶತಮಾನದಲ್ಲಿ ಪೂರ್ವದ ಗಂಗರ ಕಾಲದಲ್ಲಿ ನಿರ್ಮಾಣವಾದ ಈ ದೇವಸ್ಥಾನದ ನೆಲಮಾಳಿಗೆಯಲ್ಲಿ 2 ಕೋಣೆಗಳಿವೆ. ಒಂದು ಒಳಕೋಣೆ, ಇನ್ನೊಂದು ಹೊರಕೋಣೆ. ಹೊರಕೋಣೆಯಲ್ಲಿ ಇರುವ ಚಿನ್ನ, ಬೆಳ್ಳಿಯ ಆಭರಣಗಳನ್ನು ಪ್ರತಿನಿತ್ಯ ಹಾಗೂ ವಿಶೇಷ ಸಂದರ್ಭಗಳಲ್ಲಿ ಜಗನ್ನಾಥ ದೇವರ ವಿಗ್ರಹಕ್ಕೆ ತೊಡಿಸಲಾಗುತ್ತದೆ. ಆದರೆ ಒಳಕೋಣೆಯ ಬಾಗಿಲನ್ನು ಹತ್ತಾರು ವರ್ಷಗಳಿಂದ ತೆರೆದಿಲ್ಲ. ಅಲ್ಲಿ ಅಪಾರ ಮುತ್ತು ರತ್ನ, ವೈಡೂರ್ಯಗಳು ಇವೆ ಎನ್ನಲಾಗುತ್ತದೆ.

'ಭಂಡಾರದ ಗೋಡೆಯಲ್ಲಿ ಬಿರುಕು, ನೀರು'

- ದೇವಸ್ಥಾನದ ಕಟ್ಟಡ ರಚನೆಯನ್ನು ಭೌತಿಕವಾಗಿ ಪರಿಶೀಲಿಸಬೇಕಿರುವ ಕಾರಣ, ರತ್ನಭಂಡಾರವನ್ನು ತೆರೆಯಬೇಕು ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು ಸರ್ಕಾರಕ್ಕೆ ಇತ್ತೀಚೆಗೆ ಮನವಿ ಸಲ್ಲಿಸಿದೆ. ಭಂಡಾರದ ಗೋಡೆಗಳು ಹಾನಿಗೊಂಡಿರುವ ಸಾಧ್ಯತೆಯಿದೆ. ಹೀಗಾಗಿ ಖುದ್ದು ಪರಿಶೀಲನೆ ನಡೆಸಿ ದುರಸ್ತಿ ಕೆಲಸ ಮಾಡಬೇಕಿದೆ ಎಂದು ಇಲಾಖೆ ತಿಳಿಸಿತ್ತು
- ಭಂಡಾರದ ಗೋಡೆಗಳಲ್ಲಿ ಬಿರುಕುಗಳು ಮೂಡಿದ್ದು, ಅದರಲ್ಲಿ ನೀರು ಕಾಣಿಸಿಕೊಂಡಿದೆ ಎಂದು ಭಂಡಾರದ ಉಸ್ತುವಾರಿ ನೋಡುಕೊಳ್ಳುತ್ತಿರುವ ನೌಕರ ನಿರಂಜನ್ ಮೇಕಪ್ ಅವರು ಹೇಳಿದ್ದು, ದುರಸ್ತಿ ಮಾಡಬೇಕಿರುವ ಕಾರಣ, ತಕ್ಷಣವೇ ಭಂಡಾರದ ಬಾಗಿಲನ್ನು ತೆರೆಯುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ
- ಭಂಡಾರವನ್ನು ತೆರೆಯುವ ಮೂಲಕ, ಜನರಲ್ಲಿ ಎದ್ದಿರುವ ಅನುಮಾನಗಳಿಗೆ ಉತ್ತರ ನೀಡಬೇಕಿದೆ ಎಂದು ಪುರಿಯ ರಾಜ ಹಾಗೂ ದೇವಸ್ಥಾನ ನಿರ್ವಹಣಾ ಮಂಡಳಿಯ ಮುಖ್ಯಸ್ಥರೂ ಆಗಿರುವ ಗಜಪತಿ ಮಹಾರಾಜ ದಿವ್ಯಸಿಂಹ ದೇವ್ ಅಭಿಪ್ರಾಯಪಟ್ಟಿದ್ದಾರೆ

1978ರಲ್ಲಿ ಖುದ್ದು ಭಂಡಾರ ನೋಡಿದ್ದ ಮಿಶ್ರಾ: 1978ರಲ್ಲಿ ಕೊನೆಯ ಬಾರಿಗೆ ಭಂಡಾರದ ಪರಿಶೀಲನೆ ನಡೆದಿತ್ತು. ಆಗ ದೇವಸ್ಥಾನದ ಆಡಳಿತಾಧಿಕಾರಿಯಾಗಿದ್ದ ರವೀಂದ್ರ ನಾರಾಯಣ ಮಿಶ್ರಾ ಅವರು ಪರಿಶೀಲನಾ ತಂಡದಲ್ಲಿದ್ದರು. ಅವರು ಹೇಳುವ ಪ್ರಕಾರ, 'ಅತ್ಯಮೂಲ್ಯ ಆಭರಣಗಳನ್ನು ಒಳಕೋಣೆಯಲ್ಲಿ ಭದ್ರವಾಗಿ ಇರಿಸಲಾಗಿದೆ. ಭಾರಿ ಪ್ರಮಾಣದ ಚಿನ್ನ, ವಜ್ರ ಹಾಗೂ ಇನ್ನಿತರೆ ಆಭರಣಗಳನ್ನು ನಾನು ಅಂದು ನೋಡಿದ್ದೆ' ಎಂದು ಮಿಶ್ರಾ ಹೇಳಿದ್ದಾರೆ.

ಆಧಾರ: ಪುರಿ ಜಗನ್ನಾಥ ಪಾರಂಪರಿಕ ಕಾರಿಡಾರ್ ಯೋಜನೆ ವರದಿ, ಪಿಟಿಐ

ಪ್ರಜಾವಾಣಿ ಪ್ರಜಾಧ್ವನಿ — ಜನರ ಮನದಾಳದ ಮಾತು

ಟಿ20 ವಿಶ್ವಕಪ್ ಟೂರ್ನಿ ತಂಡದಲ್ಲಿ ಭೂಮ್ರಾ ಅವರ ಅನುಪಸ್ಥಿತಿಯಿಂದ ಭಾರತದ ಆರಂಭಿಕ ಬೌಲಿಂಗ್ ದಾಳಿಗೆ ಹಿನ್ನಡೆ ಆಗಬಹುದು ಎಂದು ನೀವು ಭಾವಿಸುವಿರಾ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 243

ವಿಶ್ವರೂಪ ತೋರಿಸಿದ ನಟರಾಜ

ಮನೆಗೆ ಬಂದವರನ್ನೆಲ್ಲ ಗೌರವಿಸಿ ಬೀಳ್ಕೊಟ್ಟ ನಂತರ ಹಿಮವಂತ ಸ್ನಾನಮಾಡಲು ಗಂಗಾನದಿಗೆ ತೆರಳಿದ. ಇದೇ ಸಮಯದಲ್ಲಿ ಶಂಕರ ನಟನ ವೇಷವನ್ನು ಧರಿಸಿ ಮೇನಾದೇವಿಯ ಬಳಿಗೆ ಬಂದ. ಎಡಗೈನಲ್ಲಿ ಶೃಂಗವನ್ನೂ, ಬಲಗೈನಲ್ಲಿ ಡಮರವನ್ನೂ ಹಿಡಿದಿದ್ದ. ಬಗೆಬಗೆಯಾಗಿ ನರ್ತಿಸಿದ ಶಿವ, ಕೊಂಬನ್ನೂ ಊದುತ್ತಾ, ಡಮರವನ್ನು ಮನೋಹರವಾಗಿ ಆಡಿಸುತ್ತಾ, ವೀಣೆಯಿಂದ ನಾನಾ ನಾದ ನುಡಿಸಿದ. ಶಂಕರನ ಚಿತ್ತಾಕರ್ಷಕ ನರ್ತನವನ್ನು ನೋಡಿ ಮೇನಾದೇವಿಯೂ ಮೋಹಗೊಂಡಳು. ಗಿರಿಜೆ ಮೊದಲಿಗೆ ಮೋಹಿತಳಾದರೂ, ತಕ್ಷಣ ಅವಳು ತನ್ನ ತಪಃಶಕ್ತಿಯಿಂದ ನಿಜಾಂಶ ತಿಳಿದುಕೊಂಡಳು.

ಪಾರ್ವತಿಯ ಕಣ್ಣಿಗೆ ನಟವೇಷಧಾರಿಯ ಹೃದಯದಲ್ಲಿ ಈಶ್ವರ ತ್ರಿಶೂಲ ಹಿಡಿದು ನಿಂತಿದ್ದು ಕಾಣಿಸಿತು. ಹೃದಯಶಿವ ಶರೀರಕ್ಕೆಲ್ಲಾ ವಿಭೂತಿ ಬಳಿದುಕೊಂಡು, ಅಸ್ಥಿಮಾಲೆಯನ್ನು ಕೊರಳಿಗೆ ಧರಿಸಿ ನಿಂತಿದ್ದ. ಅವನ ಮುಖವು ತ್ರಿನೇತ್ರದಿಂದ ಕಂಗೊಳಿಸುತ್ತಿತ್ತು. ಸರ್ಪಗಳನ್ನು ಯಜ್ಞೋಪವೀತದಂತೆ ಮೈಗೆ ಸುತ್ತಿಕೊಂಡಿದ್ದ. ಇಂಥ ರುದ್ರ ಆಕೆಯ ಮುಂದೆ ನಿಂತು 'ನನ್ನ ಮದುವೆಯಾಗು' ಎಂದು ಕೇಳಿದಂತೆ ಭಾಸವಾಯಿತು. ಶಿವನಿಗೆ ನಮಸ್ಕರಿಸಿ, 'ನೀನೇ ನನ್ನ ಪತಿಯಾಗು' ಎಂದು ಕೋರಿದಳು. ಶಿವ 'ತಥಾಸ್ತು' ಅಂತ ಗಿರಿಜೆಗೆ ಹೇಳಿ ಅಂತರ್ಧಾನನಾದಂತೆ ಅನಿಸಿತು.

ಹೀಗೆ ಶಿವ ಮತ್ತು ಗಿರಿಜೆ ಅಂತರಂಗದಲ್ಲಿ ಕೋರಿಕೆ-ಈಡೇರಿಕೆ ವಿನಿಮಯವಾಗುತ್ತಿದ್ದರೆ, ಬಹಿರಂಗದಲ್ಲಿ ತಾಯಿ ಮೇನಾದೇವಿ ನಟರಾಜನ ನರ್ತನ, ಚಮತ್ಕಾರಗಳಿಂದ ಸಂತುಷ್ಟಳಾಗಿ ಚಿನ್ನದ ಪಾತ್ರೆಗಳಲ್ಲಿ ರತ್ನಗಳನ್ನಿಟ್ಟು ಅವನಿಗೆ ಕೊಡಲು ಹೋದಳು. ಆದರೆ ರತ್ನಗಳನ್ನು ನಟರಾಜ ಸ್ವೀಕರಿಸಲಿಲ್ಲ. ಇದರ ಬದಲು ಗಿರಿಜೆಯನ್ನು ತನಗೆ ಕೊಡಬೇಕೆಂದು ಯಾಚಿಸಿದ. ಅವನ ಮಾತನ್ನು ಕೇಳಿ ಮೇನಾದೇವಿ ತುಂಬಾ ಕೋಪಗೊಂಡು, ಹೊರಗೆ ಕಳುಹಿಸಲು ಉದ್ಯುಕ್ತಳಾದಳು.

ಅಷ್ಟರಲ್ಲಿ ಗಂಗಾನದಿಗೆ ಸ್ನಾನಕ್ಕಾಗಿ ಹೋಗಿದ್ದ ಹಿಮವಂತ ಹಿಂದಿರುಗಿದ. ಅವನು ಅಂಗಳದಲ್ಲಿ ನಿಂತಿರುವ ನಟನ ವೇಷಧಾರಿ ಶಿವನನ್ನು ನೋಡಿದ. ಮಗಳು ಗಿರಿಜೆಯನ್ನು ಕೋರಿದ ವಿಷಯವನ್ನು ಮೇನಾದೇವಿಯಿಂದ ಕೇಳಿ ಹಿಮವಂತ ಕೋಪಗೊಂಡ. ಕೂಡಲೇ ನಟನನ್ನು ಹೊರಗೆ ಕಳುಹಿಸುವಂತೆ ಸೇವಕರಿಗೆ ಆಜ್ಞೆ ಮಾಡಿದ. ಆದರೆ ತೇಜಸ್ಸಿನಿಂದ ಜ್ವಲಿಸುತ್ತಲಿರುವ ನಟರಾಜನನ್ನು ಹೊರಗೆ ಕಳುಹಿಸಲು ಯಾರಿಗೂ ಸಾಧ್ಯವಾಗಲಿಲ್ಲ.


ಇಂಥ ಸಂದರ್ಭದಲ್ಲಿ ನಟರಾಜ ತನ್ನ ವಿಶ್ವರೂಪವನ್ನು ಹಿಮವಂತನಿಗೆ ತೋರಿಸಿದ. ಮೊದಲಿಗೆ ತನ್ನೊಳಗೆ ವಿಷ್ಣುರೂಪವನ್ನು ಪ್ರದರ್ಶಿಸಿದ. ಹಿಮವಂತ ಪೂಜೆ ಸಂದರ್ಭದಲ್ಲಿ ಹರಿಗೆ ಯಾವಾವ ಹೂವು ಮುಡಿಸಿದ್ದನೋ, ಅವೆಲ್ಲವೂ ನಟರಾಜನ ಶಿರಸ್ಸು ಮತ್ತು ಶರೀರಗಳಲ್ಲಿತ್ತು. ನಂತರ ನಟರಾಜನಲ್ಲಿ ಜಗತ್ಕರ್ತನಾದ ಬ್ರಹ್ಮನನ್ನು, ಜಗತ್ತಿಗೆ ಚಕ್ಷುಸ್ಸಿನ ರೂಪನಾದ ಸೂರ್ಯನನ್ನು, ಪಾರ್ವತಿಯೊಡನೆ ನಗುತ್ತಿರುವ ರುದ್ರನನ್ನು ಕಂಡ. ಅಂತಿಮವಾಗಿ ಪ್ರಕಾಶಸ್ವರೂಪನಾದ, ಅವಯವಗಳಿಲ್ಲದ ಪರಿಶುದ್ಧವಾದ ಪರಬ್ರಹ್ಮವಸ್ತುವನ್ನು ನಟರಾಜನ ಶರೀರದಲ್ಲಿ ನೋಡಿ ಧನ್ಯನಾದ. ಆದರೆ ಗಿರಿಜೆಯನ್ನು ಕೊಡಲು ಸಮ್ಮತಿಸಲಿಲ್ಲ. ಆಗ ನಟಭಿಕ್ಷುವು ಅಲ್ಲಿಯೇ ಅಂತರ್ಧಾನನಾದ. ಕೆಲಹೊತ್ತಿನ ನಂತರ ಮೇನಾದೇವಿ-ಹಿಮವಂತರಿಗೆ ಶಿವನು ಭಿಕ್ಷುರೂಪದಿಂದ ಬಂದು ತಮ್ಮನ್ನು ಮೋಸಗೊಳಿಸಿದ ಎಂಬುದು ಗೊತ್ತಾಯಿತು.

ಇಲ್ಲಿಗೆ ಶ್ರೀ ಶಿವಮಹಾಪುರಾಣದಲ್ಲಿ ರುದ್ರಸಂಹಿತೆಯ ಮೂರನೇ ಖಂಡವಾದ, ಪಾರ್ವತೀಖಂಡದಲ್ಲಿ ಮೂವತ್ತನೆಯ ಅಧ್ಯಾಯ ಮುಗಿಯಿತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ 'ಮಹಾತ್ಮ ಗಾಂಧೀಜಿ, ಜವಾಹರಲಾಲ್ ನೆಹರೂ, ಮೊಹಮ್ಮದ್ ಅಲಿ ಜಿನ್ನಾ ಅವರು, ಆಗ ಖ್ಯಾತ ವಕೀಲರಾಗಿದ್ದರು. ಆದರೆ, ಸ್ವಾತಂತ್ರ್ಯ ಹೋರಾಟಗಾರ ಭಗತ್‌ಸಿಂಗ್ ಅವರ ಪರವಾಗಿ ಯಾರೂ ವಕಾಲತ್ತು ವಹಿಸಿಕೊಳ್ಳಲಿಲ್ಲ. ಹೀಗಾಗಿ ಅವರನ್ನು ಗಲ್ಲು ಶಿಕ್ಷೆಯಿಂದ ಪಾರು ಮಾಡಲು ಆಗಲಿಲ್ಲ' ಎಂಬುದಾಗಿ ರಿಷಿ ಬಾಗ್ರೆ ಎಂಬುವರು ಟ್ವೀಟ್ ಮಾಡಿದ್ದಾರೆ. ಇದನ್ನು ಹಲವು ಟ್ವಿಟರ್ ಖಾತೆಗಳು ಹಾಗೂ ಇತರೆ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗಿದೆ.



✓ ಗಾಂಧೀಜಿ, ನೆಹರೂ ಹಾಗೂ ಜಿನ್ನಾ ಅವರು ಭಗತ್‌ಸಿಂಗ್ ನೆರವಿಗೆ ಬರಲಿಲ್ಲ ಎಂಬುದು ಸರಿಯಾದ ಮಾಹಿತಿ ಅಲ್ಲ ಎಂದು 'ಲಾಜಿಕಲ್ ಇಂಡಿಯನ್' ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 1928ರ ಲಾಹೋರ್ ಸಂಚು ಹಾಗೂ 1929ರ ಸೆಂಟ್ರಲ್ ಅಸೆಂಬ್ಲಿಯಲ್ಲಿ ಬಾಂಬ್ ಸ್ಫೋಟ ಪ್ರಕರಣಗಳಲ್ಲಿ ಭಗತ್‌ಸಿಂಗ್ ಆರೋಪಿಯಾಗಿದ್ದರು. ತಮ್ಮ ಪರ ವಾದ ಮಾಡಲು ವಕೀಲರು ಬೇಡ, ಕಾನೂನು ಸಲಹೆಗಾರರು ಸಾಕು ಎಂದು ಸ್ವತಃ ಭಗತ್‌ಸಿಂಗ್ ತಮ್ಮ ಕುಟುಂಬದವರಿಗೆ ತಿಳಿಸಿದ್ದರು ಎಂಬ ಅಂಶವು ಕಾನೂನು ತಜ್ಞ ಎ.ಜೆ.ನೂರಾನಿ ಅವರ ಪುಸ್ತಕದಲ್ಲಿ ಉಲ್ಲೇಖವಾಗಿದೆ. ಭಗತ್‌ಸಿಂಗ್ ಅವರನ್ನು ನೆಹರೂ ಅವರು ಜೈಲಿನಲ್ಲಿ ಭೇಟಿಯಾಗಿ ಮಾತುಕತೆ ನಡೆಸಿದ್ದರು. 1931ರ ಮಾರ್ಚ್ 19ರಂದು ವೈಸ್‌ರಾಯ್ ಲಾರ್ಡ್ ಇರ್ವಿನ್ ಅವರನ್ನು ಭೇಟಿ ಮಾಡಿದ್ದ ಗಾಂಧೀಜಿ, ಕ್ಷಮಾದಾನ ನೀಡುವಂತೆ ಮನವಿ ಮಾಡಿದ್ದರು.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಹಕ್ಕಿಯ ಬದುಕು

ಹಕ್ಕಿ ಮುನ್ನರಿಯುವುದೆ ತನ್ನ ಪಯಣದ ತೆರನ? |
ಇಕ್ಕುವರದಾರದನು ಕರೆದು ತಿರುಪೆಯನು? ||
ರೆಕ್ಕೆ ಪೋದಂತಲೆದು, ಸಿಕ್ಕಿದುದನುಣ್ಣುವುದು |
ತಕ್ಕುದಾವ್ರತ ನಿನಗೆ- ಮಂಕುತಿಮ್ಮ || 730 ||

ಪದ-ಅರ್ಥ:
ಮುನ್ನರಿಯುವುದೆ = ಮುನ್ನ + ಅರಿಯುವುದೆ, ತೆರನ = ರೀತಿ, ಗತಿ, ಇಕ್ಕುವರದಾರದನು = ಇಕ್ಕುವರು(ನೀಡುವರು) + ಅದಾರು + ಅದನ ತಿರುಪೆಯನು = ಭಿಕ್ಷೆಯನ್ನು, ಪೋದಂತಲೆದು = ಪೋದಂತೆ(ಹೋದಂತೆ) + ಅಲೆದು, ಸಿಕ್ಕಿದುದನುಣ್ಣುವುದು = ಸಿಕ್ಕಿದುದನು + ಉಣ್ಣುವುದು.

ವಾಚ್ಯಾರ್ಥ: ಹಕ್ಕಿಗೆ ತಾನು ಮುಂದೆ ಹೀಗೆಯೇ ಹಾರಿ ಹೋಗುತ್ತೇನೆ ಎಂದು ಮೊದಲೇ ಗೊತ್ತಿದೆಯೆ? ಅದನ್ನು ಕರೆದು ಭಿಕ್ಷೆಯನ್ನು, ಆಹಾರವನ್ನು ಹಾಕುವರು ಯಾರು? ಅದು ತನ್ನ ರೆಕ್ಕೆಗಳು ಬಡಿದ ದಿಕ್ಕಿಗೆ ಹಾರಿ, ಸಿಕ್ಕಿದ್ದನ್ನು ಉಣ್ಣುವುದು. ಆ ವ್ರತ ನಿನಗೆ ತಕ್ಕದ್ದು.

ವಿವರಣೆ: ಇಲ್ಲಿ ಮತ್ತೊಂದು ಸುಂದರ ರೂಪಕವಿದೆ. ಹಗುರಾದ ಬಾಳು ಹಕ್ಕಿಯ ಬಾಳಿನಂತಿರಬೇಕು ಎನ್ನುತ್ತದೆ ಕಗ್ಗ. ಹಕ್ಕಿಗೂಡಿನಿಂದ ಹಾರುತ್ತದೆ. ಇಲ್ಲಿಗೇ ಹೋಗಬೇಕೆಂಬ ತೀರ್ಮಾನವನ್ನೇನೂ ಅದು ತೆಗೆದುಕೊಂಡಿಲ್ಲ. ಅದಕ್ಕೆ ಯಾರಾದರೂ ಕರೆದು ಆಹಾರವನ್ನು ನೀಡುತ್ತಾರೆಯೇ? ಅದಕ್ಕೇ ಅದು ತನ್ನ ರೆಕ್ಕೆಗಳನ್ನು ಬಡಿಯುತ್ತ ತೋಚಿದ ದಿಕ್ಕಿಗೆ ಸಾಗುತ್ತದೆ. ದಾರಿಯಲ್ಲಿ ಏನು ಸಿಕ್ಕಿದರೆ ಅದನ್ನು ತಿನ್ನುತ್ತದೆ. ಆದರೆ ಅದು ಸದಾ ಕಾಲ ಆನಂದವಾಗಿರುತ್ತದೆ. ಅದರ ನಿರಾಭಾರಿತ್ವವೇ ಸಂತಸದ ಮೂಲ. ಅದಕ್ಕೆ ಯಾವ ಅಪೇಕ್ಷೆಯೂ ಇಲ್ಲ, ಬಂಧವೂ ಇಲ್ಲ. ಯಾವ ಚಿಂತೆಯ, ಉದ್ದೇಶದ ಭಾರವಿಲ್ಲದೆ, ತನಗೆ ಮನಬಂದಲ್ಲಿ, ಮನಬಂದಂತೆ ಹಾರುತ್ತ ಹಗುರಾಗಿ ಬದುಕುತ್ತದೆ. ಇಂಥ ವ್ರತ ಮನುಷ್ಯರಿಗೂ ಒಳ್ಳೆಯದು.

ಇದು ಆಸೆ, ನಿರಾಸೆಗಳಿಲ್ಲದ, ಯಥಾರ್ಥಜೀವನದ ಬಗೆ. ಇದೊಂದು ಸಂತತ್ವದ ರೀತಿ. ಸಂತತ್ವವೆಂದರೆ ಜೀವನಕ್ಕೆ ವಿಮುಖವಾಗುವುದಲ್ಲ. ಜೀವನದಿಂದ ಅತಿಯಾಗಿ ಅಪೇಕ್ಷಿಸದೆ, ದೊರೆತದ್ದನ್ನು ಸಂತೋಷದಿಂದ ಸ್ವೀಕರಿಸುವ ಮನಸ್ಥಿತಿ. ಕೆಲವರು ಸಂಸಾರದಲ್ಲಿದ್ದು ಸನ್ಯಾಸಿಯಂತಿರುತ್ತಾರೆ ಮತ್ತೆ ಕೆಲವರು ಸನ್ಯಾಸಿಯಾಗಿದ್ದು ಸಂಸಾರಿಯಂತೆ ವ್ಯವಹರಿಸುತ್ತಾರೆ. ನಿಜವಾದ ಸಂತರು ಜ್ಞಾನಕಾರ್ಯ, ಶಕ್ತಿಕಾರ್ಯಗಳೆರಡನ್ನು ನಡೆಸಿದವರು. ವಿದ್ಯಾರಣ್ಯರು ತಪಸ್ವಿಗಳು. ಆದರೆ ಪರಿಸ್ಥಿತಿ ಬಂದಾಗ, "ಏಳು ನಾರಾಯಣ, ಕಟ್ಟು ಗ್ರಂಥವ, ಏಳು ಪಂಪಾಕ್ಷೇತ್ರಕೆ" ಎಂದು ಹೇಳಿ ಸಾಮ್ರಾಜ್ಯ ಸ್ಥಾಪನೆ ಮಾಡಿದರು. ಅದರಲ್ಲಿ ಅವರ ಅಪೇಕ್ಷೆ ಏನೂ ಇಲ್ಲ. ಅಕ್ಕ ಮಹಾದೇವಿ ಈ ಹಕ್ಕಿಯ ತರಹದ ನಿರಾಳವಾದ ಬದುಕನ್ನು ನಡೆಸುವುದು ಹೇಗೆಂದು ತಿಳಿಸುತ್ತಾಳೆ. ಹಸಿವಾದೊಡೆ ಭಿಕ್ಷಾನ್ನಗಳುಂಟು, ತೃಷೆಯಾದರೆ ಕೆರೆ ಹಳ್ಳ ಬಾವಿಗಳುಂಟು, ಶಯನಕ್ಕೆ ಹಾಳು ದೇಗುಲಗಳುಂಟು, ಚೆನ್ನಮಲ್ಲಿಕಾರ್ಜುನ ಆತ್ಮಸಂಗಾತಕ್ಕೆ ನೀನೆನಗುಂಟು. ಇದು ಹಕ್ಕಿಯ ತೆರದ ಬಿಡುಗಡೆಯಾದ ಜೀವನ. ಈ ವ್ರತ ನಮಗೆ ಒಳ್ಳೆಯದು ಎನ್ನುತ್ತದೆ ಕಗ್ಗ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಅಕ್ಟೋಬರ್ 7, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ದ್ವಾದಶಿ ಗಂ. 07-27 ನಂತರ ತ್ರಯೋದಶಿ ಗಂ. 29-25 ನಕ್ಷತ್ರ: ಶತಭಿಷ ಗಂ. 18-17 ಯೋಗ: ಗಂಡ ಗಂ. 23-30, ಕರಣ: ಬಾಲವ ಗಂ. 07-27, ಕನ್ಯಾ ಮಾಸದ 20ನೇ ದಿನ.
ರಾಹುಕಾಲ : ಬೆಳಿಗ್ಗೆ 10-30 – 12:00 ಸೂರ್ಯೋದಯ : 06-24 ಸೂರ್ಯಾಸ್ತ : 06-13
ಮುಸ್ಲಿಂ ದಿನಾಂಕ : 10 ರಬಿಉಲ್ಲಾವಲ್ ದಿನ ವಿಶೇಷ : ಪಕ್ಷಪ್ರದೋಷ.
ಅದೃಷ್ಟ ಸಂಖ್ಯೆ : 2, 11

ಮೇಷ: ಪರಿಶ್ರಮಕ್ಕೆ ತಕ್ಕಂಥ ಆದಾಯವಿಲ್ಲದೆ ಸೊರಗಿರುವ ನಿಮಗೆ ಹಲವಾರು ಕನಸುಗಳು ಈಡೇರುವ ಅವಕಾಶ ಅಪರಿಚಿತ ವ್ಯಕ್ತಿ ತೋರುವರು. ಸಂಶೋಧಕರಿಗೆ ಹೊಸ ಆವಿಷ್ಕಾರಗಳಿಂದ ಜನಪ್ರಿಯತೆ ಉಂಟಾಗುವುದು.

ವೃಷಭ: ರಾಜಕೀಯ ವ್ಯಕ್ತಿಗಳು ನಿಮ್ಮ ಪರವಾದ ಪರಿಸ್ಥಿತಿಯ ಲಾಭ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಆರ್ಥಿಕ ಕ್ಷೇತ್ರದಲ್ಲಿ ಮುನ್ನಡೆ ಇರುವುದು. ಲೆಕ್ಕಪತ್ರಗಳ ನಿರ್ವಹಣೆಯಲ್ಲಿ, ಪೋಷಣೆಯಲ್ಲಿ ದುಡುಕಬೇಡಿ, ಗಮನವಿರಲಿ.

ಮಿಥುನ: ಪರಿಸ್ಥಿತಿಗೆ ಹೊಂದಿಕೊಂಡು ಹೋಗುವ ಗುಣದಿಂದ ವಿವಾಹಕ್ಕೆ ಸಂಬಂಧಪಟ್ಟ ಭಿನ್ನಾಭಿಪ್ರಾಯವನ್ನು ದೂರ ಮಾಡಿಕೊಳ್ಳುವಿರಿ. ಕೆಲಸ ಕಾರ್ಯಗಳಲ್ಲಿ ನಾಯಕತ್ವದ ಸಾಮರ್ಥ್ಯ ಪ್ರದರ್ಶಿಸುವಿರಿ. ನೆಮ್ಮದಿ ಇರುವುದು.

ಕರ್ಕಾಟಕ: ಹೊಸದನ್ನು ಕಲಿಯುವ ಉತ್ಸಾಹ ನಿಮ್ಮಲ್ಲಿ ಮೂಡಲಿದೆ. ಕೇಟರಿಂಗ್ ಮತ್ತು ಹೋಟೆಲ್ ಉದ್ಯಮದವರಿಗೆ ಶುಭ ದಿನ. ಗೃಹ ಸಾಮಗ್ರಿ ಖರೀದಿಯಿಂದ ಖರ್ಚು ಬರಲಿದೆ. ವೆಚ್ಚ ಅಧಿಕವಾಗುತ್ತದೆ.

ಸಿಂಹ: ಪ್ರಾಮಾಣಿಕ ಅಧಿಕಾರಿಗಳಿಗೆ ಹಿರಿಯ ಅಧಿಕಾರಿಗಳಿಂದ ಕಿರುಕುಳವಿರಲಿದೆ. ಮಾಧ್ಯಮ ಮಿತ್ರರಿಂದ ತಪ್ಪು ಮಾಹಿತಿ ರವಾನೆಯಾಗಬಹುದು, ವೃತ್ತಿಯಲ್ಲಿ ಜಾಗ್ರತೆ ವಹಿಸಿ. ವ್ಯವಹಾರಕ್ಕೆ ಪ್ರತಿಸ್ಪರ್ಧಿಗಳು ಹುಟ್ಟುವರು.

ಕನ್ಯಾ: ಆಡಳಿತ ವರ್ಗದರಿಗೆ ಸಿಬ್ಬಂದಿಗಳಿಂದ ಪ್ರಶಂಸೆ ದೊರೆಯುತ್ತದೆ. ವ್ಯವಹಾರಕ್ಕೆ ಸಂಬಂಧಿಸಿದಂತೆ ಔದಾರ್ಯ ಬುದ್ಧಿಯನ್ನು ತೋರಿದಲ್ಲಿ ವಂಚನೆಗೆ ಒಳಗಾಗುವ ಸನ್ನಿವೇಶಗಳಿವೆ. ನಿರೀಕ್ಷೆ ಮೀರಿದ ಗೌರವ ಲಭ್ಯವಾಗುವುದು.

ತುಲಾ: ಐ.ಟಿ. ಕಂಪನಿ ಉದ್ಯೋಗಿಗಳಿಗೆ ಕೆಲಸದ ಒತ್ತಡ ಜಾಸ್ತಿಯಾಗಲಿದೆ, ಅದರ ಪರಿಣಾಮವಾಗಿ ವರಮಾನ ಹೆಚ್ಚಳದ ಸಂಭವ ಇರುವುದು. ನವ ದಂಪತಿಗಳಿಗೆ ಹರ್ಷದ ಸಮಾಚಾರ ಕೇಳಿ ಬರುವುದರಿಂದ ಮನಸ್ಸಿಗೆ ನೆಮ್ಮದಿ.

ವೃಶ್ಚಿಕ: ಹಿಂದಿನ ನಿಮ್ಮ ಸೋಲು ನಿಮ್ಮನ್ನು ಬಾಧಿಸುತ್ತಿದ್ದರೂ, ಹೊಸತನದಲ್ಲಿ ಜಯ ಕಾಣುವಿರಿ. ವೃತ್ತಿ ಪರವಾಗಿ ಕಚೇರಿಯಲ್ಲಿ ನಿಮಗೆ ವಿಶೇಷ ಗೌರವ ದೊರೆಯಲಿದೆ. ಸಾಕು ಪ್ರಾಣಿಯ ಅಗಲಿಕೆ ಸ್ವಲ್ಪ ಬೇಸರವನ್ನು ಕಾಡುವುದು.

ಧನು: ರಾಜಕೀಯ ನಡೆಯಲ್ಲಿ ಬೇರೆಯವರಿಂದ ವಂಚನಾ ಪ್ರಸಂಗ ನಡೆದರೂ, ನಿಮಗೆ ಉತ್ತಮ ಭವಿಷ್ಯವಿದೆ. ಉದ್ಯೋಗಿಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಡ್ತಿ ದೊರೆಯುವ ಸಂಭವವಿದೆ.

ಮಕರ: ಕಾರ್ಯಕ್ಷೇತ್ರದಲ್ಲಿ ಹಿಡಿತಕ್ಕೆ ಸಿಕ್ಕದೆ ಇರುವ ಕೆಲಸಗಳನ್ನು ಸಮರ್ಥವಾಗಿ ಅರ್ಥೈಸಿಕೊಂಡು ಮತ್ತು ಅನುಭವ ಪಡೆದುಕೊಂಡು ಕಾರ್ಯರೂಪಕ್ಕೆ ತರುವಲ್ಲಿ ಯಶಸ್ವಿಯಾಗುವಿರಿ.

ಕುಂಭ: ಉದ್ಯೋಗಕ್ಕಾಗಿ ಹೊರ ದೇಶದ ಪ್ರಯಾಣದ ಅವಕಾಶಗಳು ಸಿಗಬಹುದು. ನಿಮ್ಮ ಸಾಮರ್ಥ್ಯಕ್ಕೆ, ಪ್ರತಿಭೆಗೆ ಅನುಗುಣವಾದ ಉದ್ಯೋಗ ಅವಕಾಶ ದೊರೆತು ಸಂತಸವಾಗಲಿದೆ.


ಮೀನ: ಅಕ್ಕ-ಪಕ್ಕದವರನ್ನು ತಾತ್ಸಾರವಾಗಿ ಭಾವಿಸಬೇಡಿ. ವಾಯುಪ್ರಕೋಪದಿಂದ ದೈಹಿಕವಾಗಿ ಸಮಸ್ಯೆ ಕಾಡಬಹುದು. ತಾಯಿಯ ಆರೋಗ್ಯ ಸುಧಾರಿಸಲು ಔಷಧದ ಜತೆ ಧಾರ್ಮಿಕ ಮಾರ್ಗ ಅನುಸರಿಸುವುದು ಉತ್ತಮ.

ಪದಬಂಧ 5101

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ರಸ ಒಸರುವ ಜಿಹ್ವೆ (3)
3. ತತ್ತರಿಸುತ್ತಾ ಪ್ರಶ್ನೆಗೆ ನೀಡಿದ ಜವಾಬು (3)
5. ಅಭಾವದಲ್ಲಿ ಅಕ್ಕನ ಗಂಡ ಬಂದಿಹನಲ್ಲಾ? (2)
6. ಸರಾಸರಿಯಾಗಿ ಹೇಳಿರುವುದು ತಪ್ಪಲ್ಲ! (2)
8. ಕೂಸು ಎದ್ದಿದ್ದುಬೆಳಗಿನ ಜಾವ (3)
9. ತಕ ತಕ ಕುಣಿಯಲು ಈ ಅತೀ ಆತುರ! (3)
11. ಕರಿಯ ಮರಿ ಬಿದ್ದಿರುವ ಆಳವಾದ ಗುಂಡಿ (3)
12. ವಿಧಿ ನಿರ್ಣಯಿಸುವಾತ (3)
13. ಮಲಗುವಾಗ ಬಂದಿರುವ ಅಡಿಯಾಳು (3)
15. ಪಾದದ ಬಳಿಯಿರುವ ಮರದ ಮೆಟ್ಟು (3)
17. ನಿಯಮ ಹೇಳಿರುವ ನರಕಾಧಿಪತಿ (2)
19. ನಿಹಾರಿಕೆ ನೋಡಿದ್ದಕ್ಕೇ ಈ ಕೇಡು! (2)
20. ತಿಕ್ಕಲನಿರಿಕೊಂಡಿರುವ ಹಣೆ ಬೊಟ್ಟು (3)
21. ಮಾಲು ತರುವಾಗ ತಲೆಗೆ ಸುತ್ತಿಕೊಂಡ ಬಟ್ಟೆ (3)

ಮೇಲಿಂದ ಕೆಳಕ್ಕೆ
1. ವರನಿಗೆ ಕೇಳಿಸಿದ ಧ್ವನಿ (2)
2. ನಯವಾಗಿ ಹೊಳೆಯುವ ಅಕ್ಷಿ (3)
3. ಕುಸುಕ್ಕನೆ ಜಾರಿದ ಜಾಗದಲ್ಲಿನ ಮರಳು (3)
4. ಅವಸರದಲ್ಲಿ ಚಲ್ಲಿದ ದ್ರವ (2)
5. ಭಾರ ಹೊತ್ತಿರುವ ನಮ್ಮ ದೇಶ (3)
7. ಪೇರಿ ಕೀಳುವ ಮೊದಲು ಮಾಡಿದ ದುರಸ್ತಿ (3)
10. ತಕ್ಕಡಿ ಹಿಡಿದಿದ್ದಕ್ಕೇ ಈ ತುರಿಕೆ! (3)
11. ಕರಮೊದಲಿಟ್ಟು ನೀರಾಗಿಸು! (3)
12. ವಿಷದಿಂದ ಕೂಡಿರುವ ಸಂಗತಿ (3)
14. ಯಮನ ಸೂತ್ರವೇ ಉಲ್ಟಾ ಆಗಿದೆಯಲ್ಲಾ? (3)
15. ಪಾಕದಲ್ಲಿರುವ ದೋಷ (3)
16. ಮೊಸರು ಮಾರುವಾಗ ಸಿಡಿದ ರಾಡಿ (3)
18. ಮಧುಮತಿಯ ಬುದ್ಧಿ! (2)
19. ಹಾಲಾಹಲದಲ್ಲಿ ಬೆರೆತಿರುವ ಕ್ಷೀರ (2)



5100ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
4. ಭಾಗಾಕಾರ 5. ಮಲಯಜ 6. ನಿಯಮ 9. ಜವಾನ 10. ಹಯವದನ 11. ಕಡಲು 12. ಕರಗ 14. ಕನ್ನಡಕ 15. ಕೆಂಗುಲಾಬಿ

ಮೇಲಿಂದ ಕೆಳಕ್ಕೆ:
1. ಅಭಾಗಿನಿ 2. ಸ್ತರ 3. ಯಜಮಾನ 7. ಮಹಲು 8. ಕವಳ 9. ಜನಕ 11. ಕನಿಕರ 13 ಗಡಿಬಿಡಿ 15. ಕೆಂಡ

ಸುಡೊಕು 5487

	7	9			3		8	1
				8		2		9
8	1		2	6		7	3	
	8					1		5
	9	2	8	1	5		6	
5						8		
9		7	5					6
	5				2		4	
4	3		6		1			2

ಆಡುವುದು ಹೇಗೆ?


ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5486 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ಷೇರುಪೇಟೆ ವಹಿವಾಟು

156



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,275
ಇಂದಿನ ಅಂತ್ಯ	17,332
▲	57
ದಿನದ ಗರಿಷ್ಠ	17,428

ವಿನಿಮಯ ದರ

$ ಡಾಲರ್	82.17
£ ಪೌಂಡ್	92.33
€ ಯುರೊ	80.94
¥ ಯೆನ್ (100ಕ್ಕೆ)	57

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹435
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹437

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1660 (1660)
ಸೋಯಾ (ರಿಫೈನ್ಡ್)	₹1215 (1180)
ಸೂರ್ಯಕಾಂತಿ (ರಿಫೈನ್ಡ್)	₹1350 (1320)
ಪಾಮೋಲಿನ್	₹905 (897)

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹149
ಆರ್‌ಎಸ್‌ಎಸ್-5	₹139
ಗುಡ್ ಲಾಟ್	₹134

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

ದಪ್ಪ	₹1200-1800
ಮಧ್ಯಮ	₹800-1200
ಸಣ್ಣ	₹400-800

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಭಾರತದ ಜಿಡಿಪಿ ಅಂದಾಜು ತಗ್ಗಿಸಿದ ವಿಶ್ವಬ್ಯಾಂಕ್

ವಾಷಿಂಗ್ಟನ್ (ಪಿಟಿಐ): ಪ್ರಸಕ್ತ ಹಣಕಾಸು ವರ್ಷಕ್ಕೆ ಭಾರತದ ಜಿಡಿಪಿ ಬೆಳವಣಿಗೆಯ ಅಂದಾಜನ್ನು ವಿಶ್ವಬ್ಯಾಂಕ್ ಶೇ 6.5ಕ್ಕೆ ಇಳಿಕೆ ಮಾಡಿದೆ. ಈ ಮೊದಲು ಶೇ 7.5ರಷ್ಟು ಬೆಳವಣಿಗೆ ಕಾಣಲಿದೆ ಎಂದು ಹೇಳಿತ್ತು.

ಭಾರತ ಮತ್ತು ಉಳಿದೆಲ್ಲಾ ದೇಶಗಳಿಗೆ ಜಾಗತಿಕ ಪರಿಸ್ಥಿತಿಯು ಅನುಕೂಲಕರವಾಗಿ ಇಲ್ಲ. ಹೀಗಾಗಿ ಬೆಳವಣಿಗೆ ಅಂದಾಜನ್ನು ತಗ್ಗಿಸಲಾಗಿದೆ ಎಂದು ಅದು ಹೇಳಿದೆ.

ಸೌತ್ ಏಷ್ಯಾ ಎಕನಾಮಿಕ್ ಫೋಕಸ್ ವರದಿಯನ್ನು ಬಿಡುಗಡೆ ಮಾಡಿದ್ದು, ಜಗತ್ತಿನ ಇತರೆ ದೇಶಗಳಿಗೆ ಹೋಲಿಸಿದರೆ ಭಾರತವು ಅತ್ಯಂತ ವೇಗವಾಗಿ ಚೇತರಿಕೆ ಕಂಡುಕೊಳ್ಳುತ್ತಿದೆ ಎಂದು ವಿಶ್ವಬ್ಯಾಂಕ್ ಹೇಳಿದೆ.

'ದಕ್ಷಿಣ ಏಷ್ಯಾದ ಇತರೆ ದೇಶಗಳಿಗೆ ಹೋಲಿಸಿದರೆ ಭಾರತದ ಆರ್ಥಿಕತೆಯು ಉತ್ತಮ ಬೆಳವಣಿಗೆ ಕಂಡಿದೆ. ಕೋವಿಡ್ ಸಾಂಕ್ರಾಮಿಕದ ಮೊದಲ ಅಲೆಯ ಸಂದರ್ಭದಲ್ಲಿ ಎದುರಿಸಿದ್ದ ಕುಸಿತದಿಂದ ಬಹಳ ವೇಗವಾಗಿ ಚೇತರಿಕೆ ಕಂಡುಕೊಂಡಿದೆ' ಎಂದು ವಿಶ್ವಬ್ಯಾಂಕ್‌ನ ದಕ್ಷಿಣ ಏಷ್ಯಾದ ಮುಖ್ಯ ಆರ್ಥಿಕ ತಜ್ಞ ಹನ್ಸ್ ಟಿಮ್ಮರ್ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಏರ್‌ಟೆಲ್ 5ಜಿ ಪ್ಲಸ್ ಆರಂಭ

ಬೆಂಗಳೂರು: ದೇಶದ ಪ್ರಮುಖ ನಗರಗಳಲ್ಲಿ ಏರ್‌ಟೆಲ್ 5ಜಿ ಪ್ಲಸ್ ಆರಂಭ ಆಗಿದೆ ಎಂದು ಕಂಪನಿಯು ಗುರುವಾರ ತಿಳಿಸಿದೆ.

ಬೆಂಗಳೂರು, ದೆಹಲಿ, ಮುಂಬೈ, ಚೆನ್ನೈ, ಹೈದರಾಬಾದ್, ಸಿಲಿಗುರಿ, ನಾಗಪುರ ಮತ್ತು ವಾರಾಣಸಿ ನಗರಗಳಲ್ಲಿ ಗ್ರಾಹಕರು ಹಂತ ಹಂತವಾಗಿ ಆಧುನಿಕ 5ಜಿ ಪ್ಲಸ್ ಸೇವೆಗಳನ್ನು ಪಡೆಯಲಿದ್ದಾರೆ. ಗ್ರಾಹಕರು ತಮ್ಮ ಪ್ರಸ್ತುತ ಡೇಟಾ ಪ್ಲಾನ್‌ಗಳಲ್ಲಿಯೇ ಅತ್ಯಂತ ವೇಗದ 5ಜಿ ಪ್ಲಸ್ ಸೇವೆಗಳನ್ನು ಆನಂದಿಸಬಹುದು ಎಂದು ತಿಳಿಸಿದೆ.

ಬೆಂಗಳೂರಿನಲ್ಲಿ ಎಂಜಿನಿಯರಿಂಗ್ ಕೇಂದ್ರ

ಮುಂಬೈ: ಬೆಂಗಳೂರಿನಲ್ಲಿ ಎಂಜಿನಿಯರಿಂಗ್ ಕೇಂದ್ರ ಸ್ಥಾಪಿಸಲು ₹984 ಕೋಟಿ ಹೂಡಿಕೆ ಮಾಡುವುದಾಗಿ ವಾಹನ ಬಿಡಿಭಾಗ ತಯಾರಿಸುವ ಕೆನಡಾದ ಮ್ಯಾಗ್ನ ಕಂಪನಿ ಗುರುವಾರ ತಿಳಿಸಿದೆ.

2.40 ಲಕ್ಷ ಚದರ ಅಡಿಯಲ್ಲಿ ಎಂಜಿನಿಯರಿಂಗ್ ಕೇಂದ್ರ ಇರಲಿದೆ, ಮುಂದಿನ ವರ್ಷದ ಮೊದಲ ತ್ರೈಮಾಸಿಕದಲ್ಲಿ ಬಳಕೆಗೆ ಲಭ್ಯವಾಗುವ ನಿರೀಕ್ಷೆ ಇದೆ ಎಂದು ಕಂಪನಿ ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-48000
ಹಳತು	46000-56000
ಚಿತ್ರದುರ್ಗ	
ಆಪಿ	48739-49169
ಬೆಟ್ಟೆ	38119-38559
ಕೆಂಪುಗೋಟು	29600-30000
ರಾಶಿ	48229-48699
ಕುಮಟ	
ಚಿಪ್ಪು	27010-32899
ಕೋಕ	16010-31099
ಹಳೆಚಾಲಿ	44509-45009
ಹೊಸಚಾಲಿ	37210-42409
ಸಾಗರ	
ಬಿಳಿಗೋಟು	26110-32599
ಚಾಲಿ	38799-40109
ಕೋಕ	14989-33299
ಕೆಂಪುಗೋಟು	34599-37129
ರಾಶಿ	40199-50299
ಸಿಪ್ಪೆಗೋಟು	10115-21599
ಶಿವಮೊಗ್ಗ	
ಗೊಬರಲು	17003-37569
ರಾಶಿ	44869-50599
ಸಿದ್ದಾಪುರ	
ಬಿಳಿಗೋಟು	26899-34699
ಚಾಲಿ	38099-42099
ಕೋಕ	27699-33309
ಕೆಂಪುಗೋಟು	34112-34112
ರಾಶಿ	48599-49399
ತಟ್ಟಿಬೆಟ್ಟೆ	40069-47669
ಶಿರಸಿ	
ಬೆಟ್ಟೆ	26669-45869
ಬಿಳಿಗೋಟು	22018-37299
ಚಾಲಿ	38019-43500
ಕೆಂಪುಗೋಟು	11171-32599
ರಾಶಿ	44869-49299
ಯಲ್ಲಾಪುರ	
ಬಿಳಿಗೋಟು	24612-35309
ಚಾಲಿ	36119-42623
ಕೋಕ	18899-32109
ರಾಶಿ	49039-55600
ತಟ್ಟಿಬೆಟ್ಟೆ	38299-48519

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16200	15900	16250	224.65 ಸೆಂಟ್ಸ್
ಎಸಿ	9100	8400	9000	
ಆರ್‌ಪಿ	9800	9800	9850	ಲಂಡನ್
ಆರ್‌ಸಿ	4800	4500	4800	2173 ಡಾಲರ್ಸ್

ಸತತ 14ನೇ ತಿಂಗಳಿನಲ್ಲಿಯೂ ಸಕಾರಾತ್ಮಕ ಚಲನೆ: ಎಸ್ ಆ್ಯಂಡ್ ಪಿ

ಸೇವಾ ಚಟುವಟಿಕೆ 6 ತಿಂಗಳ ಕನಿಷ್ಠ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಚಟುವಟಿಕೆಯು ಸೆಪ್ಟೆಂಬರ್‌ನಲ್ಲಿ ಆರು ತಿಂಗಳ ಕನಿಷ್ಠ ಮಟ್ಟಕ್ಕೆ ಕುಸಿತ ಕಂಡಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಇಂಡಿಯಾ ಸಂಸ್ಥೆಯು ಗುರುವಾರ ಹೇಳಿದೆ.

ಸೇವಾ ವಲಯದ ಚಟುವಟಿಕೆಯನ್ನು ತಿಳಿಸುವ ಸೂಚ್ಯಂಕವು ಆಗಸ್ಟ್‌ನಲ್ಲಿ 57.2ರಷ್ಟು ಇತ್ತು. ಸೆಪ್ಟೆಂಬರ್‌ನಲ್ಲಿ 54.3ಕ್ಕೆ ಇಳಿಕೆ ಆಗಿದೆ. ಹಣದುಬ್ಬರದ ಒತ್ತಡ ಮತ್ತು ಕಂಪನಿಗಳ ಮಧ್ಯೆ ಪೈಪೋಟಿ ಹೆಚ್ಚಾಗಿರುವುದರಿಂದ ಹೊಸ ಯೋಜನೆಗಳ ಬೇಡಿಕೆಯು ಮಾರ್ಚ್ ಬಳಿಕ ಅತ್ಯಂತ ನಿಧಾನಗತಿಯ ಹೆಚ್ಚಳ ಕಂಡಿದೆ. ಇದು ವಲಯದ ಬೆಳವಣಿಗೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ ಎಂದು ಅದು ಹೇಳಿದೆ.

ಸೆಪ್ಟೆಂಬರ್‌ನಲ್ಲಿ ವಲಯದ ಚಟುವಟಿಕೆಯು ಇಳಿಕೆ ಆಗಿದ್ದರು ಸಹ, ಸತತ 14ನೇ ತಿಂಗಳಿನಲ್ಲಿಯೂ ಸಕಾರಾತ್ಮಕ ಮಟ್ಟದಲ್ಲಿಯೇ ಇದೆ. ಸೂಚ್ಯಂಕವು 50 ಮತ್ತು ಅದಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಅದನ್ನು ಸಕಾರಾತ್ಮಕ ಬೆಳವಣಿಗೆ ಎಂದು ಪರಿಗಣಿಸಲಾಗುತ್ತದೆ.

ಮುಖ್ಯಾಂಶಗಳು

- ಏಳೂವರೆ ವರ್ಷಗಳ ಗರಿಷ್ಠ ಮಟ್ಟದಲ್ಲಿ ವಹಿವಾಟು ನಡೆಸುವ ವಿಶ್ವಾಸ
- ಸೆಪ್ಟೆಂಬರ್‌ನಲ್ಲಿ ಕಾರ್ಯಾಚರಣೆ ವೆಚ್ಚ ಮತ್ತಷ್ಟು ಏರಿಕೆ



'ದೇಶದ ಸೇವಾ ವಲಯವು ಹಲವು ರೀತಿಯ ಆಪತ್ತುಗಳಿಂದ ಈಚೆಗಷ್ಟೇ ಹೊರಬಂದಿದೆ. ಸೆಪ್ಟೆಂಬರ್ ತಿಂಗಳ ಮಂದಗತಿಯ ಬೆಳವಣಿಗೆಯ ಹೊರತಾಗಿಯೂ ಒಟ್ಟಾರೆಯಾಗಿ ವಲಯವು ಉತ್ತಮ ಬೆಳವಣಿಗೆ ಹಾದಿಯಲ್ಲಿಯೇ ಇದೆ' ಎಂದು ಎಸ್‌ಆ್ಯಂಡ್‌ಪಿ ಗ್ಲೋಬಲ್ ಸಂಸ್ಥೆಯ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನಾ ಡಿ. ಲಿಮಾ ತಿಳಿಸಿದ್ದಾರೆ.

> **ಹಣದುಬ್ಬರದ ಏರಿಕೆಯು ಖರೀದಿ ಸಾಮರ್ಥ್ಯ ತಗ್ಗಿಸಲಿದೆ. ವಹಿವಾಟು ನಡೆಸುವ ವಿಶ್ವಾಸ ಕುಗ್ಗಿಸಲಿದೆ. ವಲಯದ ಚೇತರಿಕೆಗೂ ಸವಾಲಾಗಲಿದೆ**
>
> **ಪಾಲಿಯಾನಾ ಡಿ. ಲಿಮಾ,** ಎಸ್‌ಆ್ಯಂಡ್‌ಪಿ ಗ್ಲೋಬಲ್ ಸಂಸ್ಥೆಯ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ

'ಅಮೆರಿಕದ ಕೇಂದ್ರೀಯ ಬ್ಯಾಂಕ್ ಬಡ್ಡಿದರ ಹೆಚ್ಚಳ ಮಾಡಿದ್ದರಿಂದ ಸೆಪ್ಟೆಂಬರ್ ತಿಂಗಳ ಅಂತ್ಯದ ವೇಳೆಗೆ ಡಾಲರ್ ಎದುರು ರೂಪಾಯಿ ಮೌಲ್ಯ ಹೆಚ್ಚಿನ ಕುಸಿತ ಕಂಡಿತು. ಇದು ಭಾರತದ ಆರ್ಥಿಕತೆಗೆ ಹೆಚ್ಚುವರಿ ಸವಾಲಾಗಿದೆ' ಎಂದು ಲಿಮಾ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಕರೆನ್ಸಿ ಅಸ್ಥಿರವಾಗಿರುವುದು ಹಣದುಬ್ಬರದ ಆತಂಕಕ್ಕೆ ಕಾರಣವಾಗಿದೆ. ಆಮದಾಗುವ ವಸ್ತುಗಳು ದುಬಾರಿ ಆಗಲಿವೆ. ದರ ಏರಿಕೆಯನ್ನು ನಿಯಂತ್ರಿಸಲು ಮತ್ತು ರೂಪಾಯಿ ಮೌಲ್ಯ ಕುಸಿಯುವುದನ್ನು ತಡೆಯಲು ಆರ್‌ಬಿಐ ಬಡ್ಡಿದರ ಏರಿಕೆ ಮಾಡುವುದನ್ನು ಮುಂದುವರಿಸುವುದರಲ್ಲಿ ಯಾವುದೇ ಅನುಮಾನ ಇಲ್ಲ' ಎಂದು ಲಿಮಾ ಹೇಳಿದ್ದಾರೆ.

ವಿದ್ಯುತ್, ಆಹಾರ ಮತ್ತು ಸರಕುಗಳ ವೆಚ್ಚದಲ್ಲಿ ಏರಿಕೆ ಆಗಿರುವುದರಿಂದ ಕಾರ್ಯಾಚರಣಾ ವೆಚ್ಚವು ಸೆಪ್ಟೆಂಬರ್‌ನಲ್ಲಿ ಮತ್ತಷ್ಟು ಏರಿಕೆ ಆಗಿದೆ ಎಂದು ಕಂಪನಿಗಳು ತಿಳಿಸಿವೆ.

ಬಾಕಿ ಇರುವ ಕೆಲಸಗಳನ್ನು ಪೂರ್ಣಗೊಳಿಸಲು ಹಾಗೂ ಮಾರಾಟಕ್ಕೆ ಮತ್ತೊಂದು ಸುತ್ತಿನ ಉದ್ಯೋಗ ಸೃಷ್ಟಿಗೆ ಉತ್ತೇಜನ ನೀಡಿದೆ. ಹೀಗಿದ್ದರೂ ಉದ್ಯೋಗ ಸೃಷ್ಟಿ ಪ್ರಮಾಣವು ಆಗಸ್ಟ್‌ಗಿಂತಲೂ ಕಡಿಮೆ ಇದೆ ಎಂದು ಸಂಸ್ಥೆಯು ತಿಳಿಸಿದೆ.

ತಯಾರಿಕೆ ಮತ್ತು ಸೇವಾ ವಲಯಗಳ ಬೆಳವಣಿಗೆಯನ್ನು ತಿಳಿಸುವ ಕಂಪೋಸಿಟ್ ಪಿಎಂಐ ಔಟ್‌ಪುಟ್ ಇಂಡೆಕ್ಸ್ ಆಗಸ್ಟ್‌ನಲ್ಲಿ 58.2ರಷ್ಟು ಇದ್ದಿದ್ದು ಸೆಪ್ಟೆಂಬರ್‌ನಲ್ಲಿ 55.1ಕ್ಕೆ ಇಳಿಕೆ ಆಗಿದೆ. ಇದು ಸಹ ಮಾರ್ಚ್ ನಂತರದ ಅತ್ಯಂತ ಕನಿಷ್ಠ ಬೆಳವಣಿಗೆ ದರ ಆಗಿದೆ.

ಕೇಂದ್ರಕ್ಕೆ ಲಾಭಾಂಶ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಎಸ್‌ಎಐಎಲ್, ಹುಡ್ಕೊ ಮತ್ತು ಐಆರ್‌ಸಿಟಿಸಿ ಸೇರಿ ಒಟ್ಟು 5 ಕೇಂದ್ರೋದ್ಯಮಗಳಿಂದ ಒಟ್ಟು ₹1,203 ಕೋಟಿ ಲಾಭಾಂಶ ಪಡೆದುಕೊಂಡಿದೆ. ಹಣಕಾಸು ವರ್ಷದಲ್ಲಿ ಈವರೆಗೆ ಸರ್ಕಾರಕ್ಕೆ ಲಾಭಾಂಶದ ರೂಪದಲ್ಲಿ ₹14,778 ಕೋಟಿ ಬಂದಿದೆ.

ಮುಂಬೈ ಧಾರಣೆ

ಶೇಂಗಾ

6–10-2022

ಜಾವಾ 70/80(ಹೊಸ)	11100-11150
ಜಾವಾ 80/90(ಹೊಸ)	10800-10850
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1670 (1670)
ಒಂದು ವಾರದ ಡೆಲಿವರಿ	1665 (1665)
ಸೋಯಾ ಕಚ್ಚಾ	1150 (1120)
ಪಾಮ್ ವಾರದ ಡೆಲಿವರಿ	903 (895)
ಸೂರ್ಯಕಾಂತಿ ಎಣ್ಣೆ ಕಚ್ಚಾ	1250 (1230)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,600 (51,050)
ಬೆಳ್ಳಿ ಕೆ.ಜಿ 60,650 (59,950)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪೇಟೆಯಲ್ಲಿ ಸಕಾರಾತ್ಮಕ ಓಟ

ಮುಂಬೈ (ಪಿಟಿಐ): ಲೋಹ, ಐ.ಟಿ. ಮತ್ತು ಬಂಡವಾಳ ಸರಕುಗಳ ಷೇರುಗಳ ಉತ್ತಮ ಗಳಿಕೆಯಿಂದಾಗಿ ಗುರುವಾರ ದೇಶದ ಷೇರುಪೇಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆಯಿತು.

ವಿದೇಶಿ ಬಂಡವಾಳ ಒಳಹರಿವು ಸಹ ಸೂಚ್ಯಂಕಗಳ ಏರಿಕೆಗೆ ಕಾರಣವಾಯಿತು. ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 156 ಅಂಶ ಹೆಚ್ಚಾಗಿ 58,220 ಅಂಶಗಳಲ್ಲಿ ದಿನದ ವಹಿವಾಟು ಅಂತ್ಯಗೊಳಿಸಿತು. ವಹಿವಾಟಿನ ಒಂದು ಹಂತದಲ್ಲಿ ಸೆನ್ಸೆಕ್ಸ್ 513 ಅಂಶಗಳಷ್ಟು ಏರಿಕೆ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 57 ಅಂಶ ಏರಿಕೆ ಕಂಡು 17,332 ಅಂಶಗಳಿಗೆ ತಲುಪಿತು.

ಸೆನ್ಸೆಕ್ಸ್‌ನಲ್ಲಿ ಟಾಟಾ ಸ್ಟೀಲ್, ಲಾರ್ಸನ್ ಆ್ಯಂಡ್ ಟೂಬ್ರೊ, ಐಸಿಐಸಿಐ ಬ್ಯಾಂಕ್, ಎಚ್‌ಸಿಎಲ್ ಟೆಕ್ನಾಲಜೀಸ್, ಇನ್ಫೊಸಿಸ್ ಷೇರುಗಳ ಮೌಲ್ಯ ಹೆಚ್ಚಾಯಿತು.

ಜಾಗತಿಕ ಮಾರುಕಟ್ಟೆಗಳಲ್ಲಿ ಏರಿಳಿತ ಮತ್ತು ಕಚ್ಚಾ ತೈಲ ದರ ಏರಿಕೆಯ ನಡುವೆಯೂ ಭಾರತದ ಷೇರುಪೇಟೆಗಳು ಚೇತರಿಕೆ ಕಂಡುಕೊಂಡಿವೆ. ದೇಶಿ ಮತ್ತು ವಿದೇಶಿ ಹೂಡಿಕೆದಾರರು ಷೇರುಪೇಟೆ ಏರಿಕೆಗೆ ನೆರವಾದರು ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಏಷ್ಯಾದ ಮಾರಕಟ್ಟೆಯಲ್ಲಿ, ಸೋಲ್ ಮತ್ತು ಟೋಕಿಯೊ ಷೇರುಪೇಟೆಗಳು ಗಳಿಕೆ ಕಂಡರೆ, ಶಾಂಘೈ ಮತ್ತು ಹಾಂಗ್‌ಕಾಂಗ್ ಷೇರುಪೇಟೆಗಳ ವಹಿವಾಟು ಇಳಿಕೆ ಕಂಡಿತು.

ಸ್ಪೈಸ್ ಜೆಟ್ ಷೇರು ಗಳಿಕೆ: ಕೇಂದ್ರವು ತುರ್ತು ಸಾಲ ಖಾತರಿ ಯೋಜನೆಯಡಿ ಸ್ಪೈಸ್ ಜೆಟ್ ಕಂಪನಿಗೆ ಹೆಚ್ಚುವರಿಯಾಗಿ ₹1 ಸಾವಿರ ಕೋಟಿ ಸಾಲ ಸಿಗುವ ವರದಿಯಾಗಿದೆ. ಇದರಿಂದಾಗಿ ಕಂಪನಿಯ ಷೇರು ಮೌಲ್ಯವು ಗುರುವಾರ ಶೇ 9ರಷ್ಟು ಏರಿಕೆ ಕಂಡಿತು.

₹82ರ ಗಡಿ ದಾಟಿದ ರೂಪಾಯಿ



ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಇದೇ ಮೊದಲಿಗೆ ₹82ರ ಗಡಿ ದಾಟಿತು. ಗುರುವಾರದ ವಹಿವಾಟಿನಲ್ಲಿ 55 ಪೈಸೆ ಇಳಿಕೆ ಕಂಡು ಒಂದು ಡಾಲರ್‌ಗೆ ₹82.17ರಂತೆ ವಿನಿಮಯಗೊಂಡಿತು. ಸಾರ್ವಕಾಲಿಕ ಕನಿಷ್ಠ ಮಟ್ಟ ಇದಾಗಿದೆ.

ಡಾಲರ್ ಮೌಲ್ಯ ವೃದ್ಧಿ ಮತ್ತು ಕಚ್ಚಾ ತೈಲ ದರ ಏರಿಕೆಯಿಂದಾಗಿ ರೂಪಾಯಿ ಮೌಲ್ಯ ಕುಸಿತ ಕಾಣುವಂತಾಯಿತು.

ಬ್ರೆಂಟ್ ಕಚ್ಚಾ ತೈಲ ದರವು ಶೇ 1ರವರೆಗೆ ಏರಿಕೆ ಕಂಡು ಒಂದು ಬ್ಯಾರಲ್‌ಗೆ 94.22 ಡಾಲರ್‌ಗೆ ತಲುಪಿತು.

ಸುದ್ದಿ 2 ನಿಮಿಷ

ಹಬ್ಬದ ಮಾರಾಟ: ಅಮೆಜಾನ್ ಹಿಂದಿಕ್ಕಿದ ಮೀಶೊ


ನವದೆಹಲಿ (ಪಿಟಿಐ): ಏಳು ದಿನಗಳ ಹಬ್ಬದ ಮಾರಾಟ ಅವಧಿಯಲ್ಲಿ ಇ-ಕಾಮರ್ಸ್ ಕಂಪನಿಗಳು ₹ 40 ಸಾವಿರ ಕೋಟಿ ಮೊತ್ತದ ವಹಿವಾಟು ನಡೆಸಿದ್ದು, ಶೇ 27ರಷ್ಟು ಬೆಳವಣಿಗೆ ಸಾಧಿಸಿವೆ.

ಹಬ್ಬದ ಮಾರಾಟದಲ್ಲಿ ಮಿಂತ್ರಾ, ಶಾಪ್ಸಿ ಒಳಗೊಂಡು ಫ್ಲಿಪ್‌ಕಾರ್ಟ್ ಸಮೂಹ ಮೊದಲ ಸ್ಥಾನ ಪಡೆದುಕೊಂಡಿದೆ ಎಂದು ರೆಡ್‌ಶೀರ್ ಸ್ಟ್ರ್ಯಾಟಜಿ ಕನ್ಸಲ್ಟಿಂಗ್ ಕಂಪನಿಯ ವರದಿ ತಿಳಿಸಿದೆ.

ಸಾಫ್ಟ್‌ಬ್ಯಾಂಕ್ ಒಡೆತನದ ಮೀಶೊ ಕಂಪನಿಯು ಅಮೆಜಾನ್ ಅನ್ನು ಹಿಂದಿಕ್ಕಿ ಎರಡನೇ ಸ್ಥಾನ ಪಡೆದುಕೊಂಡಿದೆ ಎಂದು ಅದು ಹೇಳಿದೆ.

ಸೆಪ್ಟೆಂಬರ್ 22 ರಿಂದ 30ರವರೆಗೆ ನಡೆದ ಹಬ್ಬದ ಮಾರಾಟದ ಅಂಕಿ-ಅಂಶವನ್ನು ಪರಿಗಣಿಸಿ ಈ ವರದಿ ನೀಡಿದೆ.

ಮಾರಾಟದ ಒಟ್ಟು ಮೌಲ್ಯದ ಲೆಕ್ಕದಲ್ಲಿ ಫ್ಲಿಪ್‌ಕಾರ್ಟ್ ಸಮೂಹದ ಮಾರುಕಟ್ಟೆ ಪಾಲು ಶೇ 49ರಷ್ಟು ಆಗಿದೆ. ಮೀಶೋ ಶೇ 21ರಷ್ಟು ಪಾಲು ಹೊಂದುವ ಮೂಲಕ ಎರಡನೇ ಸ್ಥಾನ ಪಡೆದುಕೊಂಡಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.



ಇದೊಂದು ಊಹಾತ್ಮಕ ವರದಿ ಎಂದು ಅಮೆಜಾನ್ ವಕ್ತಾರ ಹೇಳಿದ್ದಾರೆ. ದೃಢ ಮತ್ತು ಪಾರದರ್ಶಕ ಮಾದರಿಯನ್ನು ಅನುಸರಿಸಲಾಗಿಲ್ಲ ಎಂದಿದ್ದಾರೆ. 12 ದಿನಗಳ ಹಬ್ಬದ ಮಾರಾಟದಲ್ಲಿ ಇದೇ ಮೊದಲ ಬಾರಿಗೆ ಅತಿ ಹೆಚ್ಚಿನ ಆರ್ಡರ್ ಪಡೆದಿರುವುದಾಗಿ ಅಮೆಜಾನ್ ತಿಳಿಸಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್‌ನಿಂದ 'ಸ್ಮಾರ್ಟ್‌ಹಬ್ ವ್ಯಾಪಾರ್' ಆ್ಯಪ್

ಬೆಂಗಳೂರು: ಎಚ್‌ಡಿಎಫ್‌ಸಿ ಬ್ಯಾಂಕ್, ಸಣ್ಣ ಮತ್ತು ಮಧ್ಯಮ ಗಾತ್ರದ ವ್ಯಾಪಾರಿಗಳಿಗೆ 'ಸ್ಮಾರ್ಟ್‌ಹಬ್ ವ್ಯಾಪಾರ್' ಆ್ಯಪ್ ಬಿಡುಗಡೆ ಮಾಡಿದೆ.

ವ್ಯಾಪಾರಿಗಳ ನಿತ್ಯದ ವಹಿವಾಟಿನ ಅಗತ್ಯಗಳನ್ನು ಈಡೇರಿಸಲು ಪಾವತಿ ಮತ್ತು ಬ್ಯಾಂಕಿಂಗ್ ಪರಿಹಾರಗಳನ್ನು ಈ ಆ್ಯಪ್ ಒದಗಿಸುತ್ತದೆ ಎಂದು ತಿಳಿಸಿದೆ.

ಬ್ಯಾಂಕ್‌ನ ರಿಟೇಲ್ ಬ್ರ್ಯಾಂಚ್ ಬ್ಯಾಂಕಿಂಗ್‌ನ ಹಿರಿಯ ಉಪಾಧ್ಯಕ್ಷ ಎಸ್. ಪ್ರೇಮಾನಂದ ಮತ್ತು ಗಣೇಶ್ ದೇವರಾಜನ್ ಅವರು ಆ್ಯಪ್ ಬಿಡುಗಡೆ ಮಾಡಿದರು.

ಕಾರ್ಡ್, ಯುಪಿಐ, ಕ್ಯುಆರ್ ಕೋಡ್ ಸೇರಿದಂತೆ ಹಲವು ರೀತಿಯ ಪಾವತಿ ವ್ಯವಸ್ಥೆಗೆ ಇದು ಬೆಂಬಲಿಸುತ್ತದೆ. ವ್ಯಾಪಾರಿಗಳು ಪಾವತಿ ಲಿಂಕ್ ಅನ್ನು ಮೊಬೈಲ್ ಅಥವಾ ಇ-ಮೇಲ್ ಮೂಲಕ ಕಳುಹಿಸಿಯೂ ಹಣ ಪಡೆಯಬಹುದಾಗಿದೆ ಎಂದು ಹೇಳಿದೆ.

ಯುಪಿಐ ಮೂಲಕ ಪಡೆಯುವ ಹಣವು ನೇರವಾಗಿ ಬ್ಯಾಂಕ್ ಖಾತೆಗೆ ವರ್ಗಾವಣೆ ಆಗಲಿದೆ. ಇದರಿಂದ ವ್ಯಾಪಾರಿಗಳು ಮಾರಾಟಕ್ಕೆ ಸಂಬಂಧಿಸಿದ ವಿವರಗಳನ್ನು ತಕ್ಷಣಕ್ಕೆ ಪಡೆಯಲು ಅನುಕೂಲ ಆಗಲಿದೆ. ಆಂಡ್ರಾಯ್ಡ್ ಮತ್ತು ಐಫೋನ್‌ಗೆ ಈ ಆ್ಯಪ್ ಬೆಂಬಲಿಸುತ್ತದೆ.

ನಿಶ್ಚಿತ ಠೇವಣಿ ತೆರೆಯುವುದು, ಪೂರ್ವ ಅನುಮೋದಿತ ಸಾಲ ಪಡೆಯುವುದು ಸೇರಿದಂತೆ ಇನ್ನೂ ಹಲವು ಬ್ಯಾಂಕಿಂಗ್ ಸೇವೆಗಳನ್ನೂ ಪಡೆಯಬಹುದಾಗಿದೆ. ಹಣ ವರ್ಗಾವಣೆ ಆಗಿದೆ ಎನ್ನುವುದನ್ನು ಧ್ವನಿ ಆಧಾರಿತ ಸೂಚನೆಯು ಖಾತರಿಪಡಿಸಲಿದೆ. ಇದಕ್ಕಾಗಿ ಪ್ರತ್ಯೇಕವಾದ ಸಾಧನ ಹೊಂದುವ ಅಗತ್ಯ ಇಲ್ಲ ಎಂದು ಬ್ಯಾಂಕ್ ತಿಳಿಸಿದೆ.

ಅಣ್ವಸ್ತ್ರ ದಾಳಿ ನಡೆಸಿದರೆ ಪುಟಿನ್ ಬದುಕುಳಿಯಲ್ಲ: ಝೆಲೆನ್‌ಸ್ಕಿ

ಕ್ಯಾನ್ ಬೆರಾ (ಎಪಿ): 'ಒಂದು ವೇಳೆ ಅಣ್ವಸ್ತ್ರ ದಾಳಿ ನಡೆಸಿದ್ದೇ ಆದಲ್ಲಿ, ಜಗತ್ತು ಎಂದಿಗೂ ತನ್ನನ್ನು ಕ್ಷಮಿಸುವುದಿಲ್ಲ ಎಂಬುದು ಪುಟಿನ್‌ಗೆ ಮನದಟ್ಟಾಗಿದೆ. ಅಲ್ಲದೇ, ಅಣ್ವಸ್ತ್ರ ದಾಳಿ ನಡೆದಲ್ಲಿ, ಪುಟಿನ್ ಬದುಕುಳಿಯುವುದಿಲ್ಲ' ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.

ಸಿಡ್ನಿಯಲ್ಲಿರುವ ಲೋವಿ ಇನ್‌ಸ್ಟಿಟ್ಯೂಟ್ ಇಂಟರ್‌ನ್ಯಾಷನಲ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಉದ್ದೇಶಿಸಿ ಗುರುವಾರ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಮಾತನಾಡಿದರು.

'ರಷ್ಯಾದ ಹಿಡಿತದಿಂದ ತನ್ನ ಪ್ರದೇಶಗಳನ್ನು ಮರುವಶಪಡಿಸಿಕೊಂಡಿರುವ ಕಾರಣಕ್ಕೆ ಉಕ್ರೇನ್ ಮೇಲೆ ಅಣ್ವಸ್ತ್ರ ದಾಳಿಯ ಅಪಾಯ ಹೆಚ್ಚಾಗಿದೆ ಎಂದು ಹೇಳುವುದು ಕಷ್ಟ. ಆದರೆ, ಅಂಥ ದಾಳಿ ನಡೆದಿದ್ದೇ ಆದಲ್ಲಿ, ತನ್ನ ಪ್ರಾಣ ಸೇರಿದಂತೆ ಏನನ್ನೂ ರಕ್ಷಿಸಿಕೊಳ್ಳಲು ಪುಟಿನ್‌ಗೆ ಸಾಧ್ಯವಾಗುವುದಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಅವರು ಉತ್ತರಿಸಿದರು.

ರಷ್ಯಾ ಆಕ್ರಮಿತ ಪ್ರದೇಶಗಳ ಮೇಲೆ ಹಿಡಿತ ಸಾಧಿಸುವ ಉಕ್ರೇನ್ ಪ್ರಯತ್ನವನ್ನು ತಡೆಯಲು ಅಣ್ವಸ್ತ್ರ ಬಳಸಲು ತಾನು ಹಿಂಜರಿಯುವುದಿಲ್ಲ ಎಂದು ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಇತ್ತೀಚೆಗೆ ಎಚ್ಚರಿಸಿದ್ದರು. ಹಾಗಾಗಿ ಝೆಲೆನ್‌ಸ್ಕಿ ಹೇಳಿಕೆಗೆ ಮಹತ್ವ ಬಂದಿದೆ.

ರಾಕೆಟ್ ದಾಳಿ: ಒಬ್ಬ ಸಾವು

ಕೀವ್: ದಕ್ಷಿಣ ಉಕ್ರೇನ್ ನಗರ ಝಪೋರಿಜಜಿಯಾದ ಜನವಸತಿ ಪ್ರದೇಶಗಳ ಮೇಲೆ ರಷ್ಯಾ ಪಡೆಗಳು ಗುರುವಾರ ಏಳು ರಾಕೆಟ್‌ಗಳಿಂದ ದಾಳಿ ನಡೆಸಿವೆ. ಈ ಘಟನೆಯಲ್ಲಿ ಒಬ್ಬ ಮೃತಪಟ್ಟಿದ್ದು, ಏಳು ಜನರು ಕಟ್ಟಡಗಳ ಅವಶೇಷಗಳಡಿ ಸಿಲುಕಿದ್ದಾರೆ ಎಂದು ಮೂಲಗಳು ಹೇಳಿವೆ.

'ರಷ್ಯಾದ ಹಿಡಿತದಿಂದ ಮತ್ತೆ ಮೂರು ಗ್ರಾಮಗಳನ್ನು ಮರು ವಶಪಡಿಸಿಕೊಳ್ಳಲಾಗಿದೆ' ಎಂಬುದಾಗಿ ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಅವರು ಘೋಷಿಸಿದ ಕೆಲವೇ ಗಂಟೆಗಳ ನಂತರ ರಷ್ಯಾ ರಾಕೆಟ್‌ಗಳಿಂದ ದಾಳಿ ನಡೆಸಿದೆ.

ಫ್ರೆಂಚ್ ಲೇಖಕಿ ಅನಿ ಆ್ಯನೊಗೆ ನೊಬೆಲ್ ಗೌರವ



ಸ್ಟಾಕ್‌ಹೋಮ್ (ಎಪಿ): ಫ್ರೆಂಚ್ ಲೇಖಕಿ ಅನಿ ಆ್ಯನೊ ಅವರಿಗೆ ಸಾಹಿತ್ಯ ಕ್ಷೇತ್ರದಲ್ಲಿನ ಸಾಧನೆಗಾಗಿ ಈ ವರ್ಷದ ನೊಬೆಲ್ ಪುರಸ್ಕಾರ ಒಲಿದಿದೆ.

ಸ್ವೀಡನ್‌ನ ಸ್ಟಾಕ್‌ಹೋಮ್‌ನಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಸ್ವೀಡನ್ ಅಕಾಡೆಮಿಯ ಆಜೀವ ಕಾರ್ಯದರ್ಶಿ ಮ್ಯಾಟ್ಸ್ ಮಲ್ಮ್ ಅವರು 81 ವರ್ಷದ ಆ್ಯನೊ ಹೆಸರನ್ನು ಪ್ರಕಟಿಸಿದರು.

'ಅನಿ ಅವರ ಬರಹಗಳಲ್ಲಿ ವಸ್ತುನಿಷ್ಠತೆ ಹಾಗೂ ಭಾವತೀವ್ರತೆಯನ್ನು ಕಾಣಬಹುದು. ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ, ಗರ್ಭಪಾತ, ಅನಾರೋಗ್ಯ ಹಾಗೂ ತನ್ನ ಪಾಲಕರ ಸಾವಿನ ನಂತರ ಅನುಭವಿಸಿದ ಯಾತನೆ ಗಳನ್ನು ಅವರು ತಮ್ಮ ಕೃತಿಗಳಲ್ಲಿ ಹಿಡಿದಿಟ್ಟಿದ್ದಾರೆ' ಎಂದು ನೊಬೆಲ್ ಸಮಿತಿ ತಿಳಿಸಿದೆ.

ಭಾರತೀಯ ವಿದ್ಯಾರ್ಥಿ ಹತ್ಯೆ

ವಾಷಿಂಗ್ಟನ್ (ಪಿಟಿಐ); ಭಾರತೀಯ ಮೂಲದ 20 ವರ್ಷದ ವಿದ್ಯಾರ್ಥಿ ಅಮೆರಿಕಾದ ಇಂಡಿಯಾನಾದಲ್ಲಿರುವ ವಸತಿ ನಿಲಯದಲ್ಲಿ ಕೊಲೆಯಾಗಿದ್ದಾನೆ. ಆತನ ಜತೆಗಿದ್ದ ಕೊರಿಯನ್ ವಿದ್ಯಾರ್ಥಿಯೊಬ್ಬನನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಮಾಧ್ಯಮ ವರದಿಗಳು ತಿಳಿಸಿವೆ.

ಪರ್ಡ್ಯೂ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿದ್ದ ಇಂಡಿಯಾನಾಪೊಲೀಸ್‌ನ ವರುಣ್ ಮನೀಶ್ ಛೆಡಾ ಕೊಲೆಯಾದ ವಿದ್ಯಾರ್ಥಿ. ವರುಣ್ ಶವ ಕ್ಯಾಂಪಸ್‌ನ ಪಶ್ಚಿಮ ಅಂಚಿನಲ್ಲಿರುವ ಮ್ಯಾಕ್‌ಕಚನ್ ಹಾಲ್‌ನಲ್ಲಿ ಪತ್ತೆಯಾಗಿದೆ



ದುಷ್ಕರ್ಮಿಗಳಿಂದ 18 ಮಂದಿ ಹತ್ಯೆ

ಮೆಕ್ಸಿಕೊ ಸಿಟಿ (ಎಪಿ): ದಕ್ಷಿಣ ಮೆಕ್ಸಿಕೊ ರಾಜ್ಯ ಗೆರೆರೋದ ಸ್ಯಾನ್ ಮಿಗುಯೆಲ್ ಟೊಟೊಲಾಪನ್ ಪಟ್ಟಣದಲ್ಲಿ ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸಿ ಮೇಯರ್, ಅವರ ತಂದೆ ಹಾಗೂ ಇತರ 16 ಮಂದಿಯನ್ನು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಸಿಟಿ ಹಾಲ್‌ನಲ್ಲಿ ಗುಂಡಿನ ದಾಳಿ ನಡೆದಿದ್ದು, ಇಬ್ಬರು ಗಾಯಗೊಂಡಿದ್ದಾರೆ ಎಂದೂ ಹೇಳಿದ್ದಾರೆ. ಸ್ಯಾನ್ ಮಿಗುಯೆಲ್ ಟೊಟೊಲಾಪನ್ ಮೆಕ್ಸಿಕೊದ ಅತ್ಯಂತ ಸಂಘರ್ಷಪೀಡಿತ ಪ್ರದೇಶಗಳಲ್ಲಿ ಒಂದಾಗಿದೆ. ಮಾದಕ ವಸ್ತುಗಳ ಕಳ್ಳಸಾಗಣೆದಾರರು ಇಲ್ಲಿ ಸಕ್ರಿಯರಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪಾಕ್‌ನಲ್ಲಿ ಕಟ್ಟೆಚ್ಚರ

ಇಸ್ಲಾಮಾಬಾದ್ (ಪಿಟಿಐ): 'ತೆಹ್ರೀಕ್-ಐ-ತಾಲಿಬಾನ್ ಪಾಕಿಸ್ತಾನ (ಟಿಟಿಪಿ) ಸಂಘಟನೆಯು ದೇಶದಲ್ಲಿ ಭಯೋತ್ಪಾದನಾ ಕೃತ್ಯ ನಡೆಸುವ ಸಾಧ್ಯತೆ ಇರುವುದರಿಂದ ಪಾಕಿಸ್ತಾನ ಸರ್ಕಾರವು ದೇಶದಾದ್ಯಂತ ಕಟ್ಟೆಚ್ಚರ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದೆ' ಎಂದು ಮಾಧ್ಯಮವೊಂದು ಗುರುವಾರ ವರದಿ ಮಾಡಿದೆ. ಈ ಹಿನ್ನೆಲೆಯಲ್ಲಿ ವ್ಯಾಪಕ ಭದ್ರತೆ ಕೈಗೊಳ್ಳಲಾಗಿದೆ.

ದುಬೈ: ಹಿಂದೂ ದೇವಾಲಯ ಉದ್ಘಾಟನೆ

ದುಬೈ (ಪಿಟಿಐ): ಸಹಿಷ್ಣುತೆ, ಶಾಂತಿ ಮತ್ತು ಸೌಹಾರ್ದ ಸಂದೇಶವನ್ನು ಸಾರುವ ಭಾರತೀಯ ಮತ್ತು ಅರೇಬಿಕ್ ವಾಸ್ತುಶಿಲ್ಪದ ವಿನ್ಯಾಸವನ್ನೊಳಗೊಂಡ ಭವ್ಯವಾದ ಹಿಂದೂ ದೇವಾಲಯವನ್ನು ಇಲ್ಲಿನ ಜೆಬೆಲ್ ಅಲಿ ಗ್ರಾಮದಲ್ಲಿ ಉದ್ಘಾಟಿಸಲಾಯಿತು.

ಸಂಯುಕ್ತ ಅರಬ್ ಒಕ್ಕೂಟದ (ಯುಎಇ) 'ಆರಾಧನಾ ಗ್ರಾಮ'ವೆಂದೇ ಕರೆಯಲಾಗುವ ಈ ಗ್ರಾಮದಲ್ಲಿ ನೂತನ ದೇವಾಲಯವನ್ನು ಯುಎಇನ ಭಕ್ತರಿಗಾಗಿ ತೆರೆಯಲಾಗಿದೆ.

'ಸಂಸ್ಕೃತಿ ಸಚಿವ ಶೇಖ್ ನಹ್ಯಾನ್ ಬಿನ್ ಮುಬಾರಕ್ ಅಲ್ ನಹ್ಯಾನ್ ಮತ್ತು ಭಾರತೀಯ ರಾಯಭಾರಿ ಸಂಜಯ್ ಸುಧೀರ್ ದುಬೈನಲ್ಲಿ ನೂತನ ಹಿಂದೂ ದೇವಾಲಯವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ರಾಯಭಾರಿ ಸಂಜಯ್ ಅವರು ಸಂಯುಕ್ತ ಅರಬ್ ಒಕ್ಕೂಟದಲ್ಲಿರುವ 30.5ಲಕ್ಷ ಭಾರತೀಯ ವಲಸಿಗರಿಗೆ ನೀಡಿದ ಬೆಂಬಲಕ್ಕಾಗಿ ಯುಎಇ ಸರ್ಕಾರಕ್ಕೆ ಧನ್ಯವಾದ ಅರ್ಪಿಸಿದರು' ಎಂದು ಅಬುಧಾಬಿಯ ಭಾರತೀಯ ರಾಯಭಾರ ಕಚೇರಿಯು ಟ್ವೀಟ್ ಮಾಡಿದೆ.



ದುಬೈನಲ್ಲಿ ಉದ್ಘಾಟನೆಗೊಂಡಿರುವ ಹಿಂದೂ ದೇವಾಲಯ –ಪಿಟಿಐ ಚಿತ್ರ

'ದುಬೈನ ನೂತನ ಹಿಂದೂ ದೇವಾಲಯದ ಉದ್ಘಾಟನೆಯ ಮೂಲಕ ವಿವಿಧ ಧರ್ಮಗಳ ಜನರನ್ನು ಒಗ್ಗೂಡಿಸುವ ಶಾಂತಿ, ಸಹಬಾಳ್ವೆಯ ಸಂದೇಶವನ್ನು ಒಳಗೊಂಡಿದೆ' ಎಂದು 'ಖಲೀಜ್ ಟೈಮ್ಸ್' ಪತ್ರಿಕೆ ವರದಿ ಮಾಡಿದೆ.

ಗ್ರೀಸ್: ದೋಣಿ ಮುಳುಗಿ 21 ಮಂದಿ ಸಾವು

ಕಿತೀರಾ, ಗ್ರೀಸ್ (ಎಪಿ): ಗ್ರೀಕ್ ದ್ವೀಪದ ಬಳಿ ವಲಸಿಗರಿದ್ದ ಎರಡು ದೋಣಿಗಳು ಮುಳುಗಡೆಯಾಗಿ 21 ಮಂದಿ ಮೃತಪಟ್ಟಿದ್ದು, ಹಲವರು ನಾಪತ್ತೆಯಾಗಿದ್ದಾರೆ ಎಂದು ಲೆಸ್ಬೋಸ್‌ನ ಕರಾವಳಿ ರಕ್ಷಣಾ ಪಡೆಯ ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಗ್ರೀಕ್ ದ್ವೀಪದ ನಿವಾಸಿಗಳು ರಕ್ಷಣಾ ಕಾರ್ಯಾಚರಣೆಯಲ್ಲಿ ಪಾಲ್ಗೊಂಡು ಸಹಕಾರ ನೀಡಿದ್ದಾರೆ. ನಾಪತ್ತೆಯಾದವರ ಪತ್ತೆಗೆ ಕಾರ್ಯಾಚರಣೆ ನಡೆದಿದೆ ಎಂದಿದ್ದಾರೆ.

ದೋಣಿಗಳು ಬಂಡೆಗೆ ಡಿಕ್ಕಿ ಹೊಡೆದು ಮುಳುಗಡೆಯಾಗಿವೆ. ಕೆಲವರು ಬಂಡೆಯನ್ನು ಹತ್ತಿ ಮೇಲೆ ಬಂದಿದ್ದಾರೆ. ಇವರಿಗೆ ಸ್ಥಳೀಯರು ಸಹಾಯ ಮಾಡಿದ್ದಾರೆ ಎಂದೂ ಹೇಳಿದ್ದಾರೆ.

ಇರಾನ್, ಇರಾಕ್ ಮತ್ತು ಅಫ್ಗಾನಿಸ್ತಾನದ 80 ಮಂದಿಯನ್ನು ರಕ್ಷಣೆ ಮಾಡಲಾಗಿದೆ. ಆಫ್ರಿಕಾದ 16 ಮಂದಿ ಯುವತಿಯರ, ಒಬ್ಬ ಯುವಕನ ಮೃತದೇಹ ಲೆಸ್ಬೋಸ್ ಬಳಿ ಪತ್ತೆಯಾಗಿವೆ. 11 ಮಂದಿ ನಾಪತ್ತೆಯಾಗಿದ್ದಾರೆ ಎಂದೂ ವಿವರಿಸಿದ್ದಾರೆ.

ಕಂಠೀರವ ಕ್ರೀಡಾಂಗಣದಲ್ಲಿ ಪ್ರೊ ಕಬಡ್ಡಿ ಹಬ್ಬ ಇಂದಿನಿಂದ: ಮೊದಲ ದಿನವೇ ದಕ್ಷಿಣ ಡರ್ಬಿ

ಬೆಂಗಳೂರು ಬುಲ್ಸ್‌ಗೆ ಟೈಟನ್ಸ್ ಸಡ್ಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯದಶಮಿಯ ಸಂಭ್ರಮದಲ್ಲಿ ಮಿಂದೆದ್ದಿರುವ ಉದ್ಯಾನನಗರಿಯಲ್ಲಿ ಶುಕ್ರವಾರದಿಂದ ಕಬಡ್ಡಿ ಹಬ್ಬ ಆರಂಭವಾಗಲಿದೆ. ಶ್ರೀಕಂಠೀರವ ಕ್ರೀಡಾಂಗಣದ ಒಳಾಂಗಣದಲ್ಲಿ ವೇದಿಕೆ ಸಜ್ಜಾಗಿದೆ.

ಕೋವಿಡ್ ಉಪಟಳ ನಿಯಂತ್ರಣದಲ್ಲಿರುವುದರಿಂದ ಈ ಬಾರಿ ಪಂದ್ಯಗಳ ವೀಕ್ಷಣೆಗೆ ಪ್ರೇಕ್ಷಕರಿಗೆ ಪ್ರವೇಶ ನೀಡಲಾಗುತ್ತಿದೆ. ಆನ್‌ಲೈನ್ ಮೂಲಕ ಟಿಕೆಟ್ ಕೂಡ ಬಿಕರಿಯಾಗುತ್ತಿವೆ. ಒಟ್ಟು 12 ತಂಡಗಳು ಆಡಲಿವೆ. ಟೂರ್ನಿಯು ಡಬಲ್ ರೌಂಡ್‌ರಾಬಿನ್ ಲೀಗ್ ಹಾಗೂ ಪ್ಲೇ ಆಫ್ ಮಾದರಿಯಲ್ಲಿ ನಡೆಯಲಿದೆ.

ಹೋದ ಬಾರಿ ಬೆಂಗಳೂರಿನಲ್ಲಿಯೇ ಟೂರ್ನಿ ನಡೆದಿತ್ತು. ಆದರೆ ಆಗ ಕೋವಿಡ್ ತಡೆಗಾಗಿ ಬಯೋಬಬಲ್ ವ್ಯವಸ್ಥೆ ಇದ್ದ ಕಾರಣ ಪ್ರೇಕ್ಷಕರಿಗೆ ಅವಕಾಶ ಇರಲಿಲ್ಲ.

ಈ ಬಾರಿ ಟೂರ್ನಿಯ ಉದ್ಘಾಟನೆ ಪಂದ್ಯದಲ್ಲಿ ಹಾಲಿ ಚಾಂಪಿಯನ್ ದಬಂಗ್ ಡೆಲ್ಲಿ ತಂಡವು ಯು ಮುಂಬಾ ಬಳಗವನ್ನು ಎದುರಿಸಲಿದೆ. ಎರಡನೇ ಪಂದ್ಯದಲ್ಲಿ ಬೆಂಗಳೂರು ಬುಲ್ಸ್ ತಂಡವು ತೆಲುಗು ಟೈಟನ್ಸ್ ಎದುರು ತನ್ನ ಅಭಿಯಾನ ಆರಂಭಿಸಲಿದೆ. ಈ ಬಾರಿ ಬುಲ್ಸ್ ತಂಡವನ್ನು ಡಿಫೆಂಡರ್ ಮಹೇಂದ್ರಸಿಂಗ್ ಮುನ್ನಡೆಸುವರು.

ಕಳೆದ ಕೆಲವು ಋತುಗಳಲ್ಲಿ ತಂಡದ ಗೆಲುವಿನ ರೂವಾರಿಯಾಗಿದ್ದ ಪವನ್ ಶೆರಾವತ್ ಈ ಸಲ ತಮಿಳ್ ತಲೈವಾಸ್ ತಂಡದ ನಾಯಕತ್ವ ವಹಿಸಿದ್ದಾರೆ. ಆದ್ದರಿಂದ ಬೆಂಗಳೂರು ತಂಡವು ಹೊಸ ಪ್ರತಿಭೆಗಳ ಮೇಲೆ ಹೆಚ್ಚು ಅವಲಂಬಿತವಾಗಿದೆ. ರೇಡರ್ ಹರ್ಮನ್ ಜೀತ್ ಸಿಂಗ್, ವಿಕಾಶ್ ಖಂಡೋಲಾ, ಲಾಲ್ ಮೊಹರ್, ಮೋರೆ ಜಿ, ಆಲ್‌ರೌಂಡರ್ ಸಚಿನ್ ನರ್ವಾಲ್ ಅವರ ಮೇಲೆ ಭರವಸೆ ಇದೆ.

ಟೈಟನ್ಸ್ ತಂಡದ ರೇಡರ್ ಸಿದ್ಧಾರ್ಥ್ ದೇಸಾಯಿ, ಅಮನ್ ಕಡಿಯಾನ್ ಅವರಿಗೆ ತಡೆಯೊಡ್ಡುವ ಸವಾಲು ಬುಲ್ಸ್ ರಕ್ಷಣಾ ಪಡೆಯ ಮೇಲೆ ಇದೆ.


ಬೆಂಗಳೂರಿನಲ್ಲಿ ಗುರುವಾರ ನಡೆದ ಪ್ರೊ ಕಬಡ್ಡಿ ಒಂಬತ್ತನೇ ಆವೃತ್ತಿಯ ಟ್ರೋಫಿ ಅನಾವರಣ ಕಾರ್ಯಕ್ರಮದಲ್ಲಿ 12 ತಂಡಗಳ ನಾಯಕರು; (ಎಡದಿಂದ ಬಲಕ್ಕೆ) ಹಿಂದಿನ ಸಾಲು: ಚಂದ್ರನ್ ರಂಜಿತ್ (ಗುಜರಾತ್ ಜೈಂಟ್ಸ್), ರವಿಂದರ್ ಪಹಲ್ (ತೆಲುಗು ಟೈಟನ್ಸ್), ಜೋಗಿಂದರ್ ನರ್ವಾಲ್ (ಹರಿಯಾಣ ಸ್ಟೀಲರ್ಸ್), ನಿತೇಶ್ ಕುಮಾರ್ (ಯುಪಿ ಯೋಧಾಸ್), ಪವನ್ ಶೆರಾವತ್ (ತಮಿಳ್ ತಲೈವಾಸ್), ಸುರೀಂದರ್ ಸಿಂಗ್ (ಯುಮುಂಬಾ), ಮುಂದಿನ ಸಾಲು: ಸುನಿಲ್ ಕುಮಾರ್ (ಜೈಪುರ್ ಪಿಂಕ್ ಪ್ಯಾಂಥರ್ಸ್), ಮಣಿಂದರ್ ಸಿಂದ್ (ಬೆಂಗಾಲ್ ವಾರಿಯರ್ಸ್), ಮಹೇಂದ್ರ ಸಿಂಗ್ (ಬೆಂಗಳೂರು ಬುಲ್ಸ್), ನೀರಜ್ ಕುಮಾರ್ (ಪಟ್ನಾ ಪೈರೆಟ್ಸ್), ಅಸ್ಲಂ ಇನಾಂದರ್ (ಪುಣೇರಿ ಪಲ್ಟನ್–ಸ್ಟಾರ್ ಪ್ಲೇಯರ್), ನವೀನ್ ಕುಮಾರ್ (ದಬಂಗ್ ಡೆಲ್ಲಿ) –ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್

ಪ್ರಮುಖ ಅಂಶಗಳು

12 ಟೂರ್ನಿಯಲ್ಲಿ ಆಡಲಿರುವ ತಂಡಗಳು

41 ಬೆಂಗಳೂರಿನಲ್ಲಿ ನಡೆಯಲಿರುವ ಲೀಗ್ ಪಂದ್ಯಗಳು

66 ಮೊದಲ ಹಂತದಲ್ಲಿ (ಅ.7ರಿಂದ ನ.7) ನಡೆಯಲಿರುವ ಪಂದ್ಯಗಳ ಸಂಖ್ಯೆ

3 ಪಂದ್ಯಗಳು ನಡೆಯಲಿರುವ ನಗರಗಳು

ಪ್ರೊ ಕಬಡ್ಡಿ ವಿಜೇತರು

ಆವೃತ್ತಿ	ವಿಜೇತ	ರನ್ನರ್ಸ್‌ಅಪ್
1	ಜೈಪುರ ಪಿಂಕ್ ಪ್ಯಾಂಥರ್ಸ್	ಯುಮುಂಬಾ
2	ಯು ಮುಂಬಾ	ಬೆಂಗಳೂರು ಬುಲ್ಸ್
3	ಪಟ್ನಾ ಪೈರೆಟ್ಸ್	ಯು ಮುಂಬಾ
4	ಪಟ್ನಾ ಪೈರೆಟ್ಸ್	ಜೈಪುರ ಪಿಂಕ್ ಪ್ಯಾಂಥರ್ಸ್
5	ಪಟ್ನಾ ಪೈರೆಟ್ಸ್	ಗುಜರಾತ್ ಫಾರ್ಚೂನ್ ಜೈಂಟ್ಸ್
6	ಬೆಂಗಳೂರು ಬುಲ್ಸ್	ಗುಜರಾತ್ ಫಾರ್ಚೂನ್ ಜೈಂಟ್ಸ್
7	ಬೆಂಗಾಲ್ ವಾರಿಯರ್ಸ್	ದಬಂಗ್ ಡೆಲ್ಲಿ
8	ದಬಂಗ್ ಡೆಲ್ಲಿ	ಪಟ್ನಾ ಪೈರೆಟ್ಸ್

ಬೆಂಗಳೂರು ಬುಲ್ಸ್ ಪಂದ್ಯಗಳು

ದಿನಾಂಕ	ಎದುರಾಳಿ
ಅ.7	ತೆಲುಗು ಟೈಟನ್ಸ್
ಅ.9	ಪುಣೇರಿ ಪಲ್ಟನ್
ಅ.12	ಬೆಂಗಾಲ್ ವಾರಿಯರ್ಸ್
ಅ.16	ಯು.ಪಿ.ಯೋಧಾಸ್
ಅ.19	ತಮಿಳ್ ತಲೈವಾಸ್
ಅ.22	ಯು ಮುಂಬಾ
ಅ.23	ಪಟ್ನಾ ಪೈರೆಟ್ಸ್
ಅ.29	ದಬಂಗ್ ಡೆಲ್ಲಿ
ಅ.30	ಜೈಪುರ್ ಪಿಂಕ್ ಪ್ಯಾಂಥರ್ಸ್
ನ.1	ಹರಿಯಾಣ
ನ.6	ಗುಜರಾತ್

* ಅ.7ರಿಂದ 23ರವರೆಗಿನ ಪಂದ್ಯಗಳು ಬೆಂಗಳೂರಿನಲ್ಲಿ ಹಾಗೂ ಅ 23 ರಿಂದ ನ 6ರವರೆಗೆ ಪುಣೆಯಲ್ಲಿ ನಡೆಯಲಿವೆ.

ಇಂದಿನ ಪಂದ್ಯಗಳು

ದಬಂಗ್ ಡೆಲ್ಲಿ– ಯು ಮುಂಬಾ (ರಾತ್ರಿ 7.30ರಿಂದ)

ಬೆಂಗಳೂರು ಬುಲ್ಸ್–ತೆಲುಗು ಟೈಟನ್ಸ್ (ರಾತ್ರಿ 8.30ರಿಂದ)

ಜೈಪುರ ಪಿಂಕ್‌ಪ್ಯಾಂಥರ್ಸ್– ಯು.ಪಿ. ಯೋಧಾ (ರಾತ್ರಿ 9.30)

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಬಲಾಬಲ

19 ಪಂದ್ಯ

12 ಬೆಂಗಳೂರು ಜಯ

3 ತೆಲುಗು ಜಯ

4 ಟೈ

ಭಾರತ–ಪಾಕ್ ಮುಖಾಮುಖಿ ಇಂದು

ಏಷ್ಯಾ ಕಪ್ ಮಹಿಳಾ ಟಿ20: ಪ್ರಬಲ ಪೈಪೋಟಿ ನಿರೀಕ್ಷೆ

ಸಿಲ್ಹೆಟ್, ಬಾಂಗ್ಲಾದೇಶ (ಪಿಟಿಐ): ಏಷ್ಯಾಕಪ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಸತತ ಮೂರು ಪಂದ್ಯಗಳಲ್ಲಿ ಜಯಿಸಿ ಭರ್ತಿ ಆತ್ಮವಿಶ್ವಾಸದಲ್ಲಿರುವ ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ಬಳಗವು ಶುಕ್ರವಾರ ಪಾಕಿಸ್ತಾನದೆದುರು ಕಣಕ್ಕಿಳಿಯಲಿದೆ.

ಶ್ರೀಲಂಕಾ, ಮಲೇಷ್ಯಾ ಹಾಗೂ ಯುನೈಟೆಡ್ ಅರಬ್ ಎಮಿರೇಟ್ಸ್ ತಂಡಗಳ ಎದುರು ಸುಲಭ ಜಯ ಸಾಧಿಸಿರುವ ಭಾರತಕ್ಕೆ ಬಿಸ್ಮಾ ಮರೂಫ್ ಬಳಗವು ಕಠಿಣ ಸವಾಲೊಡ್ಡುವ ಸಾಧ್ಯತೆ ಇದೆ. ಪಾಕ್ ತಂಡವು ಆಡಿರುವ ಮೂರು ಪಂದ್ಯಗಳಲ್ಲಿ ಎರಡರಲ್ಲಿ ಗೆದ್ದಿದೆ. ಥಾಯ್ಲೆಂಡ್ ವಿರುದ್ಧ ಸೋತಿತ್ತು. ಈ ನಿರಾಶೆಯಿಂದ ಮೇಲೆದ್ದು ಬರುವ ಛಲದಲ್ಲಿ ಪಾಕ್ ವನಿತೆಯರಿದ್ದಾರೆ.

ಭಾರತ ಹಾಗೂ ಪಾಕ್ ತಂಡಗಳು ಕ್ರಮವಾಗಿ ಮೊದಲ ಹಾಗೂ ಎರಡನೇ ಸ್ಥಾನದಲ್ಲಿವೆ. ಇತ್ತೀಚೆಗೆ ಇಂಗ್ಲೆಂಡ್‌ನಲ್ಲಿ ಸರಣಿ ಜಯಿಸಿರುವ ಕೌರ್ ಬಳಗವು ಏಷ್ಯಾ ಕಪ್ ಗೆಲ್ಲುವ ನೆಚ್ಚಿನ ತಂಡವೆನಿಸಿದೆ. ಸಾಂಪ್ರದಾಯಿಕ ಎದುರಾಳಿ ಪಾಕ್ ವಿರುದ್ಧ ಜಯಿಸಿದರೆ ನಾಕೌಟ್ ಹಂತ ತಲುಪುವ ಹಾದಿ ಸುಲಭವಾಗಲಿದೆ.

ಆದರೆ ಭಾರತದ ಆರಂಭಿಕ ಬ್ಯಾಟರ್ ಶಫಾಲಿ ವರ್ಮಾ ಲಯದಲ್ಲಿ ಇಲ್ಲ. ಅವರು ಸ್ಮೃತಿ ಮಂದಾನ ಅವರೊಂದಿಗೆ ಉತ್ತಮ ಆರಂಭ ನೀಡಿದರೆ ಮಧ್ಯಕ್ರಮಾಂಕದಲ್ಲಿ ಹರ್ಮನ್ ಪ್ರೀತ್ ಹಾಗೂ ಜೆಮಿಮಾ ಅವರು ಉತ್ತಮ ಲಯದಲ್ಲಿದ್ದಾರೆ. ಬೌಲಿಂಗ್‌ನಲ್ಲಿ ರಾಧಾ ಯಾದವ್, ಪೂಜಾ ಹಾಗೂ ರೇಣುಕಾ ಅವರ ಮೇಲೆ ಭರವಸೆಯ ಕಂಗಳು ನೆಟ್ಟಿವೆ.

ಪಂದ್ಯ ಆರಂಭ: ಮಧ್ಯಾಹ್ನ 1


ಬಿಸ್ಮಾ ಮರೂಫ್


ಹರ್ಮನ್ ಪ್ರೀತ್ ಕೌರ್

ಜೆಎಸ್‌ಸಿಗೆ ಜಯ

ಬೆಂಗಳೂರು: ಜೆಎಸ್‌ಸಿ ತಂಡ ಇಲ್ಲಿ ನಡೆಯುತ್ತಿರುವ ರಾಜ್ಯ 18 ವರ್ಷದೊಳಗಿನವರ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪ್ರೀ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಜೆಎಸ್‌ಸಿ 78–48 ರಲ್ಲಿ ಕೋರಮಂಗಲ ಸ್ಪೋರ್ಟ್ಸ್ ಕ್ಲಬ್ ತಂಡವನ್ನು ಮಣಿಸಿತು.

ಇತರ ಪಂದ್ಯಗಳಲ್ಲಿ ವಿಬಿಸಿ ಮಂಡ್ಯ 79– 77 ರಲ್ಲಿ ಬಿ.ಸಿ ಬ್ಯಾಸ್ಕೆಟ್‌ಬಾಲ್ ಕ್ಲಬ್ ವಿರುದ್ಧ; ಡಿವೈಇಎಸ್ ಬೆಂಗಳೂರು 66–51 ರಲ್ಲಿ ದೇವಾಂಗ ಯೂನಿಯನ್ ವಿರುದ್ಧ; ವೈಎಂಎಂಎ 58–26 ರಲ್ಲಿ ಐಬಿಬಿಸಿ ವಿರುದ್ಧ ಗೆಲುವು ಸಾಧಿಸಿತು.

ನೇಪಾಳ ಕ್ರಿಕೆಟಿಗ ಲಾಮಿಚಾನೆ ಪೊಲೀಸ್ ವಶಕ್ಕೆ

ಕಠ್ಮಂಡು (ಎಎಫ್‌ಪಿ): ಅತ್ಯಾಚಾರದ ಆರೋಪ ಎದುರಿಸುತ್ತಿರುವ ನೇಪಾಳದ ಕ್ರಿಕೆಟಿಗ ಸಂದೀಪ್ ಲಾಮಿಚಾನೆ ಅವರನ್ನು ನೇಪಾಳ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಸುಮಾರು ಒಂದು ತಿಂಗಳ ಹಿಂದೆ ಲಾಮಿಚಾನೆ ವಿರುದ್ಧ 17 ವರ್ಷದ ಬಾಲಕಿಯೊಬ್ಬಳು ದೂರು ನೀಡಿದ್ದರು. ಆ ಸಂದರ್ಭದಲ್ಲಿ ವೆಸ್ಟ್ ಇಂಡೀಸ್‌ನಲ್ಲಿ ಫ್ರ್ಯಾಂಚೈಸಿ ಲೀಗ್ ಟೂರ್ನಿಯಲ್ಲಿ ಆಡಲು ತೆರಳಿದ್ದ ಲಾಮಿಚಾನೆ ನಂತರ ನಾಪತ್ತೆಯಾಗಿದ್ದರು.

ಗುರುವಾರ ನೇಪಾಳಕ್ಕೆ ಮರಳಿದ ಲಾಮಿಚಾನೆಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಕಠ್ಮಂಡು ಜಿಲ್ಲಾ ಪೊಲೀಸರು ಖಚಿತಪಡಿಸಿದ್ದಾರೆ.

ತಾವು ನೇಪಾಳಕ್ಕೆ ಮರಳುತ್ತಿರುವುದಾಗಿ ಲಾಮಿಚಾನೆ ಫೇಸ್‌ಬುಕ್‌ನಲ್ಲಿ ಪೋಸ್ಟ್ ಹಾಕಿದ್ದರು.

'ತನಿಖೆಯ ಪ್ರತಿಯೊಂದು ಹಂತದಲ್ಲಿಯೂ ಪೊಲೀಸರಿಗೆ ಸಹಕಾರ ನೀಡುತ್ತೇನೆ. ನಾನು ನಿರಪರಾಧಿ ಎಂಬುದನ್ನು ಸಾಬೀತುಪಡಿಸುತ್ತೇನೆ. ನನಗೆ ನ್ಯಾಯ ಸಿಗಲಿದೆ' ಎಂದು 22 ವರ್ಷದ ಸಂದೀಪ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕ್ರಿಕೆಟ್: ದಕ್ಷಿಣ ಆಫ್ರಿಕಾಕ್ಕೆ 9 ರನ್ ಗೆಲುವು; ಸಂಜು ಸ್ಯಾಮ್ಸನ್ ಹೋರಾಟ ವ್ಯರ್ಥ

ಡೇವಿಡ್ ಮಿಲ್ಲರ್–ಕ್ಲಾಸೆನ್ ಅಬ್ಬರದ ಆಟ

ಲಖನೌ (ಪಿಟಿಐ): ಗುರುವಾರ ಮಧ್ಯಾಹ್ನ ಸುರಿದ ಮಳೆ ನಿಂತ ಮೇಲೆ ದಕ್ಷಿಣ ಆಫ್ರಿಕಾದ ಬ್ಯಾಟರ್ ಡೇವಿಡ್ ಮಿಲ್ಲರ್ ಹಾಗೂ ಹೆನ್ರಿಚ್ ಕ್ಲಾಸೆನ್ ರನ್‌ಗಳ ಹೊಳೆ ಹರಿಸಿದರು.

ಮಿಲ್ಲರ್ (ಔಟಾಗದೆ 75; 63ಎ) ಹಾಗೂ ಕ್ಲಾಸೆನ್ (ಔಟಾಗದೆ 74; 65ಎ) ಸಿಡಿಲಬ್ಬರದ ಆಟದಿಂದಾಗಿ ದಕ್ಷಿಣ ಆಫ್ರಿಕಾ ತಂಡವು ಭಾರತ ಎದುರು ಇಲ್ಲಿ ನಡೆದ ಮೊದಲ ಏಕದಿನ ಪಂದ್ಯದಲ್ಲಿ ರನ್‌ಗಳ ಗೆಲುವು ಸಾಧಿಸಿ ಸರಣಿಯಲ್ಲಿ 1–0 ಮುನ್ನಡೆ ಪಡೆಯಿತು.

ಮಳೆಯಿಂದಾಗಿ ಪಂದ್ಯವು ವಿಳಂಬವಾಗಿ ಆರಂಭವಾಯಿತು. ಆದ್ದರಿಂದ ಇನಿಂಗ್ಸ್‌ಗೆ 40 ಓವರ್ ನಿಗದಿಪಡಿಸಲಾಯಿತು. ಮೊದಲು ಬ್ಯಾಟ್ ಮಾಡಿದ ಪ್ರವಾಸಿ ತಂಡ 40 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 249 ರನ್ ಗಳಿಸಿತು. ಭಾರತ ತಂಡ ನಿಗದಿತ ಓವರ್‌ಗಳಲ್ಲಿ 8 ವಿಕೆಟ್‌ಗೆ 240 ರನ್ ಕಲೆಹಾಕಿತು. ವಿಕೆಟ್ ಕೀಪರ್ ಬ್ಯಾಟರ್ ಸಂಜು ಸ್ಯಾಮ್ಸನ್ (ಔಟಾಗದೆ 86, 63 ಎ., 4X9, 6X3) ಅವರು ಸೋಲಿನ ನಡುವೆಯೂ ಮಿಂಚಿದರು.

ಸವಾಲಿನ ಗುರಿ ಬೆನ್ನಟ್ಟಿದ ಭಾರತ ತಂಡಕ್ಕೆ ಕಗಿಸೊ ರಬಾಡ ಮತ್ತು ವೇಯ್ನ್ ಪಾರ್ನೆಲ್ ಆರಂಭದಲ್ಲೇ ಆಘಾತ ನೀಡಿದರು. ನಾಯಕ ಶಿಖರ್ ಧವನ್ (4) ಮತ್ತು ಶುಭಮನ್ ಗಿಲ್ (3) ಬೇಗನೇ ಔಟಾದರು.

ಶ್ರೇಯಸ್ ಅಯ್ಯರ್ (50 ರನ್, 37 ಎ., 4X8) ಬಿರುಸಿನ ಆಟವಾಡಿ ಗೆಲುವಿನ ಆಸೆ ಮೂಡಿಸಿದರು. ಸಂಜು ಮತ್ತು ಶಾರ್ದೂಲ್ ಠಾಕೂರ್ ಆರನೇ ವಿಕೆಟ್‌ಗೆ 93 ರನ್ ಸೇರಿಸಿದರು. ಶಾರ್ದೂಲ್ ಔಟಾದ ಬಳಿಕ ದಕ್ಷಿಣ ಆಫ್ರಿಕಾ ಬೌಲರ್‌ಗಳು ಮತ್ತೆ ಹಿಡಿತ ಸಾಧಿಸಿದರು.

ತಬ್ರೇಜ್ ಶಂಸಿ ಬೌಲ್ ಮಾಡಿದ ಕೊನೆಯ ಓವರ್‌ನಲ್ಲಿ ಗೆಲುವಿಗೆ 31 ರನ್‌ಗಳು ಬೇಕಿದ್ದವು. ಸ್ಯಾಮ್ಸನ್ ಒಂದು ಸಿಕ್ಸರ್ ಮತ್ತು ಮೂರು ಬೌಂಡರಿ ಹೊಡೆದರಾದರೂ ಅದು ಜಯಕ್ಕೆ ಸಾಕಾಗಲಿಲ್ಲ.

ಉತ್ತಮ ಆರಂಭ: ಇದಕ್ಕೂ ಮುನ್ನ ಟಾಸ್ ಗೆದ್ದ ಭಾರತ ತಂಡದ ನಾಯಕ ಶಿಖರ್ ಧವನ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಮಲಾನ್ (22) ಹಾಗೂ ಕ್ವಿಂಟನ್ (48) ಉತ್ತಮ ಆರಂಭ ನೀಡಿದರು. ಮಧ್ಯಮವೇಗಿ ಶಾರ್ದೂಲ್ ಠಾಕೂರ್ 13ನೇ ಓವರ್‌ನಲ್ಲಿ ಮಲಾನ್ ವಿಕೆಟ್ ಗಳಿಸಿ, ಜೊತೆಯಾಟ ಮುರಿದರು.

ತಮ್ಮ ಇನ್ನೊಂದು ಓವರ್‌ನಲ್ಲಿ ಶಾರ್ದೂಲ್ ಪ್ರವಾಸಿ ತಂಡದ ನಾಯಕ ತೆಂಬಾ ಬವುಮಾ ವಿಕೆಟ್ ಗಳಿಸಿದರು. 16ನೇ ಓವರ್‌ನಲ್ಲಿ ಸ್ಪಿನ್ನರ್ ರವಿ ಬಿಷ್ಣೋಯಿ ಬೌಲಿಂಗ್‌ನಲ್ಲಿ ಕ್ವಿಂಟನ್ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು.

ಇದರಿಂದಾಗಿ ತಂಡವು ಅಲ್ಪಮೊತ್ತಕ್ಕೆ ಕುಸಿಯುವ ಆತಂಕ ಎದುರಾಗಿತ್ತು. ಆದರೆ ಕ್ರೀಸ್‌ನಲ್ಲಿ ಜೊತೆಗೂಡಿದ ಮಿಲ್ಲರ್ ಹಾಗೂ ಕ್ಲಾಸೆನ್ ತಂಡದ ಭೀತಿಯನ್ನು ಬೌಂಡರಿಯಾಚೆಗೆ ಅಟ್ಟಿದರು.

ಟಿ20 ಸರಣಿಯಲ್ಲಿಯೂ ಅಬ್ಬರಿಸಿದ್ದ ಮಿಲ್ಲರ್ ಇಲ್ಲಿ ಮೂರು ಸಿಕ್ಸರ್ ಹಾಗೂ ಐದು ಬೌಂಡರಿ ಬಾರಿಸಿದರು. ಕ್ಲಾಸೆನ್ ಕೂಡ ಅರ್ಧಡಜನ್ ಬೌಂಡರಿ ಹಾಗೂ ಎರಡು ಸಿಕ್ಸರ್ ಸಿಡಿಸಿದರು. ಮುರಿಯದ ಐದನೇ ವಿಕೆಟ್ ಜೊತೆಯಾಟದಲ್ಲಿ 139 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 40 ಓವರ್‌ಗಳಲ್ಲಿ 4ಕ್ಕೆ249 (ಜನ್ನೆಮನ್ ಮಲಾನ್ 22, ಕ್ವಿಂಟನ್ ಡಿಕಾಕ್ 48, ಹೆನ್ರಿಚ್ ಕ್ಲಾಸೆನ್ ಔಟಾಗದೆ 74, ಡೇವಿಡ್ ಮಿಲ್ಲರ್ ಔಟಾಗದೆ 75, ಶಾರ್ದೂಲ್ ಠಾಕೂರ್ 35ಕ್ಕೆ2, ರವಿ ಬಿಷ್ಣೋಯಿ 69ಕ್ಕೆ1, ಕುಲದೀಪ್ ಯಾದವ್ 39ಕ್ಕೆ1)

ಭಾರತ: 40 ಓವರ್‌ಗಳಲ್ಲಿ 8 ವಿಕೆಟ್‌ಗೆ 240 (ಋತುರಾಜ್ ಗಾಯಕವಾಡ್ 19, ಇಶಾನ್ ಕಿಶನ್ 20, ಶ್ರೇಯಸ್ ಅಯ್ಯರ್ 50, ಸಂಜು ಸ್ಯಾಮ್ಸನ್ ಔಟಾಗದೆ 86, ಶಾರ್ದೂಲ್ ಠಾಕೂರ್ 33, ಕಗಿಸೊ ರಬಾಡ 36ಕ್ಕೆ 2, ವೇಯ್ನ್ ಪಾರ್ನೆಲ್ 38ಕ್ಕೆ 1, ಲುಂಗಿ ಗಿಡಿ 52ಕ್ಕೆ 3) ಫಲಿತಾಂಶ: ದಕ್ಷಿಣ ಆಫ್ರಿಕಾಕ್ಕೆ 9 ರನ್ ಗೆಲುವು


ಹೆನ್ರಿಚ್ ಕ್ಲಾಸೆನ್ (ಬಲ) ಹಾಗೂ ಡೇವಿಡ್ ಮಿಲ್ಲರ್ –ಎಎಫ್‌ಪಿ ಚಿತ್ರ

ಶ್ರೀಹರಿ ನಟರಾಜ್, ನೀನಾ ಕೂಟ ದಾಖಲೆ

ರಾಷ್ಟ್ರೀಯ ಕ್ರೀಡಾಕೂಟ: ಅಶ್ವಿನ್– ಪ್ರತೀಕ್ ಜೋಡಿಗೆ ಬ್ಯಾಡ್ಮಿಂಟನ್ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಶ್ರೀಹರಿ ನಟರಾಜ್ ಮತ್ತು ನೀನಾ ವೆಂಕಟೇಶ್ ಅವರು ಗುಜರಾತ್‌ನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರೀಡಾಕೂಟದ ಈಜು ಸ್ಪರ್ಧೆಯಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು.

ರಾಜ್‌ಕೋಟ್‌ನ ಸರ್ದಾರ್ ಪಟೇಲ್ ಈಜು ಕಾಂಪ್ಲೆಕ್ಸ್‌ನಲ್ಲಿ ಗುರುವಾರ ನಡೆದ ಪುರುಷರ 100 ಮೀ. ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ಶ್ರೀಹರಿ 55.80 ಸೆ.ಗಳಲ್ಲಿ ಮೊದಲಿಗರಾಗಿ ಗುರಿ ತಲುಪಿದರು. ಪಿ.ಎಸ್.ಮಧು (57.62 ಸೆ.) ಹೆಸರಿನಲ್ಲಿದ್ದ ದಾಖಲೆಯನ್ನು ಅವರು ಮುರಿದರು.

ಕರ್ನಾಟಕದ ಎಸ್.ಶಿವ ಮತ್ತು ಎಸ್‌ಎಸ್‌ಸಿಬಿಯ ವಿ.ವಿನಾಯಕ್ (58.30 ಸೆ.) ಅವರು ಬೆಳ್ಳಿ ಜಯಿಸಿದರೆ, ದೆಹಲಿಯ ತನ್ಮಯ್ ದಾಸ್ (58.88 ಸೆ.) ಕಂಚು ಪಡೆದರು.

ಮಹಿಳೆಯರ 50 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ಮಿಂಚು ಹರಿಸಿದ ನೀನಾ, 28.39 ಸೆ.ಗಳಲ್ಲಿ ಗುರಿ ತಲುಪಿದರು. ಹರಿಯಾಣದ ದಿವ್ಯಾ ಸತಿಜಾ (28.76 ಸೆ.) ಹೆಸರಿನಲ್ಲಿದ್ದ ದಾಖಲೆಯನ್ನು ಅವರು ಮುರಿದರು. ದಿವ್ಯಾ ಅವರು ಈ ಬಾರಿ 28.63 ಸೆ.ಗಳಲ್ಲಿ ಎರಡನೆಯರವಾಗಿ ಗುರಿ ತಲುಪಿದರು. ಕರ್ನಾಟಕದ ತನಿಷಿ ಗುಪ್ತಾ (28.68 ಸೆ.) ಕಂಚು ತಮ್ಮದಾಗಿಸಿಕೊಂಡರು.

ಮಹಿಳೆಯರ 100 ಮೀ. ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ರಾಜ್ಯದ ರಿಧಿಮಾ ವೀರೇಂದ್ರಕುಮಾರ್ (1 ನಿ. 5.51 ಸೆ.) ಎರಡನೇ ಸ್ಥಾನ ಗಳಿಸಿದರು. ಗುಜರಾತ್‌ನ ಮಾನಾ ಪಟೇಲ್ ಕೂಟ ದಾಖಲೆಯೊಂದಿಗೆ ಈ ವಿಭಾಗದ ಚಿನ್ನ (1 ನಿ. 4.35 ಸೆ.) ಗೆದ್ದರು.

ಮಹಿಳೆಯರ 1,500 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಹಷಿಕಾ ರಾಮಚಂದ್ರ ಕಂಚು ಜಯಿಸಿದರು. ಅವರು 18 ನಿ. 14.68 ಸೆ.ಗಳಲ್ಲಿ ಗುರಿ ತಲುಪಿದರು.

ಕರ್ನಾಟಕದ ಈಜು ಸ್ಪರ್ಧಿಗಳು 14 ಚಿನ್ನ, 5 ಬೆಳ್ಳಿ ಮತ್ತು 8 ಕಂಚು ಸೇರಿದಂತೆ ಒಟ್ಟು 27 ಪದಕ ಪಡೆದು ಅಗ್ರಸ್ಥಾನದಲ್ಲಿದ್ದಾರೆ.

ಅಶ್ವಿನಿ- ಪ್ರತೀಕ್‌ಗೆ ಚಿನ್ನ: ಅಶ್ವಿನಿ ಪೊನ್ನಪ್ಪ ಮತ್ತು ಕೆ.ಸಾಯಿ ಪ್ರತೀಕ್ ಜೋಡಿ ರಾಷ್ಟ್ರೀಯ ಕ್ರೀಡಾಕೂಟದ ಬ್ಯಾಡ್ಮಿಂಟನ್ ಟೂರ್ನಿಯ ಮಿಶ್ರ ಡಬಲ್ಸ್ ವಿಭಾಗದಲ್ಲಿ ಚಿನ್ನ ಗೆದ್ದಿತು. ಫೈನಲ್‌ನಲ್ಲಿ ಕರ್ನಾಟಕದ ಜೋಡಿ 21–16, 21–13 ರಲ್ಲಿ ದೆಹಲಿಯ ರೋಹನ್ ಕಪೂರ್–ಕನಿಕಾ ಕನ್ವಲ್ ವಿರುದ್ಧ ಜಯಿಸಿತು.

ಆದರೆ ಎರಡು ಎರಡು ವಿಭಾಗಗಳಲ್ಲಿ ಫೈನಲ್ ಪ್ರವೇಶಿಸಿದ್ದ ಕರ್ನಾಟಕದ ಸ್ಪರ್ಧಿಗಳು ಸೋಲು ಅನುಭವಿಸಿ ಬೆಳ್ಳಿ ಪಡೆದರು.

ಪುರುಷರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಮಿಥುನ್ ಮಂಜುನಾಥ್ ಅವರು 11–21, 21–12, 16–21 ರಲ್ಲಿ ತೆಲಂಗಾಣದ ಬಿ.ಸಾಯಿ ಪ್ರಣೀತ್ ಎದುರು ಪರಾಭವಗೊಂಡರು.

ಮಹಿಳೆಯರ ಡಬಲ್ಸ್ ಫೈನಲ್‌ನಲ್ಲಿ ತೆಲಂಗಾಣದ ಎನ್.ಸಿಕ್ಕಿ ರೆಡ್ಡಿ- ಗಾಯತ್ರಿ ಗೋಪಿಚಂದ್ ಜೋಡಿ 21–14, 21–11 ರಲ್ಲಿ ಶಿಖಾ ಗೌತಮ್- ಅಶ್ವಿನಿ ಭಟ್ ಎದುರು ಜಯಿಸಿತು.

ಕರ್ನಾಟಕದ ಸ್ಪರ್ಧಿಗಳಾದ ತಾನ್ಯಾ ಹೇಮಂತ್ (ಮಹಿಳೆಯರ ಸಿಂಗಲ್ಸ್), ಎಂ.ರಘು (ಪುರುಷರ ಸಿಂಗಲ್ಸ್) ಮತ್ತು ಎಚ್.ವಿ.ನಿತಿನ್- ವೈಭವ್ (ಪುರುಷರ ಡಬಲ್ಸ್) ಅವರು ಕಂಚು ಪಡೆದರು.


ಕರ್ನಾಟಕ ಬ್ಯಾಡ್ಮಿಂಟನ್ ತಂಡದ ಸದಸ್ಯರು ಪದಕ ತೋರಿಸಿ ಸಂಭ್ರಮಿಸಿದರು

ಮುಖ್ಯಾಂಶಗಳು

- ಮುಂದುವರಿದ ಈಜು ಸ್ಪರ್ಧಿಗಳ ಪಾರಮ್ಯ
- 27 ಪದಕಗಳೊಂದಿಗೆ ಅಗ್ರಸ್ಥಾನದಲ್ಲಿ ಕರ್ನಾಟಕ
- ಬ್ಯಾಡ್ಮಿಂಟನ್‌ನಲ್ಲಿ ಮಿಥುನ್‌ಗೆ ಬೆಳ್ಳಿ

ಎಎಫ್‌ಸಿ ಫುಟ್‌ಬಾಲ್: ಭಾರತ ಜಯಭೇರಿ

ಅಲ್ ಖೋಬರ್, ಸೌದಿ ಅರೇಬಿಯಾ (ಪಿಟಿಐ): ಸೊಗಸಾದ ಆಟವಾಡಿದ ಭಾರತ ತಂಡದವರು ಎಎಫ್‌ಸಿ 17 ವರ್ಷದೊಳಗಿನವರ ಏಷ್ಯಾ ಕಪ್ ಫುಟ್‌ಬಾಲ್ ಅರ್ಹತಾ ಟೂರ್ನಿಯಲ್ಲಿ ಗೆಲುವಿನ ಓಟ ಮುಂದುವರಿಸಿದ್ದಾರೆ.

ಗುರುವಾರ ನಡೆದ ಪಂದ್ಯದಲ್ಲಿ ಭಾರತ 3–0 ಗೋಲುಗಳಿಂದ ಕುವೈತ್ ತಂಡವನ್ನು ಪರಾಭವಗೊಳಿಸಿತು. ಮೊದಲ ಪಂದ್ಯದಲ್ಲಿ ಭಾರತ 5–0 ರಲ್ಲಿ ಮಾಲ್ಡೀವ್ಸ್ ಎದುರು ಗೆದ್ದಿತ್ತು.

ತಾಂಗ್‌ಲಾಲ್‌ಸುನ್ ಗಾಂಗ್ಟೆ (16 ಮತ್ತು 70ನೇ ನಿ.) ಅವರು ಎರಡು ಗೋಲುಗಳನ್ನು ಗಳಿಸಿ ಭಾರತದ ಗೆಲುವಿನ ರೂವಾರಿ ಎನಿಸಿಕೊಂಡರು. ಮತ್ತೊಂದು ಗೋಲನ್ನು ಕೊರೊ ಸಿಂಗ್ ತಿಂಗುಜಮ್ (66ನೇ ನಿ.) ಗಳಿಸಿದರು. ಈ ಗೆಲುವಿನ ಮೂಲಕ ಬಿಬಿಯಾನೊ ಫೆರ್ನಾಂಡೆಸ್ ಬಳಗ ಮೂರು ಪಾಯಿಂಟ್ ಕಲೆಹಾಕಿತು.

ಭಾರತ ತಂಡದ ಗೋಲ್‌ಕೀಪರ್ ಸಾಹಿಲ್ ಅವರು ಎದುರಾಳಿ ತಂಡದ ಗೋಲು ಗಳಿಸುವ ಹಲವು ಪ್ರಯತ್ನಗಳನ್ನು ತಡೆದು ಮಿಂಚಿದರು.

ಭಾರತ ತಂಡ ತನ್ನ ಮುಂದಿನ ಪಂದ್ಯದಲ್ಲಿ ಮಯನ್ಮಾರ್ ಎದುರು ಪೈಪೋಟಿ ನಡೆಸಲಿದೆ.

ಟಿಟಿ: ಭಾರತದ ಸವಾಲು ಅಂತ್ಯ

ಚೆಂಗ್ಡು, ಚೀನಾ (ಪಿಟಿಐ): ಭಾರತ ಪುರುಷರ ತಂಡದವರು ಇಲ್ಲಿ ನಡೆಯುತ್ತಿರುವ ವಿಶ್ವ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಸೋತು ಹೊರಬಿದ್ದರು.

ಗುರುವಾರ ನಡೆದ ಪಂದ್ಯದಲ್ಲಿ ಪ್ರಬಲ ಚೀನಾ ತಂಡ 3–0 ರಲ್ಲಿ ಭಾರತ ತಂಡವನ್ನು ಮಣಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಮೊದಲ ಸಿಂಗಲ್ಸ್‌ನಲ್ಲಿ ಹರ್ಮೀತ್ ದೇಸಾಯಿ 2–11, 9–11, 5–11 ರಲ್ಲಿ ಫಾನ್ ಜೆನ್‌ಡಾಂಗ್ ಎದುರು ಸೋತರು. ವಿಶ್ವ ರ್‍ಯಾಂಕಿಂಗ್‌ನಲ್ಲಿ 9ನೇ ಸ್ಥಾನದಲ್ಲಿರುವ ಚೀನಾದ ಆಟಗಾರ ಕೇವಲ 15 ನಿಮಿಷಗಳಲ್ಲಿ ಗೆಲುವು ಒಲಿಸಿಕೊಂಡರು.

ಎರಡನೇ ಸಿಂಗಲ್ಸ್‌ನಲ್ಲಿ ಜಿ.ಸತ್ಯನ್ ಅವರು ವಿಶ್ವದ ಅಗ್ರ ಕ್ರಮಾಂಕದ ಆಟಗಾರ ಮಾ ಲಾಂಗ್ ಎದುರು ಕಣಕ್ಕಿಳಿದರು. ಮೊದಲ ಗೇಮ್‌ನಲ್ಲಿ ಸತ್ಯನ್ ಪ್ರಬಲ ಪೈಪೋಟಿ ನೀಡಿ 12–14 ರಲ್ಲಿ ಸೋತರು. ಆದರೆ ಎರಡು ಮತ್ತು ಮೂರನೇ ಗೇಮ್‌ನಲ್ಲಿ ಅದ್ಭುತ ಲಯದಲ್ಲಿ ಆಡಿದ ಲಾಂಗ್ 11–5, 11–0 ರಲ್ಲಿ ಗೆದ್ದು ಚೀನಾಕ್ಕೆ 2–0 ಮುನ್ನಡೆ ತಂದಿತ್ತರು.

ಮೂರನೇ ಸಿಂಗಲ್ಸ್‌ನಲ್ಲಿ ವಾಂಗ್ ಚಕ್ವಿನ್ 11–4, 11–5, 11–6 ರಲ್ಲಿ ಮಾನುಷ್ ಶಾ ಅವರನ್ನು ಸೋಲಿಸಿದರು.

ಇದರೊಂದಿಗೆ ಟೂರ್ನಿಯಲ್ಲಿ ಭಾರತದ ಸವಾಲಿಗೆ ತೆರೆಬಿದ್ದಿದೆ. ಭಾರತ ಮಹಿಳಾ ತಂಡದವರು ಬುಧವಾರ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಚೀನಾ ತೈಪೆ ಎದುರು 0–3 ರಲ್ಲಿ ಸೋತಿದ್ದರು.


ಚೀನಾದ ಫಾನ್ ಜೆನ್‌ಡಾಂಗ್ ಆಟದ ವೈಖರಿ –ಎಎಫ್‌ಪಿ ಚಿತ್ರ

ಕ್ರಿಕೆಟ್: ಮಯಂಕ್ ಅಗರವಾಲ್‌ಗೆ ನಾಯಕತ್ವ

ಬೆಂಗಳೂರು: ಆರಂಭಿಕ ಬ್ಯಾಟರ್ ಮಯಂಕ್ ಅಗರವಾಲ್ ಅವರನ್ನು ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ಕರ್ನಾಟಕ ತಂಡದ ನಾಯಕರನ್ನಾಗಿ ನೇಮಕ ಮಾಡಲಾಗಿದೆ.

ಕಳೆದ ಋತುವಿನಲ್ಲಿ ಮನೀಷ್ ಪಾಂಡೆ ನಾಯಕರಾಗಿದ್ದರು. ಆ ಟೂರ್ನಿಯಲ್ಲಿ ತಂಡವು ಫೈನಲ್‌ನಲ್ಲಿ ತಮಿಳುನಾಡು ವಿರುದ್ಧ ಸೋತಿತ್ತು. ಈ ಬಾರಿ ಯುವಪ್ರತಿಭೆಗಳಾದ ಮೈಸೂರಿನ ಬ್ಯಾಟರ್ ಎಲ್. ಆರ್. ಚೇತನ್ ಹಾಗೂ ವಿಕೆಟ್‌ಕೀಪರ್ ಲವನೀತ್ ಸಿಸೊಡಿಯಾ ಸ್ಥಾನ ಪಡೆದಿದ್ದಾರೆ. ಬಿರುಸಿನ ಹೊಡೆತಗಾರ ಅಭಿನವ್ ಮನೋಹರ್ ಸ್ಥಾನ ಗಳಿಸಿದ್ದಾರೆ.

ಕರ್ನಾಟಕ ತಂಡ ಇಂತಿದೆ: ಮಯಂಕ್ ಅಗರವಾಲ್ (ನಾಯಕ), ದೇವದತ್ತ ಪಡಿಕ್ಕಲ್, ಮನೀಷ್ ಪಾಂಡೆ, ಎಲ್.ಆರ್. ಚೇತನ್, ಅಭಿನವ್ ಮನೋಹರ್, ಮನೋಜ್ ಬಾಂಢಗೆ, ಕೃಷ್ಣಪ್ಪ ಗೌತಮ್, ಶ್ರೇಯಸ್ ಗೋಪಾಲ್, ಜೆ. ಸುಚಿತ್, ಲವನೀತ್ ಸಿಸೊಡಿಯಾ (ವಿಕೆಟ್‌ಕೀಪರ್), ಬಿ.ಆರ್. ಶರತ್ (ವಿಕೆಟ್‌ಕೀಪರ್), ವಿ. ಕೌಶಿಕ್, ವೈಶಾಖ ವಿಜಯಕುಮಾರ್, ವಿದ್ವತ್ ಕಾವೇರಪ್ಪ, ಎಂ. ವೆಂಕಟೇಶ್. ಪಿ.ವಿ. ಶಶಿಕಾಂತ್ (ಮುಖ್ಯ ಕೋಚ್), ದೀಪಕ್ ಚೌಗುಲೆ (ಫೀಲ್ಡಿಂಗ್ ಕೋಚ್), ಜಾಬ ಪ್ರಭು (ಫಿಸಿಯೊ), ಕೆ.ಸಿ. ಅವಿನಾಶ್ (ಸ್ಟ್ರೆಂಥ್–ಕಂಡಿಷನಿಂಗ್ ಕೋಚ್), ಅನುತೋಷ್ ಪೋಳ್ (ಮ್ಯಾನೇಜರ್), ಸೋಮಸುಂದರ್ (ಮಸಾಜ್ ತಜ್ಞ), ವಿನೋದ್ ಕುಮಾರ್ (ವಿಡಿಯೊ ವಿಶ್ಲೇಷಕ).

ಐಎಸ್‌ಎಲ್ ಫುಟ್‌ಬಾಲ್ ಟೂರ್ನಿ ಇಂದಿನಿಂದ

ಬೆಂಗಾಲ್‌ಗೆ ಬ್ಲಾಸ್ಟರ್ಸ್ ಸವಾಲು

ಕೊಚ್ಚಿ (ಪಿಟಿಐ): ದೇಶದ ಫುಟ್‌ಬಾಲ್ ಪ್ರಿಯರಿಗೆ ರಸದೌತಣ ಉಣಬಡಿಸಲಿರುವ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ 9ನೇ ಆವೃತ್ತಿಯ ಟೂರ್ನಿಗೆ ಶುಕ್ರವಾರ ಚಾಲನೆ ದೊರೆಯಲಿದೆ.

ಕೊಚ್ಚಿಯ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ನಡೆಯಲಿರುವ ಮೊದಲ ಪಂದ್ಯದಲ್ಲಿ ಕಳೆದ ಬಾರಿಯ 'ರನ್ನರ್ಸ್ ಅಪ್' ಕೇರಳ ಬ್ಲಾಸ್ಟರ್ಸ್ ತಂಡ ಈಸ್ಟ್ ಬೆಂಗಾಲ್ ಎಫ್‌ಸಿ ತಂಡದ ಸವಾಲು ಎದುರಿಸಲಿದೆ.

ಕೋವಿಡ್ ಕಾರಣ ಕಳೆದ ಎರಡು ಋತುವಿನ ಟೂರ್ನಿಗಳು ಕೆಲವೊಂದು ನಿರ್ಬಂಧಗಳ ನಡುವೆಯೇ ಆಯೋಜನೆಯಾಗಿದ್ದವು. ಪ್ರೇಕ್ಷಕರಿಗೆ ಪಂದ್ಯ ನೋಡುವ ಅವಕಾಶ ಇರಲಿಲ್ಲ. ಪಂದ್ಯಗಳ ಸಂಖ್ಯೆಯನ್ನೂ ಕಡಿತಗೊಳಿಸಲಾಗಿತ್ತು.

ಈ ಬಾರಿ ಕೋವಿಡ್‌ಗೂ ಮುಂಚೆ ನಡೆಯುತ್ತಿದ್ದ ಮಾದರಿಯಲ್ಲೇ ನಡೆಯಲಿದ್ದು, ಅಭಿಮಾನಿಗಳ ಕುತೂಹಲ ಗರಿಗೆದರಿದೆ. 'ಹೋಂ – ಅವೇ' ಮಾದರಿಯಲ್ಲಿ ಪಂದ್ಯಗಳು ಆಯೋಜನೆಯಾಗಿವೆ. 11 ತಂಡಗಳು ಕೂಡ ತವರು ಅಂಗಳ ಮತ್ತು ಎಲ್ಲ ಎದುರಾಳಿಗಳ ಅಂಗಳದಲ್ಲಿ ಪಂದ್ಯಗಳನ್ನು ಆಡಲಿವೆ.

ಲೀಗ್ ಹಂತದಲ್ಲಿ ಮೊದಲ ಎರಡು ಸ್ಥಾನಗಳನ್ನು ಪಡೆಯುವ ತಂಡಗಳು ನೇರವಾಗಿ ಸೆಮಿಫೈನಲ್ ಪ್ರವೇಶಿಸಲಿವೆ. ಸೆಮಿ ಪ್ರವೇಶಿಸುವ ಇನ್ನೆರಡು ತಂಡಗಳನ್ನು ನಿರ್ಧರಿಸಲು ಪಾಯಿಂಟ್ ಪಟ್ಟಿಯಲ್ಲಿ 3 ರಿಂದ 6ರವರೆಗಿನ ಸ್ಥಾನಗಳನ್ನು ಪಡೆಯುವ ತಂಡಗಳ ನಡುವೆ ಪ್ಲೇ ಆಫ್ ಆಯೋಜಿಸಲಾಗುತ್ತದೆ.

ಪೈಪೋಟಿ ಸಾಧ್ಯತೆ: ತವರು ಪ್ರೇಕ್ಷಕರ ಬೆಂಬಲದೊಂದಿಗೆ ಆಡಲಿರುವ ಕೇರಳ ಬ್ಲಾಸ್ಟರ್ಸ್‌ಗೆ ಈಸ್ಟ್ ಬೆಂಗಾಲ್ ಪ್ರಬಲ ಪೈಪೋಟಿ ನೀಡುವ ಸಾಧ್ಯತೆಯಿದೆ. ಈಸ್ಟ್ ಬೆಂಗಾಲ್ ತಂಡವು ಭಾರತ ಫುಟ್‌ಬಾಲ್ ತಂಡದ ಮಾಜಿ ಕೋಚ್ ಸ್ಟೀಫನ್ ಕಾನ್‌ಸ್ಟಂಟೈನ್ ಅವರ ಮಾರ್ಗದರ್ಶನದಲ್ಲಿ ಆಡಲಿದೆ.

ಬ್ಲಾಸ್ಟರ್ಸ್ ತಂಡ ಹೊಸದಾಗಿ ಕೆಲವು ಆಟಗಾರರನ್ನು ಸೇರಿಸಿಕೊಂಡು ತನ್ನ ಬಲ ಹೆಚ್ಚಿಸಿದೆ. ಗಿಯಾನೊ, ಡಿಯಮಂಟಕೊಸ್, ವಿಕ್ಟರ್ ಮೊಂಗಿಲ್ ಹಾಗೂ ಸ್ಥಳೀಯ ಆಟಗಾರ ಸಹಲ್ ಅಬ್ದುಲ್ ಸಮದ್ ಅವರನ್ನು ನೆಚ್ಚಿಕೊಂಡಿದೆ.

ಬಿಎಫ್‌ಸಿ ನಾಳೆ ಕಣಕ್ಕೆ: ಬೆಂಗಳೂರು ಎಫ್‌ಸಿ ತಂಡ ತನ್ನ ಪ್ರಶಸ್ತಿಯೆಡೆಗಿನ ಅಭಿಯಾನ ಶನಿವಾರ ಆರಂಭಿಸಲಿದೆ. ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ತಂಡವನ್ನು ಎದುರಿಸಲಿದೆ.

ಪಂದ್ಯ ಆರಂಭ: ಸಂಜೆ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್



ಕೇರಳ ಬ್ಲಾಸ್ಟರ್ಸ್ ತಂಡದ ಆಟಗಾರರು ಅಭ್ಯಾಸ ನಡೆಸಿದರು –ಟ್ವಿಟರ್ ಚಿತ್ರ

ಪಾಲ್ಗೊಳ್ಳುವ ತಂಡಗಳು

ಎಟಿಕೆ ಮೋಹನ್ ಬಾಗನ್, ಬೆಂಗಳೂರು ಎಫ್‌ಸಿ, ಚೆನ್ನೈಯಿನ್ ಎಫ್‌ಸಿ, ಈಸ್ಟ್ ಬೆಂಗಾಲ್ ಎಫ್‌ಸಿ, ಎಫ್‌ಸಿ ಗೋವಾ, ಹೈದರಾಬಾದ್ ಎಫ್‌ಸಿ, ಜೆಮ್ಶೆಡ್‌ಪುರ ಎಫ್‌ಸಿ, ಕೇರಳ ಬ್ಲಾಸ್ಟರ್ಸ್ ಎಫ್‌ಸಿ, ಮುಂಬೈ ಸಿಟಿ ಎಫ್‌ಸಿ, ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ, ಒಡಿಶಾ ಎಫ್‌ಸಿ



ರೆಬೆಲ್ಸ್ ಎಫ್‌ಸಿ ತಂಡದ ಸಂಜೀಬ್ ಸಿಂಗ್ (ಎಡ) ಮತ್ತು ಡೆಕ್ಕನ್ ತಂಡದ ಅರ್ಬಾಜ್ ಖಾನ್ ಪೈಪೋಟಿ ನಡೆಸಿದರು ಪ್ರಜಾವಾಣಿ ಚಿತ್ರ/ ಎಸ್‌.ಕೆ.ದಿನೇಶ್

ಫುಟ್‌ಬಾಲ್: ಬಿಎಫ್‌ಸಿಗೆ ಜಯ

ಬೆಂಗಳೂರು: ಬಿಎಫ್‌ಸಿ ತಂಡದವರು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಗೆಲುವು ಪಡೆದರು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಬಿಎಫ್‌ಸಿ 5–1 ಗೋಲುಗಳಿಂದ ಬಿಯುಎಫ್‌ಸಿ ತಂಡವನ್ನು ಮಣಿಸಿತು.

ಬಿಎಫ್‌ಸಿ ತಂಡದ ಪಿ.ಕಮಲೇಶ್ (45 ಮತ್ತು 84ನೇ ನಿ.) ಎರಡು ಗೋಲು ಗಳಿಸಿದರೆ, ಮೊನೀರುಲ್ ಮೊಲ್ಲಾ (14 ನೇ ನಿ.) ಹಿದ್ರೋಮ್ ಥಾಯ್ ಸಿಂಗ್ (22ನೇ ನಿ.) ಮತ್ತು ಅಂಕಿತ್ (73) ತಲಾ ಒಂದು ಗೋಲು ತಂದಿತ್ತರು. ಬಿಯುಎಫ್‌ಸಿ ಪರ ಜೀವಿತ್ (23) ಗೋಲು ಗಳಿಸಿದರು.

ಕೊಡಗು ಎಫ್‌ಸಿ 4–1 ಗೋಲುಗಳಿಂದ ಯಂಗ್ ಚಾಲೆಂಜರ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ವಿಜಯಿ ತಂಡದ ಆಂಗ್ ಶೆರಿಂಗ್ ಲಿಯೊಬಿನ್ (42 ಮತ್ತು 45ನೇ ನಿ.), ಗಗನ್‌ದೀಪ್ ಮೇವಾ ಸಿಂಗ್ (20) ಹಾಗೂ ಅರುಣ್ ಲಾಲ್ (27) ಚೆಂಡನ್ನು ಗುರಿ ಸೇರಿಸಿದರು. ಯಂಗ್ ಚಾಲೆಂಜರ್ಸ್ ತಂಡಕ್ಕೆ ಅಬ್ದುಲ್ ಅಜೀಜ್ (46) ಗೋಲು ತಂದಿತ್ತರು.

ಎಫ್‌ಸಿ ಡೆಕ್ಕನ್ ಮತ್ತು ರೆಬೆಲ್ಸ್ ಎಫ್‌ಸಿ ತಂಡಗಳ ನಡುವಿನ ಪಂದ್ಯ 1–1 ಗೋಲುಗಳ ಡ್ರಾದಲ್ಲಿ ಕೊನೆಗೊಂಡಿತು. ಎಫ್‌ಸಿ ಡೆಕ್ಕನ್‌ಗೆ ಮೊಹಮ್ಮದ್ ಶಿಬಿಲ್ (31) ಹಾಗೂ ರೆಬೆಲ್ಸ್‌ಗೆ ಸೌಬಾನ್ ಸಿದ್ದೀಕ್ (4) ಗೋಲು ಗಳಿಸಿದರು.

ಟೆನಿಸ್: ನಿಕ್ಷೇಪ್‌ಗೆ ನಿರಾಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಬಿ.ಆರ್. ನಿಕ್ಷೇಪ್ ಅವರು ಮೊಜಾಂಬಿಕ್‌ನಲ್ಲಿ ನಡೆಯುತ್ತಿರುವ ಐಟಿಎಫ್ ಎಂ15 ಟೆನಿಸ್ ಟೂರ್ನಿಯ ಸಿಂಗಲ್ಸ್ ಹಾಗೂ ಡಬಲ್ಸ್ ವಿಭಾಗಗಳಲ್ಲಿ ನಿರಾಸೆ ಅನುಭವಿಸಿದರು.

ಗುರುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಅವರು 5–7, 2–6 ರಲ್ಲಿ ಬ್ರಿಟನ್‌ನ ಆ್ಯಡಮ್ ಜೋನ್ಸ್ ಎದುರು ಪರಾಭವಗೊಂಡರು. ಕರ್ನಾಟಕದ ಆಟಗಾರ ಮೊದಲ ಸೆಟ್‌ನಲ್ಲಿ ಎದುರಾಳಿಗೆ ತಕ್ಕ ಪೈಪೋಟಿ ನೀಡಲು ಯಶಸ್ವಿಯಾದರು.

ಡಬಲ್ಸ್ ವಿಭಾಗದಲ್ಲಿ ನಿಕ್ಷೇಪ್ ಹಾಗೂ ಸ್ಪೇನ್‌ನ ಮಿಗುಯೆಲ್ ಗಾರ್ಸಿಯ ಜೋಡಿ 2–6, 5–7 ರಲ್ಲಿ ಜಿಂಬಾಬ್ವೆಯ ಮೆಹ್ಲುಲಿ ಸಿಬಾಂಡ ಮತ್ತು ದಕ್ಷಿಣ ಆಫ್ರಿಕಾದ ಅಲೆಕ್ ಬೆಕ್ಲೆ ಕೈಯಲ್ಲಿ ಪರಾಭವಗೊಂಡಿತು.